ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿದ್ದರಾಮಯ್ಯ 15ನೇ ಬಜೆಟ್

ಮೊತ್ತ ₹ 3.80 ಲಕ್ಷ ಕೋಟಿಗೆ ಏರಿಕೆ? ● ಇಂದು ಬೆಳಿಗ್ಗೆ 10.15ಕ್ಕೆ ಮಂಡನೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಅಭಿವೃದ್ಧಿಯ ಮುನ್ನೋಟ ನೀಡುವ 2024–25ನೇ ಸಾಲಿನ ರಾಜ್ಯ ಬಜೆಟ್ ಶುಕ್ರವಾರ (ಫೆ.16) ಬೆಳಿಗ್ಗೆ 10.15ಕ್ಕೆ ಮಂಡನೆಯಾಗಲಿದೆ.

ಈವರೆಗೆ 14 ಬಜೆಟ್ ಮಂಡಿಸಿ ರಾಜ್ಯದಲ್ಲಿ ದಾಖಲೆ ಸೃಷ್ಟಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸುತ್ತಿರುವ 15ನೇ ಬಜೆಟ್ ಇದಾಗಿದೆ. ಲೋಕಸಭೆ ಚುನಾವಣೆ ಎದುರುಗೊಳ್ಳುವ ಹೊತ್ತಿನೊಳಗೆ, ಮತದಾರರನ್ನು ಕಾಂಗ್ರೆಸ್ ಪಕ್ಷದತ್ತ ಸೆಳೆಯುವ ಹೊಸ ಜನಪ್ರಿಯ ಘೋಷಣೆ, ಚುನಾವಣೆ ಕಾರಣಕ್ಕೆ ಹೊಸ ತೆರಿಗೆಯ ಭಾರ ಹಾಕದಿರುವ ಬಜೆಟ್ ಇದಾಗಿರಲಿದೆ. ಜುಲೈನಲ್ಲಿ ಸಿದ್ದರಾಮಯ್ಯ ಮಂಡಿಸಿದ್ದ ಪರಿಷ್ಕೃತ ಬಜೆಟ್‌ನ ಮೊತ್ತ ₹3.27 ಲಕ್ಷ ಕೋಟಿಯಾಗಿತ್ತು. ಈ ಬಾರಿ ಬಜೆಟ್ ಮೊತ್ತ ₹3.50 ಲಕ್ಷ ಕೋಟಿ ಅಥವಾ ₹3.80 ಲಕ್ಷ ಕೋಟಿಗೆ ತಲುಪುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ರಾಜ್ಯದಲ್ಲಿ ತಲೆದೋರಿರುವ ಭೀಕರ ಬರದ ಬರೆಯ ಮಧ್ಯೆ ವಿತ್ತೀಯ ಶಿಸ್ತಿನ ಪರಿಮಿತಿಯಲ್ಲಿ ವೆಚ್ಚ, ಸಂಪನ್ಮೂಲ ಕ್ರೋಡೀಕರಣದ ‘ಲೆಕ್ಕಾಚಾರ’ಗಳು ಈ ಬಜೆಟ್ ಮೇಲಿನ ಕುತೂಹಲ ಹೆಚ್ಚಿಸಿವೆ.

ಕೇಂದ್ರದ ತೆರಿಗೆ ಪಾಲಿನಲ್ಲಿ ಅನ್ಯಾಯವಾಗುತ್ತಿದೆ ಎಂದು ದೂರಿ ದೆಹಲಿಯಲ್ಲಿ ಪ್ರತಿಭಟನೆ ನಡೆಸಿದ್ದ ಸಿದ್ದರಾಮಯ್ಯ, ‘ನಮ್ಮ ತೆರಿಗೆ ನಮ್ಮ ಹಕ್ಕು’ ಎಂಬ ಅಭಿಯಾನ ಆರಂಭಿಸಿದ್ದಾರೆ. ಕೇಂದ್ರ ಸರ್ಕಾರಕ್ಕೆ ವಿವಿಧ ರಾಜ್ಯಗಳಿಂದ ಸಲ್ಲಿಕೆಯಾಗುವ ತೆರಿಗೆ ಸಂಗ್ರಹ, ಆ ಮೊತ್ತದಲ್ಲಿ ರಾಜ್ಯಕ್ಕೆ ಸಿಗುವ ಪಾಲಿನಲ್ಲಿ ಆಗಿರುವ ಅನ್ಯಾಯವನ್ನು ಬಜೆಟ್ ಭಾಷಣದಲ್ಲಿ ಪ್ರಸ್ತಾಪಿಸಲು ಸಿದ್ದರಾಮಯ್ಯ ತಯಾರಿ ಮಾಡಿಕೊಂಡಿದ್ದಾರೆ ಎಂದು ಗೊತ್ತಾಗಿದೆ.



ಬಜೆಟ್‌ನ ಅಂತಿಮ ಕ್ಷಣದ ಸಿದ್ಧತೆಯಲ್ಲಿ ಮುಖ್ಯಮಂತ್ರಿ

ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಆರ್ಥಿಕ ಭಾರ, ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ತೆರಿಗೆ ಪಾಲು, ಸಹಾಯಾನುದಾನ ಕೊರತೆಯ ಮಧ್ಯೆಯೇ ಜನಪ್ರಿಯ ಬಜೆಟ್ ಮಂಡಿಸಲು ಸಿದ್ದರಾಮಯ್ಯ ತಯಾರಿ ನಡೆಸಿದ್ದಾರೆ. ಗ್ಯಾರಂಟಿಗಳಿಗಾಗಿಯೇ ₹58 ಸಾವಿರ ಕೋಟಿ ತೆಗೆದಿಡಬೇಕಾಗುತ್ತದೆ ಎಂದು ಅಂದಾಜಿಸಲಾಗಿದೆ. ರೈತ ಸಮುದಾಯ, ಕೈಗಾರಿಕಾ ವಲಯ, ಕಾರ್ಮಿಕ ಸಂಘಟನೆಗಳು ನಾನಾ ಬೇಡಿಕೆಗಳನ್ನು ಮುಂದಿಟ್ಟಿವೆ. ತೀವ್ರ ಬರದಿಂದ ರೈತ ವರ್ಗ ಸಂಕಷ್ಟದಲ್ಲಿದೆ. ಕೇಂದ್ರದಿಂದ ಇನ್ನೂ ಬಿಡುಗಡೆಯಾಗದ ಬರ ಪರಿಹಾರ ಮುಖ್ಯಮಂತ್ರಿ ಅವರನ್ನು ಒತ್ತಡಕ್ಕೆ ಸಿಲುಕಿಸಿದೆ. ಬರ ಇರುವ ಕಾರಣಕ್ಕೆ ಈ ಬಾರಿ ರೈತರ ಸಾಲವನ್ನು ಸಂಪೂರ್ಣವಾಗಿ ಒಮ್ಮೆ ಮನ್ನಾ ಮಾಡಲಿ ಎನ್ನುವುದು ರೈತ ಸಮುದಾಯದ ನಿರೀಕ್ಷೆಯಾಗಿದೆ.

ಗ್ರಾಮೀಣ ಮತ್ತು ನಗರ ಭಾಗದ ಜನರಿಗೆ ಸೂರು ಹೊಂದುವ ದಶಕಗಳ ಕನಸು ಇನ್ನೂ ಪೂರ್ಣ ಪ್ರಮಾಣದಲ್ಲಿ ಈಡೇರಿಲ್ಲ. ಮಧ್ಯಮ ವರ್ಗ ಮತ್ತು ಕೂಲಿ ಕಾರ್ಮಿಕರು ನಗರದಲ್ಲಿ ಸ್ವಂತ ಸೂರು ಕಾಣುವುದು ಕನಸಾಗಿಯೇ ಉಳಿದಿದೆ. ವಿಶೇಷ ವಸತಿ ಯೋಜನೆಗಳನ್ನು ರೂಪಿಸಿ, ಪ್ರತಿಯೊಬ್ಬರಿಗೂ ಸೂರು (ಮನೆ) ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯವೂ ಇದೆ. ಇದಕ್ಕೆ ಎಷ್ಟರಮಟ್ಟಿಗೆ ಬಜೆಟ್‌ನಲ್ಲಿ ಆದ್ಯತೆ ಸಿಗಲಿದೆ ಎಂಬ ಕುತೂಹಲವಂತೂ ಇದೆ.

ಸಂಭಾವ್ಯ ಹೊಸ ಘೋಷಣೆಗಳು

- ಕರ್ನಾಟಕ ರಾಜ್ಯ ಉದಯವಾಗಿ ಸುವರ್ಣ ಮಹೋತ್ಸವ ಆಚರಿಸುತ್ತಿರುವ ಹೊತ್ತಿನಲ್ಲಿ ಹಲವು ಹೊಸ ಯೋಜನೆಗಳು
- ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ಜಾರಿ ಕುರಿತು ಪ್ರಸ್ತಾವ ಮತ್ತು ಅನುದಾನ ನೀಡಿಕೆ
- ಹೊಸ ಜಿಲ್ಲೆಗಳಾಗಿ ಚಿಕ್ಕೋಡಿ, ಗೋಕಾಕ, ಮಧುಗಿರಿ
- ಮಹಿಳೆಯರಿಗಾಗಿ ವಿಶೇಷ ಯೋಜನೆಗಳು
- ರಾಮಮಂದಿರಗಳ ಪುನುರುತ್ಥಾನಕ್ಕೆ ₹100 ಕೋಟಿ ಅನುದಾನ
- ಮೇಕೆದಾಟು ಯೋಜನೆಗೆ ಅನುದಾನ
- ಬೆಂಗಳೂರು ಅಥವಾ ಕಲಬುರಗಿಯಲ್ಲಿ ವಚನ ಮಂಟಪ ಮತ್ತು ವಚನ ವಿಶ್ವವಿದ್ಯಾಲಯ
- ಬಿಬಿಎಂಪಿ ಚುನಾವಣೆ ದೃಷ್ಟಿಯಿಂದ ಬ್ರ್ಯಾಂಡ್ ಬೆಂಗಳೂರಿಗೆ ಆದ್ಯತೆ
- ಅಲ್ಪಸಂಖ್ಯಾತರ ಅಭಿವೃದ್ಧಿಗೆ ಅನುದಾನ
- ಬಂಜಾರ, ವಾಲ್ಮೀಕಿ, ಬೋವಿ, ಮಾದಿಗರ ಜತೆಗೆ ಹಿಂದುಳಿದ ವಿವಿಧ ಜಾತಿಗಳಿಗೆ ಆರ್ಥಿಕ ನೆರವು

3 ಲಕ್ಷ ನೌಕರರು ಪಾಲ್ಗೊಳ್ಳುವ ನಿರೀಕ್ಷೆ ● ಒಂದು ಸಾವಿರ ಬಸ್‌ಗಳ ವ್ಯವಸ್ಥೆ

ಇದೇ 27ಕ್ಕೆ ಸರ್ಕಾರಿ ನೌಕರರ ಮಹಾ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಅರಮನೆ ಮೈದಾನದಲ್ಲಿ ಫೆ.27ರಂದು ರಾಜ್ಯ ಸರ್ಕಾರಿ ನೌಕರರ ಮಹಾ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಮೂರು ಲಕ್ಷಕ್ಕೂ ಹೆಚ್ಚಿನ ನೌಕರರು ಭಾಗವಹಿಸಲಿದ್ದಾರೆ ಎಂದು ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 7 ವರ್ಷಗಳ ನಂತರ ನಡೆಯುತ್ತಿರುವ ಮಹಾ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ಸಚಿವರು, ಅಧಿಕಾರಿಗಳು ಭಾಗವಹಿಸುವರು. ಸಮ್ಮೇಳನಕ್ಕೆ ಬರುವ ನೌಕರರಿಗಾಗಿ ಪ್ರತಿ ತಾಲ್ಲೂಕು ಕೇಂದ್ರದಿಂದಲೂ ಬಸ್ ವ್ಯವಸ್ಥೆ ಮಾಡಲಾಗಿದೆ. ಅದಕ್ಕಾಗಿ ಒಂದು ಸಾವಿರ ಬಸ್‌ಗಳನ್ನು ಬಾಡಿಗೆಗೆ ಪಡೆಯಲಾಗಿದೆ. ಸರ್ಕಾರ ವಿಶೇಷ ಸಾಂದರ್ಭಿಕ ರಜೆ ನೀಡಿದೆ ಎಂದು ಮಾಹಿತಿ ನೀಡಿದರು.

‘ಆಡಳಿತದಲ್ಲಿ ಕಾರ್ಯಕ್ಷಮತೆ’ ಕುರಿತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್, ‘ನೌಕರರ ಆರೋಗ್ಯ ಸುಧಾರಣೆ’ ಕುರಿತು ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ವಿಶೇಷ ಉಪನ್ಯಾಸ ನೀಡುವರು ಎಂದರು.


ನೌಕರರ ಪ್ರಮುಖ ಬೇಡಿಕೆಗಳನ್ನು ಸಮ್ಮೇಳನದಲ್ಲಿ ಪ್ರಸ್ತಾಪಿಸಲಾಗುವುದು. 7ನೇ ವೇತನ ಆಯೋಗದಿಂದ ವರದಿ ಪಡೆದು, ಶಿಫಾರಸುಗಳನ್ನು ತ್ವರಿತವಾಗಿ ಜಾರಿಗೊಳಿಸಬೇಕು. ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ರದ್ದುಪಡಿಸಿ, ಹಳೆ ಪಿಂಚಣಿ ಯೋಜನೆ ಜಾರಿಗೆ ತರಬೇಕು. ನೌಕರರ ವೇತನದಿಂದ ಕಡಿತ ಮಾಡುತ್ತಿರುವ ಶೇ 10ರಷ್ಟು ವಂತಿಗೆಯನ್ನು ನಿಲ್ಲಿಸಲು ಆದೇಶ ಹೊರಡಿಸಬೇಕು. ನೌಕರರು ಹಾಗೂ ಅವರ ಅವಲಂಬಿತ ಕುಟುಂಬಗಳ ಸದಸ್ಯರಿಗೆ ನಗದು ರಹಿತ ಆರೋಗ್ಯ ಚಿಕಿತ್ಸೆ ‘ಕರ್ನಾಟಕ ಆರೋಗ್ಯ ಸಂಜೀವಿನ ಯೋಜನೆ’ ಅನುಷ್ಠಾನ ಮಾಡಬೇಕು. ಖಾಲಿ ಹುದ್ದೆಗಳನ್ನು ಹಂತಹಂತವಾಗಿ ಭರ್ತಿ ಮಾಡಬೇಕು ಎಂದು ಒತ್ತಾಯಿಸಲಾಗುತ್ತದೆ ಎಂದು ವಿವರ ನೀಡಿದರು.

ಬೆಳಿಗ್ಗೆ 11ಕ್ಕೆ ಆರಂಭವಾಗುವ ಕಾರ್ಯಕ್ರಮ ಮಧ್ಯಾಹ್ನ 3ಕ್ಕೆ ಮುಕ್ತಾಯವಾಗಲಿದೆ ಎಂದರು.

ನಾಲ್ಕು ಸ್ಥಾನಕ್ಕೆ ಐವರು ಅಭ್ಯರ್ಥಿಗಳು • ಗೆಲುವು ಯಾರಿಗೆ?

ಜೆಡಿಎಸ್‌ನ ಕುಪೇಂದ್ರ ರೆಡ್ಡಿ ಕಣಕ್ಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಅಗತ್ಯ ಸಂಖ್ಯಾ ಬಲದ ಕೊರತೆಯ ಮಧ್ಯೆಯೂ ಉದ್ಯಮಿ ಡಿ. ಕುಪೇಂದ್ರ ರೆಡ್ಡಿ ಅವರು ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಇದರೊಂದಿಗೆ ಈ ಚುನಾವಣೆ ಕುತೂಹಲಕಾರಿ ತಿರುವು ಪಡೆದುಕೊಂಡಿದೆ.

ಕುಪೇಂದ್ರ ರೆಡ್ಡಿ ಅವರನ್ನು ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಲಾಗಿದೆ. ಜೆಡಿಎಸ್ ಶಾಸಕರ ಜತೆಗೆ ಎಂ. ಸತೀಶ್ ರೆಡ್ಡಿ ಸೇರಿದಂತೆ ಬಿಜೆಪಿಯ ಕೆಲವರೂ ಸೂಚಕರಾಗಿ ನಾಮಪತ್ರಕ್ಕೆ ಸಹಿ ಮಾಡಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ಜಂಟಿಯಾಗಿ ಕಾಂಗ್ರೆಸ್‌ನಿಂದ ಒಂದು ಸ್ಥಾನವನ್ನು ಕಿತ್ತುಕೊಳ್ಳುವ ತಂತ್ರಗಾರಿಕೆಯ ಭಾಗವಾಗಿ ರೆಡ್ಡಿ ಅವರನ್ನು ಕಣಕ್ಕಿಳಿಸಿವೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಶಾಸಕ ಎಚ್‌.ಡಿ. ರೇವಣ್ಣ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಅವರೊಂದಿಗೆ ತೆರಳಿ ಕುಪೇಂದ್ರ ರೆಡ್ಡಿ ಅವರು ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರಿಗೆ ನಾಮಪತ್ರ ಸಲ್ಲಿಸಿದರು.

ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಕುರಿತು ಬುಧವಾರ ಮಧ್ಯಾಹ್ನದವರೆಗೂ ಯಾವುದೇ ತೀರ್ಮಾನಕ್ಕೆ ಬಂದಿರಲಿಲ್ಲ. ಬಿಜೆಪಿ ವರಿಷ್ಠರ ಸಂದೇಶ ಹೊತ್ತು ಬುಧವಾರ ಮಧ್ಯಾಹ್ನ ವಿಧಾನಸಭೆಯ ವಿರೋಧ ಪಕ್ಷದ ಮೊಗಸಾಲೆಗೆ ಬಂದಿದ್ದ ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯ, ಎರಡೂ ಪಕ್ಷಗಳ ಪ್ರಮುಖರ ಜತೆ ಚರ್ಚಿಸಿದ್ದರು. ಆ ಬಳಿಕವೇ ಕುಪೇಂದ್ರ ರೆಡ್ಡಿ ಅವರನ್ನು ಕಣಕ್ಕಿಳಿಸುವ ನಿರ್ಧಾರವನ್ನು ಅಂತಿಮಗೊಳಿಸಲಾಗಿತ್ತು.

ರಾಜ್ಯದಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳು ಖಾಲಿಯಾಗುತ್ತಿವೆ. ಸದ್ಯದ ಸಂಖ್ಯಾ ಬಲದಲ್ಲಿ ಕಾಂಗ್ರೆಸ್ ಮೂರು ಮತ್ತು ಬಿಜೆಪಿ ಒಂದು ಸ್ಥಾನಗಳನ್ನು ಪಡೆಯಲು ಅವಕಾಶವಿದೆ. ಜೆಡಿಎಸ್ ಐದನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದರಿಂದ ತೀವ್ರ ಸ್ಪರ್ಧೆ ಸೃಷ್ಟಿಯಾಗಿದೆ.

ಕಾಂಗ್ರೆಸ್ 135 ಶಾಸಕರ ಬಲವನ್ನು ಹೊಂದಿದೆ. ಬಿಜೆಪಿ 66, ಜೆಡಿಎಸ್ 19, ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಜಿ. ಜನಾರ್ದನ ರೆಡ್ಡಿ, ಸರ್ವೋದಯ ಕರ್ನಾಟಕ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ಮತ್ತು ಪಕ್ಷೇತರರಾದ ಹರಪನಹಳ್ಳಿ ಶಾಸಕಿ ಲತಾ ಮಲ್ಲಿಕಾರ್ಜುನ್ ಹಾಗೂ ಗೌರಿಬಿದನೂರು ಶಾಸಕ ಕೆ.ಪಿ. ಪುಟ್ಟಸ್ವಾಮಿ ಗೌಡ ಇದ್ದಾರೆ. ದರ್ಶನ್, ಲತಾ, ಪುಟ್ಟಸ್ವಾಮಿ ಕಾಂಗ್ರೆಸ್ ಜತೆ ಗುರುತಿಸಿಕೊಂಡಿದ್ದಾರೆ. ಜನಾರ್ದನ ರೆಡ್ಡಿ ಸಹ ಆರಂಭದಲ್ಲಿ ಕಾಂಗ್ರೆಸ್ ಜತೆಗಿರುವುದಾಗಿ ಹೇಳಿದ್ದರು. ಇತ್ತೀಚೆಗೆ, ಬಿಜೆಪಿ ಕಡೆ ಒಲವು ತೋರಿದ್ದಾರೆ.

ಒಬ್ಬ ಅಭ್ಯರ್ಥಿಯ ಗೆಲುವಿಗೆ 45 ಮತಗಳು ಬೇಕಾಗುತ್ತವೆ. ಮೈತ್ರಿಕೂಟದ ಅಭ್ಯರ್ಥಿ ಕುಪೇಂದ್ರ ರೆಡ್ಡಿ ಅವರಿಗೆ ಬಿಜೆಪಿಯ 21 ಹೆಚ್ಚುವರಿ ಮತಗಳು ದೊರಕಲಿವೆ. ಹೆಚ್ಚುವರಿಯಾಗಿ ಅಗತ್ಯವಿರುವ ಐದು ಮತಗಳನ್ನು ಸೆಳೆಯಲು ಬಿಜೆಪಿ ಮತ್ತು ಜೆಡಿಎಸ್ ನಾಯಕರು ಜಂಟಿ ಕಾರ್ಯಾಚರಣೆಗೆ ಇಳಿದಿದ್ದಾರೆ. ಇದರಿಂದಾಗಿ ಕಾಂಗ್ರೆಸ್ ಅಡ್ಡ ಮತದಾನದ ಭೀತಿಗೆ ಸಿಲುಕಿದೆ.

‘ಬಿಜೆಪಿ ನಾಯಕರ ಸಲಹೆಯಂತೆ ಸ್ಪರ್ಧೆ’

‘ಬಿಜೆಪಿಯ ರಾಷ್ಟ್ರೀಯ ನಾಯಕರು ಮತ್ತು ರಾಜ್ಯ ಘಟಕದ ನಾಯಕರ ಸಲಹೆಯಂತೆ ನಮ್ಮ ಕುಪೇಂದ್ರ ರೆಡ್ಡಿ ಅವರನ್ನು ಕಣಕ್ಕಿಳಿಸಲಾಗಿದೆ. ಬಿಜೆಪಿ ಮತ್ತು ಜೆಡಿಎಸ್‌ನ ಹೆಚ್ಚುವರಿ ಮತಗಳು ನಮ್ಮ ಬಳಿ ಇವೆ. ಮತಗಳ ಕೊರತೆ ನೀಗುವುದು ಚುನಾವಣೆ ವೇಳೆಯೇ ನಿರ್ಧಾರವಾಗುತ್ತದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಸುದ್ದಿಗಾರರಿಗೆ ಗುರುವಾರ ಪ್ರತಿಕ್ರಿಯಿಸಿದರು.

7 ಅಭ್ಯರ್ಥಿಗಳಿಂದ ನಾಮಪತ್ರ

ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇದೇ 27ರಂದು ನಡೆಯಲಿರುವ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾದ ಗುರುವಾರ (ಫೆ. 15) ಆರು ಅಭ್ಯರ್ಥಿಗಳು ಒಟ್ಟು 17 ನಾಮಪತ್ರಗಳನ್ನು ಸಲ್ಲಿಸಿದ್ದಾರೆ.

ಬಿಜೆಪಿ ಅಭ್ಯರ್ಥಿ ನಾರಾಯಣಸಾ ಭಾಂಡಗೆ ಎರಡು, ಕಾಂಗ್ರೆಸ್ ಅಭ್ಯರ್ಥಿಗಳಾದ ಅಜಯ್ ಮಾಕನ್, ಜಿ.ಸಿ. ಚಂದ್ರಶೇಖರ್ ಮತ್ತು ಸಯ್ಯದ್ ನಾಸೀರ್ ಹುಸೇನ್, ಜೆಡಿಎಸ್ ಅಭ್ಯರ್ಥಿ ಡಿ. ಕುಪೇಂದ್ರ ರೆಡ್ಡಿ ಅವರು ತಲಾ ನಾಲ್ಕು ನಾಮಪತ್ರ, ಪಕ್ಷೇತರ ಅಭ್ಯರ್ಥಿ ಮಲ್ಲಿಕಾರ್ಜುನ ಕೆಂಗನೂರು ಒಂದು ನಾಮಪತ್ರ ಸಲ್ಲಿಸಿದ್ದಾರೆ.

ಪಕ್ಷೇತರ ಅಭ್ಯರ್ಥಿಯಾಗಿ ಡಾ.ಕೆ. ಪದ್ಮರಾಜನ್ ಅವರು ಫೆ. 8ರಂದು ಒಂದು ನಾಮಪತ್ರ ಸಲ್ಲಿಸಿದ್ದಾರೆ. ಹೀಗಾಗಿ ಒಟ್ಟು 7 ಅಭ್ಯರ್ಥಿಗಳು 18 ನಾಮಪತ್ರ ಸಲ್ಲಿಸಿದಂತಾಗಿದೆ.

ನಾಮಪತ್ರಗಳ ಪರಿಶೀಲನೆ ಶುಕ್ರವಾರ (ಫೆ. 16) ನಡೆಯಲಿದೆ. ನಾಮಪತ್ರ ಹಿಂಪಡೆಯಲು ಇದೇ 20 ಕೊನೆಯ ದಿನ.

‘ನಮಗೂ ಆತ್ಮಸಾಕ್ಷಿ ಮತಗಳು ಬರುತ್ತವೆ’

‘ರಾಜ್ಯಸಭೆ ಚುನಾವಣೆಯಲ್ಲಿ ನಮ್ಮ (ಕಾಂಗ್ರೆಸ್) ಅಭ್ಯರ್ಥಿಗಳಿಗೂ ಆತ್ಮಸಾಕ್ಷಿ ಮತಗಳು ಬೀಳಲಿವೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

‘ರಾಜ್ಯಸಭೆ ಚುನಾವಣೆಗೆ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಕುಪೇಂದ್ರ ರೆಡ್ಡಿ ಅವರಿಗೆ ಎಲ್ಲ ಪಕ್ಷಗಳಲ್ಲಿ ಸ್ನೇಹಿತರಿದ್ದು, ಅವರಿಗೆ ಆತ್ಮಸಾಕ್ಷಿಯ ಮತಗಳು ಬೀಳಲಿವೆ’ ಎಂದು ಬಿಜೆಪಿ–ಜೆಡಿಎಸ್ ನಾಯಕರು ಹೇಳಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ನಮಗೂ ಎಲ್ಲ ಪಕ್ಷಗಳಲ್ಲಿ ಸ್ನೇಹಿತರಿದ್ದಾರೆ’ ಎಂದು ತಿರುಗೇಟು ನೀಡಿದರು. ‘ಜೆಡಿಎಸ್ ವಿಫಲವಾಗಿರುವ ಕಾರಣ ಬಿಜೆಪಿ ಜತೆ ನೆಂಟಸ್ತನ ಬೆಳೆಸಿದೆ. ಆ ಪಕ್ಷಗಳಿಂದ ನಮಗೂ ಆತ್ಮಸಾಕ್ಷಿಯ ಮತಗಳು ಬರುವ ವಿಶ್ವಾಸವಿದೆ. ಬಿಜೆಪಿ ಮತ್ತು ಜೆಡಿಎಸ್‌ನವರು ಸದಾ ಕುದುರೆ ವ್ಯಾಪಾರ ಮಾಡುತ್ತಾರೆ. ಅದಕ್ಕೆ ಅವರು ಹೆಸರುವಾಸಿ. ಇದೇ 27ರಂದು ಎಲ್ಲವೂ ತಿಳಿಯಲಿದೆ. ಜೆಡಿಎಸ್‌ನವರು ಬಿಜೆಪಿಗೆ ಬಹಳ ಹತ್ತಿರವಾಗಿರುವಂತೆ ಬಿಂಬಿಸುತ್ತಿದ್ದಾರೆ. ಬಿಜೆಪಿಯ ಎಷ್ಟು ಮತಗಳು ಅವರಿಗೆ ಸಿಗಲಿದೆ ಎಂಬುದನ್ನು ಕಾದು ನೋಡಿ’ ಎಂದರು. ಐದನೇ ಅಭ್ಯರ್ಥಿ ಕಣಕ್ಕಿಳಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು , ‘ಅವರು ಅವರ ಪ್ರಯತ್ನ ಮಾಡಲಿ. ನಾವು ನಮ್ಮ ಒಗ್ಗಟ್ಟಿನ ರಾಜಕಾರಣ ಮಾಡುತ್ತೇವೆ’ ಎಂದರು.

ಕುಪೇಂದ್ರ ರೆಡ್ಡಿ ಗೆಲುವಿಗೆ ತಂತ್ರ: ವಿಜಯೇಂದ್ರ

‘ರಾಜ್ಯಸಭಾ ಚುನಾವಣೆಗೆ ಅಭ್ಯರ್ಥಿಯಾಗಿ ಕುಪೇಂದ್ರ ರೆಡ್ಡಿ ನಾಮಪತ್ರ ಸಲ್ಲಿಸಿರುವುದರ ಹಿಂದೆ ಜೆಡಿಎಸ್ ಕಾರ್ಯತಂತ್ರ ಇದ್ದೇ ಇರುತ್ತದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಎನ್‌ಡಿಎ ಕೂಟಕ್ಕೆ ಜೆಡಿಎಸ್ ಸೇರಿದ ನಂತರ ಯಾವುದೇ ಹೋರಾಟ ಮತ್ತು ತೀರ್ಮಾನಗಳನ್ನು ಜಂಟಿಯಾಗಿಯೇ ತೆಗೆದುಕೊಳ್ಳುತ್ತಿದ್ದೇವೆ. ರಾಜ್ಯದ ಜೆಡಿಎಸ್ ನಾಯಕರ ಜೊತೆ ಚರ್ಚಿಸಿ ರಾಜ್ಯಸಭೆಗೆ ಐದನೇ ಅಭ್ಯರ್ಥಿಯಾಗಿ ಕುಪೇಂದ್ರ ರೆಡ್ಡಿ ಅವರನ್ನು ಕಣಕ್ಕೆ ಇಳಿಸಲು ನಿರ್ಧರಿಸಿರುವುದಾಗಿ ನಮ್ಮ ವರಿಷ್ಠರು ತಿಳಿಸಿದ್ದಾರೆ. ನಮ್ಮ ಅಭ್ಯರ್ಥಿ ಗೆಲ್ಲುವ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಬಿಜೆಪಿ- ಜೆಡಿಎಸ್ ಒಟ್ಟಾಗಿ ತಂತ್ರಗಾರಿಕೆ ರೂಪಿಸುತ್ತೇವೆ’ ಎಂದರು.

ಇಬ್ಬರು ಅಭ್ಯರ್ಥಿಗಳೂ ಗೆಲುವು: ಅಶೋಕ

‘ಬಿಜೆಪಿ ಅಭ್ಯರ್ಥಿ ನಾರಾಯಣ ಭಾಂಡಗೆ ಮತ್ತು ಬಿಜೆಪಿ- ಜೆಡಿಎಸ್ ಅಭ್ಯರ್ಥಿ ಕುಪೇಂದ್ರ ರೆಡ್ಡಿ ಇಬ್ಬರೂ ಗೆಲ್ಲುವ ವಿಶ್ವಾಸವಿದೆ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ತಿಳಿಸಿದರು.

ಧಾರ್ಮಿಕ ಹಬ್ಬ ಆಚರಣೆಗೆ ನಿರ್ಬಂಧ ಸುತ್ತೋಲೆ ವಾಪಸ್

ಪ್ರಜಾವಾಣಿ ವಾರ್ತೆ


ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ವ್ಯಾಪ್ತಿಯಲ್ಲಿ ಬರುವ ಶಾಲೆ–ಕಾಲೇಜುಗಳಲ್ಲಿ ಆಚರಿಸಬೇಕಾದ ರಾಷ್ಟ್ರೀಯ ಹಬ್ಬ, ನಾಡ ಹಬ್ಬ ಮತ್ತು ಜಯಂತಿಗಳಿಗೆ ಸಂಬಂಧಿಸಿ ಕಾರ್ಯನಿರ್ವಾಹಕ ನಿರ್ದೇಶಕರು ಗುರುವಾರ ಹೊರಡಿಸಿದ್ದ ಸುತ್ತೋಲೆಯನ್ನು ಸಂಜೆ ವೇಳೆಗೆ ವಾಪಸ್ ಪಡೆದಿದ್ದಾರೆ.

ಮೊದಲು ಹೊರಡಿಸಿದ್ದ ಸುತ್ತೋಲೆ ಪ್ರಕಾರ ಇನ್ನು ಮುಂದೆ ಯುಗಾದಿ, ರಂಜಾನ್, ಕ್ರಿಸ್‌ಮಸ್, ಈದ್ ಮಿಲಾದ್, ಸಂಕ್ರಾಂತಿ ಮತ್ತಿತರ ಹಬ್ಬಗಳ ಆಚರಣೆಗೆ ಅವಕಾಶ ಇಲ್ಲ ಎಂದೂ ಹೇಳಲಾಗಿತ್ತು.

ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್‌.ಸಿ. ಮಹದೇವಪ್ಪ ಅವರು ಫೆ. 1ರಂದು ನೀಡಿರುವ ಟಿಪ್ಪಣಿಯಂತೆ, ‘ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಮಹಾತ್ಮಗಾಂಧಿ ಜಯಂತಿ, ಕನ್ನಡ ರಾಜ್ಯೋತ್ಸವ, ಅಂಬೇಡ್ಕರ್ ಜಯಂತಿ, ವಾಲ್ಮೀಕಿ ಜಯಂತಿ, ಕನಕದಾಸ ಜಯಂತಿ, ಬಸವ ಜಯಂತಿ, ಸಂವಿಧಾನ ದಿನಾಚರಣೆ ಮತ್ತು ಯೋಗ ದಿನಾಚರಣೆ ಹೊರತುಪಡಿಸಿ ಇತರ ಧಾರ್ಮಿಕ ಹಬ್ಬಗಳನ್ನು ಆಚರಿಸಿದರೆ ಸಂಬಂಧಪಟ್ಟ ಸಂಸ್ಥೆಯ ಪ್ರಾಂಶುಪಾಲರು ಮತ್ತು ಶಿಕ್ಷಕರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು’ ಎಂದೂ ತಿಳಿಸಲಾಗಿತ್ತು.

ಎಚ್‌.ಡಿ. ದೇವೇಗೌಡ ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯಸಭೆ ಸದಸ್ಯರೂ ಆಗಿರುವ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅವರು ಅನಾರೋಗ್ಯದ ಕಾರಣದಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ.

ದೇವೇಗೌಡರು ಸಂಸತ್ ಅಧಿವೇಶನದಲ್ಲಿ ಪಾಲ್ಗೊಳ್ಳಲು ಕಳೆದ ವಾರ ದೆಹಲಿಗೆ ತೆರಳಿದ್ದರು. ಅಲ್ಲಿ ಚಳಿ ಜಾಸ್ತಿ ಇದ್ದ ಕಾರಣದಿಂದ ಜ್ವರ ಮತ್ತು ಶೀತದ ಸಮಸ್ಯೆ ಕಾಣಿಸಿಕೊಂಡಿತ್ತು. ಗುರುವಾರ ಬೆಳಿಗ್ಗೆ ನಗರದ ಆಸ್ಪತ್ರೆಯೊಂದಕ್ಕೆ ಆರೋಗ್ಯ ತಪಾಸಣೆಗೆ ಹೋಗಿದ್ದರು. ವೈದ್ಯರ ಸಲಹೆಯಂತೆ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಈ ಕುರಿತು ತಮ್ಮ ಅಧಿಕೃತ ‘ಎಕ್ಸ್’ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ದೇವೇಗೌಡರು, ‘ನನ್ನ ಆರೋಗ್ಯದ ಕುರಿತು ವೈಭವೀಕರಿಸಿದ ವರದಿಗಳು ಪ್ರಕಟವಾಗುತ್ತಿರುವುದು ಗಮನಕ್ಕೆ ಬಂದಿದೆ. ನಾನು ನಿಯಮಿತ ತಪಾಸಣೆಗಾಗಿ ಆಸ್ಪತ್ರೆಯಲ್ಲಿದ್ದೇನೆ. ಶೀಘ್ರದಲ್ಲಿ ಮನೆಗೆ ಮರಳುತ್ತೇನೆ. ಆತಂಕ ಪಡಬೇಕಾದ ಅಗತ್ಯವಿಲ್ಲ’ ಎಂದು ತಿಳಿಸಿದ್ದಾರೆ.



ಸಂವಿಧಾನ ಜಾಗೃತಿ...

ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಗುರುವಾರ ಸಮಾಜ ಕಲ್ಯಾಣ ಇಲಾಖೆಯು ಸಂವಿಧಾನ ಜಾಗೃತಿ ಅಂಗವಾಗಿ ಆಯೋಜಿಸಿದ್ದ ಸೈಕಲ್ ಜಾಥಾದಲ್ಲಿ ವಿದ್ಯಾರ್ಥಿನಿಯರು ಉತ್ಸಾಹದಿಂದ ಪಾಲ್ಗೊಂಡರು

ಪ್ರಜಾವಾಣಿ ಚಿತ್ರ: ಅನೂಪ್ ರಾಘ್ ಟಿ.

4 ತಿಂಗಳಲ್ಲಿ ನಿರ್ವಾಹಕರ ಕೈ ಸೇರಲಿದೆ ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಟಿಕೆಟ್ ಮಷಿನ್

ಕೆಎಸ್‌ಆರ್‌ಟಿಸಿಗೂ ಡಿಜಿಟಲ್ ಪೇಮೆಂಟ್ ಸಿಸ್ಟಂ

• ಬಾಲಕೃಷ್ಣ ಪಿ.ಎಚ್‌.

ಬೆಂಗಳೂರು: ಡಿಜಿಟಲ್ ಪಾವತಿ ಸಿಸ್ಟಂಗೆ ಕೆಎಸ್‌ಆರ್‌ಟಿಸಿ ಕೂಡಾ ತೆರೆದುಕೊಳ್ಳಲಿದೆ. ಇನ್ನು ನಾಲ್ಕು ತಿಂಗಳಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಮಾಡಿ ಟಿಕೆಟ್ ನೀಡುವ ಮಷಿನ್‌ಗಳು ನಿರ್ವಾಹಕರ ಕೈಯಲ್ಲಿ ಇರಲಿವೆ.

ಬಿಎಂಟಿಸಿ ಬಸ್‌ಗಳಲ್ಲಿ ಎರಡು ವರ್ಷಗಳ ಹಿಂದೆ ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಪದ್ಧತಿಯನ್ನು ಜಾರಿಗೊಳಿಸಿದ್ದರೂ ಬಳಿಕ ಸ್ಥಗಿತಗೊಂಡಿತು. ಪಾಸ್ ಇರುವವರಿಗಷ್ಟೇ ಸೀಮಿತವಾಗಿದೆ. ವಾಯವ್ಯ ಸಾರಿಗೆ ನಿಗಮವು ಡಿಜಿಟಲ್ ಪಾವತಿ ಪದ್ಧತಿಯನ್ನು ಇತ್ತೀಚೆಗೆ ಅಳವಡಿಸಿಕೊಂಡಿತು. ಇದೀಗ ಕೆಎಸ್‌ಆರ್‌ಟಿಸಿ ಕೂಡ ಈ ಪದ್ಧತಿ ಅಳವಡಿಸಿಕೊಳ್ಳಲು ಮುಂದಾಗಿದೆ. ಎನ್‌ಡಬ್ಲ್ಯುಆರ್‌ಟಿಸಿಯಲ್ಲಿರುವಂತೆ ಕ್ಯೂ ಆರ್ ಕೋಡ್ ಅನ್ನು ನಿರ್ವಾಹಕ ಪ್ರತ್ಯೇಕವಾಗಿ ಕುತ್ತಿಗೆಗೆ ನೇತುಹಾಕಿಕೊಳ್ಳುವ ಬದಲು ಸ್ಕ್ಯಾನಿಂಗ್ ಮತ್ತು ಟಿಕೆಟ್ ನೀಡುವ ಒಂದೇ ಮಷಿನ್ ಅನ್ನು ಕೆಎಸ್‌ಆರ್‌ಟಿಸಿ ಪರಿಚಯಿಸಲಿದೆ.

‘ನಮ್ಮ ನಿಗಮದಲ್ಲಿ 83 ಘಟಕಗಳಿವೆ. ಸದ್ಯ ಎಲೆಕ್ಟ್ರಿಕ್ ಟಿಕೆಟ್ ಮಷಿನ್‌ಗಳನ್ನು (ಇಟಿಎಂ) ಬಳಸಲಾಗುತ್ತಿದೆ. ಡಿಜಿಟಲ್ ಪೇಮೆಂಟ್ ಎನೇಬಲ್ (ಡಿಪಿಇ) ಇರುವ ಇಟಿಎಂಗಳ ಪೂರೈಕೆಯಾಗಬೇಕಿದೆ. 10 ಸಾವಿರ ಮಷೀನ್‌ಗಳು ಬೇಕಾಗಿದ್ದು, ಅದಕ್ಕಾಗಿ ಟೆಂಡರ್ ಕರೆಯಲಾಗಿದೆ. ಬಿಡ್ ಮಾಡಲು ಫೆ.18 ಕೊನೇ ದಿನವಾಗಿದೆ. ಬಳಿಕ ಮುಂದಿನ ಪ್ರಕ್ರಿಯೆಗಳು ನಡೆಯಲಿವೆ. ಎಲ್ಲ ಘಟಕಗಳಿಗೆ ಈ ಮಷೀನ್ ಪೂರೈಸಲು ಕನಿಷ್ಠ 4 ತಿಂಗಳು ಬೇಕು’ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆ (ಸಾಂದರ್ಭಿಕ ಚಿತ್ರ)


‘ಫೋನ್ ಪೇ, ಗೂಗಲ್ ಪೇ ಸಹಿತ ಯುಪಿಐ ಆಧಾರಿತ ಪಾವತಿ ಸ್ವೀಕರಿಸಿದರೆ ಆ ಮೊತ್ತವು ನೇರವಾಗಿ ಸಂಬಂಧಪಟ್ಟ ಡಿಪೊ ಖಾತೆಗೆ ಜಮೆ ಆಗಲಿದೆ. ಡಿಜಿಟಲ್ ಪಾವತಿ ಜತೆಗೆ ನಗದು ನೀಡಿ ಟಿಕೆಟ್ ಪಡೆಯುವ ಪದ್ಧತಿಯೂ ಮುಂದುವರಿಯಲಿದೆ’ ಎಂದು ತಿಳಿಸಿದ್ದಾರೆ.

‘ಫೋನ್ ಪೇ, ಗೂಗಲ್ ಪೇ ಮಾಡಿ ಟಿಕೆಟ್ ಪಡೆಯಲು ಸಾಧ್ಯವಾದರೆ ಚಿಲ್ಲರೆಗಾಗಿ ತಡಕಾಡುವ, ಗಲಾಟೆ ಮಾಡುವ ಪರಿಸ್ಥಿತಿ ತಪ್ಪಲಿದೆ. ನಾನೇ ವಿವಿಧೆಡೆ ಸಂಚರಿಸುವಾಗ ಚಿಲ್ಲರೆ ಇಲ್ಲದಾಗ ಬಸ್ ನಿರ್ವಾಹಕರು ಟಿಕೆಟ್ ಹಿಂಬದಿ ಬರೆದು, ಆಮೇಲೆ ಚಿಲ್ಲರೆ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ನಾನು ಇಳಿಯುವ ಗಡಿಬಿಡಿಯಲ್ಲಿ ಚಿಲ್ಲರೆ ಮರೆತು, ಬಸ್ ಮುಂದಕ್ಕೆ ಹೋದ ಮೇಲೆ ನೆನಪು ಆಗಿದ್ದಿದೆ. ಡಿಜಿಟಲ್ ಪಾವತಿಯಿಂದ ಈ ಸಮಸ್ಯೆಗಳೆಲ್ಲ ತಪ್ಪಲಿದೆ’ ಎಂದು ಬಸ್ ಪ್ರಯಾಣಿಕ ರಾಜಾಜಿನಗರದ ಎಚ್‌.ಸಿ. ರಮೇಶ್ ಅಭಿಪ್ರಾಯ ವ್ಯಕ್ತಪಡಿಸಿದರು.

ಕೆಎಸ್‌ಆರ್‌ಟಿಸಿ ಅಂಕಿ ಅಂಶ

17	ವಿಭಾಗಗಳು
83	ಘಟಕಗಳು
8,360	ಬಸ್‌ಗಳು
27.84 ಲಕ್ಷ	ನಿತ್ಯ ಸಂಚರಿಸುವ ಕಿ.ಮೀ.
32.33 ಲಕ್ಷ	ನಿತ್ಯ ಸಂಚರಿಸುವ ಪ್ರಯಾಣಿಕರ ಸಂಖ್ಯೆ
10,000	ಅಗತ್ಯ ಇರುವ ಡಿಜಿಟಲ್ ಪೇಮೆಂಟ್ ಎನೇಬಲ್ ಮಷಿನ್‌ಗಳು

ಏಪ್ರಿಲ್‌ಗೆ ಡಿಜಿಟಲ್ ಪೇಮೆಂಟ್ ಮಷಿನ್



ಅನ್ಬುಕುಮಾರ್

‘ಡಿಜಿಟಲ್ ಪೇಮೆಂಟ್ ಮಷೀನ್ ಖರೀದಿಗಾಗಿ ಟೆಂಡರ್ ಕರೆಯಲಾಗಿತ್ತು. ಸಿಂಗಲ್ ಬಿಡ್ ಆಗಿದ್ದರಿಂದ ಅದನ್ನು ರದ್ದುಗೊಳಿಸಿ ಮರು ಟೆಂಡರ್ ಕರೆಯಲಾಗುತ್ತಿದೆ. ಏಪ್ರಿಲ್ ಅಂತ್ಯಕ್ಕೆ ಡಿಜಿಟಲ್ ಪೇಮೆಂಟ್ ಎನೇಬಲ್ ಟಿಕೆಟ್ ಮಷೀನ್ ಬರಲಿದೆ. ಆರಂಭದಲ್ಲಿ ಒಂದು ತಿಂಗಳು ಕೆಎಸ್‌ಆರ್‌ಟಿಸಿಯ ಒಂದು ವಿಭಾಗದಲ್ಲಿ ಈ ವ್ಯವಸ್ಥೆ ಅಳವಡಿಸುತ್ತೇವೆ. ಅದರ ಮುಂದಿನ ತಿಂಗಳು ಉಳಿದ ಎಲ್ಲ 16 ವಿಭಾಗಗಳಲ್ಲಿ ಏಕಕಾಲಕ್ಕೆ ಜಾರಿಗೆ ತರುತ್ತೇವೆ’ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಶುಕ್ರವಾರ, ಫೆಬ್ರುವರಿ 16, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 47 | ಪುಟ 20

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

‘ಅಪಹಾಸ್ಯಕ್ಕೆ ರಾಯಭಾರಿ ಆಗಲಾರೆ’ ರವಿಕೆ ಪ್ರಸಂಗ ಚಿತ್ರದ ನಾಯಕಿ, ಬ್ರಹ್ಮಗಂಟು ಧಾರಾವಾಹಿ ಖ್ಯಾತಿಯ ಗೀತಾ ಭಾರತಿ ಭಟ್ ಸಂದರ್ಶನ



ಆಳ-ಅಗಲ
ಚುನಾವಣಾ ಬಾಂಡ್: ಮುಚ್ಚಿಟ್ಟದ್ದೇ ಹೆಚ್ಚು

‘ಸಂದೇಶ್‌ಖಾಲಿ: ಪರಿಸ್ಥಿತಿ ಶೋಚನೀಯ’ 13

20 ವರ್ಷಗಳ ಬಳಿಕ ಅರ್ಜಿದಾರರಿಗೆ ಪರಿಹಾರ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,050 ▲	21,910 ▲	₹63,330 (ಬೆಂಗಳೂರು) ▼	₹71,800 (ಬೆಂಗಳೂರು) ▲	83.05 ▼

ಚುನಾವಣಾ ಬಾಂಡ್ ರದ್ದು

ಪಕ್ಷಗಳ ಗೋಪ್ಯ ದೇಣಿಗೆ ಸಂಗ್ರಹ ಅಸಾಂವಿಧಾನಿಕ : ಸುಪ್ರೀಂ ಕೋರ್ಟ್

ಕೇಂದ್ರಕ್ಕೆ ದೊಡ್ಡ ಹಿನ್ನಡೆ


ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆ ಘೋಷಣೆಗೆ ಕೆಲವೇ ವಾರಗಳು ಇರುವ ಹೊತ್ತಿನಲ್ಲಿ ಅತ್ಯಂತ ಮಹತ್ವದ ತೀರ್ಪನ್ನು ನೀಡಿರುವ ಸುಪ್ರೀಂ ಕೋರ್ಟ್, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತಂದ ಚುನಾವಣಾ ಬಾಂಡ್ ಯೋಜನೆಯು ಅಸಾಂವಿಧಾನಿಕ ಎಂದು ಸಾರಿದೆ. ಈ ತೀರ್ಪು ಕೇಂದ್ರ ಸರ್ಕಾರಕ್ಕೆ ಆಗಿರುವ ದೊಡ್ಡ ಹಿನ್ನಡೆ ಎಂದು ವಿಶ್ಲೇಷಿಸಲಾಗಿದೆ.

ರಾಜಕೀಯ ಪಕ್ಷಗಳಿಗೆ ಗೋಪ್ಯವಾಗಿ ದೇಣಿಗೆ ನೀಡಲು ಅವಕಾಶ ಕಲ್ಪಿಸುವ, 2018ರಲ್ಲಿ ಜಾರಿಗೆ ಬಂದ ಚುನಾವಣಾ ಬಾಂಡ್ ಯೋಜನೆಯು ಸಂವಿಧಾನ ದತ್ತವಾದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ, ಮಾಹಿತಿ ಪಡೆದುಕೊಳ್ಳುವ ಹಕ್ಕಿಗೆ ಧಕ್ಕೆ ತರುವಂಥದ್ದು ಎಂದು ಕೋರ್ಟ್ ಹೇಳಿದೆ.

13 ನೇ ಪುಟ ನೋಡಿ

ಸಂವಿಧಾನ ಪೀಠದ ಮಾತುಗಳು...

- ಚುನಾವಣೆಯಲ್ಲಿ ಕಪ್ಪು ಹಣದ ಚಲಾವಣೆಯನ್ನು ಹತ್ತಿಕ್ಕಲು ಚುನಾವಣಾ ಬಾಂಡ್ ಮಾತ್ರವೇ ಸಾಧನವಲ್ಲ. ಈ ಉದ್ದೇಶವನ್ನು ಗಮನಾರ್ಹವಾಗಿ ಈಡೇರಿಸುವ ಹಾಗೂ ಮಾಹಿತಿಯ ಹಕ್ಕಿನ ಮೇಲೆ ಬಹಳ ಕಡಿಮೆ ಪರಿಣಾಮ ಉಂಟುಮಾಡುವ ಇತರ ಆಯ್ಕೆಗಳೂ ಇವೆ.
- ಚುನಾವಣೆಗಳು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆಯುವುದನ್ನು ಸಂವಿಧಾನವು ಬಹಳ ಉನ್ನತವಾದ ಸ್ಥಾನದಲ್ಲಿ ಇರಿಸಿದೆ. ಚುನಾವಣಾ ಪ್ರಕ್ರಿಯೆಗಳು ಋಜು ಮಾರ್ಗದಲ್ಲಿ ಇರುವಂತೆ ನೋಡಿಕೊಳ್ಳುವುದು ಪ್ರಜಾತಂತ್ರ ಮಾದರಿಯ ಸರ್ಕಾರವನ್ನು ಪೋಷಿಸುವಲ್ಲಿ ಮಹತ್ವದ್ದು.
- ರಾಜಕೀಯ ಪಕ್ಷಗಳಿಗೆ ಎರಡು ಕಾರಣಗಳಿಗೆ ದೇಣಿಗೆ ನೀಡಬಹುದು. ಮೊದಲನೆಯದು, ಪಕ್ಷಕ್ಕೆ ಬೆಂಬಲ ಸೂಚಿಸಲು. ಎರಡನೆಯದ್ದು, ದೇಣಿಗೆ ನೀಡಿದ್ದಕ್ಕೆ ಪ್ರತಿಯಾಗಿ ಏನನ್ನೋ ಪಡೆದುಕೊಳ್ಳಲು... ಏನನ್ನೋ ಪಡೆಯುವ ಉದ್ದೇಶದಿಂದ ಮಾಡುವ ದೇಣಿಗೆಯು ರಾಜಕೀಯ ಬೆಂಬಲ ಎಂದು ಪರಿಗಣಿತವಾಗುವುದಿಲ್ಲ.



ಈ ತೀರ್ಪು ಪ್ರಜಾತಂತ್ರದ ಬಗ್ಗೆ ಪ್ರಜೆಗಳು ಮತ್ತೆ ವಿಶ್ವಾಸ ಇರಿಸುವಂತೆ ಮಾಡುತ್ತದೆ. ಕಳೆದ ಐದು ಅಥವಾ ಏಳು ವರ್ಷಗಳಲ್ಲಿ ಸುಪ್ರೀಂ ಕೋರ್ಟ್ ನೀಡಿದ ಐತಿಹಾಸಿಕ ತೀರ್ಪು ಇದು. ಇದು ಪ್ರಜಾತಂತ್ರಕ್ಕೆ ಸಿಕ್ಕ ವರ

ಎಸ್.ವೈ. ಖುರೇಷಿ, ನಿವೃತ್ತ ಮುಖ್ಯ ಚುನಾವಣಾ ಆಯುಕ್ತ



ಚುನಾವಣಾ ದೇಣಿಗೆಗಳಲ್ಲಿನ ಮಾಲಿನ್ಯವನ್ನು ತೊಳೆಯಲು ಕ್ರಮಿಸಬೇಕಿರುವ ಹಾದಿ ಸುದೀರ್ಘವಾಗಿದೆ. ಈ ಮೊದಲು ಬಹಳ ವ್ಯಾಪಕವಾಗಿದ್ದ ನಗದು ಬಳಕೆಯ ವ್ಯವಸ್ಥೆ ಮತ್ತೆ ಚಾಲ್ತಿಗೆ ಬರುತ್ತದೆ

ಎನ್. ಗೋಪಾಲಸ್ವಾಮಿ, ನಿವೃತ್ತ ಮುಖ್ಯ ಚುನಾವಣಾ ಆಯುಕ್ತ


ನ್ಯಾಯಪೀಠ ನೀಡಿದ ನಿರ್ದೇಶನಗಳು...



- 2019ರ ಏಪ್ರಿಲ್ 12ರ ನಂತರ ಖರೀದಿ ಆಗಿರುವ ಚುನಾವಣಾ ಬಾಂಡ್‌ಗಳ ವಿವರವನ್ನು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ), ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು. ಅಂದರೆ, ಪ್ರತಿಯೊಂದು ಬಾಂಡ್ ಖರೀದಿಯಾದ ದಿನಾಂಕ, ಅದನ್ನು ಖರೀದಿಸಿದವರ ಹೆಸರು ಹಾಗೂ ಯಾವ ಮೌಲ್ಯದ ಬಾಂಡ್ ಖರೀದಿಸಲಾಯಿತು ಎಂಬುದರ ವಿವರ ಸಲ್ಲಿಸಬೇಕು.
  (ಚುನಾವಣಾ ಬಾಂಡ್ ಯೋಜನೆಯ ಅಡಿಯಲ್ಲಿ ಮಾನ್ಯತೆ ಪಡೆದ ಹಣಕಾಸು ಸಂಸ್ಥೆ ಎಸ್‌ಬಿಐ ಮಾತ್ರ. ಅಂದರೆ, ಎಸ್‌ಬಿಐ ಮೂಲಕ ಮಾತ್ರ ಈ ಬಾಂಡ್ ಖರೀದಿಸಲು ಸಾಧ್ಯವಿತ್ತು)
- 2019ರ ಏಪ್ರಿಲ್ 12ರ ನಂತರದಲ್ಲಿ ಚುನಾವಣಾ ಬಾಂಡ್ ಮೂಲಕ ದೇಣಿಗೆ ಪಡೆದ ಪಕ್ಷಗಳ ವಿವರವನ್ನು ಎಸ್‌ಬಿಐ ಸಲ್ಲಿಸಬೇಕು. ರಾಜಕೀಯ ಪಕ್ಷಗಳು ನಗದೀಕರಿಸಿಕೊಂಡ ಬಾಂಡ್ ವಿವರವನ್ನು, ಪಕ್ಷಗಳು ಯಾವ ದಿನಾಂಕಕ್ಕೆ ಬಾಂಡ್ ನಗದು ಮಾಡಿಕೊಂಡವು, ಯಾವ ಮೌಲ್ಯದ ಬಾಂಡ್ ನಗದು ಮಾಡಿಕೊಂಡವು ಎಂಬುದನ್ನು ಮಾರ್ಚ್ 6ಕ್ಕೆ ಮೊದಲು ಆಯೋಗಕ್ಕೆ ಸಲ್ಲಿಸಬೇಕು.
- ಚುನಾವಣಾ ಆಯೋಗವು ಎಸ್‌ಬಿಐ ಕಡೆಯಿಂದ ಸಿಗುವ ಈ ವಿವರಗಳನ್ನು ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಮಾರ್ಚ್ 13ಕ್ಕೆ ಮೊದಲು ಪ್ರಕಟಿಸಬೇಕು.
- ನಗದು ಮಾಡಿಕೊಳ್ಳದ ಬಾಂಡ್‌ಗಳ ಮಾನ್ಯತೆ (ಬಾಂಡ್‌ಗಳಿಗೆ 15 ದಿನಗಳ ಮಾನ್ಯತೆ ಇರುತ್ತದೆ) ಅವಧಿ ಪೂರ್ಣಗೊಳ್ಳದಿದ್ದ ಸಂದರ್ಭದಲ್ಲಿ, ರಾಜಕೀಯ ಪಕ್ಷಗಳು ಅಥವಾ ಬಾಂಡ್ ಖರೀದಿಸಿದವರು ಆ ಬಾಂಡ್‌ಗಳನ್ನು ಬ್ಯಾಂಕ್‌ಗೆ ಮರಳಿಸಬೇಕು. ಬ್ಯಾಂಕ್ ಆ ಬಾಂಡ್‌ನ ಮೊತ್ತವನ್ನು ಖರೀದಿಸಿದವರ ಖಾತೆಗೆ ಮರಳಿಸಬೇಕು.

(2019ರ ಏಪ್ರಿಲ್ 12ರಂದು ಮಧ್ಯಂತರ ಆದೇಶವೊಂದನ್ನು ನೀಡಿದ್ದ ಪೀಠವು, ಸ್ವೀಕರಿಸಿರುವ ದೇಣಿಗೆ ಹಾಗೂ ಮುಂದೆ ಸ್ವೀಕರಿಸುವ ದೇಣಿಗೆಯ ಮಾಹಿತಿಯನ್ನು ರಾಜಕೀಯ ಪಕ್ಷಗಳು ಚುನಾವಣಾ ಆಯೋಗಕ್ಕೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬೇಕು ಎಂದು ಸೂಚಿಸಿತ್ತು.)

ರೋಹಿತ್–ರವೀಂದ್ರ ‘ದ್ವಿಶತಕ’



ರಾಜ್‌ಕೋಟ್: ನಾಯಕ ರೋಹಿತ್ ಶರ್ಮಾ ಮತ್ತು ರವೀಂದ್ರ ಜಡೇಜ ಅವರ ದ್ವಿಶತಕದ (204; 329ಎಸೆತ) ಜೊತೆಯಾಟದಿಂದಾಗಿ ಭಾರತ ತಂಡವು ಗುರುವಾರ ಇಲ್ಲಿ ಆರಂಭವಾದ ಇಂಗ್ಲೆಂಡ್ ಎದುರಿನ ಮೂರನೇ ಟೆಸ್ಟ್ ಪಂದ್ಯದಲ್ಲಿ ಉತ್ತಮ ಮೊತ್ತ ಗಳಿಸಿತು.

‘ರದ್ದಾದ ಪಡಿತರ ಚೀಟಿಗೆ ಮರುಜೀವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರ 2021ರ ಜೂನ್ 1ರಂದು ಹೊರಡಿಸಿದ್ದ ಆದೇಶದಂತೆ ರದ್ದುಗೊಂಡಿರುವ ಆದ್ಯತಾ (ಬಿಪಿಎಲ್) ಪಡಿತರ ಚೀಟಿಗಳಿಗೆ ಮರುಜೀವ ನೀಡಲಾಗುವುದು’ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ಕಾಂಗ್ರೆಸ್‌ನ ನಯನಾ ಮೋಟಮ್ಮ ಪ್ರಶ್ನೆಗೆ ವಿಧಾನಸಭೆಯಲ್ಲಿ ಗುರುವಾರ ಉತ್ತರಿಸಿದ ಅವರು, ‘ನಾಲ್ಕು ಚಕ್ರದ ವೈಯಕ್ತಿಕ ವಾಹನ ಹೊಂದಿದವರ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸಲು ಆಗ ಆದೇಶದಲ್ಲಿ ಸೂಚಿಸಲಾಗಿತ್ತು. 2022ರ ಆಗಸ್ಟ್ 28ರಂದು ಆ ಆದೇಶವನ್ನು ತಡೆ ಹಿಡಿಯಲಾಗಿದೆ. ಮೊದಲಿನ ಆದೇಶದಂತೆ ರದ್ದುಗೊಂಡಿರುವ ಪಡಿತರ ಚೀಟಿಗಳನ್ನು ಮತ್ತೊಮ್ಮೆ ಪರಿಶೀಲಿಸಿ, ಮರು ಮಂಜೂರಾತಿ ಮಾಡಲಾಗುವುದು’ ಎಂದರು.

8ನೇ ಪುಟ ನೋಡಿ

ಶುಕ್ರವಾರ, ಫೆಬ್ರುವರಿ 16, 2024 | ₹ 7.00 |

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ನಾಟ್ಯದ ಸೊಬಗು
ಜಮ್ಮುವಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲಾವಿದೆಯರು ನೃತ್ಯ ಪ್ರದರ್ಶಿಸಿದರು

ರೈತರ ಪ್ರತಿಭಟನೆ ತಡೆಗೆ ಕ್ರಮ ● ಗಡಿಯಲ್ಲಿ ಪೊಲೀಸರ ಕಟ್ಟೆಚ್ಚರ ● 10 ಜಿಲ್ಲೆಗಳಲ್ಲಿ ಇಂಟರ್‌ನೆಟ್ ಸ್ಥಗಿತ

30,000 ಅಶ್ರುವಾಯು ಶೆಲ್ ಖರೀದಿ

ನವದೆಹಲಿ/ಚಂಡೀಗಢ (ಪಿಟಿಐ): ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾಯ್ದೆ ಮತ್ತು ಸಾಲ ಮನ್ನಾ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 'ದೆಹಲಿ ಚಲೋ' ಪ್ರತಿಭಟನೆ ಕೈಗೊಂಡಿರುವ ರೈತರನ್ನು ದೆಹಲಿ ಪ್ರವೇಶಿಸದಂತೆ ತಡೆಯಲು ಅಗತ್ಯ ಸಿದ್ಧತೆಯಲ್ಲಿ ತೊಡಗಿರುವ ದೆಹಲಿ ಪೊಲೀಸರು 30,000ಕ್ಕೂ ಹೆಚ್ಚು ಅಶ್ರುವಾಯು ಶೆಲ್‌ಗಳ ಖರೀದಿಗೆ ಮುಂದಾಗಿದ್ದಾರೆ.

ಸಂಯುಕ್ತ ಕಿಸಾನ್ ಮೋರ್ಚಾ, ಕಿಸಾನ್ ಮಜ್ದೂರ್ ಮೋರ್ಚಾ ಸೇರಿದಂತೆ ಹಲವು ಸಂಘಟನೆಗಳೊಂದಿಗೆ ಪಂಜಾಬ್‌ನಿಂದ ನೂರಾರು ರೈತರು ದೆಹಲಿಯತ್ತ ಪ್ರತಿಭಟನಾ ಮೆರವಣಿಗೆ ಹೊರಟಿದ್ದು, ಅವರನ್ನು ದೆಹಲಿಯಿಂದ 200 ಕಿ.ಮೀ. ದೂರದಲ್ಲಿರುವ ಅಂಬಾಲಾ ಬಳಿಯ ಹರಿಯಾಣದ ಗಡಿಯಲ್ಲಿ ತಡೆಯಲಾಗಿದೆ. ಈಗಾಗಲೇ ಪ್ರತಿಭಟನಾನಿರತರನ್ನು ಚದುರಿಸಲು ಹರಿಯಾಣ ಭದ್ರತಾ ಪಡೆಗಳು ಬುಧವಾರ ಅಶ್ರುವಾಯು ಶೆಲ್‌ಗಳನ್ನು ಪ್ರಯೋಗಿಸಿವೆ.



ವಿವಿಧ ರೈತ ಸಂಘಟನೆಗಳ ನೇತೃತ್ವದಲ್ಲಿ ಗುರುವಾರ ಪ್ರತಿಭಟನೆ ನಡೆಸಿದ ರೈತರು ಪಂಜಾಬಿನ ರಾಜ್‌ಪುರದಲ್ಲಿ ರೈಲು ಹಳಿಗಳ ನಡುವೆ ಕುಳಿತು ರೈಲು ತಡೆ ನಡೆಸಿದರು –ಪಿಟಿಐ ಚಿತ್ರ

ಇದನ್ನೂ ದಾಟಿ ಪ್ರತಿಭಟನಕಾರರು ಮುಂದೆ ಬಂದರೆ, ರೈತರ ಪ್ರತಿಭಟನೆಯನ್ನು ಸಿಂಘು (ಸೋನಿಪತ್ ಕಡೆ), ಟಿಕ್ರಿ (ಬಹದ್ದೂರ್ ಗಢ್ ಕಡೆ) ಮತ್ತು ಗಾಜಿಪುರ (ಗಾಜಿಯಾಬಾದ್ ಕಡೆ) ಗಡಿಗಳಲ್ಲಿಯೇ ತಡೆಯಲು ಪೊಲೀಸರು ಸಕಲ ಸಿದ್ಧತೆ ಮಾಡಿಕೊಂಡಿದ್ದಾರೆ. ಇಲ್ಲಿರುವ ಸಿಬ್ಬಂದಿಗೆ ಈಗಾಗಲೇ ಹೆಚ್ಚಿನ ಸಂಖ್ಯೆಯಲ್ಲಿ ಅಶ್ರುವಾಯು ಶೆಲ್‌ಗಳು, ಜಲಫಿರಂಗಿ ಮತ್ತು ಇತರ ಗಲಭೆ ವಿರೋಧ ಉಪಕರಣಗಳನ್ನು ನೀಡಲಾಗಿದೆ.

11ನೇ ಪುಟ ನೋಡಿ

> **ದೇಶದ ರಕ್ಷಣೆಗಾಗಿ ಗಡಿಯಲ್ಲಿ ಸೈನಿಕರು ಹೋರಾಡುವ ರೀತಿಯಲ್ಲಿಯೇ ರೈತರು ದೇಶಕ್ಕಾಗಿ ಹೋರಾಡುತ್ತಿದ್ದಾರೆ**
> **ರಾಹುಲ್ ಗಾಂಧಿ,** ಸಂಸದ

ರೈಲು ತಡೆದು ಪ್ರತಿಭಟನೆ

ಲೂಧಿಯಾನ/ ಹೋಶಿಯಾರ್‌ಪುರ (ಪಿಟಿಐ): 'ದೆಹಲಿ ಚಲೋ' ಪ್ರತಿಭಟನಕಾರರ ವಿರುದ್ಧ ಹರಿಯಾಣ ಪೊಲೀಸರ ಕ್ರಮವನ್ನು ಖಂಡಿಸಿ ಪಂಜಾಬ್‌ನ ಹಲವು ಸ್ಥಳಗಳಲ್ಲಿ ರೈತರು ರೈಲು ಹಳಿಗಳ ಮೇಲೆ ಕುಳಿತು ಪ್ರತಿಭಟನೆ ನಡೆಸಿದರು. ಇದರ ಪರಿಣಾಮ ದೆಹಲಿ– ಅಮೃತಸರ ಮಾರ್ಗದ ರೈಲುಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು.

11ನೇ ಪುಟ ನೋಡಿ



ಬೆಳಗಾವಿ ಮೇಯರ್ ಆಗಿ ಗುರುವಾರ ಅವಿರೋಧವಾಗಿ ಆಯ್ಕೆಯಾದ ಸವಿತಾ ಕಾಂಬಳೆ ಅವರು ಸರ್ಕಾರಿ ಕಾರಿನಲ್ಲಿ ಮನೆಗೆ ಬಂದರು. ತಮ್ಮ ಪುಟ್ಟ ಮನೆಯ ಮುಂದೆ ಕಾರು ನಿಲ್ಲಿಸಿ ನಗೆಬೀರಿದ್ದು ಹೀಗೆ ... ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಕಾರ್ಮಿಕ ಮಹಿಳೆ ಈಗ ಮೇಯರ್

● ಸಂತೋಷ ಈ. ಚಿನಗುಡಿ

ಬೆಳಗಾವಿ: ಮನೆಮನೆ ಸುತ್ತಿ ಪಾತ್ರೆ ತೊಳೆಯುತ್ತಿದ್ದ ಆ ಮಹಿಳೆ ಈಗ ಬೆಳಗಾವಿಯ ಪ್ರಥಮ ಪ್ರಜೆ. ಕಾರ್ಖಾನೆಯಲ್ಲಿ ದುಡಿಯುತ್ತಿದ್ದ ಕೈಗಳೇ ಮಹಾನಗರ ಪಾಲಿಕೆಯ ಚುಕ್ಕಾಣಿ ಹಿಡಿದಿವೆ. ಪುಟ್ಟ ಹೆಂಚಿನ ಮನೆ ಮುಂದೆ ಸರ್ಕಾರಿ ಕಾರು ನಿಂತಿದೆ!

ಇದು ಬೆಳಗಾವಿ ಮೇಯರ್ ಆಗಿ ಗುರುವಾರ ಅವಿರೋಧ ಆಯ್ಕೆಯಾದ ಸವಿತಾ ಕಾಂಬಳೆ ಅವರ ಸಂಕ್ಷಿಪ್ತ ಪರಿಚಯ. ಸಂಕಷ್ಟದ ಜೀವನ ಸಾಗಿಸಿದ ಅವರ ಬಾಳಿನಲ್ಲಿ ಬೆಳಕು ಮೂಡಿದೆ. ಇಲ್ಲಿನ ಸದಾಶಿವ ನಗರದ ಚಿಕ್ಕ ಮನೆಯಲ್ಲಿ ಸಂಭ್ರಮ ಮನೆಮಾಡಿದೆ.

> **ಕನಸಿನಲ್ಲೂ ಊಹಿಸಿಕೊಳ್ಳದ ಪದವಿ ಸಿಕ್ಕಿದೆ. ಮೇಯರ್ ಆಗಿ ಆಯ್ಕೆ ಮಾಡಿದ ನಾಯಕರಿಗೆ, ಡಾ.ಅಂಬೇಡ್ಕರ್ ಅವರಿಗೆ ನಾನು ಕೃತಜ್ಞಳಾಗಿದ್ದೇನೆ**
> **ಸವಿತಾ ಕಾಂಬಳೆ,** ಮೇಯರ್, ಬೆಳಗಾವಿ

2021ರ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಸವಿತಾ ಅವರು 17ನೇ ವಾರ್ಡ್‌ನ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಗೆದ್ದರು. ಪಾಲಿಕೆಯ 22ನೇ ಮೇಯರ್ ಹುದ್ದೆಗೆ ಪರಿಶಿಷ್ಟ ಜಾತಿ (ಮಹಿಳೆ) ಮೀಸಲಾತಿ ನಿಗದಿಯಾಗಿತ್ತು. ಆಡಳಿತಾರೂಢ ಬಿಜೆಪಿಯಲ್ಲಿ ಸವಿತಾ ಕಾಂಬಳೆ ಮತ್ತು ಲಕ್ಷ್ಮಿ ರಾಠೋಡ ಅವರಿಗೆ ಮಾತ್ರ ಸ್ಪರ್ಧಿಸಲು ಅವಕಾಶವಿತ್ತು. ಅಂತಿಮ ಹಂತದಲ್ಲಿ ಲಕ್ಷ್ಮಿ ಉಮೇದುವಾರಿಕೆ ಹಿಂಪಡೆದರು.

11ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶಾಸಕಿಯಿಂದ ರಕ್ಷಿಸಿ: ಪೊಲೀಸರ ಮೊರೆ

ಪ್ರಜಾವಾಣಿ ವಾರ್ತೆ

ರಾಯಚೂರು: ದೇವದುರ್ಗ ತಾಲ್ಲೂಕಿನ ಕಾನ್‌ಸ್ಟೆಬಲ್‌ವೊಬ್ಬರ ಮೇಲೆ ಶಾಸಕಿ ಕರೆಮ್ಮ ನಾಯಕ ಅವರ ಪುತ್ರ ಹಾಗೂ ಬೆಂಬಲಿಗರು ನಡೆಸಿದ್ದಾರೆ ಎನ್ನಲಾದ ಹಲ್ಲೆ ಪ್ರಕರಣ ಹೊಸ ತಿರುವು ಪಡೆದುಕೊಂಡಿದೆ. 'ಕರ್ತವ್ಯ ನಿರ್ವಹಿಸಲು ಶಾಸಕಿಯ ಬೆಂಬಲಿಗರು ಅಡ್ಡಿಪಡಿಸುತ್ತಿದ್ದಾರೆ. ಹಾಗಾಗಿ ಅವರಿಂದ ನಮಗೆ ರಕ್ಷಣೆ ಕೊಡಿ' ಎಂದು ದೇವದುರ್ಗದ 59 ಪೊಲೀಸರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ. ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

'ಅಕ್ರಮ ಮರಳು ಸಾಗಣೆ ಸಂಬಂಧ ಟ್ರ್ಯಾಕ್ಟರ್ ವಶಪಡಿಸಿಕೊಂಡಿದ್ದ ಕಾನ್‌ಸ್ಟೆಬಲ್ ಹನುಮಂತರಾಯ ಹಾಗೂ ಶಾಸಕಿ ಕರೆಮ್ಮ ನಾಯಕ ಬೆಂಬಲಿಗರ ನಡುವೆ ನಡೆದ ವಾಗ್ವಾದದಲ್ಲಿ ಶಾಸಕಿಯ ಪುತ್ರ ಸಂತೋಷ ಹಾಗೂ ಆಪ್ತ ಸಹಾಯಕರಾದ ಇಲಿಯಾಸ್, ರಫಿ ಮತ್ತಿತರರು ಸೇರಿ ಹನುಮಂತರಾಯ ಅವರ ಮೇಲೆ ತೀವ್ರವಾಗಿ ಹಲ್ಲೆ ನಡೆಸಿದ್ದಾರೆ. ಈ ಸಂಬಂಧ ಶಾಸಕರ ಬೆಂಬಲಿಗರ ಮೇಲೆ ಪ್ರಕರಣ ದಾಖಲಾಗುತ್ತಿದ್ದಂತೆ ಠಾಣೆ ಮುಂದೆ ಧರಣಿ ಕುಳಿತು ಮೂವರು ಪೊಲೀಸರ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಕಾನೂನು ರೀತಿಯಲ್ಲಿ ಅಕ್ರಮ ಮರಳು ಸಾಗಣೆ ತಡೆಯಲು ಹೋದರೆ ಪೊಲೀಸರ ಮೇಲೆಯೇ ಹಲ್ಲೆ ನಡೆಸಿ ಅಧಿಕಾರದ ದರ್ಪ ತೋರುತ್ತಿದ್ದಾರೆ' ಎಂದು ಆರೋಪಿಸಿದ್ದಾರೆ.

'ದೇವದುರ್ಗ ತಾಲ್ಲೂಕಿನಲ್ಲಿ ಮರಳು ದಂಧೆ, ಜೂಜಾಟ, ಇಸ್ಪೀಟ್, ಮಟಕಾ, ಐಎಂವಿ, ಡಿಡಿ ಪ್ರಕರಣಗಳಲ್ಲಿ ದಾಳಿ ನಡೆಸಿದ ಸಂದರ್ಭದಲ್ಲಿ ಯಾರನ್ನೇ ಹಿಡಿದುಕೊಂಡು ಬಂದರೂ ನಮ್ಮನ್ನು ಕೇಳಿ ಕ್ರಮಕ್ಕೆ ಮುಂದಾಗಬೇಕು. ಪ್ರಕರಣ ದಾಖಲಿಸುವಾಗ ಶಾಸಕರ ಬೆಂಬಲಿಗರೋ ಅಥವಾ ಇಲ್ಲವೊ ಎಂದು ಖಚಿತಪಡಿಸಿಕೊಳ್ಳಬೇಕು ಎಂದು ಒತ್ತಡ ಹಾಕುತ್ತಿದ್ದಾರೆ. ನಮ್ಮ ಕರ್ತವ್ಯದಲ್ಲಿ ಹಸ್ತಕ್ಷೇಪ ಮಾಡುವುದಲ್ಲದೇ ನೈತಿಕ ಸ್ಥೈರ್ಯ ಕುಸಿದು, ಮಾನಸಿಕ ಯಾತನೆ ಅನುಭವಿಸುತ್ತಿದ್ದೇವೆ. ರಕ್ಷಣೆ ನೀಡಿ, ಇಲ್ಲವೇ ಸಾಮೂಹಿಕವಾಗಿ ವರ್ಗಾವಣೆ ಮಾಡಬೇಕು' ಎಂದು ಕಾನೂನು ಸುವ್ಯವಸ್ಥೆ ವಿಭಾಗ ಹಾಗೂ ಸಂಚಾರ ಠಾಣೆಯ 59 ಪೊಲೀಸರು ಮನವಿ ಮಾಡಿದ್ದಾರೆ.

'ಬೆದರಿಕೆ ಇದೆ ಎನ್ನುವ ಪತ್ರ ಪೊಲೀಸರು ಕೊಟ್ಟಿಲ್ಲ': ಶಾಸಕರ ಬೆಂಬಲಿಗರಿಂದ ಬೆದರಿಕೆ ಇದೆ. ರಕ್ಷಣೆ ಕೊಡಿ ಎನ್ನುವ ಲಿಖಿತ ಪತ್ರ ಯಾವುದೇ ಪೊಲೀಸರಿಂದ ಬಂದಿಲ್ಲ. ವರ್ಗಾವಣೆ ಸಂದರ್ಭದಲ್ಲಿ ನ್ಯಾಯಯುತವಾದ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ. 'ಪ್ರಜಾವಾಣಿ'ಗೆ ತಿಳಿಸಿದರು.

ಲಿಖಿತ ಪತ್ರವು ನನ್ನ ಕೈ ಸೇರಿಲ್ಲ. ದೇವದುರ್ಗದಲ್ಲಿ ಎರಡು ದಿನಗಳ ಹಿಂದೆ ನಡೆದ ಘಟನೆಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕನ್ನಡ ಫಲಕ: ಕಣ್ಗಾವಲಿಗೆ ಆ್ಯಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಸಂಸ್ಥೆಗಳು, ವಹಿವಾಟು ಕೇಂದ್ರಗಳು, ಉದ್ದಿಮೆಗಳು ಮತ್ತು ಕೈಗಾರಿಕೆಗಳ ನಾಮಫಲಕಗಳಲ್ಲಿ ಶೇಕಡ 60ರಷ್ಟು ಕನ್ನಡ ಭಾಷೆಯಲ್ಲಿ ಪ್ರದರ್ಶಿಸಿರುವುದನ್ನು ಖಚಿತಪಡಿಸಿಕೊಳ್ಳಲು ಅವಕಾಶ ಕಲ್ಪಿಸುವ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ಮಸೂದೆ-2024'ಕ್ಕೆ ವಿಧಾನಸಭೆ ಗುರುವಾರ ಅಂಗೀಕಾರ ನೀಡಿತು.

ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳಿಂದ ಅನುಮತಿ, ಮಂಜೂರಾತಿ ಪಡೆದ ಎಲ್ಲ ಸಂಸ್ಥೆಗಳಿಗೂ ಈ ತಿದ್ದುಪಡಿ ಅನ್ವಯವಾಗಲಿದೆ. ಕಾಯ್ದೆಯನ್ನು ಜಾರಿಗೊಳಿಸಲು ರಚಿಸಲಾಗುವ ರಾಜ್ಯಮಟ್ಟದ ಸಮಿತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರನ್ನು ಸದಸ್ಯರನ್ನಾಗಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯವರನ್ನು ಸಂಚಾಲಕರನ್ನಾಗಿ ನೇಮಿಸಲು ಈ ತಿದ್ದುಪಡಿ ಅವಕಾಶ ಕಲ್ಪಿಸಲಿದೆ.

ಕಾಯ್ದೆಯ ಅನುಷ್ಠಾನಕ್ಕೆ ಕಾರ್ಯಪಡೆ ರಚಿಸಲಾಗುವುದು. ಕನ್ನಡ ಬಳಕೆಯ ಕಾಯ್ದೆಯನ್ನು ಅನುಷ್ಠಾನಗೊಳಿಸದವರ ವಿರುದ್ಧ ದೂರು ಸಲ್ಲಿಸಲು 'ಕನ್ನಡ ಕಣ್ಗಾವಲು' ಮೊಬೈಲ್ ಆ್ಯಪ್ ರೂಪಿಸಲಾಗುತ್ತಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದರು.

ಪರಿಶೀಲನೆ ನಡೆಸಿ, ದಂಡ ವಿಧಿಸುವ ಅಧಿಕಾರವನ್ನು ಪೊಲೀಸರಿಗೆ ನೀಡುವಂತೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸಲಹೆ ನೀಡಿದರು. 'ಕಾರ್ಯಪಡೆಯಲ್ಲಿ ಪೊಲೀಸರನ್ನೂ ನೇಮಿಸಲಾಗುವುದು. ದಂಡ ವಿಧಿಸುವ ಕುರಿತು ನಿಯಮಗಳಲ್ಲಿ ಸ್ಪಷ್ಟಪಡಿಸಲಾಗುವುದು' ಎಂದು ಸಚಿವರು ಭರವಸೆ ನೀಡಿದರು.

ಶಂಕಿತ ನಕ್ಸಲ್ ಶ್ರೀಮತಿ ಹೆಬ್ರಿಗೆ

ಹೆಬ್ರಿ (ಉಡುಪಿ): ಕೇರಳದಿಂದ ಬಾಡಿ ವಾರೆಂಟ್ ಮೇಲೆ ಕರೆತಂದಿರುವ ಶಂಕಿತ ನಕ್ಸಲ್ ಶ್ರೀಮತಿಯನ್ನು ಗುರುವಾರ ಪೊಲೀಸರು ಇಲ್ಲಿಯ ಕಬ್ಬಿನಾಲೆ ಪ್ರದೇಶಕ್ಕೆ ಕರೆತಂದು ಸ್ಥಳ ಮಹಜರು ಪ್ರಕ್ರಿಯೆ ನಡೆಸಿದರು.

ನಕ್ಸಲ್ ಮಾಹಿತಿದಾರ ಎಂಬ ಶಂಕೆಯ ಮೇಲೆ 2011ರ ನ.19ರಂದು ಹೆಬ್ರಿಯ ಕಬ್ಬಿನಾಲೆಯಲ್ಲಿ ಸದಾಶಿವ ಗೌಡ ಎಂಬುವರನ್ನು ನಕ್ಸಲರು ಅಪಹರಿಸಿ ಕೊಲೆ ಮಾಡಿದ್ದರು. ಈ ಪ್ರಕರಣ ಸಂಬಂಧ 2023ರ ನವೆಂಬರ್‌ನಲ್ಲಿ ಕೇರಳದ ಕಣ್ಣೂರಿನಲ್ಲಿ ಶ್ರೀಮತಿಯನ್ನು ಬಂಧಿಸಲಾಗಿತ್ತು.

ಸದಾಶಿವ ಗೌಡ ಅಪಹರಣ ಹಾಗೂ ಕೊಲೆ ಪ್ರಕರಣ ಸಂಬಂಧ ಇದೀಗ ಕಾರ್ಕಳ ಪೊಲೀಸರು ಕೇರಳದಿಂದ ಶ್ರೀಮತಿಯನ್ನು ಕರೆತಂದು ಸ್ಥಳ ಮಹಜರು ನಡೆಸಿದ್ದಾರೆ.

ನಕ್ಸಲ್ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವ ಆರೋಪವಿದ್ದು 2007ರಿಂದ ಆಕೆ ನಾಪತ್ತೆಯಾಗಿದ್ದರು.

ಕಾರ್ಕಳ ಡಿವೈಎಸ್‌ಪಿ ಅರವಿಂದ್ ಎನ್.ಕಲಗುಜ್ಜಿ ಮಾರ್ಗದರ್ಶನದಲ್ಲಿ ಸ್ಥಳ ಮಹಜರು ಪ್ರಕ್ರಿಯೆ ನಡೆದಿದ್ದು, ನಕ್ಸಲ್ ನಿಗ್ರಹ ಪಡೆಯ ಅಧಿಕಾರಿಗಳು ಇದ್ದರು.

ಟ್ಯಾಗೋರರ ಪದ್ಯ ವಿವರಿಸಿದ್ದ ಪ್ರಭಾ: ಸೇಂಟ್ ಜೆರೋಸಾ ಶಾಲೆಯ ಆಡಳಿತ ಮಂಡಳಿ ಸ್ಪಷ್ಟನೆ

ಶಿಕ್ಷಕಿ ತಪ್ಪೆಸಗಿಲ್ಲ, ಒತ್ತಡದಿಂದ ಕ್ರಮ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಶಿಕ್ಷಕಿ ಕಲಿಸಿದ ಪದ್ಯದ ಪೂರ್ಣ ಪಾಠ ಹಂಚಿಕೊಂಡಿರುವ ಮುಖ್ಯಶಿಕ್ಷಕಿ
- ಯಾವುದೇ ಧರ್ಮದ ವಿರುದ್ಧ ಅವಹೇಳನಕಾರಿಯಾಗಿ ಉಲ್ಲೇಖಿಸಿಲ್ಲ: ಶಿಕ್ಷಕಿ

ಮಂಗಳೂರು: 'ನಮ್ಮ ಶಾಲೆಯ ಶಿಕ್ಷಕಿ ಪ್ರಭಾ ಅವರು ಪಾಠ ಮಾಡುವಾಗ ಯಾವುದೇ ಧರ್ಮದ ಅವಹೇಳನ ಮಾಡಿಲ್ಲ. ಶಾಸಕ ವೇದವ್ಯಾಸ ಕಾಮತ್ ಒತ್ತಡ ಹೇರಿದ್ದರಿಂದ ಶಿಕ್ಷಕಿಯನ್ನು ವಜಾ ಮಾಡಬೇಕಾಯಿತು' ಎಂದು ಜೆಪ್ಪುವಿನ ಸೇಂಟ್ ಜೆರೋಸಾ ಹಿರಿಯ ಪ್ರಾಥಮಿಕ ಶಾಲೆಯ ಆಡಳಿತ ಮಂಡಳಿ ಹೇಳಿದೆ.

ಈ ಕುರಿತು ಪತ್ರಿಕಾ ಹೇಳಿಕೆಯನ್ನು ಗುರುವಾರ ಬಿಡುಗಡೆ ಮಾಡಿರುವ ಶಾಲೆಯ ಮುಖ್ಯ ಶಿಕ್ಷಕಿ ಅನಿತಾ, 'ಫೆ 10ರಂದು ನಾಲ್ವರು ನನ್ನನ್ನು ಭೇಟಿಯಾಗಿದ್ದರು. ಶಿಕ್ಷಕಿ ಪ್ರಭಾ ಅವರು ರವೀಂದ್ರನಾಥ ಟ್ಯಾಗೋರ್ ಅವರ 'ವರ್ಕ್ ಈಸ್ ವರ್ಷಿಪ್' ಪದ್ಯವನ್ನು ಕಲಿಸುವಾಗ ಹಿಂದೂ ಧರ್ಮದ ಕುರಿತು ಹಾಗೂ ಪ್ರಧಾನಿ ವಿರುದ್ಧ ಅವಹೇಳನ-ಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿದ್ದರು. ಈ ಬಗ್ಗೆ ವಿಚಾರಿಸುವ ಭರವಸೆ ನೀಡಿದ್ದೆ' ಎಂದು ತಿಳಿಸಿದ್ದಾರೆ.

ಶಿಕ್ಷಕಿ ಕಲಿಸಿದ ಪದ್ಯದ ಪೂರ್ಣ ಪಾಠವನ್ನು ಹಂಚಿಕೊಂಡಿರುವ ಮುಖ್ಯಶಿಕ್ಷಕಿ, 'ದೇವಾಲಯಗಳು, ಚರ್ಚುಗಳು ಮತ್ತು ಮಸೀದಿಗಳು ಕಟ್ಟಡಗಳು ಮಾತ್ರ. ದೇವರು ಮಾನವರ ಹೃದಯಗಳಲ್ಲಿ ನೆಲೆಸಿರುತ್ತಾರೆ. ಹಾಗಾಗಿ ದೇವರ ಹೆಸರಿನಲ್ಲಿ ಮನುಷ್ಯರನ್ನು ಕೊಲ್ಲಬಾರದು. ಕಾಯಕವನ್ನು, ಮನುಷ್ಯರನ್ನು ನಾವು ಗೌರವಿಸುವ ಮೂಲಕ ಅದರಲ್ಲಿ ದೇವರನ್ನು ಕಾಣಬೇಕು. ನಾವೆಲ್ಲರೂ ದೇವರ ಆಲಯಗಳಿದ್ದಂತೆ ಎಂದು ಆ ಪದ್ಯವನ್ನು ಅರ್ಥ ಮಾಡಿಸುವಾಗ ಹೇಳಿದ್ದೇನೆ. ಹಿಂದೂ ಅಥವಾ ಯಾವುದೇ ಧರ್ಮದ ವಿರುದ್ಧ ಹಾಗೂ ಪ್ರಧಾನಿ ವಿರುದ್ಧ ಅವಹೇಳನಕಾರಿಯಾಗಿ ಉಲ್ಲೇಖ ಮಾಡಿಲ್ಲ ಎಂಬುದಾಗಿ ಶಿಕ್ಷಕಿ ಪ್ರಭಾ ವಿವರಣೆ ನೀಡಿದ್ದಾರೆ' ಎಂದು ಹೇಳಿದ್ದಾರೆ.

'ಶಿಕ್ಷಕಿ ಹಿಂದೂ ಧರ್ಮವನ್ನು ಅವಹೇಳನ ಮಾಡಿದ್ದಾರೆ ಎಂಬ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದ ಧ್ವನಿಮುದ್ರಿತ ಸಂದೇಶ ಸತ್ಯಕ್ಕೆ ದೂರವಾಗಿದ್ದು, ಈ ಬಗ್ಗೆ ತನಿಖೆ ನಡೆಸಬೇಕು. ಅಹಿತಕರ ಘಟನೆ ನಡೆಯದಂತೆ ರಕ್ಷಣೆ ನೀಡಬೇಕು ಎಂದು ಕೋರಿ ಜಿಲ್ಲಾಡಳಿತವನ್ನು ಸಂಪರ್ಕಿಸಿದ್ದೆವು. ಆ ಮಹಿಳೆಯ ಧ್ವನಿಮುದ್ರಿತ ಸಂದೇಶವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿ ಪೊಲೀಸರಿಗೆ ದೂರು ನೀಡಿದ್ದೆವು.'

'ಫೆ.12ರಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿದ್ದರು. ಅವರಿಗೂ ಸತ್ಯಾಂಶ ವಿವರಿಸಿದ್ದೆವು. ಅದರ ಬೆನ್ನಲ್ಲೇ ಸ್ಥಳೀಯ ಶಾಸಕ ವೇದವ್ಯಾಸ ಕಾಮತ್ ಬಂದರು. ಅವರ ಜೊತೆ ಬಂದ ಹಿಂದುತ್ವವಾದಿ ಸಂಘಟನೆಗಳ ಕಾರ್ಯಕರ್ತರು ಶಾಲೆಯ ವಿರುದ್ಧ ಘೋಷಣೆ ಕೂಗಿದರು. ಶಾಲೆಯ ಒಳಗೆ ಬರುವಂತೆ ಗೌರವಯುತವಾಗಿ ಶಾಸಕರನ್ನು ಆಹ್ವಾನಿಸಿದ್ದೆವು. ಒಳಗೆ ಬರಲು ನಿರಾಕರಿಸಿ ಶಾಲೆ ಮತ್ತು ಆಡಳಿತ ಮಂಡಳಿ ವಿರುದ್ಧ ಪ್ರತಿಭಟನೆ ನಡೆಸಿದರು.'

'ಎಲ್ಲರ ಪ್ರತಿನಿಧಿಯಾದ ಶಾಸಕರೇ ಮಕ್ಕಳನ್ನು ಒಟ್ಟಿಗೆ ಸೇರಿಸಿಕೊಂಡು, ಅವರದ್ದೇ ಶಾಲೆಯ ವಿರುದ್ಧ ಘೋಷಣೆ ಕೂಗುವಂತೆ ಮಕ್ಕಳನ್ನು ಪ್ರಚೋದಿಸಿದ್ದು ನೋವಿನ ಸಂಗತಿ. ಶಿಕ್ಷಕಿ ಆ ಪಾಠ ಮಾಡಿದ್ದ ಸಂದರ್ಭದಲ್ಲಿ ತರಗತಿಯಲ್ಲಿ ಇಲ್ಲದ ವಿದ್ಯಾರ್ಥಿಗಳು ಹಾಗೂ ಇತರ ತರಗತಿಗಳ ವಿದ್ಯಾರ್ಥಿಗಳೂ ಘೋಷಣೆ ಕೂಗುವಂತೆ ಮಾಡಿದರು.'

'ಶಿಕ್ಷಕಿಯನ್ನು ತಕ್ಷಣವೇ ವಜಾ ಮಾಡದಿದ್ದರೆ ಪ್ರತಿಭಟನೆಯನ್ನು ತೀವ್ರಗೊಳಿಸುವುದಾಗಿ ಶಾಸಕರು ಬೆದರಿಕೆ ಒಡ್ಡಿದರು. ಶಿಕ್ಷಣ ಸಂಸ್ಥೆಯ ನಿಯಮಗಳ ಪ್ರಕಾರ ವಿಚಾರಣೆ ನಡೆಸದೆಯೇ ಶಿಕ್ಷಕಿಯನ್ನು ವಜಾ ಮಾಡಲು ಅವಕಾಶ ಇಲ್ಲ ಎಂದು ನಾನು ಅವರಿಗೆ ತಿಳಿಸಿದೆ. ಆದರೂ, ಶಿಕ್ಷಕಿಯನ್ನು ತಕ್ಷಣ ವಜಾ ಮಾಡಬೇಕು ಎಂದು ಶಾಸಕರ ನೇತೃತ್ವದ ಗುಂಪು ಒತ್ತಡ ಹೇರಿತು. ಶಾಂತಿ ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಮತ್ತು ಗುಂಪು ಮತ್ತಷ್ಟು ದೊಡ್ಡದಾಗಲು ಅವಕಾಶ ನೀಡುವುದು ಬೇಡ ಎಂಬ ಕಾರಣಕ್ಕೆ ಬೇರೆ ದಾರಿ ಇಲ್ಲದೆಯೇ ಶಿಕ್ಷಕಿ ಪ್ರಭಾ ಅವರನ್ನು ಹುದ್ದೆಯಿಂದ ವಜಾ ಮಾಡಿದ ಹೇಳಿಕೆ ನೀಡಬೇಕಾಯಿತು' ಎಂದು ಶಾಲೆಯ ಮುಖ್ಯ ಶಿಕ್ಷಕಿ ತಿಳಿಸಿದ್ದಾರೆ.

'ಪ್ರಭಾ ಅವರು ನಮ್ಮ ಶಾಲೆಯಲ್ಲಿ ಶಿಕ್ಷಕಿಯಾಗಿ 16 ವರ್ಷಗಳ ಅನುಭವ ಹೊಂದಿದ್ದಾರೆ. ಅವರ ವಿರುದ್ಧ ಯಾವತ್ತೂ ಯಾವುದೇ ದೂರು ಬಂದಿಲ್ಲ' ಎಂದೂ ಅವರು ಹೇಳಿದ್ದಾರೆ.

ಸುದ್ದಿ 2 ನಿಮಿಷ

'ಪಂಚಮಸಾಲಿಯವರಿಗೆ ಐದು ಕ್ಷೇತ್ರಗಳಲ್ಲಿ ಟಿಕೆಟ್ ಕೊಡಿ'

ಬೆಳಗಾವಿ: 'ಈ ಬಾರಿ ಲೋಕಸಭೆ ಚುನಾವಣೆಯಲ್ಲಿ ರಾಜ್ಯದ ಐದು ಕ್ಷೇತ್ರಗಳಲ್ಲಿ ಪಂಚಮಸಾಲಿ ಸಮುದಾಯದ ಅಭ್ಯರ್ಥಿಗೆ ಬಿಜೆಪಿ ಮತ್ತು ಕಾಂಗ್ರೆಸ್‌ನವರು ಟಿಕೆಟ್ ನೀಡಬೇಕು' ಎಂದು ಕೂಡಲಸಂಗಮದ ಪಂಚಮಸಾಲಿ ಪೀಠಾಧ್ಯಕ್ಷ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಿತ್ತೂರು ಕರ್ನಾಟಕದಲ್ಲಿ ಪಂಚಮಸಾಲಿ ಸಮುದಾಯದವರೇ ಬಹುಸಂಖ್ಯಾತರು. ಅದಕ್ಕೆ ಕಿತ್ತೂರು ಕರ್ನಾಟಕದಲ್ಲಿ ಪಂಚಮಸಾಲಿ ಸಮುದಾಯದ ಇಬ್ಬರು, ಕಲ್ಯಾಣ ಕರ್ನಾಟಕದಲ್ಲಿ ಒಬ್ಬರಿಗೆ ಟಿಕೆಟ್ ಕೊಡಬೇಕು. ಮಲೆನಾಡಿನಲ್ಲಿ ಮಲೆಗೌಡ ಸಮುದಾಯಕ್ಕೆ ಮತ್ತು ಮೈಸೂರು ಭಾಗದಲ್ಲಿ ಲಿಂಗಾಯತ ಗೌಡ ಸಮುದಾಯಕ್ಕೆ ತಲಾ ಒಂದೊಂದು ಟಿಕೆಟ್ ನೀಡಬೇಕು' ಎಂದರು.

'ಬೆಳಗಾವಿ ಕ್ಷೇತ್ರದಿಂದ ಈರಣ್ಣ ಕಡಾಡಿ ಮತ್ತು ಮಹಾಂತೇಶ ವಕ್ಕುಂದ ಬಿಜೆಪಿ ಟಿಕೆಟ್ ಕೇಳಿದ್ದಾರೆ. ಲಿಂಗಾಯತ ಕೋಟಾದಡಿ ಇನ್ನೂ ಅನೇಕರು ಟಿಕೆಟ್ ಕೇಳಿದ್ದಾರೆ. ಎಲ್ಲರ ಕಾರ್ಯದಕ್ಷತೆ, ಪಕ್ಷನಿಷ್ಠೆ ಪರಿಗಣಿಸಿ, ಯಾರಿಗಾದರೂ ಟಿಕೆಟ್ ಕೊಡಲಿ' ಎಂದು ಹೇಳಿದರು.



ವಚನ ವಿಶ್ವವಿದ್ಯಾಲಯ ಘೋಷಿಸಲು ಆಗ್ರಹ: 'ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದಲ್ಲಿ ವಚನ ವಿಶ್ವವಿದ್ಯಾಲಯ ಸ್ಥಾಪಿಸುವುದಾಗಿ ರಾಜ್ಯ ಸರ್ಕಾರ ಈ ಬಜೆಟ್‌ನಲ್ಲಿ ಘೋಷಿಸಬೇಕು' ಎಂದೂ ಒತ್ತಾಯಿಸಿದರು.

ನಾಳೆಯಿಂದ 'ಹಾರ್ನ್‌ಬಿಲ್ ಹಬ್ಬ'

ದಾಂಡೇಲಿ (ಉತ್ತರ ಕನ್ನಡ ಜಿಲ್ಲೆ): 'ನಗರದಲ್ಲಿ ಫೆಬ್ರುವರಿ 17 ಮತ್ತು 18 ರಂದು 'ಹಾರ್ನ್‌ಬಿಲ್ ಹಬ್ಬ' ನಡೆಯಲಿದೆ. ದೇಶ ಹಾಗೂ ರಾಜ್ಯದ ಪಕ್ಷಿ ಪ್ರಿಯರು, ತಜ್ಞರು ಭಾಗವಹಿಸುವರು. ಆನ್‌ಲೈನ್ ಹಾಗೂ ಆಫ್‌ಲೈನ್ ನೋಂದಣಿ ಆರಂಭವಾಗಿದೆ' ಎಂದು ಹಳಿಯಾಳ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಪ್ರಶಾಂತಕುಮಾರ.ಕೆ.ಸಿ ತಿಳಿಸಿದರು

'ಹಬ್ಬದ ಪ್ರಯುಕ್ತ ಶನಿವಾರ ಬೆಳಿಗ್ಗೆ 10ಕ್ಕೆ ಹಾರ್ನ್‌ಬಿಲ್ ಜಾಗೃತಿ ಜಾಥಾ ನಡೆಯಲಿದೆ. ಹಾರ್ನ್‌ಬಿಲ್ ಭವನದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮವನ್ನು ಮೀನುಗಾರಿಕೆ ಸಚಿವ ಮಂಕಾಳ ಎಸ್. ವೈದ್ಯ ಉದ್ಘಾಟಿಸುವರು. ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ, ಶಾಸಕ ಸತೀಶ ಸೈಲ್ ಹಾಗೂ ಆಡಳಿತ ಸುಧಾರಣಾ ಸಮಿತಿ ಅಧ್ಯಕ್ಷ ಆರ್.ವಿ. ದೇಶಪಾಂಡೆ ಪಾಲ್ಗೊಳ್ಳುವರು' ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪೋಷಕರ ದೂರಿನ ಬಗ್ಗೆ ಎಫ್‌ಐಆರ್ ದಾಖಲಿಸಲು ಮತ್ತು ಎಸ್‌ಐ ಅಮಾನತಿಗೆ ಬಿಜೆಪಿ ಆಗ್ರಹ

ಸೇಂಟ್ ಜೆರೊಸ ಪ್ರಕರಣ: ವಿಧಾನಸಭೆಯಲ್ಲಿ ಗದ್ದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರು ನಗರದ ವೆಲೆನ್ಸಿಯಾ ಸೇಂಟ್ ಜೆರೋಸ ಪ್ರೌಢಶಾಲೆ ಘಟನೆ ವಿಚಾರದಲ್ಲಿ ಸ್ಥಳದಲ್ಲಿ ಹಾಜರಿರದ ಶಾಸಕ ಭರತ್ ಶೆಟ್ಟಿ ಮೇಲೆ ದುರುದ್ದೇಶದಿಂದ ಎಫ್‌ಐಆರ್ ದಾಖಲಿಸಿದ್ದು, ಆದ್ದರಿಂದ ಎಸ್‌ಐ ಅನ್ನು ಅಮಾನತುಗೊಳಿಸಬೇಕು ಎಂದು ವಿಧಾನಸಭೆಯಲ್ಲಿ ಬಿಜೆಪಿ ಸದಸ್ಯರು ಗದ್ದಲ ಎಬ್ಬಿಸಿ ಧರಣಿಗೆ ಮುಂದಾದಾಗ ಸಭಾಧ್ಯಕ್ಷರು ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಿದರು.



ವಿಧಾನಸಭೆಯಲ್ಲಿ ಗೃಹ ಸಚಿವ ಜಿ. ಪರಮೇಶ್ವರ, ಸಚಿವರಾದ ಪ್ರಿಯಾಂಕ್ ಖರ್ಗೆ ಮತ್ತು ದಿನೇಶ್ ಗುಂಡೂರಾವ್ ಅವರು ಬಿಜೆಪಿ ಸದಸ್ಯರ ವಿರುದ್ಧ ಟೀಕಾ ಪ್ರಹಾರ ನಡೆಸಿದರು.

ಶೂನ್ಯವೇಳೆಯಲ್ಲಿ ಬಿಜೆಪಿ ಭರತ್ ಶೆಟ್ಟಿ ಅವರು ಪ್ರಸ್ತಾಪಿಸಿದ ವಿಷಯಕ್ಕೆ ಗೃಹ ಸಚಿವ ಜಿ.ಪರಮೇಶ್ವರ ಅವರು ಉತ್ತರ ನೀಡಿ, 'ಬಿಜೆಪಿ ಶಾಸಕರಾದ ವೇದವ್ಯಾಸ ಕಾಮತ್ ಮತ್ತು ಡಾ.ಭರತ್ ಶೆಟ್ಟಿ ಅವರು ಬಜರಂಗದಳದ ಮುಖಂಡರ ಜತೆ ಸೇರಿ ಶಾಲೆಯ ಆಡಳಿತ ಮಂಡಳಿಗೆ ಬೆದರಿಕೆ ಹಾಕಿದ್ದಾರೆ. ಶಾಂತಿ ಮತ್ತು ನೆಮ್ಮದಿಗೆ ಭಂಗ ತರುವ ಪ್ರಯತ್ನ ನಡೆಸಿದ್ದಾರೆ' ಎಂದು ಹೇಳಿದರು.

ಇದನ್ನು ಆಕ್ಷೇಪಿಸಿದ ಭರತ್ ಶೆಟ್ಟಿ, 'ಆ ಘಟನೆ ನಡೆದ ಸಂದರ್ಭದಲ್ಲಿ ನಾನು ಅಲ್ಲಿ ಇರಲಿಲ್ಲ. ವಿಧಾನಮಂಡಲದ ಅಧಿವೇಶನದಲ್ಲಿ ಭಾಗವಹಿಸಲೆಂದು ಬೆಂಗಳೂರಿಗೆ ಬಂದಿದ್ದೆ. ವಿಮಾನದಲ್ಲಿ ಪ್ರಯಾಣ ಮಾಡಿದ್ದಕ್ಕೆ ಬೋರ್ಡಿಂಗ್ ಪಾಸ್ ಕೂಡ ಇದೆ' ಎಂದರು.

ಅದಕ್ಕೆ ಸಮಜಾಯಿಷಿ ನೀಡಿದ ಪರಮೇಶ್ವರ ಅವರು, 'ನಾನು ಆ ವಿಚಾರವನ್ನು ಪರಿಶೀಲಿಸಿದಾಗ, ಶಾಸಕರು ಅಲ್ಲಿ ಇರಲಿಲ್ಲ ಎಂಬುದು ಗೊತ್ತಾಯಿತು' ಎಂದರು. ಈ ಹೇಳಿಕೆ ಕುರಿತು ಬಿಜೆಪಿ ಸದಸ್ಯರು ಪರಮೇಶ್ವರ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಇದರಿಂದ ಪರಮೇಶ್ವರ ಅವರು ಕೆಲ ಕ್ಷಣ ಗೊಂದಲಕ್ಕೆ ಒಳಗಾದರು.

ಆಗ ಪರಮೇಶ್ವರ ಅವರ ನೆರವಿಗೆ ಧಾವಿಸಿದ ಸಚಿವರಾದ ದಿನೇಶ್ ಗುಂಡೂರಾವ್ ಮತ್ತು ಪ್ರಿಯಾಂಕ್ ಖರ್ಗೆ ಅವರು, ಭರತ್ ಶೆಟ್ಟಿ ಅವರು 'ಎಕ್ಸ್' ಖಾತೆಯಲ್ಲಿ ಆ ಶಾಲೆ ಕುರಿತು ಬರೆದಿದ್ದ ವಿಚಾರವನ್ನು ಸಚಿವರು ಗಮನಕ್ಕೆ ತಂದರು. 'ಹಿಂದೂ ಧರ್ಮ, ಶ್ರೀರಾಮ, ದೇವರ ಮೂರ್ತಿಗಳು ಮತ್ತು ಪ್ರಧಾನಿ ಮೋದಿ ಬಗ್ಗೆ ಶಾಲಾ ಶಿಕ್ಷಕಿ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಮತಾಂತರಕ್ಕೆ ಪ್ರಚೋದಿಸುತ್ತಿದ್ದಾರೆ. ಆದ್ದರಿಂದ ಆ ಶಾಲೆಗೆ ಹಿಂದೂಗಳು ಮಕ್ಕಳನ್ನು ಸೇರಿಸಬಾರದು ಎಂದು ಭರತ್ ಶೆಟ್ಟಿ ಅವರು 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದ್ದಾರೆ' ಎಂದು ಎಕ್ಸ್ ಹೇಳಿಕೆಯನ್ನು ಓದಿದ ಪರಮೇಶ್ವರ, 'ಇದು ಜಿಲ್ಲೆಯ ಕೋಮುಸೂಕ್ಷ್ಮತೆಯನ್ನು ಕೆರಳಿಸುವಂತಹದ್ದು' ಎಂದು ಹೇಳಿದರು.

'ಶಾಸಕರ ಅಭಿಪ್ರಾಯದಲ್ಲಿ ತಪ್ಪೇನಿದೆ? ನಮ್ಮ ದೇವರು, ಧರ್ಮ, ಆಚಾರ–ವಿಚಾರವನ್ನು ಅವಹೇಳನ ಮಾಡಿದರೆ ಕೇಳಿಸಿಕೊಂಡು ಸುಮ್ಮನಿರಲು ಸಾಧ್ಯವಿಲ್ಲ. ಅದೇನು ಮಾಡಿಕೊಳ್ಳುತ್ತೀರೋ ಮಾಡಿಕೊಳ್ಳಿ. ಇದು ನಮ್ಮ ದೃಢ ನಿಲುವು' ಎಂದು ಬಿಜೆಪಿ ಶಾಸಕರು ಏರಿದ ಧ್ವನಿಯಲ್ಲಿ ಪರಮೇಶ್ವರ ವಿರುದ್ಧ ಮುಗಿಬಿದ್ದರು.

ಬಿಜೆಪಿ ಸದಸ್ಯರ ಗದ್ದಲಕ್ಕೆ ಕೆರಳಿ ಕೆಂಡವಾದ ಪರಮೇಶ್ವರ, 'ನಿಮಗೊಬ್ಬರಿಗೇ ಅಲ್ಲ ರೀ ನಮಗೂ ಜೋರಾಗಿ ಮಾತನಾಡಲು ಬರುತ್ತದೆ. ನೀವು ಹೇಳಿದಂತೆ ಕೇಳಲು ಇಲ್ಲಿರುವುದಲ್ಲ. ನಾನ್ಸೆನ್ಸ್ , ಬಿಹೇವ್ ಯುವರ್‌ಸೆಲ್ಫ್' ಎಂದು ಗುಡುಗಿದರು.

ಸಚಿವರಾದ ಪ್ರಿಯಾಂಕ್ ಖರ್ಗೆ, ಮತ್ತು ದಿನೇಶ್ ಗುಂಡೂರಾವ್ ಅವರು ಬಿಜೆಪಿ ಸದಸ್ಯರ ವಿರುದ್ಧ ಅಬ್ಬರಿಸಿದರು. ಬಿಜೆಪಿಯ ಸುನಿಲ್‌ಕುಮಾರ್, ಭರತ್ ಶೆಟ್ಟಿ, ಎಸ್.ಎನ್.ಚನ್ನಬಸಪ್ಪ ಮತ್ತು ಇತರರು ಖರ್ಗೆ ಮತ್ತು ದಿನೇಶ್ ವಿರುದ್ಧ ಹರಿಹಾಯ್ದರು. ಗದ್ದಲ ತಾರಕಕ್ಕೇರಿದ ಕಾರಣ ಯಾರು ಏನು ಮಾತನಾಡುತ್ತಿದ್ದಾರೆ ಎಂಬುದು ಕೇಳದಷ್ಟು ಗದ್ದಲ ಆವರಿಸಿತು.

ಪೋಷಕರ ದೂರಿನ ಬಗ್ಗೆ ಕ್ರಮ ಏಕಿಲ್ಲ: ಬಸವರಾಜ ಬೊಮ್ಮಾಯಿ ಮಾತನಾಡಿ, 'ಶಾಲೆಯ ಬಗ್ಗೆ ನಮಗೂ ಗೌರವವಿದೆ. ಆದರೆ ಶಿಕ್ಷಕಿ ಪ್ರಭಾ ಅವರು ಹಿಂದೂ ಧರ್ಮ, ದೇವರು ಮತ್ತು ಸಂಸ್ಕೃತಿಯ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಕುರಿತು ಪೋಷಕರು ನೀಡಿರುವ ದೂರಿನ ಬಗ್ಗೆ ಈವರೆಗೂ ಎಫ್‌ಐಆರ್ ಏಕೆ ದಾಖಲಿಸಿಲ್ಲ. ಆದರೆ, ನಿನ್ನೆಯಷ್ಟೇ ಶಾಸಕರ ವಿರುದ್ಧ ದೂರು ನೀಡಿದ ಹಿನ್ನೆಲೆಯಲ್ಲಿ ಶಾಸಕರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ. ಪೋಷಕರ ದೂರಿನ ಬಗ್ಗೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ' ಎಂದು ಪ್ರಶ್ನಿಸಿದರು.

'ಆ ದೂರಿನ ಕುರಿತು ತನಿಖೆ ನಡೆಸಿ ಬಳಿಕ ಕ್ರಮ ಜರುಗಿಸುತ್ತೇವೆ' ಎಂದು ಪರಮೇಶ್ವರ ಅವರು ಸಮಜಾಯಿಷಿ ನೀಡಿದರು. 'ಇದು ಸರ್ಕಾರದ ತಾರತಮ್ಯ ಧೋರಣೆಗೆ ನಿದರ್ಶನ' ಎಂದು ಬೊಮ್ಮಾಯಿ ಟೀಕಿಸಿದರು.

ವಿರೋಧಪಕ್ಷದ ನಾಯಕ ಅಶೋಕ ಮಾತನಾಡಿ, ರಾಮ, ಹಿಂದೂ ಸಂಸ್ಕೃತಿ ಬಗ್ಗೆ ಅವಹೇಳನ-ಕಾರಿಯಾಗಿ ಮಾತನಾಡಿದ ಶಿಕ್ಷಕಿಯನ್ನು ಬಂಧಿಸಬೇಕು. ಬಿಜೆಪಿ ಶಾಸಕರ ವಿರುದ್ಧ ಎಫ್‌ಐಆರ್ ದಾಖಲಿಸಿದ ಪೊಲೀಸರನ್ನು ಅಮಾನತುಗೊಳಿಸಬೇಕು ಎಂದು ಆಗ್ರಹಿಸಿದರು.

ಶಿಕ್ಷಕಿಯ ತಪ್ಪಿಲ್ಲ: ಸಚಿವ ಪರಮೇಶ್ವರ

'ಸಿಸ್ಟರ್ ಪ್ರಭಾರವರು ಯಾವುದೇ ಧರ್ಮಕ್ಕೂ ಅವಮಾನ ಆಗುವ ರೀತಿಯಲ್ಲಿ ನಡೆದುಕೊಂಡಿಲ್ಲ. ಆದರೆ, ಸ್ಥಳೀಯ ಶಾಸಕ ವೇದವ್ಯಾಸ ಕಾಮತ್ ಅವರು ಶಾಸಕ ಡಾ. ಭರತ್ ಶೆಟ್ಟಿ, ಬಜರಂಗ ದಳದ ಮುಖಂಡ ಶರಣ್ ಪಂಪ್‌ವೆಲ್ ಮುಂತಾದವರ ಜತೆ ಶಾಲೆಯ ಗೇಟ್ ಬಳಿ ಅಕ್ರಮವಾಗಿ ಸೇರಿ ಜೈಶ್ರೀರಾಮ್ ಎಂದು ಘೋಷಣೆ ಕೂಗಿ ಕ್ರೈಸ್ತ ಧರ್ಮದ ವಿರುದ್ಧ ಮಾತನಾಡಿದ್ದಾರೆ' ಎಂದು ಸಚಿವ ಜಿ.ಪರಮೇಶ್ವರ ಅವರು ತಮ್ಮ ಲಿಖಿತ ಉತ್ತರದಲ್ಲಿ ತಿಳಿಸಿದರು.

'ಅಲ್ಲದೇ, ಶಾಲಾ ಆಡಳಿತ ಮಂಡಳಿಯ ನಿಯಮಗಳನ್ನು ಉಲ್ಲಂಘಿಸುವಂತೆಯೂ ವಿದ್ಯಾರ್ಥಿಗಳನ್ನು ಪ್ರಚೋದಿಸಿದ್ದಾರೆ. ಶಾಲಾ ಆಡಳಿತ ಮಂಡಳಿ ವಿರುದ್ಧ ಮಾತನಾಡಿ ಬೆದರಿಕೆಯನ್ನೂ ಹಾಕಿದ್ದಾರೆ. ಹಿಂದೂ ಮತ್ತು ಕ್ರೈಸ್ತ ಧರ್ಮದ ಮಧ್ಯೆ ಗಲಭೆ ಸೃಷ್ಟಿಸಲು ಪ್ರಚೋದನೆ ನೀಡಿದ್ದಾರೆ' ಎಂದು ಹೇಳಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬಸವರಾಜ ಬೊಮ್ಮಾಯಿ, ಶಿಕ್ಷಕಿಯನ್ನು ತನಿಖೆಗೆ ಒಳಪಡಿಸದೆ ಸರ್ಕಾರವೇ ಅವರನ್ನು ದೋಷಮುಕ್ತ ಮಾಡಿದ್ದು ಸರಿಯಲ್ಲ ಎಂದರು.

'ಸರ್ಕಾರವನ್ನು ಕಾಂಗ್ರೆಸ್‌ನವರೇ ಕೆಡವುತ್ತಾರೆ'

ಬೆಳಗಾವಿ: 'ಕಾಂಗ್ರೆಸ್ ಶಾಸಕರಿಗೂ ಸರ್ಕಾರ ಅನುದಾನ ನೀಡುತ್ತಿಲ್ಲ. ಇದರಿಂದ ಕುದ್ದು ಹೋಗಿರುವ ಹಲವರು ಈ ಸರ್ಕಾರಕ್ಕೆ ಒಂದು ಗತಿ ಕಾಣಿಸಲು ಮುಂದಾಗಿದ್ದಾರೆ. ಕೆಲವೇ ದಿನಗಳಲ್ಲಿ ಈ ಸರ್ಕಾರದ ಗತಿ ಏನಾಗುತ್ತದೆ ನೋಡಿ' ಎಂದು ಮಾಜಿ ಸಚಿವ ಮುರುಗೇಶ ನಿರಾಣಿ ಹೇಳಿದರು.

'ಸರ್ಕಾರ ಕೆಡವಲು ಬಿಜೆಪಿ ಏನೂ ಮಾಡಬೇಕಿಲ್ಲ. ಅವರ ಪಕ್ಷದವರೇ ತುದಿಗಾಲಲ್ಲಿ ನಿಂತಿದ್ದಾರೆ. ಐದು 'ಗ್ಯಾರಂಟಿ'ಗಳನ್ನು ಜಾರಿಗೆ ತಂದಾಗ ನಾವು ಸ್ವಾಗತಿಸಿದ್ದೆವು. ನಂತರದ ದಿನಗಳಲ್ಲಿ ಎಲ್ಲ ಯೋಜನೆಗಳಿಗೂ ಇನ್ನಿಲ್ಲದ ಷರತ್ತುಗಳನ್ನು ಹಾಕಿದ್ದಾರೆ. ಹೀಗಾಗಿ, ಜನರಿಗೂ ಇವು ಇಷ್ಟವಾಗಿಲ್ಲ' ಎಂದು ಮುರುಗೇಶ ನಿರಾಣಿ ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಅಹವಾಲು ಸ್ವೀಕಾರ ಸಭೆ: ನಿಗದಿತ ವಿದ್ಯುತ್ ಶುಲ್ಕ ಏರಿಕೆಗೂ ಆಕ್ಷೇಪ

ವಿದ್ಯುತ್ ದರ ಏರಿಕೆಗೆ ವಿರೋಧ

ಪ್ರಜಾವಾಣಿ ವಾರ್ತೆ

49 ಪೈಸೆ ಏರಿಕೆ ಹೇಗೆ? (ಪೈಸೆಗಳಲ್ಲಿ)	
ವಿದ್ಯುತ್ ಖರೀದಿ	41
ನಿರ್ವಹಣೆ ವೆಚ್ಚ(ಒಅ್ಯಂಡ್ ಎಂ)	4
ಸವಕಳಿ(ಯಂತ್ರಗಳು)	2
ಸಾಲದ ಮೇಲಿನ ಬಡ್ಡಿ	2

ಬೆಂಗಳೂರು: 'ಪ್ರತಿ ತಿಂಗಳು ವಿದ್ಯುತ್ ದರ ಹೆಚ್ಚಿಸುತ್ತೀರಿ. ಜೊತೆಗೆ ನಿಗದಿತ ಶುಲ್ಕವನ್ನೂ ಹೆಚ್ಚಳ ಮಾಡುತ್ತಿದ್ದೀರಿ. ಇದರಿಂದ ಜನಸಾಮಾನ್ಯರಿಗೆ, ಉದ್ಯಮಿಗಳಿಗೆ ತೀವ್ರ ತೊಂದರೆಯಾಗಿದೆ. ಈಗಿರುವ ದರವೇ ಹೊರೆಯಾಗಿದೆ. ಈಗ ಮತ್ತೊಮ್ಮೆ ದರ ಹೆಚ್ಚಿಸಬೇಡಿ...'

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಗುರುವಾರ ವಿದ್ಯುತ್ ದರ ಪರಿಷ್ಕರಣೆ ಸಂಬಂಧ ಕರೆದಿದ್ದ ಬೆಸ್ಕಾಂ ಗ್ರಾಹಕರ ಸಾರ್ವಜನಿಕ ಅಹವಾಲು ಸ್ವೀಕಾರ ಸಭೆಯಲ್ಲಿ ಕೇಳಿಬಂದ ವಿವಿಧ ಗ್ರಾಹಕರ ಆಕ್ರೋಶದ ನುಡಿಗಳಿವು. ಸಭೆಯಲ್ಲಿ ಭಾಗವಹಿಸಿದ್ದ ನಿವೃತ್ತ ಎಂಜಿನಿಯರ್, ಸಣ್ಣ ಮತ್ತು ಬೃಹತ್ ಉದ್ಯಮಗಳ ಪ್ರತಿನಿಧಿಗಳು ಯಾವುದೇ ಕಾರಣಕ್ಕೂ ವಿದ್ಯುತ್ ದರ ಹೆಚ್ಚಿಸದಂತೆ ಆಯೋಗವನ್ನು ಒಕ್ಕೊರಲಿನಿಂದ ಒತ್ತಾಯಿಸಿದರು.

ಆರಂಭದಲ್ಲಿ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಂತೇಶ ಬೀಳಗಿಯವರು, ವಿದ್ಯುತ್ ದರವನ್ನು ಪ್ರತಿ ಯೂನಿಟ್‌ಗೆ 49 ಪೈಸೆ ಹೆಚ್ಚಿಸಿಕೊಡಬೇಕೆಂದು ಆಯೋಗಕ್ಕೆ ಮನವಿ ಮಾಡಿದರು. 'ವಿದ್ಯುತ್ ಖರೀದಿ ದರ, ನೌಕರರ ವೇತನ– ಸಾರಿಗೆ ಹೆಚ್ಚಾಗಿದೆ. ನಾವು ತೆಗೆದುಕೊಂಡ ಸಾಲದ ಮೇಲಿನ ಬಡ್ಡಿ ದರವೂ ಹೆಚ್ಚಿದ್ದು, ಆಸ್ತಿಯಲ್ಲಿನ ಸವಕಳಿ ಪ್ರಮಾಣವೂ ಅಧಿಕವಾಗಿದೆ. ಇವೆಲ್ಲವನ್ನೂ ದರ ಏರಿಕೆ ಮೂಲಕ ಸರಿದೂಗಿಸಬಹುದು' ಎಂದು ವಿವರಿಸಿದರು.

ಸರಿಯಾದ ಕ್ರಮವಲ್ಲ: 'ಬೆಸ್ಕಾಂ ವಿದ್ಯುತ್ ಸರಬರಾಜು ಸಮರ್ಪಕವಾಗಿಲ್ಲ ಎಂಬ ಕಾರಣದಿಂದ ಹಲವು ಉದ್ಯಮಿಗಳು ಮುಕ್ತ ಮಾರುಕಟ್ಟೆ ಮೂಲಕ ವಿದ್ಯುತ್ ಖರೀದಿಸುತ್ತಾರೆ. ಅವರ ಮೇಲೂ ನಿಗದಿತ ಶುಲ್ಕ ವಿಧಿಸಲಾಗುತ್ತಿದೆ. ಅದನ್ನು ಪ್ರತಿ ವರ್ಷ ಹೆಚ್ಚಿಸಲಾಗುತ್ತಿದೆ. ಇದು ಸರಿಯಾದ ಕ್ರಮ ಅಲ್ಲ' ಎಂದು ಕರ್ನಾಟಕ ಕೈಗಾರಿಕೆ ಮತ್ತು ವಾಣಿಜ್ಯ ಮಹಾಸಂಸ್ಥೆಯ ಪರವಾಗಿ ಹಾಜರಿದ್ದ ಶ್ರೀಧರ ಪ್ರಭು ಮತ್ತು ಎಂ.ಜಿ. ಪ್ರಭಾಕರ್ ಹೇಳಿದರು.

ಸ್ಥಿರಗೊಳಿಸಿ: ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ವಿದ್ಯುತ್ ಸಮಿತಿಯ ಎಸ್.ಎಂ. ಹುಸೇನ್, 'ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ಶುಲ್ಕ (ಎಫ್‌ಪಿಪಿಸಿಎ) ಆಧರಿಸಿ ಪ್ರತಿ ತಿಂಗಳು ವಿದ್ಯುತ್ ದರ ಪರಿಷ್ಕರಿಸುತ್ತಿರುವಾಗ, ಈಗ ಮತ್ತೆ 49 ಪೈಸೆ ಏರಿಕೆ ಏಕೆ ಮಾಡಬೇಕು' ಎಂದು ಕೇಳಿದರು. 'ನಿಗದಿತ ಶುಲ್ಕ'ವನ್ನು ಫ್ಲೆಕ್ಸಿಬಲ್ ಶುಲ್ಕವನ್ನಾಗಿಸಲಾಗಿದೆ. ಈ ಶುಲ್ಕವನ್ನು ಸ್ಥಿರವಾಗಿಸಬೇಕು' ಎಂದು ತಿಳಿಸಿದರು.

'ಗ್ರಾಹಕರು ಅನುಷ್ಠಾನಗೊಳಿಸಿಕೊಂಡು ನಿರ್ವಹಿಸುತ್ತಿರುವ ಟ್ರಾನ್ಸ್‌ಫರ್ಮರ್‌ಗಳು ದೀರ್ಘಕಾಲ ರಿಪೇರಿ ಬರುವುದಿಲ್ಲ. ಆದರೆ, ಬೆಸ್ಕಾಂ ಅಳವಡಿಸುವ ವಿದ್ಯುತ್ ಪರಿವರ್ತಕಗಳು ಪದೇ ಪದೇ ರಿಪೇರಿಗೆ ಬರುತ್ತವೆ. ಇಂಥ ನಿರ್ವಹಣಾ ಕ್ರಮಗಳನ್ನು ಸಮರ್ಪಕವಾಗಿ ಕೈಗೊಂಡರೆ, ನಷ್ಟವನ್ನು ತಪ್ಪಿಸಬಹುದು. ವಿದ್ಯುತ್ ದರ ಏರಿಸುವ ಪ್ರಮೇಯವೇ ಬರುವುದಿಲ್ಲ' ಎಂದು ಜಿ.ಎನ್. ಕೃಷ್ಣಪ್ಪ ತಿಳಿಸಿದರು.

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಅಧ್ಯಕ್ಷ ರವಿಕುಮಾರ್, ಸದಸ್ಯ ರವಿ ಅವರು ಗ್ರಾಹಕರಿಂದ ಅಹವಾಲು ಸ್ವೀಕರಿಸಿದರು.

ಏಕಾಂಗಿ 'ಗೌರಿ'ಗೆ ಸಂಗಾತಿ ಹುಡುಕಾಟ

ಪ್ರಜಾವಾಣಿ ವಾರ್ತೆ



ಬನ್ನೇರುಘಟ್ಟದಲ್ಲಿ ಜಿರಾಫೆ ಯದುನಂದನ ಜೊತೆಗಿದ್ದ ಗೌರಿ (ಸಂಗ್ರಹ ಚಿತ್ರ)

ಆನೇಕಲ್: ಮೂರು ವರ್ಷಗಳಿಂದ ಒಂಟಿಯಾಗಿ ಕಾಲ ಕಳೆಯುತ್ತಿರುವ ಬನ್ನೇರುಘಟ್ಟ ಜೈವಿಕ ಉದ್ಯಾನದ ಹೆಣ್ಣು ಜಿರಾಫೆ ಗೌರಿ ಸಂಗಾತಿ ಇಲ್ಲದೆ ಮಂಕಾಗಿದೆ.

ಪ್ರಾಣಿ ವಿನಿಮಯ ಯೋಜನೆಯಡಿ ಬನ್ನೇರುಘಟ್ಟಕ್ಕೆ ಮೈಸೂರಿನ ಮೃಗಾಲಯದಿಂದ 2018ರಲ್ಲಿ ಗೌರಿ ಜಿರಾಫೆ ತರಲಾಗಿತ್ತು. ಎರಡು ವರ್ಷ ಏಕಾಂಗಿಯಾಗಿದ್ದ ಗೌರಿಗೆ ಮೈಸೂರಿನ ಮೃಗಾಲಯದಿಂದ ಯದುನಂದನ ಎಂಬ ಗಂಡು ಜಿರಾಫೆಯನ್ನು ಜತೆಗೂಡಿಸಲಾಗಿತ್ತು. ಆದರೆ, ಒಂದೇ ವರ್ಷದಲ್ಲಿ ಯದುನಂದನ ಉಸಿರಾಟದ ಸಮಸ್ಯೆಯಿಂದ ಮೃತಪಟ್ಟಿತು. ಅಂದಿನಿಂದ ಮತ್ತೆ ಗೌರಿಗೆ ಒಂಟಿತನ ಬದುಕಾಯಿತು. ಸಂಗಾತಿಯಿಲ್ಲದೆ ಮಂಕಾಗಿದೆ.

ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ಹಾಗೂ ಸಿಬ್ಬಂದಿ, ಗೌರಿಗೆ ಜೋಡಿ ಹುಡುಕುವ ಪ್ರಯತ್ನ ನಡೆಸಿದೆ.

ಬನ್ನೇರುಘಟ್ಟದಲ್ಲಿ ಗಂಡು ಜಿರಾಫೆಗಳಿವೆ. ಆದರೆ ಎಲ್ಲವೂ ಒಂದೇ ಕುಟುಂಬಕ್ಕೆ ಸೇರಿರುವುದರಿಂದ ಬೇರೆ ಮೃಗಾಲಯದಿಂದ ಜಿರಾಫೆ ತರುವ ನಿಟ್ಟಿನಲ್ಲಿ ಪ್ರಯತ್ನ ನಡೆದಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ 'ಪ್ರಜಾವಾಣಿ'ಗೆ ತಿಳಿಸಿದರು.

ಬಿಡಿಎ 'ಫ್ಲ್ಯಾಟ್ ಮೇಳ' ನಾಳೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಫೆ.17ರಂದು 'ಫ್ಲ್ಯಾಟ್ ಮೇಳ' ಆಯೋಜಿಸಿದೆ.

ಚಂದ್ರಾ ಬಡಾವಣೆ (3 ಬಿಎಚ್‌ಕೆ), ಕಣಿಮಿಣಿಕೆ (2 ಬಿಎಚ್‌ಕೆ), ಕೊಮ್ಮಘಟ್ಟ (2 ಬಿಎಚ್‌ಕೆ) ಮತ್ತು ಕೋನದಾಸಪುರ ಹಂತ-2 (2 ಬಿಎಚ್‌ಕೆ) ವಸತಿ ಸಮುಚ್ಚಯದಲ್ಲಿ ಫ್ಲ್ಯಾಟ್‌ಗಳನ್ನು

ಖರೀದಿಸಬಹುದು. ಬೆಳಿಗ್ಗೆ 9ರಿಂದ ಸಂಜೆ 4:30 ರವರಗೆ ಕೋನದಾಸಪುರದ ವಸತಿ ಸಮುಚ್ಚಯದಲ್ಲಿ ಮೇಳ ಆಯೋಜಿಸಲಾಗಿದೆ. ಫ್ಲ್ಯಾಟ್‌ಗಳನ್ನು ಖರೀದಿಸಿ, ಸ್ಥಳದಲ್ಲಿಯೇ ಪ್ರಾರಂಭಿಕ ಠೇವಣಿಯನ್ನು ಪಾವತಿಸಿ, ಹಂಚಿಕೆ ಪತ್ರ ಪಡೆಯಬಹುದು. ಹಂಚಿಕೆ ಪತ್ರವನ್ನು ಸ್ವೀಕರಿಸಿದ 10 ದಿನದೊಳಗೆ ಫ್ಲ್ಯಾಟ್‌ನ ಪೂರ್ಣ ಮೊತ್ತವನ್ನು ಪಾವತಿಸಿ. ಪಾನಂತರದ 10 ದಿನಗಳಲ್ಲಿ ಫ್ಲ್ಯಾಟ್ ಅನ್ನು ನೋಂದಣಿ ಮಾಡಿಕೊಡಲಾಗುವುದು ಎಂದು ಬಿಡಿಎ ತಿಳಿಸಿದೆ.

'ಬೌದ್ಧರ ಅಭಿವೃದ್ಧಿಗೆ ನಿಗಮ ರಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೌದ್ಧರ ಸರ್ವತೋಮುಖ ಅಭಿವೃದ್ಧಿಗೆ 'ಕರ್ನಾಟಕ ರಾಜ್ಯ ಬೌದ್ಧರ ಅಭಿವೃದ್ಧಿ ಮಂಡಳಿ ಅಥವಾ ನಿಗಮ' ರಚಿಸಬೇಕು' ಎಂದು ಭಾರತೀಯ ಬೌದ್ಧ ಮಹಾಸಭಾದ ದಕ್ಷಿಣ ಕರ್ನಾಟಕ ರಾಜ್ಯ ಶಾಖೆ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ರಾಜ್ಯಾಧ್ಯಕ್ಷ ಶಿವರಾಜ್ ಎಂ.ಸಿ., 'ಮಂಡಳಿ ಅಥವಾ ನಿಗಮ ರಚಿಸುವ ಮೂಲಕ ರಾಜ್ಯದ ಐತಿಹಾಸಿಕ ಶಿಲಾಶಾಸನಗಳು, ಸ್ಮಾರಕಗಳು ಹಾಗೂ ಬೌದ್ಧ ಸ್ತೂಪಗಳನ್ನು ಸಂರಕ್ಷಣೆ ಮಾಡಬೇಕು' ಎಂದು ಹೇಳಿದರು.

'ಆಸಕ್ತರು ಬೌದ್ಧ ಧರ್ಮದ ಅನುಯಾಯಿಗಳಾದ ಬಳಿಕ ಅಧಿಕೃತವಾಗಿ ದೃಢಪಡಿಸಿಕೊಳ್ಳಲು ಬೌದ್ಧ ಧರ್ಮದ ಪ್ರತ್ಯೇಕ ಕಾಲಂ ನೀಡಬೇಕು. ಬುದ್ಧ ಜನ್ಮದಿನದಂದು ಜಯಂತಿ ಆಚರಿಸಿ, ಸರ್ಕಾರಿ ರಜೆ ಘೋಷಿಸಬೇಕು' ಎಂದು ಆಗ್ರಹಿಸಿದರು.

'ಬೌದ್ಧ ಧರ್ಮವನ್ನು ಪುನರುಜ್ಜೀವನಗೊಳಿಸಲು ರಾಜ್ಯದ ಮುಖ್ಯ ನಗರಗಳಲ್ಲಿ ಬುದ್ಧ ವಿಹಾರಗಳ ನಿರ್ಮಾಣಕ್ಕೆ 25 ಎಕರೆ, ಜಿಲ್ಲಾ ಕೇಂದ್ರಗಳಲ್ಲಿ 10 ಎಕರೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ 5 ಎಕರೆ ಭೂಮಿಯನ್ನು ಸರ್ಕಾರ ಮಂಜೂರು ಮಾಡಬೇಕು' ಎಂದು ಒತ್ತಾಯಿಸಿದರು.

ನಾಳೆ ಶ್ರೀನಿವಾಸ ಕಲ್ಯಾಣೋತ್ಸವ

ಪೀಣ್ಯ ದಾಸರಹಳ್ಳಿ: ಬಾಗಲಗುಂಟೆಯ ಎಂ.ಇ.ಐ. ಆಟದ ಮೈದಾನದಲ್ಲಿ ಶ್ರೀವಾರಿ ಫೌಂಡೇಶನ್ ಸಹಯೋಗದೊಂದಿಗೆ ಫೆ.17ರಂದು ಮಧ್ಯಾಹ್ನ 3.30ರಿಂದ ಶ್ರೀನಿವಾಸ ಕಲ್ಯಾಣೋತ್ಸವ ಹಮ್ಮಿಕೊಳ್ಳಲಾಗಿದೆ.

'ತಿರುಪತಿ ದೇವಸ್ಥಾನದಿಂದ ಉತ್ಸವಮೂರ್ತಿ ಹಾಗೂ ಲಡ್ಡು ಪ್ರಸಾದ ತರಲಾಗುತ್ತಿದೆ. ಅರ್ಚಕರು ಸಹ ಅಲ್ಲಿಂದಲೇ ಬರಲಿದ್ದಾರೆ' ಎಂದು ಶಾಸಕ ಮುನಿರಾಜು ತಿಳಿಸಿದರು.


ಹೋರಾಟ, ಸರ್ಕಾರದ ಎಚ್ಚರಿಕೆಯ ಬಳಿಕವೂ ಮಳಿಗೆಗಳ ಕೇಂದ್ರ ಸ್ಥಾನದಲ್ಲಿ ಕನ್ನಡಕ್ಕೆ ಸಿಗದ ಆದ್ಯತೆ

ನಾಮಫಲಕ: ಕನ್ನಡ 'ಮೂಲೆ ಗುಂಪು'

• ವರುಣ ಹೆಗಡೆ

ಬೆಂಗಳೂರು: ಕನ್ನಡ ಪರ ಹೋರಾಟಗಾರರ ಎಚ್ಚರಿಕೆ, ಸರ್ಕಾರದ ನಿರ್ದೇಶನದ ಬಳಿಕವೂ ನಗರದಲ್ಲಿನ ಬಹುತೇಕ ವಾಣಿಜ್ಯ ಮಳಿಗೆಗಳು ನಾಮಫಲಕಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡಲು ಹಿಂದೇಟು ಹಾಕುತ್ತಿವೆ. ಆಂಗ್ಲ ನಾಮಫಲಕಗಳನ್ನು ಮಳಿಗೆಗಳ ಕೇಂದ್ರ ಸ್ಥಾನದಲ್ಲಿಯೇ ಉಳಿಸಿಕೊಂಡು, ಕನ್ನಡ ನಾಮಫಲಕಗಳನ್ನು 'ಮೂಲೆ ಗುಂಪು' ಮಾಡುತ್ತಿವೆ.

ನಾಮಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡ ಬಳಸುವ ವಿಚಾರಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ನಗರದಲ್ಲಿ ಕಳೆದ ಡಿಸೆಂಬರ್‌ನಲ್ಲಿ ಹೋರಾಟ ನಡೆಸಿತ್ತು. ಆ ವೇಳೆ ಕೆಲವೆಡೆ ಇಂಗ್ಲಿಷ್ ನಾಮಫಲಕಗಳಿಗೆ ಮಸಿ ಬಳಿದು, ಫಲಕಗಳನ್ನು ಧ್ವಂಸ ಮಾಡಲಾಗಿತ್ತು. ಕೀಳಲು ಸಾಧ್ಯವಾಗದ ನಾಮಫಲಕಗಳಿಗೆ ಹೋರಾಟಗಾರರು ಮಸಿ ಬಳಿದಿದ್ದರು. ಬಳಿಕ ಸರ್ಕಾರವು 2024ರ ಫೆ.28ರೊಳಗೆ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಭಾಷೆ ಅಳವಡಿಸಿ ಕೊಳ್ಳಬೇಕೆಂದು ಗಡುವು ನೀಡಿತ್ತು. ಆದರೆ, ವಾಣಿಜ್ಯ ಮಳಿಗೆಗಳು ನಾಮಫಲಕಗಳಲ್ಲಿ 60ರಷ್ಟು ಕನ್ನಡ ಭಾಷೆ ಅಳವಡಿಸಿಕೊಳ್ಳಲು ನಿರಾಸಕ್ತಿ ತಾಳಿವೆ.



ನಗರದ ಬ್ರಿಗೇಡ್ ರಸ್ತೆಯ ಮಳಿಗೆಗಳಲ್ಲಿ ಆಂಗ್ಲ ನಾಮಫಲಕಗಳು ರಾರಾಜಿಸುತ್ತಿವೆ –ಪ್ರಜಾವಾಣಿ ಚಿತ್ರ

ಬ್ರಿಗೇಡ್ ರಸ್ತೆ, ಎಂ.ಜಿ. ರಸ್ತೆ, ಕೆ.ಆರ್. ಪುರ, ವಿಜಯನಗರ, ಮೈಸೂರು ರಸ್ತೆ, ಚಿಕ್ಕಪೇಟೆ, ಗಾಂಧಿನಗರ, ರಾಜಾಜಿನಗರ, ಬನಶಂಕರಿ, ಜಯನಗರ, ಜೆ.ಪಿ. ನಗರ ಸೇರಿ ನಗರದ ವಿವಿಧೆಡೆಯ ಬಹುತೇಕ ವಾಣಿಜ್ಯ ಮಳಿಗೆಗಳಲ್ಲಿ ಕನ್ನಡಕ್ಕೆ ಪ್ರಥಮ ಆದ್ಯತೆ ದೊರೆತಿಲ್ಲ. ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಭಾಷೆ ಬಳಕೆಗೆ ಸಂಬಂಧಿಸಿದಂತೆ ಬಿಬಿಎಂಪಿ 49 ಸಾವಿರಕ್ಕೂ ಅಧಿಕ ಮಳಿಗೆಗಳಿಗೆ ನೋಟಿಸ್ ನೀಡಿದೆ. ಬಿಬಿಎಂಪಿ ಪ್ರಕಾರ ಇನ್ನೂ 20 ಸಾವಿರಕ್ಕೂ ಅಧಿಕ ಮಳಿಗೆಗಳು ಶೇ 60ರಷ್ಟು ಕನ್ನಡ ಭಾಷೆ ಬಳಕೆಯ ನಾಮಫಲಕಗಳನ್ನು ಅಳವಡಿಸಿಕೊಂಡಿಲ್ಲ. ಸರ್ಕಾರ ಗಡುವು ನೀಡಿದ ಬಳಿಕ ಹಲವು ಮಳಿಗೆಗಳು ನಾಮಫಲಕಗಳಲ್ಲಿ ಕನ್ನಡ ಅಳವಡಿಸಿಕೊಂಡರೂ ಶೇ 60 ರಷ್ಟು ಆದ್ಯತೆ ನೀಡಿಲ್ಲ. ಇದು ಕನ್ನಡ ಪರ ಹೋರಾಟಗಾರರ ಅಸಮಾಧಾನಕ್ಕೆ ಕಾರಣವಾಗಿದೆ.


ಅಕ್ಕಪಕ್ಕದಲ್ಲಿ ಅಳವಡಿಕೆ: ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ಮಸೂದೆ–2024ಕ್ಕೆ ವಿಧಾನಸಭೆಯಲ್ಲಿ ಅನುಮೋದನೆ ದೊರೆತಿದೆ. ಇದರ ಪ್ರಕಾರ ನಾಮಫಲಕಗಳ ಒಟ್ಟಾರೆ ವಿಸ್ತೀರ್ಣದಲ್ಲಿ ಕನ್ನಡ ಭಾಷೆಯನ್ನು ಶೇ 60 ರಷ್ಟು ಪ್ರದರ್ಶಿಸುವುದು ಕಡ್ಡಾಯ. ಆದರೆ, ಸದ್ಯ ಬಹುತೇಕ ನಾಮಫಲಕಗಳಲ್ಲಿ ಶೇ 60 ರಷ್ಟು ಇಂಗ್ಲಿಷ್ ಇದ್ದು, ಶೇ 40 ಹಾಗೂ ಅದಕ್ಕಿಂತ ಕಡಿಮೆ ಪ್ರಮಾಣ ಕನ್ನಡಕ್ಕೆ ಆದ್ಯತೆ ನೀಡಲಾಗುತ್ತಿದೆ. ಈ ಮೊದಲಿದ್ದ ಇಂಗ್ಲಿಷ್ ನಾಮಫಲಕಗಳನ್ನು ಹಾಗೇ ಉಳಿಸಿಕೊಳ್ಳುತ್ತಿದ್ದು, ಅದರ ಮೇಲೆ ಅಥವಾ ಕೆಳಗೆ ಸಣ್ಣದಾಗಿ ಅಥವಾ ಸಮಾನವಾಗಿ ಕನ್ನಡದ ನಾಮಫಲಕಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಇನ್ನೂ ಕೆಲವೆಡೆ ಹಾಲಿ ನಾಮಫಲಕದ ಪಕ್ಕದಲ್ಲಿ ಕನ್ನಡದ ನಾಮಫಲಕವನ್ನು ಹಾಕಲಾಗಿದೆ.

'ನಾಮಫಲಕಗಳಲ್ಲಿ ಏಕರೂಪತೆ ತರಬೇಕು. ಹೋರಾಟ, ಎಚ್ಚರಿಕೆಯ ಬಳಿಕವೂ ಮಳಿಗೆಗಳ ಮಾಲೀಕರು ಕನ್ನಡಕ್ಕೆ ಆದ್ಯತೆ ನೀಡುತ್ತಿಲ್ಲ. ಶೇ 60 ರಷ್ಟು ಕನ್ನಡ ಅಳವಡಿಕೆ ಕಟ್ಟುನಿಟ್ಟಾಗಿ ಅನುಷ್ಠಾನವಾಗಬೇಕು. ಇದನ್ನು ಪಾಲಿಸದವರಿಗೆ ದಂಡ ಹೆಚ್ಚಿಸಿ, ಕಾನೂನಿನ ಅಡಿಯಲ್ಲಿ ಕ್ರಮಕೈಗೊಳ್ಳಬೇಕು. ನಾಡು–ನುಡಿಯ ರಕ್ಷಣೆಗೆ ಸರ್ಕಾರ ಮುಂದಾಗಬೇಕು' ಎಂಬ ಆಗ್ರಹ ಸಾಮಾಜಿಕ ಜಾಲತಾಣದಲ್ಲಿಯೂ ಕನ್ನಡಿಗರಿಂದ ವ್ಯಕ್ತವಾಗಿದೆ.

ಗೂಗಲ್ ಅನುವಾದ

ಹೊಸದಾಗಿ ಕನ್ನಡದ ನಾಮಫಲಕ ಅಳವಡಿಸಿಕೊಳ್ಳುತ್ತಿರುವ ಮಳಿಗೆಗಳು ಆಂಗ್ಲ ಪದಗಳನ್ನು ಕನ್ನಡದಲ್ಲಿ ಬರೆಸಿ, ಅಳವಡಿಸಿಕೊಳ್ಳುತ್ತಿವೆ. 'ಮಳಿಗೆ' ಎಂದು ಹಾಕುವ ಬದಲು 'ಶಾಪ್' ಎಂದೇ ಹಾಕಲಾಗುತ್ತಿದೆ. ಆಂಗ್ಲ ನಾಮಫಲಕಗಳನ್ನು ಯಥಾವತ್ ಕನ್ನಡ ಪದಗಳಲ್ಲಿ ಬಳಸುತ್ತಿರುವುದರಿಂದ ಒತ್ತಕ್ಷರಗಳು ಬಿಟ್ಟು, ಅಭಾಸವಾಗುತ್ತಿರುವ ಬಗ್ಗೆಯೂ ಕನ್ನಡ ಪರ ಹೋರಾಟಗಾರರಿಂದ ಆಕ್ಷೇಪಗಳು ಕೇಳಿಬಂದಿವೆ. ಇನ್ನು ಮಳಿಗೆಗಳ ಹೆಸರನ್ನು ಗೂಗಲ್ ನೆರವಿನಿಂದ ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿ, ಅಳವಡಿಸಿಕೊಳ್ಳಲಾಗುತ್ತಿದೆ. 'ಫ್ರೆಂಡ್ಸ್ ಫುಡ್ ಕಾರ್ನರ್' ಎಂಬ ಮಳಿಗೆಯ ಹೆಸರನ್ನು 'ಸ್ನೇಹಿತರ ಆಹಾರ ಮೂಲೆಯಲ್ಲಿ' ಎಂದು ಹಾಕಲಾಗಿದೆ. ಇದನ್ನು ಕೆಲವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

'ನಾಮಫಲಕಗಳಲ್ಲಿ ಕನ್ನಡವನ್ನು ಸಾಯಿಸಲಾಗುತ್ತಿದೆ. ಆಂಗ್ಲ ಪದಗಳನ್ನು ಗೂಗಲ್ ಮೂಲಕ ಅನುದಾದ ಮಾಡಲಾಗುತ್ತಿದೆ. 'ಬೀಸೋ ದೊಣ್ಣೆ ತಪ್ಪಿದರೆ ನೂರು ವರ್ಷ ಆಯಸ್ಸು' ಎಂಬ ಮನೋಭಾವದಿಂದ ನಾಮಫಲಕ ಅಳವಡಿಸಿಕೊಳ್ಳಲಾಗುತ್ತಿದೆ' ಎಂದು ರಜತ್ ಎನ್ನುವವರು 'ಎಕ್ಸ್'ನಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.



ನಾಮಫಲಕಗಳಲ್ಲಿ ಶೇ 60 ರಷ್ಟು ಕನ್ನಡ ಬಳಕೆಗೆ ಸಂಬಂಧಿಸಿದಂತೆ ಸರ್ಕಾರವೇ ಒಂದು ಮೇಲ್ವಿಚಾರಣಾ ಸಮಿತಿ ರಚಿಸಬೇಕು.

ಎಸ್‌.ಜಿ. ಸಿದ್ಧರಾಮಯ್ಯ, ಸಾಹಿತಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ



ನಾಮಫಲಕಗಳಲ್ಲಿ ತಪ್ಪಾಗಿ ಕನ್ನಡ ಬಳಸಿದರೆ ಮಳಿಗೆಗಳ ಪ್ರತಿನಿಧಿಗಳಿಗೆ ಕನ್ನಡಿಗರು ಜಾಗೃತಿ ಮೂಡಿಸಬೇಕು. ಕನ್ನಡ ಬಳಕೆಗೆ ನಿರಾಸಕ್ತಿ ತೋರಿದರೆ ಕಾನೂನು ಅಡಿ ಕ್ರಮಕೈಗೊಳ್ಳಬೇಕು

ಅರುಣ್ ಜಾವಗಲ್
ಕನ್ನಡ ಪರ ಹೋರಾಟಗಾರ

ಸುದ್ದಿ 2 ನಿಮಿಷ

ಮದ್ಯ ಮಾರಾಟ: ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ತಡೆ

ಬೆಂಗಳೂರು: ಇದೇ 16ರಂದು ನಡೆಯಲಿರುವ ವಿಧಾನ ಪರಿಷತ್ತಿನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪ ಚುನಾವಣೆಯ ಮತದಾನದ ಮುನ್ನ 48 ಗಂಟೆಗಳ ಅವಧಿಯಲ್ಲಿ ಮದ್ಯ ಮಾರಾಟಕ್ಕೆ ನಿಷೇಧ ಹೇರಿದ್ದ ಬೆಂಗಳೂರು ನಗರ ಜಿಲ್ಲಾಧಿಕಾರಿ ಕ್ರಮವನ್ನು ಹೈಕೋರ್ಟ್ ಎತ್ತಿಹಿಡಿದಿದೆ. ಈ ಸಂಬಂಧ ನಿಷೇಧವನ್ನು ಕೇವಲ ಮತ ಎಣಿಕೆ ಹಾಗೂ ಮತದಾನದ ದಿನಕ್ಕೆ ಮಾತ್ರವೇ ಸೀಮಿತಗೊಳಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ತಡೆ ನೀಡಿದೆ.

ಮದ್ಯ ಮಾರಾಟ ನಿಷೇಧವನ್ನು ಒಂದು ದಿನಕ್ಕೆ ಸೀಮಿತಗೊಳಿಸಿ ಬುಧವಾರವಷ್ಟೇ (ಫೆ.14) ನೀಡಲಾಗಿದ್ದ ಏಕಸದಸ್ಯ ನ್ಯಾಯಪೀಠ ಆದೇಶವನ್ನು ಪ್ರಶ್ನಿಸಿ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು. ಈ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ತಡೆ ನೀಡಿತು.

'ಮತದಾನಕ್ಕೂ ಮುನ್ನ 48 ಗಂಟೆ ಹಾಗೂ ಮತ ಎಣಿಕೆ ದಿನದಂದು ಆಹಾರ ಪೂರೈಸಲು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಿಗೆ ಯಾವುದೇ ನಿರ್ಬಂಧ ಇರುವುದಿಲ್ಲ' ಎಂದೂ ನ್ಯಾಯಪೀಠ ಇದೇ ವೇಳೆ ಸ್ಪಷ್ಟಪಡಿಸಿದೆ. ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಹಾಗೂ ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ಹಾಜರಾಗಿದ್ದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಇದೇ 1ರಂದು ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ, 'ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘಟನೆ' ಕಾರ್ಯದರ್ಶಿ ವೀರೇಂದ್ರ ಎನ್‌.ಕಾಮತ್ ಸೇರಿದಂತೆ ಒಟ್ಟು ನಾಲ್ವರು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಸ್‌.ಆರ್‌. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಮದ್ಯ ಮಾರಾಟ ನಿಷೇಧವನ್ನು ಮತದಾನದ ಮತ್ತು ಮತ ಎಣಿಕೆಯ ದಿನಕ್ಕೆ ಮಾತ್ರವೇ ಸೀಮಿತಗೊಳಿಸಿ ಆದೇಶಿಸಿತ್ತು.



ಶಿಕ್ಷಕರ ಕ್ಷೇತ್ರ ಉಪ ಚುನಾವಣೆ: ಇಂದು ಮತದಾನ

ಬೆಂಗಳೂರು: ವಿಧಾನ ಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರ ಉಪ ಚುನಾವಣೆಗೆ ಮತದಾನ ಶುಕ್ರವಾರ ನಡೆಯಲಿದೆ.

ಬೆಂಗಳೂರು ಶಿಕ್ಷಕರ ಕ್ಷೇತ್ರ ಉಪ ಚುನಾವಣೆಗೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆ ವ್ಯಾಪ್ತಿಯ ಶಿಕ್ಷಕರು ಮತದಾನ ಮಾಡಲಿದ್ದಾರೆ. ಒಟ್ಟು 19,172 ಮತದಾರರಿದ್ದು, ಶುಕ್ರವಾರ ಬೆಳಿಗ್ಗೆ 8ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದೆ. ಫೆ.20ರಂದು ಮತ ಎಣಿಕೆ ನಡೆಯಲಿದೆ.

ಕಾಂಗ್ರೆಸ್ ಅಭ್ಯರ್ಥಿಯಾಗಿ ಪುಟ್ಟಣ್ಣ, ಬಿಜೆಪಿ– ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಎ.ಪಿ. ರಂಗನಾಥ್ ಸೇರಿದಂತೆ ಒಟ್ಟು ಒಂಬತ್ತು ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಈ ಹಿಂದೆ ಇದೇ ಕ್ಷೇತ್ರದಲ್ಲಿ ಆಯ್ಕೆಯಾಗಿದ್ದ ಪುಟ್ಟಣ್ಣ ಅವರು ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಮಾರ್ಚ್‌ನಲ್ಲಿ ರಾಜೀನಾಮೆ ನೀಡಿದ್ದರು. ಅಂದಿನಿಂದ ಖಾಲಿ ಉಳಿದಿದ್ದ ಈ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಯುತ್ತಿದ್ದು, 2026 ನವೆಂಬರ್ 11ರವರೆಗೆ ಅವಧಿಯಿದೆ.

ಇಸ್ಲಾಂನಿಂದ ಜಗತ್ತಿಗೆ ನೆಮ್ಮದಿ ಇಲ್ಲ: ಹೆಗಡೆ

ಪ್ರಜಾವಾಣಿ ವಾರ್ತೆ

ಶಿರಸಿ: 'ಎಲ್ಲಿಯವರೆಗೆ ಇಸ್ಲಾಂ ಇರುತ್ತದೋ, ಅಲ್ಲಿಯವರೆಗೆ ಜಗತ್ತಿಗೆ ನೆಮ್ಮದಿಯಿಲ್ಲ. ಇಂಥ ಕಾಲಘಟ್ಟದಲ್ಲಿ ಹಿಂದೂ ಧರ್ಮ, ದೇಶ ಉಳಿಯಲು ಮತ್ತೊಮ್ಮೆ ನರೇಂದ್ರ ಮೋದಿ ಪ್ರಧಾನಿ ಆಗಬೇಕಾಗಿದೆ' ಎಂದು ಸಂಸದ ಅನಂತಕುಮಾರ ಹೆಗಡೆ ಹೇಳಿದರು.

ಇಲ್ಲಿ ಗುರುವಾರ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ಬಿಜೆಪಿ ಮತ್ತು ಸಂಘ ಪರಿವಾರ ಇದ್ದಲ್ಲಿ ಜಗತ್ತಿಗೆ ನೆಮ್ಮದಿ. ನಾವು ಇಲ್ಲದಿದ್ದರೆ, ಜಗತ್ತಿನಲ್ಲಿ ನೆಮ್ಮದಿ ಇಲ್ಲ. ಹಿಂದುತ್ವವು ನಮ್ಮ ದೇಶದ ಉಸಿರು' ಎಂದರು.

'ಕಾಂಗ್ರೆಸ್‌ನವರು ಲೋಕಸಭಾ ಚುನಾವಣೆಗೂ ಮುನ್ನ ಬಿಜೆಪಿಯ ಉತ್ಸಾಹ ನೋಡಿ ಶಸ್ತ್ರ ತ್ಯಜಿಸಿದ್ದಾರೆ. ವೈಚಾರಿಕವಾಗಿ ನಾವು ಚುನಾವಣೆ ಗೆದ್ದು ತೋರಿಸಬೇಕಿದೆ' ಎಂದು ಹೇಳಿದರು.

ಹೈಕೋರ್ಟ್ ತಪರಾಕಿಗೆ ಪತರುಗುಟ್ಟಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

20 ವರ್ಷಗಳ ಬಳಿಕ ಅರ್ಜಿದಾರರಿಗೆ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಕಿಡಿ ಕಾರಿದ ಬೆನ್ನಲ್ಲೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ನಗರದ ಸರ್‌.ಎಂ.ವಿಶ್ವೇಶ್ವರಯ್ಯ 7ನೇ ಹಂತದ ಬಡಾವಣೆ ರಚನೆಗಾಗಿ 2003ರಲ್ಲಿ ವ್ಯಕ್ತಿಯೊಬ್ಬರಿಂದ ವಶಪಡಿಸಿಕೊಂಡಿದ್ದ 15 ಗುಂಟೆ ಜಮೀನಿಗೆ ಪರಿಹಾರವಾಗಿ ₹ 1.80 ಕೋಟಿ ಮೌಲ್ಯದ (ಪ್ರಸ್ತುತ ಮಾರ್ಗಸೂಚಿ ದರ) ಅಭಿವೃದ್ಧಿಪಡಿಸಿದ ನಿವೇಶನ ನೀಡುವ ಭರವಸೆ ನೀಡಿದೆ.

ನಗರದ ಮುದ್ದಯ್ಯನಪಾಳ್ಯದ ಮುದ್ದೇಗೌಡ (60) ಸಲ್ಲಿಸಿರುವ ನಿಯಮಿತ ಮೊದಲ ಮೇಲ್ಮನವಿ (ಆರ್‌ಎಫ್‌ಎ) ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಎಸ್‌.ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ಪೀಠಕ್ಕೆ ಈ ಕುರಿತಂತೆ ಬಿಡಿಎ ಆಯುಕ್ತ ಎನ್‌. ಜಯರಾಮ್ ಪ್ರಮಾಣ ಪತ್ರ ಸಲ್ಲಿಸಿದ್ದಾರೆ.



ಇದೇ 13ರಂದು ಈ ಮೇಲ್ಮನವಿ ವಿಚಾರಣೆ ನಡೆಸಿದ್ದ ನ್ಯಾಯಪೀಠವು, 'ಅರ್ಜಿದಾರರ 15 ಗುಂಟೆ ಜಮೀನನ್ನು 2003ರಲ್ಲೇ ಸ್ವಾಧೀನಕ್ಕೆ ಪಡೆದಿರುವುದಾಗಿ ಬಿಡಿಎ ಪರ ವಕೀಲರು ನ್ಯಾಯಾಲಯಕ್ಕೆ ಸ್ಪಷ್ಟಪಡಿಸಿದ್ದಾರೆ. ಆದರೆ, 21 ವರ್ಷ ಕಳೆದರೂ ಪರಿಹಾರ ನೀಡಿಲ್ಲ ಎಂದರೆ ಹೇಗೆ? ಬಿಡಿಎ ಅನ್ನು ಸುಗ್ರೀವಾಜ್ಞೆ ಮೂಲಕ ಮುಚ್ಚಲು ಆದೇಶಿಸುವುದೇ ಲೇಸು' ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿತ್ತು. ಅಂತೆಯೇ, 'ಅರ್ಜಿದಾರರಿಗೆ ಯಾವಾಗ ಪರಿಹಾರ ನೀಡಲಾಗುತ್ತದೆ ಎನ್ನುವುದನ್ನು ನಿಖರವಾಗಿ ತಿಳಿಸಿ' ಎಂದು ಬಿಡಿಎ ಆಯುಕ್ತರಿಗೆ ತಾಕೀತು ಮಾಡಿತ್ತು.

ಗುರುವಾರ ವಿಚಾರಣೆ ಸಂರ್ಭದಲ್ಲಿ ಬಿಡಿಎ ಪರ ಹೈಕೋರ್ಟ್ ವಕೀಲ ಬಿ.ವಚನ್ ಹಾಜರಾಗಿ ಅರ್ಜಿದಾರರಿಗೆ ಪರಿಹಾರ ರೂಪದಲ್ಲಿ ನೀಡುವ ನಿವೇಶನ ಮತ್ತು ಅದರ ಮಾರ್ಗಸೂಚಿ ದರದ ಕುರಿತ ಮಾಹಿತಿಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಪೀಠಕ್ಕೆ ಸಲ್ಲಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಪ್ರಮಾಣ ಪತ್ರದಲ್ಲಿ ಏನಿದೆ?

'ಗಿಡದಕೋನೇನ ಹಳ್ಳಿಯ ಸರ್ವೆ ನಂಬರ್ 50ರಲ್ಲಿ ಅರ್ಜದಾರರಿಗೆ ಸೇರಿದ 15 ಗುಂಟೆ ಜಮೀನನ್ನು ಬಿಡಿಎ 2003ರಲ್ಲಿ ವಶಪಡಿಸಿಕೊಂಡಿತ್ತು. ಅರ್ಜಿದಾರರು 2003ರಲ್ಲಿ ₹ 12,81,898 ಪರಿಹಾರ ಪಡೆಯಲು ಅರ್ಹರಾಗಿದ್ದರು. ಆದರೆ, ಸದ್ಯದ ಮಾರ್ಗಸೂಚಿ ಬೆಲೆಯ ಅನುಸಾರ ಅರ್ಜಿದಾರರು, ಅಭಿವೃದ್ಧಿಪಡಿಸಿದ 4,492 ಚದರ ಅಡಿ ನಿವೇಶನ ಪಡೆಯಲು ಅರ್ಹರಾಗಿದ್ದಾರೆ. ಆದಾಗ್ಯೂ, ಅವರಿಗೆ ಹೆಚ್ಚುವರಿಯಾಗಿ 158 ಚದರ ಅಡಿ ಜಾಗ ಮಂಜೂರು ಮಾಡಲಾಗುತ್ತಿದೆ' ಎಂದು ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದೆ.

'ಸರ್ ಎಂ.ವಿಶೇಶ್ವರಯ್ಯ ಬಡಾವಣೆಯ 7ನೇ ಬ್ಲಾಕಿನ ನಿವೇಶನ ಸಂಖ್ಯೆ 909/1ರಲ್ಲಿನ ₹ 1,03,69,500 ಮೌಲ್ಯದ 2,325 ಚದರ ಅಡಿ ಹಾಗೂ ನಾಡಪ್ರಭು ಕೆಂಪೇಗೌಡ ಬಡಾವಣೆಯ 1ನೇ ಬ್ಲಾಕಿನ ನಿವೇಶನ ಸಂಖ್ಯೆ 1814ರಲ್ಲಿನ ₹ 80,77,050 ಮೌಲ್ಯದ 2,325 ಚದರ ಅಡಿ ನಿವೇಶನ ಮಂಜೂರು ಮಾಡಲಾಗುವುದು. ಹೆಚ್ಚುವರಿಯಾಗಿ ಮಂಜೂರು ಮಾಡುವ 158 ಚದರ ಅಡಿಗೆ ಅರ್ಜಿದಾರರೇ ₹ 5,48,892 ಬಾಕಿ ಮೊತ್ತವನ್ನು ಬಿಡಿಎಗೆ ಪಾವತಿಸಬೇಕು' ಎಂದು ವಿವರಿಸಲಾಗಿದೆ.

ಮಹಿಳಾ ತಪಾಸಣೆ ಬೂತ್‌ಗೆ ನುಗ್ಗಿದ್ದ ಪ್ರಯಾಣಿಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರ‍ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಹಿಳಾ ತಪಾಸಣೆ ಬೂತ್‌ಗೆ (ಫ್ರಿಸ್ಕಿಂಗ್ ಬೂತ್) ನುಗ್ಗಿ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ರುಕುಡ್ಜೊ ಚಿರಿಕುಮಾರಾರ್ (30) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಜಿಂಬಾಬ್ವೆ ಪ್ರಜೆಯಾದ ರುಕುಡ್ಜೊ ಕೆಲಸ ನಿಮಿತ್ತ ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದ. ವಾಪಸು ದೆಹಲಿ ಮೂಲಕ ತಮ್ಮೂರಿಗೆ ಹೊರಡಲು ನಿಲ್ದಾಣಕ್ಕೆ ಬಂದಿದ್ದಾಗ ಈ ಘಟನೆ ನಡೆದಿದೆ. ಕೇಂದ್ರೀಯ ಕೈಗಾರಿಕಾ ಮೀಸಲು ಪಡೆಯ (ಸಿಐಎಸ್‌ಎಫ್) ಇನ್‌ಸ್ಪೆಕ್ಟರ್ ನೀಡಿರುವ ದೂರು ಆಧರಿಸಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ದೆಹಲಿಗೆ ಹೋಗುವುದಕ್ಕಾಗಿ ಫೆ. 13ರಂದು ರಾತ್ರಿ 11.25 ಗಂಟೆ ಸುಮಾರಿಗೆ ವಿಮಾನ ನಿಲ್ದಾಣಕ್ಕೆ ಬಂದಿದ್ದ. ಪ್ರವೇಶ ದ್ವಾರದಲ್ಲಿ ಬ್ಯಾಗ್ ಹಾಗೂ ಎಲೆಕ್ಟ್ರಿಕ್ ವಸ್ತುಗಳನ್ನು ತಪಾಸಣೆಗೆಂದು ಯಂತ್ರದಲ್ಲಿ ಇರಿಸಿದ್ದ. ನಂತರ, ಮಹಿಳೆಯರ ತಪಾಸಣೆಗೆ ಮೀಸಲಿಟ್ಟಿದ್ದ ಬೂತ್ ಒಳಗೆ ನುಗ್ಗಿದ್ದ. ಆರೋಪಿ ವರ್ತನೆಯನ್ನು ಕರ್ತವ್ಯ ನಿರತ ಮಹಿಳಾ ಸಿಬ್ಬಂದಿ ಪ್ರಶ್ನಿಸಿದ್ದರು. ಸಿಬ್ಬಂದಿಯನ್ನೇ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ ಆರೋಪಿ, ಹಲ್ಲೆ ಸಹ ಮಾಡಿದ್ದ. ಪರಸ್ಪರ ಗಲಾಟೆ ನಡೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಹೆಚ್ಚುವರಿ ಸಿಬ್ಬಂದಿ ಸ್ಥಳಕ್ಕೆ ಬಂದು ಆರೋಪಿಯನ್ನು ವಶಕ್ಕೆ ಪಡೆದರು' ಎಂದು ಪೊಲೀಸರು ತಿಳಿಸಿದರು.

'ನಿಲ್ದಾಣಕ್ಕೆ ಹೋಗಿದ್ದ ಗಸ್ತು ವಾಹನದ ಸಿಬ್ಬಂದಿ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದರು. ಎಫ್‌ಐಆರ್ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಲಾಗಿದೆ' ಎಂದರು.

'ಆರೋಪಿ ರುಕುಡ್ಜೊ ಕಂಪನಿಯೊಂದರ ಲೆಕ್ಕಾಧಿಕಾರಿ ಎಂಬುದು ಗೊತ್ತಾಗಿದೆ. ಈತನ ಹಿನ್ನೆಲೆ ಬಗ್ಗೆ ಮತ್ತಷ್ಟು ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಹೇಳಿದರು.

ಯುವತಿ ನಗ್ನ ಫೋಟೊ: ತಾಯಿಗೆ ಬ್ಲ್ಯಾಕ್‌ಮೇಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿಯೊಬ್ಬರ ನಗ್ನ ಫೋಟೊ ಇಟ್ಟುಕೊಂಡು ಅವರ ತಾಯಿಗೆ ಜೈಲಿನಿಂದ ಕರೆ ಮಾಡಿ ಬ್ಲ್ಯಾಕ್‌ಮೇಲ್ ಮಾಡಿದ್ದ ಆರೋಪದಡಿ ರೌಡಿ ಮನೋಜ್ ಅಲಿಯಾಸ್ ಕೆಂಚನ ವಿರುದ್ಧ ಯಲಹಂಕ ನ್ಯೂ ಟೌನ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಪ್ರಕರಣವೊಂದರಲ್ಲಿ ಬಂಧಿತನಾಗಿ ಜೈಲಿನಲ್ಲಿರುವ ಮನೋಜ್, ಅಲ್ಲಿಂದಲೇ ಕರೆ ಮಾಡಿ ಬೆದರಿಕೆಯೊಡ್ಡಿದ್ದ. ಯುವತಿ ತಾಯಿ ನೀಡಿದ್ದ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ. ಸಿಸಿಬಿ ಅಧಿಕಾರಿಗಳು ಆರೋಪಿಯನ್ನು ಬಾಡಿ ವಾರಂಟ್ ಮೇಲೆ ಕಸ್ಟಡಿಗೆ ಪಡೆಯುವ ಸಾಧ್ಯತೆ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಯುವತಿಯ ಫೋಟೊವನ್ನು ಮಾರ್ಫಿಂಗ್ ಮೂಲಕ ನಗ್ನ ರೀತಿಯಲ್ಲಿ ಸೃಷ್ಟಿಸಿದ್ದ ಮನೋಜ್, ಯುವತಿಯ ತಾಯಿಗೆ ಕಳುಹಿಸಿದ್ದ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ತಾಯಿಗೆ ಕರೆ ಮಾಡಿದ್ದ ಎನ್ನಲಾದ ಮನೋಜ್, 'ನಿನ್ನ ಮಗಳ ಫೋಟೊವನ್ನು ಅಳಿಯನಿಗೆ ಕಳುಹಿಸುತ್ತೇನೆ. ಈ ರೀತಿ ಮಾಡಬಾರದೆಂದರೆ, ಹಣ ಕೊಡು' ಎಂದು ಬೇಡಿಕೆ ಇರಿಸಿದ್ದ. ಹೆದರಿದ್ದ ತಾಯಿ, ಮನೋಜ್‌ಗೆ ₹ 40 ಸಾವಿರ ನೀಡಿದ್ದರು' ಎಂದು ತಿಳಿಸಿವೆ.

ಪುನಃ ₹ 5 ಲಕ್ಷಕ್ಕೆ ಬೇಡಿಕೆ: 'ಸಹಚರ ಕಾರ್ತಿಕ್ ಮೂಲಕ ಪುನಃ ಕರೆ ಮಾಡಿಸಿದ್ದ ಮನೋಜ್, ₹ 5 ಲಕ್ಷ ನೀಡುವಂತೆ ಯುವತಿಯ ತಾಯಿಗೆ ಬೇಡಿಕೆ ಇರಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಾಟ್ಸ್‌ಆ್ಯಪ್ ಹಾಗೂ ಮೆಸೆಂಜರ್ ಮೂಲಕ ಮನೋಜ್ ಕರೆ ಮಾಡಿದ್ದ. ಈತನ ಕಿರುಕುಳ ಹೆಚ್ಚಾಗುತ್ತಿದ್ದಂತೆ ಬೇಸತ್ತ ತಾಯಿ ಪೊಲೀಸರಿಗೆ ಮಾಹಿತಿ ನೀಡಿದ್ದರು' ಎಂದು ಹೇಳಿವೆ.

ಡೀಲರ್ ಹೆಸರಿನಲ್ಲಿ ವಂಚನೆ: 12 ಆಟೊ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೈನಾನ್ಸ್ ಡೀಲರ್ ಹೆಸರಿನಲ್ಲಿ ಆಟೊ ಜಪ್ತಿ ಮಾಡಿ ನೋಂದಣಿ ಸಂಖ್ಯೆ ಫಲಕ ಬದಲಿಸಿ ಬೇರೆಯವರಿಗೆ ಮಾರಾಟ ಮಾಡುತ್ತಿದ್ದ ಜಾಲ ಭೇದಿಸಿರುವ ಭಾರತಿನಗರ ಪೊಲೀಸರು, 12 ಆಟೊ ಜಪ್ತಿ ಮಾಡಿದ್ದಾರೆ.

'ಆಟೊ ಚಾಲಕ ಸೈಯದ್ ಮೌಲಾ ವಂಚನೆ ಜಾಲದ ಬಗ್ಗೆ ಫೆ.3ರಂದು ದೂರು ನೀಡಿದ್ದರು. ಪ್ರಕರಣದ ಪ್ರಮುಖ ಆರೋಪಿ ಮೋಸಿನ್ ಖಾನ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಸೈಯದ್ ಮೌಲಾ 2014ರಲ್ಲಿ ವಿ.ಎಂ. ಫೈನಾನ್ಸ್ ಮೂಲಕ ಆಟೊ ಖರೀದಿಸಿದ್ದರು. ಪ್ರತಿ ತಿಂಗಳು ₹6,200 ಕಂತು ಕಟ್ಟುತ್ತಿದ್ದರು. ಕೆಲ ತಿಂಗಳಿನಿಂದ ಕಂತು ತುಂಬಲು ಸಾಧ್ಯವಾಗಿರಲಿಲ್ಲ. ಆರೋಪಿಗಳು, ಫೈನಾನ್ಸ್ ಡೀಲರ್‌ಗಳ ಹೆಸರಿನಲ್ಲಿ ಸೈಯದ್ ಅವರ ಆಟೊ ಜಪ್ತಿ ಮಾಡಿ ಕೊಂಡೊಯ್ದಿದ್ದರು. ನೋಂದಣಿ ಸಂಖ್ಯೆ ಬದಲಿಸಿ ರಾಯಚೂರಿನಲ್ಲಿ ಮಾರಿದ್ದರು. ಆಟೊ ನೋಂದಣಿ ಫಲಕ ಬದಲಾಯಿಸಿ ಮಾರುವುದನ್ನೇ ಆರೋಪಿಗಳು ವೃತ್ತಿ ಮಾಡಿಕೊಂಡಿದ್ದರು' ಎಂದು ಹೇಳಿದರು.

ಮತ್ತೊಬ್ಬನ ವಿಚಾರಣೆ: 'ಮೋಸಿನ್ ನೀಡಿದ್ದ ಹೇಳಿಕೆ ಆಧರಿಸಿ, ಸೈಫುಲ್ಲಾ ಖಾನ್ ಎಂಬಾತನಿಗೆ ಸಿಆರ್‌ಪಿಸಿ 41 (ಎ) ಅಡಿ ನೋಟಿಸ್ ನೀಡಲಾಗಿತ್ತು. ಠಾಣೆಗೆ ಬಂದಿದ್ದ ಸೈಫುಲ್ಲಾನನ್ನು ವಿಚಾರಣೆ ನಡೆಸಲಾಯಿತು. ಇನ್ನೂ 9 ಆಟೊಗಳ ಬಗ್ಗೆ ಮಾಹಿತಿ ಲಭ್ಯವಾಗಿದ್ದು, ಅವುಗಳ ಜಪ್ತಿ ಪ್ರಕ್ರಿಯೆ ಪ್ರಗತಿಯಲ್ಲಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಫೈನಾನ್ಸ್ ಡೀಲರ್ ಹೆಸರಿನಲ್ಲಿ ಚಾಲಕರನ್ನು ಬೆದರಿಸಿ ಆಟೊ ಜಪ್ತಿ ಮಾಡಿ ಮಾರುವ ಜಾಲ ಇದಾಗಿದೆ. ಇದರಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿಯಿದೆ' ಎಂದು ತಿಳಿಸಿದರು.

'ಪೊಲೀಸರಿಂದ ₹ 4 ಲಕ್ಷ ಸುಲಿಗೆ'

'ಭಾರತಿನಗರ ಪೊಲೀಸರು ನನ್ನನ್ನು ಅಕ್ರಮವಾಗಿ ಠಾಣೆಯಲ್ಲಿರಿಸಿ ₹4 ಲಕ್ಷ ಸುಲಿಗೆ ಮಾಡಿದ್ದಾರೆ' ಎಂದು ಆರೋಪಿಸಿ ಸೈಫುಲ್ಲಾ ಖಾನ್, ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರಿಗೆ ದೂರು ನೀಡಿದ್ದಾರೆ.

'ಫೈನಾನ್ಸ್ ಆಟೊ ಜಪ್ತಿ ಮಾಡುವ ಕೆಲಸವನ್ನು ಕಾನೂನು ಪ್ರಕಾರ ಮಾಡುತ್ತಿದ್ದೇನೆ. ಎಲ್ಲ ದಾಖಲೆಗಳು ನನ್ನ ಬಳಿ ಇವೆ. ನಕಲಿ ದೂರುದಾರ ಹಾಗೂ ಆರೋಪಿಯನ್ನು ಸೃಷ್ಟಿಸಿರುವ ಪೊಲೀಸರು, ನನ್ನ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ. ಫೆ. 1ರಂದು ತಡರಾತ್ರಿ ಮನೆಗೆ ಬಂದಿದ್ದ ಪೊಲೀಸರು, ಠಾಣೆಗೆ ಕರೆದೊಯ್ದು ಅಕ್ರಮ ಬಂಧನದಲ್ಲಿಟ್ಟು ಹಲ್ಲೆ ಮಾಡಿದ್ದಾರೆ. ರಾಯಚೂರಿಗೆ ಕರೆದೊಯ್ದು ಕಿರುಕುಳ ನೀಡಿದ್ದಾರೆ. ಅಪರಾಧ ವಿಭಾಗದ ಸಿಬ್ಬಂದಿ, ಹಣ ಸುಲಿಗೆ ಮಾಡಿದ್ದಾರೆ. ತಂದೆ ಚಿನ್ನವನ್ನು ಅಡವಿಟ್ಟು, ಸ್ನೇಹಿತರಿಂದ ಸಾಲ ಪಡೆದು ಹಣ ಕೊಟ್ಟಿದ್ದೇನೆ' ಎಂದು ದೂರಿನಲ್ಲಿ ಅವರು ಉಲ್ಲೇಖಿಸಿದ್ದಾರೆ.

ದೂರು ಪರಿಶೀಲಿಸಿರುವ ಹೆಚ್ಚುವರಿ ಪೊಲೀಸ್ ಕಮಿಷನರ್ ರಮಣ್ ಗುಪ್ತಾ, ತನಿಖೆಗೆ ಸೂಚಿಸಿದ್ದಾರೆ.

ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಪೂರ್ವ ವಿಭಾಗದ ಡಿಸಿಪಿ ಡಿ. ದೇವರಾಜ್, 'ಇದೊಂದು ಆಟೊ ಚಾಲಕರನ್ನು ವಂಚಿಸುತ್ತಿದ್ದ ಜಾಲ. ಪ್ರಕರಣ ದಾಖಲಿಸಿಕೊಂಡು ಕಾನೂನು ಪ್ರಕಾರವೇ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಪೊಲೀಸರು ಹಣ ಪಡೆದಿದ್ದಾರೆ ಎಂಬುದು ಸುಳ್ಳು. ಸೈಫುಲ್ಲಾ ಆರೋಪದ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ನಿಜಾಂಶ ಏನು ಎಂಬುದನ್ನು ವರದಿ ಸಮೇತ ಹಿರಿಯ ಅಧಿಕಾರಿಗಳಿಗೆ ತಿಳಿಸಲಾಗುವುದು' ಎಂದರು.

ನಗರದಲ್ಲಿ ಇಂದು

ಸಸ್ಯ ಮೇಳ: ಅಂಗವಿಕಲರು ಹಾಗೂ ವೃತ್ತಿಪರರಿಂದ ಅಪರೂಪದ ಸಸ್ಯಗಳ ಪ್ರದರ್ಶನ, ಆಯೋಜನೆ: ದಿ ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೇಬಲಿಟಿ, ಸ್ಥಳ: ಎನ್‌.ಎಸ್‌. ಹೇಮಾ ತೋಟಗಾರಿಕೆ ತರಬೇತಿ ಕೇಂದ್ರ, ಕ್ಯಾಲಸನಹಳ್ಳಿ, ದೊಡ್ಡಗುಬ್ಬಿ ರಸ್ತೆ, ಬೆಳಿಗ್ಗೆ 9

'ಕೆಕೆ–ಯುವರತ್ನ' ಅಂತರಕಾಲೇಜು ಉತ್ಸವ: ಮುಖ್ಯ ಅತಿಥಿ: ಗುಲ್‌ನಾಜ್ ಕಹಾನಂ, ಸುಭಾಷ್ ಆರ್ವ, ಅಧ್ಯಕ್ಷತೆ: ಕೆ. ಕುಂಬಣ್ಣ, ಆಯೋಜನೆ ಹಾಗೂ ಸ್ಥಳ: ಕೆಕೆ ಪಿಯು ಕಾಲೇಜು, ಚೆನ್ನಸಂದ್ರ, ಬೆಳಿಗ್ಗೆ 9

'ಶೂನ್ಯ ಇಂಗಾಲ' ವಿಷಯ ಕುರಿತ ಅಂತರರಾಷ್ಟ್ರೀಯ ವಿಚಾರಸಂಕಿರಣ: ಮುಖ್ಯ ಅತಿಥಿ: ಸುಧಾಕರ್ ಎಂ.ಸಿ., ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಭಾಷಣ: ಎಸ್‌.ಕೆ. ರೈ, ಆಯೋಜನೆ ಹಾಗೂ ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಆವರಣ, ಬೆಳಿಗ್ಗೆ 9.30

'ಟಿಟಿಎಫ್ ಬೆಂಗಳೂರು' ಪ್ರವಾಸಿ ಉತ್ಸವ: ಮುಖ್ಯ ಅತಿಥಿ: ಎಚ್‌.ಕೆ. ಪಾಟೀಲ, ಗೌರವ ಅತಿಥಿಗಳು: ಸಲ್ಮಾ ಕೆ. ಫಾಹಿಮ್, ರಾಮ್ ಪ್ರಶಾಂತ್ ಮನೋಹರ್, ಮೊಹಮ್ಮದ್ ಫಾರೂಕ್, ಆಯೋಜನೆ: ಪ್ರವಾಸೋದ್ಯಮ ಇಲಾಖೆ, ಸ್ಥಳ: ತ್ರಿಪುರವಾಸಿನಿ, ಗೇಟ್ 2 ಮತ್ತು 3, ಅರಮನೆ ಮೈದಾನ, ಬೆಳಿಗ್ಗೆ 11

ಮಣಿಪುರ ಹಿಂಸೆ ಕುರಿತ ಸತ್ಯಶೋಧನಾ ವರದಿ ಬಿಡುಗಡೆ: ಪಾಲ್ಗೊಳ್ಳುವವರು: ಸಿ.ಜಿ. ಮಂಜುಳಾ, ಯತಿರಾಜ್ ಬ್ಯಾಲಹಳ್ಳಿ, ದು. ಸರಸ್ವತಿ, ಕ್ಲಿಫ್ಟನ್ ಡಿ. ರೊಜರಿಯೊ, ಅವನಿ ಚೋಕ್ಸಿ, ಫಾದರ್ ಅರುಣ್, ಫಾದರ್ ಜೆರಾಲ್ಡ್, ಆಯೋಜನೆ: ಸಾರ ಬಳಗ, ತಮಟೆ ಮೀಡಿಯಾ, ಸ್ಥಳ: ಆಶೀರ್ವಾದ್ ಸೆಂಟರ್, ಸೇಂಟ್ ಮಾರ್ಕ್ಸ್ ರಸ್ತೆ, ಸಂಜೆ 5

'ಅವನಿ' ಕಲೋತ್ಸವ: ಕೈಮಗ್ಗ ಮತ್ತು ಕರಕುಶಲ ಮೇಳ, ಆಯೋಜನೆ ಹಾಗೂ ಸ್ಥಳ: ಆರ್‌.ವಿ. ವಿಶ್ವವಿದ್ಯಾಲಯ, ಪಟ್ಟಣಗೆರೆ ಮೆಟ್ರೊ ನಿಲ್ದಾಣದ ಪಕ್ಕ, ಮೈಸೂರು ರಸ್ತೆ, ಬೆಳಿಗ್ಗೆ 11.30

ಸವಿತಾ ಮಹರ್ಷಿ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಸವಿತಾನಂದನಾಥ ಸ್ವಾಮೀಜಿ, ಉಪಸ್ಥಿತಿ: ಶಿವರಾಜ್ ತಂಗಡಗಿ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಚೋಳಮಂಡಲ ಕಲಾವಿದರ ಕಲಾಕೃತಿ ಪ್ರದರ್ಶನ: ಉದ್ಘಾಟನೆ: ವೆಂಕಟ್ ಮೂರ್ತಿ, ಗೌರವ ಅತಿಥಿ: ಎಸ್‌. ಜಿ. ವಾಸುದೇವ್, ಸಿ.ಎಸ್‌. ಕೃಷ್ಣ ಸೆಟ್ಟಿ, ಅಧ್ಯಕ್ಷತೆ: ಬಿ.ಎಲ್‌. ಶಂಕರ್, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಸಂಜೆ 5.30

ಹಂಪಿ ಉತ್ಸವ: ಮುಖ್ಯ ಅತಿಥಿ: ನಾ. ಸೋಮೇಶ್ವರ, ಮುಖ್ಯ ಅತಿಥಿ: ಸಿಂಧು ಮಹೇಶ್, ಅಧ್ಯಕ್ಷರು: ಮಾಯಾ ಚಂದ್ರ, ಆಯೋಜನೆ ಹಾಗೂ ಸ್ಥಳ: ಮಂಗಳ ಮಂಟಪ, ಆರ್‌.ವಿ. ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್, ಜಯನಗರ 3ನೇ ಬ್ಲಾಕ್, ಬೆಳಿಗ್ಗೆ 10


ನಾ. ಸೋಮೇಶ್ವರ

59ನೇ ನಾದಜ್ಯೋತಿ ಸಂಗೀತ ಸಂಭ್ರಮ: ಸಂಗೀತ ಕಛೇರಿ: ಶಿವಶ್ರೀ ಸ್ಕಂದಪ್ರಸಾದ್, ಅಚ್ಯುತ ರಾವ್ ಆರ್‌., ತಿರುಕುಂದಧ್ಯೆ ಡಿ., ಎಸ್‌.ವಿ. ಬಾಲಕೃಷ್ಣ, ಆಯೋಜನೆ: ನಾದಜ್ಯೋತಿ ಸಂಗೀತ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

'ಪ್ರೊ.ಎಲ್‌.ಎಸ್‌. ಶೇಷಗಿರಿ ರಾವ್ ಶತಮಾನೋತ್ಸವ ನಾಂದಿ' ಮಾಸದ ಮಾತು ಸರಣಿ: ಚಾಲನೆ: ಗೊ.ರು. ಚನ್ನಬಸಪ್ಪ, ಉಪಸ್ಥಿತಿ: ಆರ್‌. ಶೇಷಶಾಸ್ತ್ರಿ, ಭಾರತಿ ಶೇಷಗಿರಿ ರಾವ್, ಅಧ್ಯಕ್ಷತೆ: ಶ್ರೀರಾಮೇಗೌಡ, 'ಕನ್ನಡ ಸಾಹಿತ್ಯ ವಿಮರ್ಶಾ ಕ್ಷೇತ್ರದಲ್ಲಿ ಪ್ರೊ. ಎಲ್ಲೆಸ್ಸೆಸ್ ಕೊಡುಗೆ' ವಿಷಯ ಮಂಡನೆ: ಟಿ.ಎನ್‌. ವಾಸುದೇವಮೂರ್ತಿ, ಆಯೋಜನೆ ಹಾಗೂ ಸ್ಥಳ: ಉದಯಭಾನು ಕಲಾ ಸಂಘ, ಕೆಂಪೇಗೌಡನಗರ, ಸಂಜೆ 6


ಗೊ.ರು. ಚನ್ನಬಸಪ್ಪ

'ವತಾರ ತ್ರಯದಲ್ಲಿ ಅವಿಚ್ಛಿನ್ನ ಭಕ್ತಿ' ವಿಷಯದ ಬಗ್ಗೆ ಧಾರ್ಮಿಕ ಪ್ರವಚನ: ಎ.ವಿ. ನಾಗಸಂಪಿಗೆ ಆಚಾರ್ಯ, ಆಯೋಜನೆ: ಗುರುರಾಜ ಸೇವಾ ಸಮಿತಿ, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6

'ಸ್ವಾಮಿ ವಿವೇಕಾನಂದರು ಮತ್ತು ಪ್ರಾಚೀನ ಭಾರತ' ವಿಷಯದ ಬಗ್ಗೆ ಪ್ರವಚನ: ಸ್ವಾಮಿ ವೀರೇಶಾನಂದ ಸರಸ್ವತಿ, ಆಯೋಜನೆ: ಅಮರಜ್ಯೋತಿ ನಗರ ನಿವಾಸಿಗಳ ಸಂಘ, ಸ್ಥಳ: ಪ್ರಸನ್ನ ಗಣಪತಿ ದೇವಸ್ಥಾನ, ಸಂಜೆ 6.30

ನೃತ್ಯ ಸಂಭ್ರಮ: ಮುಖ್ಯ ಅತಿಥಿ: ಅನುರಾಧ ವೆಂಕಟರಮಣ, ಆಯೋಜನೆ: ಚಿತ್ಕಲ ಸ್ಕೂಲ್ ಆಫ್ ಡಾನ್ಸ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಚಿನ್ನ, ನಗದು ಕಳ್ಳತನ: ಕ್ಯಾಮೆರಾ ಡಿವಿಆರ್ ಪುಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ನೆಟ್ಟಕಲ್ಲಪ್ಪ ವೃತ್ತ ಬಳಿ ಇರುವ ಬೆನಕಾ ಗೋಲ್ಡ್ ಕಂಪನಿ ಕಚೇರಿಯಲ್ಲಿ ಕಳ್ಳತನ ನಡೆದಿದ್ದು, ಕೃತ್ಯದ ಸುಳಿವು ಸಿಗಬಾರದೆಂದು ಕಳ್ಳರು ಸಿ.ಸಿ. ಟಿ.ವಿ ಕ್ಯಾಮೆರಾದ ಡಿವಿಆರ್ ಒಡೆದು ಹಾಕಿ ಪುಡಿ ಮಾಡಿ ಪರಾರಿಯಾಗಿದ್ದಾರೆ.

'ಬುಧವಾರ ರಾತ್ರಿ ನಡೆದಿರುವ ಕಳ್ಳತನ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೆಲಸಗಾರರು ಕಚೇರಿ ಬಾಗಿಲು ಬಂದ್ ಮಾಡಿ ರಾತ್ರಿ ಮನೆಗೆ ಹೋಗಿದ್ದರು. ತಡರಾತ್ರಿ ಕಚೇರಿ ಬಾಗಿಲಿನ ಬೀಗ ಮುರಿದು ಒಳ ನುಗ್ಗಿದ್ದ ಕಳ್ಳರು, ಹಲವೆಡೆ ಹುಡುಕಾಡಿದ್ದಾರೆ. ಸುಮಾರು 250 ಗ್ರಾಂ ಚಿನ್ನ, 17 ಕೆ.ಜಿ ಬೆಳ್ಳಿ ಹಾಗೂ ₹ 1.8 ಲಕ್ಷ ನಗದು ಕದ್ದುಕೊಂಡು ಪರಾರಿಯಾಗಿದ್ದಾರೆ.'

ಹಲವು ದಿನಗಳಿಂದ ನಿಗಾ ವಹಿಸಿ ಆರೋಪಿಗಳು ಕೃತ್ಯ ಎಸಗಿರುವ ಅನುಮಾನವಿದೆ' ಎಂದು ಪೊಲೀಸರು ತಿಳಿಸಿದರು.

ಡಿ.ಜೆ. ಹಳ್ಳಿ, ಕೆ.ಜಿ. ಹಳ್ಳಿ ಗಲಭೆ: ಹರಿಹರದ ವ್ಯಕ್ತಿ ಪೊಲೀಸ್ ವಶಕ್ಕೆ

ಹರಿಹರ: ಬೆಂಗಳೂರಿನ ಡಿ.ಜೆ. ಹಳ್ಳಿ, ಕೆ.ಜಿ. ಹಳ್ಳಿಯಲ್ಲಿ 2020ರಲ್ಲಿ ನಡೆದಿದ್ದ ಗಲಭೆ ಪ್ರಕರಣದ ಆರೋಪಿ, ನಗರದ ತಾಹಿರ್ ಹುಸೇನ್ ಎಂಬ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ತಿಳಿದುಬಂದಿದೆ.

ಸಾಮಾಜಿಕ ಜಾಲತಾಣದಲ್ಲಿ ಧರ್ಮದ ಅವಹೇಳನ ಮಾಡಲಾಗಿದೆ ಎನ್ನಲಾದ ವಿಷಯಕ್ಕೆ ಸಂಬಂಧಿಸಿ ಡಿ.ಜೆ. ಹಳ್ಳಿ ಮತ್ತು ಕೆ.ಜಿ. ಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಗಲಭೆಗಳು ನಡೆದಿದ್ದವು. ಈ ಪ್ರಕರಣದಲ್ಲಿ ಹರಿಹರದ ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಪದಾಧಿಕಾರಿಯಾಗಿದ್ದ ತಾಹೀರ್ ಹುಸೇನ್ ಆರೋಪಿಗಳ ಪಟ್ಟಿಯಲ್ಲಿದ್ದ ಎನ್ನಲಾಗಿದೆ.

ಆರೋಪಿ ಪೊಲೀಸರ ಕೈಗೆ ಸಿಗದೆ ತಲೆ ತಪ್ಪಿಸಿಕೊಂಡಿದ್ದ ಎನ್ನಲಾಗಿದೆ. ಕೆಲವು ದಿನಗಳ ಹಿಂದೆ ಬೆಂಗಳೂರಿನ ಪೊಲೀಸರು ಹರಿಹರದ ಮನೆಯಿಂದ ಆರೋಪಿಯನ್ನು ಕರೆದೊಯ್ದಿದ್ದಾರೆ ಎಂದು ತಿಳಿದುಬಂದಿದೆ.

'ಬೆಂಗಳೂರು ಪೊಲೀಸರು ಹರಿಹರದ ನಿವಾಸಿಯೊಬ್ಬರನ್ನು ವಶಕ್ಕೆ ಪಡೆದಿರುವ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ' ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಪೊಲೀಸರು ಒಬ್ಬರನ್ನು ಕರೆದೊಯ್ದಿದ್ದಾಗಿ ಮೂಲಗಳು ಖಚಿತಪಡಿಸಿವೆ.

ಬಾಲಕಿ ಮೇಲೆ ಅತ್ಯಾಚಾರ: 4 ವಿದ್ಯಾರ್ಥಿಗಳ ಬಂಧನ

ಕೋಟಾ (ರಾಜಸ್ಥಾನ) (ಪಿಟಿಐ): ಇಲ್ಲಿನ ಕೋಚಿಂಗ್ ಸೆಂಟರ್‌ನಲ್ಲಿ ನೀಟ್ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದ 16 ವರ್ಷದ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಆರೋಪದ ಮೇಲೆ ನಾಲ್ವರು ಕೋಚಿಂಗ್ ವಿದ್ಯಾರ್ಥಿಗಳನ್ನು ಗುರುವಾರ ಇಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಫೆ.10 ರಂದು ಈ ಘಟನೆ ನಡೆದಿದೆ. ಆರೋಪಿಗಳಲ್ಲಿ ಒಬ್ಬ ಪಶ್ಚಿಮ ಬಂಗಾಳದವನು. ಉಳಿದವರು ಉತ್ತರ ಪ್ರದೇಶ ಮತ್ತು ಬಿಹಾರದವರು. ಎಲ್ಲರೂ 18ರಿಂದ 19 ವರ್ಷ ವಯಸ್ಸಿನವರು. ಎಲ್ಲ ಆರೋಪಿಗಳು ಕೋಚಿಂಗ್ ಸೆಂಟರ್‌ನಲ್ಲಿ ಪ್ರವೇಶ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದರು, ವಿಚಾರಣೆಯ ನಂತರ ಅವರನ್ನು ಗುರುವಾರ ಬಂಧಿಸಲಾಯಿತು ಎಂದು ಕೋಟಾದ ಎಎಸ್‌ಪಿ ಉಮಾ ಶರ್ಮಾ ತಿಳಿಸಿದ್ದಾರೆ.

ಒಬ್ಬ ಆರೋಪಿ ಬಾಲಕಿಯನ್ನು ತನ್ನ ಅಪಾರ್ಟ್‌ಮೆಂಟ್‌ಗೆ ಕರೆಸಿಕೊಂಡು ಅತ್ಯಾಚಾರವೆಸಗಿದ್ದಾನೆ. ಇತರ ಮೂವರು ವಿದ್ಯಾರ್ಥಿಗಳು ಅಪರಾಧಕ್ಕೆ ನೆರವಾಗಿದ್ದಾರೆ. ಆರೋಪಿಗಳ ವಿರುದ್ಧ ಪೋಕ್ಸೊ ಕಾಯ್ದೆಯಡಿ ಸಾಮೂಹಿಕ ಅತ್ಯಾಚಾರ ಪ್ರಕರಣ ದಾಖಲಿಸಲಾಗಿದೆ ಎಂದು ಎಎಸ್‌ಪಿ ತಿಳಿಸಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ

KSAPS

ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560023. ದೂ: 080-29557021, ಇಮೇಲ್: pdksaps@gmail.com

ನಂ. ಕೆಎಸ್‌ಎಪಿಎಸ್/ಎಡಿಎಂ/23/2023–24 ದಿನಾಂಕ: 14.02.2024

ಇ-ಸಂಗ್ರಹಣಾ ವೇದಿಕೆ ಮೂಲಕ ಮರು ಟೆಂಡರ್ (3ನೇ ಕರೆ) ಆಹ್ವಾನ ಪ್ರಕಟಣೆ

ಕಛೇರಿ ಉಪಯೋಗಕ್ಕಾಗಿ ವಾಹನಗಳನ್ನು (ಕಾರು) ಬಾಡಿಗೆ ಆಧಾರದ ಮೇಲೆ ಪಡೆಯುವ ಸಂಬಂಧ ಇ–ಸಂಗ್ರಹಣಾ ವೇದಿಕೆ ಮೂಲಕ ಮರು–ಟೆಂಡರ್ (3ನೇ ಕರೆ) ಆಹ್ವಾನಿಸಲಾಗಿದ್ದು, ಟೆಂಡರ್ ಸಂಬಂಧಿಸಿದ ನಿಯಮಾವಳಿಗಳನ್ನು ಇ–ಸಂಗ್ರಹಣಾ ವೇದಿಕೆಯ ವೆಬ್‌ಸೈಟ್ : https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಅರ್ಹ ಸಂಸ್ಥೆಯವರಿಂದ ಇ–ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **26.02.2024, ಸಂಜೆ 5.30 ಗಂಟೆವರೆಗೆ.**

ಸಹಿ/– ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು.

DIPR/CP/YC/3608/2023-24

ಅಂತರ್ಜಲ ನಿರ್ದೇಶನಾಲಯ

(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ನಿರ್ದೇಶಕರ ಕಛೇರಿ, ನಂ. 1/1, 2ನೇ ಮಹಡಿ, ಕೆ.ಎಸ್.ಎಫ್.ಸಿ ಭವನ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–52.
ದೂರವಾಣಿ ಸಂಖ್ಯೆ: 080–22268732 E-Mail: gwdkar@gmail.com

ಸಂಖ್ಯೆ: GWD/Tech/OBW/35/2023-24 ದಿನಾಂಕ: 15.02.2024

ಅಲ್ಪಾವಧಿ ಮರುಟೆಂಡರ್ ಆಹ್ವಾನಿಸುವ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಅಚಿತರ್ಜಲ ನಿರ್ದೇಶನಾಲಯದ ವತಿಯಿಂದ ಅನುಸೂಚಿತ ಜಾತಿ–31 **(MI/2023-24/OW/WORK_INDENT580/CALL-3)** ಮತ್ತು ಅನುಸೂಚಿತ ಪಂಗಡ–28 ಸಂಖ್ಯೆ **(MI/2023-24/OW/WORK_INDENT582/CALL-3)** ಅಧ್ಯಯನ ಕೊಳವೆಬಾವಿಗಳನ್ನು ಕೊರೆಯಲು ಕೆಪಿಪಿ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ಮುಖಾಂತರ ಅಲ್ಪಾವಧಿ ಮರುಟೆಂಡರ್ ಆಹ್ವಾನಿಸಲಾಗಿದೆ. ಇ–ಟೆಂಡರ್ ಮೂಲಕ ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ **ದಿನಾಂಕ: 23.02.2024 ಸಮಯ: 17:30 ಗಂಟೆ**ಯವರೆಗೆ. ಟೆಂಡರ್‌ಗೆ ಸಂಬಂಧಿಸಿದಂತೆ ತಿದ್ದುಪಡಿ/ ಸೇರ್ಪಡೆ ಮತ್ತು ಇತರೆ ಬದಲಾವಣೆಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್ ಮೂಲಕವೇ ಖಚಿತಪಡಿಸಿಕೊಳ್ಳತಕ್ಕದ್ದು.

ಸಹಿ/–
ಟೆಂಡರ್ ಅಹ್ವಾನಿಸುವ ಪ್ರಾಧಿಕಾರ
ಅಂತರ್ಜಲ ನಿರ್ದೇಶನಾಲಯ, ಬೆಂಗಳೂರು.

DIPR/CP/RO3633/AAPL/2023-24

ರಾಷ್ಟ್ರೀಯ ಆರೋಗ್ಯ ಅಭಿಯಾನ

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–23
ದೂ: 080–23295116 ಇ–ಮೇಲ್:ddimmkar@gmail.com

ಅಧಿಸೂಚನೆ ಸಂಖ್ಯೆ: ಎನ್.ಹೆಚ್.ಎಂ/ಡಿಡಿ/ಐಎಂಎಂ/39/2023–24 ದಿನಾಂಕ: 15.02.2024
NHM/2023-24/IND0017/Call-2

ಇ–ಟೆಂಡರ್ ಅಧಿಸೂಚನೆ

Supply of Indelible Marker Pens for Pulse Polio Programme

ಅ.ಕು.ಕ. ಸೇವೆಗಳ ಕಛೇರಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ **Supply of Indelible Marker Pens for Pulse Polio Programme** ಗೆ ತಯಾರಕರುಗಳನ್ನು ಅಗತ್ಯ ದಾಖಲೆಯೊಂದಿಗೆ ಭಾಗವಹಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ **www.kppp.karnataka.gov.in** ನಲ್ಲಿ ದೊರೆಯುತ್ತದೆ ಹಾಗೂ ಟೆಂಡರ್ ಡಾಕ್ಯುಮೆಂಟ್‌ನ್ನು **ದಿನಾಂಕ: 16.02.2024, 11:30** ರಿಂದ ಡೌನ್‌ಲೋಡ್‌ನ್ನು ಮಾಡಿಕೊಳ್ಳಬಹುದು ಮತ್ತು ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 22.02.2024, 17:30 ಗಂಟೆ.**

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವ ಯೋಜನಾ ನಿರ್ದೇಶಕರು, ಆರ್.ಸಿ.ಹೆಚ್. ರವರ ಕಛೇರಿ ಸಮಯ 10:00 ರಿಂದ 17:30 ಗಂಟೆಯೊಳಗೆ ಪಡೆಯಬಹುದಾಗಿರುತ್ತದೆ.

ಸಹಿ/–
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)

DIPR/CP/BCPL/3606/2023-24

ಕರ್ನಾಟಕ ಅರಣ್ಯ ಇಲಾಖೆ

ವನ್ಯಜೀವಿ ವಿಭಾಗ, ಶಿವಮೊಗ್ಗ.

No:A1/BUD/034 MAC/E-Tender/CR-1/2024-25 Date: 09.02.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2024–25 ನೇ ಸಾಲಿನಲ್ಲಿ ಶಿವಮೊಗ್ಗ ವನ್ಯಜೀವಿ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ಅಗತ್ಯವಿರುವ ಕಳ್ಳಬೇಟೆ ರಕ್ಷಣಾ ಶಿಬಿರದ ಕಾವಲುಗಾರರು, ಡಾಟಾ ಎಂಟ್ರಿ ಆಪರೇಟರ್, ಡ್ರೈವರ್, ಸೂಪರ್‌ವೈಸರ್ (ಕೇರ್ ಟೇಕರ್), ವಾಚರ್, ಪಿವನ್, ಮೇಟಿ, ಆನೆ ಕವಾಡಿ, ವೆಟರ್‌ನರಿ ಅಸಿಸ್ಟೆಂಟ್ ಸೇವೆಯನ್ನು ದಿ:01/04/2024 ರಿಂದ 31/03/2025ರವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲಗಳನ್ನು ಪೂರೈಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಇ– ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 23.02.2024 ರ ಸಂಜೆ 4.00 ಗಂಟೆಯವರೆಗೆ ನಿಗದಿ ಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸ ಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ www.kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/115/02/23–24/1274

ಜಿಲ್ಲಾ ಪಂಚಾಯತ್ ಬಾಗಲಕೋಟೆ

ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ

ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ: 126, ನವನಗರ, ಬಾಗಲಕೋಟೆ
ದೂರವಾಣಿ: 08354–235042 ಇ–ಮೇಲ್: bgkeezpe@yahoo.com
ಫ್ಯಾಕ್ಸ್: 08354–235043

ಸಂ: ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ–2/ಟೆಂಡರ್/2023–24/3249
ದಿನಾಂಕ: 15.02.2024

ಅಲ್ಪಾವಧಿ ಇ–ಪ್ರೋಕ್ಯೂರ್‌ಮೆಂಟ್ ದ್ವಿ–ಲಕೋಟೆ ಮರುಟೆಂಡರ್ ಪ್ರಕಟಣೆ

ಕೆ.ಡಬ್ಲ್ಯೂ–3 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಬಾಗಲಕೋಟೆ ಜಿಲ್ಲೆ ವ್ಯಾಪ್ತಿಯಲ್ಲಿನ 2022–23 ನೇ ಸಾಲಿನ ಬಾಗಲಕೋಟೆ ಜಿಲ್ಲೆಯ ಮುಧೋಳ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾದ ರೂ.7.00 ಕೋಟಿ ವಿಶೇಷ ಅನುದಾನದಡಿ ಆಯ್ಕೆಯಾದ ಶಾಲೆಗಳಲ್ಲಿನ ಭೋದನಾ ಕೊಠಡಿಗಳ ನಿರ್ಮಾಣದ ಅನುದಾನ ಅಡಿಯಲ್ಲಿ ಆಯ್ಕೆಯಾದ ಮುಧೋಳ ವಿಧಾನಸಭಾ ಮತಕ್ಷೇತ್ರದ ಕ್ಷೇತ್ರ ವ್ಯಾಪ್ತಿಯ ಮುಧೋಳ ತಾಲೂಕಿನ ಅಡಿಯಲ್ಲಿ ಆಯ್ಕೆಯಾದ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗಳ ಈ ಕೆಳಕಂಡ ಕಾಮಗಾರಿಗಳಿಗೆ Standard Tender Document KW-3 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ದ್ವಿ–ಲಕೋಟೆ ಪದ್ದತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳ ಇಂಡೆಂಟ್ ನಂ:: 2706 ಕಾಮಗಾರಿ ವಿವರ, ಕಾಮಗಾರಿ ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, **ಕಾಮಗಾರಿ ಟೆಂಡರ್ ಮೊತ್ತ (ರೂ.97.30 ಲಕ್ಷಗಳ ಮಿತಿಗೊಳಪಟ್ಟು)** ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **29.02.2024 ರ ಸಾಯಂಕಾಲ 17.30 ಗಂಟೆವರೆಗೆ.**

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **02.03.2024 ರಂದು ಮುಂಜಾನೆ 11.00 ಗಂಟೆಯ ನಂತರ.**

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ **https://kppp.karnataka.gov.in** ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ಇಂಜೀನಿಯರರು
ಪಂಚಾಯತ ರಾಜ್ (ಇಂ) ವಿಭಾಗ, ಬಾಗಲಕೋಟೆ

ವಾ.ಸಾ.ಇ./ಬಾಗಲಕೋಟ/372/ 2023–24/ದೇಶಪಾಂಡೆಪಬ್ಲಿಸಿಟಿ

ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ:ಉನಸ:ಬಿ2:ಸಿಆರ್:ಟೆ.ಪ್ರ:2023–24 ದಿನಾಂಕ: 14.02.2024

ಮರು ಟೆಂಡರು ಪ್ರಕಟಣೆ

(ಕರ್ನಾಟಕ ಸರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಉಡುಪಿ ನಗರಸಭೆಯು 2021–22ನೇ ಸಾಲಿನ ಉದ್ದಿಮೆ ನಿಧಿ ಅನುದಾನದಡಿಯಲ್ಲಿ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ **Standard Bid Document K.W-4** ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) **e-procurement** ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ **https://kppp.karnataka.gov.in**ನಿಂದ ಪಡೆದುಕೊಳ್ಳಬಹುದು.

(1) ಪ್ರೀ ಬಿಡ್ ಮೀಟಿಂಗ್ **ದಿನಾಂಕ: 28.02.2024 ಪೂರ್ವಾಹ್ನ 11.00 ಗಂಟೆಗೆ** (2) Queries/Clarifications ಕೊನೆಯ **ದಿನಾಂಕ: 07.03.2024 ಸಂಜೆ 5.00 ಗಂಟೆವರೆಗೆ** (3) ಟೆಂಡರು ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಕೊನೆಯ **ದಿನಾಂಕ: 14.03.2024 ಸಂಜೆ 4.30 ಗಂಟೆಗೆ** (4) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 14.03.2024 ಸಂಜೆ 5.00 ಗಂಟೆಗೆ** (5) ಸ್ವೀಕರಿಸಲಾದ ಟೆಂಡರುಗಳ ತಾಂತ್ರಿಕ ಬಿಡ್ಡು ತೆರೆಯುವ **ದಿನಾಂಕ: 15.03.2024 ಸಂಜೆ 5.01 ಗಂಟೆಗೆ** (6) ಆರ್ಥಿಕ ಬಿಡ್ಡು ತೆರೆಯುವ ದಿನಾಂಕ ಅರ್ಹ ಬಿಡ್ಡುದಾರರಿಗೆ ಪ್ರತ್ಯೇಕ ತಿಳಿಸಲಾಗುವುದು.

ಕಾಮಗಾರಿಗಳ ವಿವರ: (1) ಉಡುಪಿ ನಗರಸಭಾ ವ್ಯಾಪ್ತಿಯ ಹೆರ್ಗಾ ಗ್ರಾಮದ ಪರ್ಕಳ ವಾರ್ಡಿನ ಸರ್ವೆ ನಂಬ್ರ: 290/1ಬಿ1 ರಲ್ಲಿ ಮಾರುಕಟ್ಟೆ ಕಟ್ಟಡ ನಿರ್ಮಾಣ ಕಾಮಗಾರಿ. **DMA/2023-24/BD/WORK_INDENT11982,** ಟೆಂಡರು ಮೊತ್ತ **ರೂ. 296.07 ಲಕ್ಷ,** ಇ.ಎಂ.ಡಿ **ರೂ. 4.44 ಲಕ್ಷ,** ಟ್ರಾನ್ಸಾಕ್ಷನ್ ಫೀ: **ಇ–ಪೋರ್ಟಲ್‌ನಂತೆ,** ಕಾಮಗಾರಿ ಪೂರ್ತಿಗೊಳಿಸುವ ಅವಧಿ: **9 ತಿಂಗಳು**

ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ **https://kppp.karnataka.gov.in**ನಿಂದ ಟೆಂಡರು ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ಇದಕ್ಕೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಪಟ್ಟವರಿಂದ ಪಡೆದುಕೊಳ್ಳಬಹುದು.

ಸಹಿ/– ಪೌರಾಯುಕ್ತರು,
ಉಡುಪಿ ನಗರಸಭೆ

ವಾಸಾಇ/ಸನಿಉ/ಕೆಎಸ್‌ಎಂಸಿಎ/745/23–24 ದಿ: 15.02.2024

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ರಾಮನಗರ ವಿಭಾಗ, ರಾಮನಗರ.
ದೂ. : 080–2991 2608, ಇ–ಮೇಲ್ : dcfrmngr@gmail.com

ಸಂಖ್ಯೆ : ಎ3(ಎ)/ಬಿಯುಡಿ/ರೈಲ್ವೇ ಬ್ಯಾರಿಕೇಡ್/ಸಿಆರ್–41/2023–24
ದಿನಾಂಕ : 12–02–2024

ಇ-ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2023–24 ನೇ ಸಾಲಿನಲ್ಲಿ ರಾಮನಗರ ವಿಭಾಗದ ಕನಕಪುರ ವಲಯದಲ್ಲಿ ಲೆಕ್ಕ ಶೀರ್ಷಿಕೆ **"4406 Capital Outlay on Forestry & Wildlife-01-Forestry-101-Forest Protection, Regeneration & Cultural Operation-0-01-Railway Barricade to Prevent Man-animal Conflict-132-Capital Expenses"** ಯಡಿ ಉಪಯೋಗಿತ ರೈಲ್ವೇಹಳಿ ಬ್ಯಾರಿಕೇಡ್ ನಿರ್ಮಾಣ ಮಾಡಲು ಅರ್ಹ ಪಿ.ಡಬ್ಲ್ಯೂಡಿ. **ಕ್ಲಾಸ್ – 1, ಕ್ಲಾಸ್ – 2** ಮತ್ತು **ಕ್ಲಾಸ್ – 3** ಗುತ್ತಿಗೆದಾರರು ಮಾತ್ರ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in** ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ : 27–02–2024 ರ ಅಪರಾಹ್ನ 4.00 ಗಂಟೆಯವರೆಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ–ಟೆಂಡರ್ ಮೂಲಕ ಭಾಗವಹಿಸಬಹುದಾಗಿದೆ. ಇ–ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 28–02–2024 ರ ಅಪರಾಹ್ನ 4.30 ಗಂಟೆಗೆ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ : 01–03–2024 ರ ಅಪರಾಹ್ನ 4.00 ಗಂಟೆಗೆ ತೆರೆಯಲಾಗುವುದು. ಒಂದು ವೇಳೆ ದಿನಾಂಕ : 27–02–2024 ರಂದು ಇ–ಟೆಂಡರ್‌ನಲ್ಲಿ ಯಾರು ಭಾಗವಹಿಸದೇ ಇದ್ದಲ್ಲಿ ಎರಡನೇ ಬಾರಿ ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ಮರು ಸಲ್ಲಿಸಲು ಕೊನೆಯ ದಿನಾಂಕ : 12–03–2024 ರ ಅಪರಾಹ್ನ 4.00 ಗಂಟೆಯವರೆಗೆ ಭಾಗವಹಿಸಬಹುದಾಗಿದೆ.** (ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ಟೆಂಡರ್ ಪ್ರಕಟಣೆಯನ್ನು ಹೊರಡಿಸುವುದಿಲ್ಲ). ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 13–03–2024 ರ ಅಪರಾಹ್ನ 4.30 ಗಂಟೆಗೆ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ : 15–03–2024 ರ ಅಪರಾಹ್ನ 4.00 ಗಂಟೆಗೆ ಟೆಂಡರ್‌ಗಳನ್ನು ತೆರೆಯಲಾಗುವುದು. ಆಸಕ್ತಿಯುಳ್ಳವರು ಕಛೇರಿ ವೇಳೆಯಲ್ಲಿ ಮತ್ತು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ಟೆಂಡರ್‌ನ ಅಗತ್ಯ ಮಾಹಿತಿಗಳನ್ನು ಪಡೆದುಕೊಂಡು ಇ–ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ರಾಮನಗರ ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/467/ಮಣಿಪಾಲ್/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ–4ರವರ ಕಛೇರಿ, ಬಿಬಿಎಂಪಿ, ಬೆಂಗಳೂರು–560002

ನಂ.: ಕಾಪಾಅ/ಯೋಕೇ–4/ಟೆಂಡರ್/04/2023–24 ದಿನಾಂಕ: 15.02.2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಅಲ್ಪಾವಧಿ ಟೆಂಡರ್ ಪ್ರಕಟಣೆ)
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ–4, ಬಿಬಿಎಂಪಿ, ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಲಕ್ಷಗಳಲ್ಲಿ)
1	ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಅಸ್ತಿತ್ವದಲ್ಲಿರುವ ಕಟ್ಟಡಗಳ ನವೀಕರಣ, ಅಕೌಸ್ಟಿಕ್ಸ್ ವಿದ್ಯುದ್ದೀಕರಣ ಸೇರಿದಂತೆ ವಿಶೇಷ ಅಭಿವೃದ್ಧಿ ಕಾಮಗಾರಿಗಳು.	486.11	7.30 ಲಕ್ಷಗಳು ಮತ್ತು (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕನಿಷ್ಠ ರೂ. ಒಂದು ಲಕ್ಷ ಮತ್ತು ಉಳಿದ ಮೊತ್ತ ಬಿಡ್ ದಸ್ತಾವೇಜಿನಲ್ಲಿ ನಿರ್ದಿಷ್ಟಪಡಿಸಿದಂತೆ)

ವೇಳಾ ಪಟ್ಟಿ: (1) ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **21.02.2024**ರ **ಸಂಜೆ 5:30 ಗಂಟೆ**ವರೆಗೆ ಕಾರ್ಯಪಾಲಕ ಅಭಿಯಂತರರು – ಯೋಜನೆ ಕೇಂದ್ರ–4ರವರ ಕಛೇರಿ, ಬಿಬಿಎಂಪಿಯಲ್ಲಿ. **(2)** ಪೂರ್ವಭಾವಿ ಸಭೆಯು ದಿನಾಂಕ **22.02.2024**ರ **ಸಂಜೆ 4:00 ಗಂಟೆ**ಗೆ ಮುಖ್ಯ ಅಭಿಯಂತರರು – ಯೋಜನೆ ಕೇಂದ್ರರವರ ಕಛೇರಿಯಲ್ಲಿ ನಡೆಯಲಿದೆ. **(3)** ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ **26.02.2024**ರ **ಸಂಜೆ 5:30 ಗಂಟೆ**ಗೆ ಮುಂಚಿತವಾಗಿ ಸಲ್ಲಿಸತಕ್ಕದ್ದು ಮತ್ತು ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. **(4)** ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರು – ಯೋಜನೆ ಕೇಂದ್ರ–4ರವರ ಕಛೇರಿ, ಬಿಬಿಎಂಪಿಯಲ್ಲಿ ವೆಬ್‌ಸೈಟ್ **https://kppp.karnataka.gov.in** ಮೂಲಕ ದಿನಾಂಕ **28.02.2024**ರ **ಬೆಳಿಗ್ಗೆ 11:00 ಗಂಟೆ**ಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in**ನಿಂದ ಪಡೆದುಕೊಳ್ಳಬಹುದು.

ಸಹಿ/–, ಕಾರ್ಯಪಾಲಕ ಅಭಿಯಂತರರು (ಯೋಜನೆ–ಕೇಂದ್ರ–4), ಬಿಬಿಎಂಪಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರರ ಕಛೇರಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.

ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ:ಎJM& MVS (O&M)TENDER 23–24:2023–24/2287 ದಿನಾಂಕ:12.02.2024

1. ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:04/2023–24 (ದ್ವಿ–ಲಕೋಟೆ ಪದ್ಧತಿ)4ನೇ ಕರೆ
2. ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:06/2023–24 (ದ್ವಿ–ಲಕೋಟೆ ಪದ್ಧತಿ)3&4ನೇ ಕರೆ
3. ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:09/2023–24 (ಏಕ–ಲಕೋಟೆ ಪದ್ದತಿ)2ನೇ ಕರೆ
4. ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:09/2022–23 (ದ್ವಿ–ಲಕೋಟೆ ಪದ್ಧತಿ)7ನೇ ಕರೆ
4. ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:12/2023–24 (ದ್ವಿ–ಲಕೋಟೆ ಪದ್ಧತಿ) – (kppp portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಜೆ.ಜೆ.ಎಂ ಯೋಜನೆಯಡಿ **ಮಂಡ್ಯ ಜಿಲ್ಲೆಯ ಮದ್ದೂರು ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನ** ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ (FHTC) ಉಳಿಕೆ ಪರಿಮಾಣಗಳ ಕಾಮಗಾರಿಗಳನ್ನು ಮತ್ತು **ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ** ಮತ್ತು ಇತರೆ 04 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಪುನಃಶ್ಚೇತನ ಕಾಮಗಾರಿ ಹಾಗೂ ಮೊದಲನೇ ವರ್ಷದ ಕಾರ್ಯಾಚರಣೆ ಮತ್ತು ನಿರ್ವಹಣೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಐಟಂವಾರು ಐಟಂಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ **ರೂ.166.50 ಲಕ್ಷಗಳು.** ಪೂರ್ವಭಾವಿ ಸಭೆ **ದಿನಾಂಕ:19.02.2024 ಸಮಯ:ಬೆಳಿಗ್ಗೆ11:00 ಗಂಟೆಗೆ (ಸ್ಥಳ:ಕಾ.ಇಂ ಕಛೇರಿ, ಗ್ರಾ.ಕು.ನೀ&ನೈ ವಿಭಾಗ, ಮಂಡ್ಯ)** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:21.02.2024 ಸಂಜೆ:5:00 ಗಂಟೆಗೆ,** ತಾಂತ್ರಿಕ & ಆರ್ಥಿಕ ಬಿಡ್ ತೆರೆಯುವ **ದಿನಾಂಕ:22.02.2024 ಸಂಜೆ:05:05 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ:23.02.2024 ಬೆಳಿಗ್ಗೆ: 11:00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ:08232–222363.

ಸಹಿ/–ಕಾರ್ಯಪಾಲಕ ಇಂಜಿನಿಯರರು,
ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ.

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/545/2023–24

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ.

ಇ.ಮೇಲ್ ಸಂದೇಶ ಐಡಿನಂ.: dcfsagar123@gmail.com

ಸಂಖ್ಯೆ:ಎ2/ಬಿಜಿಟಿ/AW & SW/CR-14/2023–24 ದಿ:13.02.2024

ಇ–ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2024–25ನೇ ಸಾಲಿನಲ್ಲಿ ಜಾನುವಾರು ನಿರೋಧಕ ಕಂದಕ ಕಾಮಗಾರಿಗಳನ್ನು ಸಾಗರ ಪ್ರಾದೇಶಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ಕಾಂಪಾ ಯೋಜನೆಯಡಿ ಕೈಗೊಳ್ಳಲು ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಯನುಸಾರ ಆಸಕ್ತ ಗುತ್ತಿಗೆದಾರರುಗಳಿಂದ ದ್ವಿಲಕೋಟೆ ಪದ್ಧತಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಿ ಟೆಂಡರ್ ದಿನಾಂಕ: 21–02–2024 ರಂದು ಸಂಜೆ 4–30 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸ ಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– (ಸಂತೋಷ್ ಕುಮಾರ್ ಕೆಂಚಪ್ಪನವರ್, ಭಾಅಸೇ)
ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/129/02/23–24/1273

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಬಾಲಕಿಯರ ಸರ್ಕಾರಿ ಬಾಲಮಂದಿರ, ಚಿತ್ರದುರ್ಗ.

ಜಿಲ್ಲಾ ಪಂಚಾಯತಿ ರಸ್ತೆ, ಸರ್ಕಾರಿ ವಿಜ್ಞಾನ ಕಾಲೇಜು ಹಿಂಭಾಗ, ಚಿತ್ರದುರ್ಗ–577501
ಇ–ಮೇಲ್:bbmgirlscta@gmail.com Ph: 08194-295986

ಸಂಖ್ಯೆ:ಬಾಬಾಮಂ/ಚಿದು/ಆ.ಸಾ.ಖ/ಇ–ಟೆಂಡರ್/2023–24 ದಿನಾಂಕ: 12.02.2024

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಜಿಲ್ಲಾ ಮಕ್ಕಳ ರಕ್ಷಣಾ ಘಟಕದಡಿ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳಾದ ಸರ್ಕಾರಿ ಬಾಲಕರ ಬಾಲಮಂದಿರ, ಸರ್ಕಾರಿ ಬಾಲಕಿಯರ ಬಾಲಮಂದಿರ ಹಾಗೂ ಸರ್ಕಾರಿ ವೀಕ್ಷಣಾಲಯ ಚಿತ್ರದುರ್ಗ ಸಂಸ್ಥೆಯ ನಿವಾಸಿಗಳ ಉಪಯೋಗಕ್ಕಾಗಿ 2024–25 ನೇ ಸಾಲಿನಲ್ಲಿ ಒಂದು ವರ್ಷದ ಅವಧಿಗೆ ಇದರೊಂದಿಗೆ ಲಗತ್ತಿಸಿರುವ ಅನುಬಂಧ–1 ರಲ್ಲಿ ನಮೂದಿಸಿದ ಆಹಾರ ಪದಾರ್ಥ ಮತ್ತು ಇತರೆ ಸಾಮಾಗ್ರಿಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999, ನಿಯಮಗಳು 2000ರ ಪ್ರಕಾರ e-Procurement ರಡಿ ಟೆಂಡರ್ ಆಹ್ವಾನಿಸಿದೆ. (1) ಟೆಂಡರ್‌ನ ವಾರ್ಷಿಕ ಅಂದಾಜು ಮೊತ್ತ ರೂ. 16.00 ಲಕ್ಷ. (2) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ:– 12–02–2024 (3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:– 12–03–2024ರ ಸಂಜೆ 5:00 ಗಂಟೆಗೆ (4) ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ: ಅಧೀಕ್ಷಕರ ಕಛೇರಿ, ಬಾಲಕಿಯರ ಸರ್ಕಾರಿ ಬಾಲಮಂದಿರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಪಂಚಾಯಿತಿ ರಸ್ತೆ, ಚಿತ್ರದುರ್ಗ ದಿನಾಂಕ: 14–03–2024ರ ಬೆಳಿಗ್ಗೆ 11:30 ಗಂಟೆಗೆ. (5) ಆರ್ಥಿಕ ಬಿಡ್ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ :– ಅಧೀಕ್ಷಕರ ಕಛೇರಿ, ಬಾಲಕಿಯರ ಸರ್ಕಾರಿ ಬಾಲಮಂದಿರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಪಂಚಾಯಿತಿ ರಸ್ತೆ, ಚಿತ್ರದುರ್ಗ ದಿನಾಂಕ: 15–03–2024ರ ಬೆಳಿಗ್ಗೆ 11:30 ಗಂಟೆಗೆ. (6) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ:– ರೂ. 40,000.00 ಹೆಚ್ಚಿನ ಮಾಹಿತಿಗಾಗಿ http://kppp.karnataka.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸುವುದು. ಹಾಗೂ ಅಧೀಕ್ಷಕರ ಕಛೇರಿ, ಬಾಲಕಿಯರ ಸರ್ಕಾರಿ ಬಾಲಮಂದಿರ ಚಿತ್ರದುರ್ಗದ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. ದೂರವಾಣಿ ಸಂಖ್ಯೆ 08194–295986.

DIPR/CTA/KSMCA/573/2023-24

ಸಹಿ/– ಅಧೀಕ್ಷಕರು
ಬಾಲಕಿಯರ ಸರ್ಕಾರಿ ಬಾಲಮಂದಿರ, ಚಿತ್ರದುರ್ಗ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ. ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/5054–ಅಪೆಂಡಿಕ್ಸ್–ಇ/2023–24/4785 ದಿನಾಂಕ: 14.02.2024

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ರಲ್ಲಿ ಲೆಕ್ಕ ಶೀರ್ಷಿಕೆ: 5054–03–337–0–17–154 ಅಪೆಂಡಿಕ್ಸ್–ಇ ಯೋಜನೆ ಅಡಿಯಲ್ಲಿ ಒಟ್ಟು 1 ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಅದರಲ್ಲಿ ಅಂದಾಜು ಮೊತ್ತ ರೂ. 990.00 ಲಕ್ಷಗಳು ಹಾಗೂ ಮುಂಗಡ ಠೇವಣಿ ಮೊತ್ತ 14,85,000/– ರೂ.ಗಳು. ಸದರ ಕಾಮಾಗಾರಿಯ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. 1) ಗುತ್ತಿಗೆದಾರರ ಪೂರ್ವ ಭಾವಿ ಸಭೆ ದಿನಾಂಕ:– 17.02.2024ರ ಮುಂಜಾನೆ 11.00 ಗಂಟೆಗೆ 2) ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:–22.02.2024 ರ ಸಂಜೆ 4.30 ಗಂಟೆಯವರೆಗೆ, 3) ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ ದಿನಾಂಕ: 23.02.2024 ರ ಸಂಜೆ 4.31 ಗಂಟೆಯ ನಂತರ 4) ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ ದಿನಾಂಕ: 26.02.2024 ರ ಮುಂಜಾನೆ 11.00 ಗಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp.karnataka.gov.in (ಪೋನ್ ನಂ. 91 8046010000, +91 8068948777) ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/467/ಕೆಎಸ್‌ಎಂಸಿಎ/2023–24

ಅಲ್ಪಸಂಖ್ಯಾತರ ನಿರ್ದೇಶನಾಲಯ

ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.

ಸಂಖ್ಯೆ: ಅ.ಸಂ.ನಿ/ಶಿವಿ/ದಾ/ಸಿಆರ್–01/2023–24 ದಿನಾಂಕ: 14–02–2024

ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿನ ವಿವಿಧ ವಸತಿ ಶಾಲೆಗಳ 2024–25ನೇ ಶೈಕ್ಷಣಿಕ ಸಾಲಿನಲ್ಲಿ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ ಕುರಿತು

ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ [MDRS/GMRS/Dr.APJ AKRS] 6ನೇ ತರಗತಿ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ.

ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ 29 ಡಾ॥ ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಗಳು (ಸಿ.ಬಿ.ಎಸ್.ಇ), 90 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಮತ್ತು 04 ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು ಸೇರಿದಂತೆ ಒಟ್ಟು 123 ಶಾಲೆಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಸದರಿ ಶಾಲೆಗಳಲ್ಲಿ 2024–25ನೇ ಶೈಕ್ಷಣಿಕ ಸಾಲಿನಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಅಲ್ಪಸಂಖ್ಯಾತರ ಸಮುದಾಯದವರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬುದ್ದಿಸ್ಟ್, ಸಿಖ್ ಮತ್ತು ಪಾರ್ಸಿ ಅರ್ಹ ವಿದ್ಯಾರ್ಥಿಗಳು ಮತ್ತು ಪ.ಜಾತಿ/ಪ.ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳು ಸೇವಾಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಕ್ರಸಂ.	ವಿವರ	ದಿನಾಂಕ/ಸಮಯ
1	ಅರ್ಜಿ ಸಲ್ಲಿಸಲು ಪ್ರಾರಂಭವಾಗುವ ದಿನಾಂಕ	ದಿನಾಂಕ: 16.02.2024
2	ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ: 15.03.2024
3	ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ	ಅಲ್ಪಸಂಖ್ಯಾತರ ಸಹಾಯವಾಣಿ: 8277799990, 080–22535902

ಸೇವಾಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಉಚಿತ ಸೇವೆ ಬಳಸಿಕೊಳ್ಳಲು ತಮ್ಮ ಸಮೀಪದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು, ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆಗಳು, ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಮತ್ತು ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸಬಹುದಾಗಿದೆ. **Website: https://sevasindhuservices.karnataka.gov.in** ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ **https://dom.karnataka.gov.in**ನಲ್ಲಿ ಪಡೆಯಬಹುದಾಗಿದೆ.

ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.

ವಾಸಾಸಂಇ/ವಾಪ್ರ/3629/2023–24

ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
CIN-U85300KA2021SGC143291
5ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ॥ ಬಿ ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು–560001 Ph. No.: 080-22865522
Email ID: mdveerashaivalingayathagok2021@gmail.com

ಸಂ: ಕವಿಲಿಂಅನಿನಿ/ಸಿ–4/ಸಿಆರ್–20/2023–24 ದಿನಾಂಕ: 15.02.2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ (ನಿ), 5ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560001, ಕಛೇರಿ ಕಾರ್ಯಕ್ಕಾಗಿ ಹೊರ ಸಂಪನ್ಮೂಲ ಏಜೆನ್ಸಿಯಿಂದ 2024–25ನೇ ಸಾಲಿಗೆ ಅಗತ್ಯವಿರುವ ಸಿಬ್ಬಂದಿಗಳನ್ನು ಬಾಹ್ಯಮೂಲದಿಂದ ಪಡೆಯಲು ಇ–ಟೆಂಡರ್ ಮೂಲಕ ನಿಯಮಾನುಸಾರ ಟೆಂಡರನ್ನು ಆಹ್ವಾನಿಸಿದ್ದು, ಆಸಕ್ತಿವುಳ್ಳ ಏಜೆನ್ಸಿಯವರು ದಿನಾಂಕ: 27.02.2024 ಸಂಜೆ 5.00 ಗಂಟೆಯೊಳಗೆ https://kppp.karnataka.gov.in Tender no. KVLDCL/2023-24/SE0001 ಮೂಲಕ ಇ–ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ (ನಿ), 5ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001, ದೂರವಾಣಿ: 080–22865522ನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ (ನಿ) ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/3631/ಆಕಾರ್/2023–24

ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2, ನಂ.642, 2ನೇ ಮಹಡಿ, ಪಯೋನೀರ್ ಪ್ಲಾಜಾ, ಕೆಂಚೇನಹಳ್ಳಿ ಮುಖ್ಯ ರಸ್ತೆ, ರಾಜರಾಜೇಶ್ವರಿ ನಗರ, ಬೆಂಗಳೂರು–560098,
ದೂರವಾಣಿ ಸಂಖ್ಯೆ: 080–26994402 e-Mail: jcctdvo2@gmail.com

ಸಂಖ್ಯೆ:ವಾತೆಜಂಆ(ಆ)/ವಿ.ಸ&ಸೇ.ತೆ.ಕ–2/ವಾಹನ/ಸಿಆರ್–05/2023–24 ದಿನಾಂಕ: 14.02.2024

ಟೆಂಡರ್ ಪ್ರಕಟಣೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ)–ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2, ಬೆಂಗಳೂರು, ವಿಭಾಗದ ಬೆಂಗಳೂರು ಕಛೇರಿಗಳ ಉಪಯೋಗಕ್ಕಾಗಿ 14 (ಹದಿನಾಲ್ಕು) ಹಾಗೂ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಲೆ.ಪ) ರಾಮನಗರ ಕಛೇರಿಗೆ 01 (ಒಂದು) ಸೇರಿ ಒಟ್ಟು 15 (ಹದಿನೈದು) ಮಾಲೀಕರೇ ಚಾಲಕರಾಗಿರುವ ಅಧಿಕೃತ ವಾಹನಗಳನ್ನು ಮಾಸಿಕ ಬಾಡಿಗೆ **ರೂ.35,000–00** (ಹವಾ ನಿಯಂತ್ರಣ ರಹಿತ ವಾಹನಗಳು) ಆಧಾರದ ಮೇಲೆ 2018 ಮತ್ತು ನಂತರದ ವರ್ಷಗಳಲ್ಲಿ ತಯಾರಾದ ವಾಹನಗಳನ್ನು ದಿನಾಂಕ: **01.04.2024** ರಿಂದ **31.03.2025**ರ ಅವಧಿಗೆ ಪಡೆಯಲು ನಿಶ್ಚಯಿಸಲಾಗಿದೆ. ದಿನಾಂಕ: **12.02.2024** ರಂದು ಈ ಕಛೇರಿಯ ಸೂಚನಾ ಫಲಕಕ್ಕೆ ಸಂಬಂಧಿಸಿದ ವಿವರವಾದ ಷರತ್ತು ಮತ್ತು ನಿಬಂಧನೆಗಳನ್ನು ಅಂಟಿಸಲಾಗಿದೆ, ಹಾಗೂ ಇಲಾಖೆಯ ಜಾಲತಾಣ **http://ctax.kar.nic.in** ನಲ್ಲು ಸಹ ಪ್ರಕಟಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **29.02.2024 ಸಾಯಂಕಾಲ 5.00 ಗಂಟೆಯವರೆಗೆ,** ಅರ್ಜಿಯನ್ನು ಷರತ್ತುಗಳಲ್ಲಿ ನಿಗಧಿಪಡಿಸಿರುವ ವಾಹನಗಳ ದಾಖಲೆಗಳೊಂದಿಗೆ ಸಲ್ಲಿಸುವುದು, ಹೆಚ್ಚಿನ ವಿವರಗಳಿಗಾಗಿ ಕಛೇರಿ ಸಮಯದಲ್ಲಿ ಈ ವಿಭಾಗದ ವಾಹನ ಶಾಖೆ ಅಥವಾ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇ.ಕ) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2, ಬೆಂಗಳೂರು, ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)
ವಿ.ಸ.&ಸೇ.ತೆ.ಕ–2, ಬೆಂಗಳೂರು.

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಕ್ರಮಾಂಕ:ಶಿಮನಪಾಶಿ:ಕಾವಿ–1:ಟೆಂಡರ್:25/2023-24 ದಿನಾಂಕ: 13.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ–ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

(1). ಇ–ಪ್ರೊಕ್ಯೂರ್‌ಮೆಂಟ್ ನಮೂನೆಗಳಿಗಾಗಿ ಆನ್‌ಲೈನ್‌ನಲ್ಲಿ ಇ–ಪೇಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **22.02.2024 (ಮಧ್ಯಾಹ್ನ 3.30 ಗಂಟೆಗೆ)** (2). ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ನ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : **23.02.2024 (ಸಂಜೆ: 4.00 ಗಂಟೆಗೆ)** (3). ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ನ ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ : **23.02.2024 (ಸಂಜೆ: 4.30 ಗಂಟೆಯ ನಂತರ)** (4). ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿಯ ಸೂಚನಾ ಫಲಕದಲ್ಲಿ ಪಡೆಯಬಹುದಾಗಿದೆ. (5). ಕಾಮಗಾರಿ ಪೂರೈಸುವ ಅವಧಿ : **4 ತಿಂಗಳುಗಳು, ಗುತ್ತಿಗೆದಾರರ ದರ್ಜೆ : ಕ್ರಮ ಸಂಖ್ಯೆ 8, 15 ಮತ್ತು 27ರ ಕಾಮಗಾರಿಗಳಿಗೆ Class 3 and above ಮತ್ತು ಉಳಿದ ಕಾಮಗಾರಿಗಳಿಗೆ Class 4 and above** (6). ಅನುದಾನ : **2023-24ನೇ ಸಾಲಿನ ಸಾಮಾನ್ಯ ನಿಧಿ ಅನುದಾನ ಹಾಗೂ ಕ್ರಮ ಸಂಖ್ಯೆ 15 ಮತ್ತು 27ರ ಕಾಮಗಾರಿಗಳು ಎಂಟರ್ ಪ್ರೈಸಸ್ ಅನುದಾನ** (7). ಪರಿಶಿಷ್ಟ ಜಾತಿಯ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳು : **15101, 15066, 15091, 15118** (8). ಪರಿಶಿಷ್ಟ ಪಂಗಡದ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳು : **15092, 14898** (9). ಇತರೆ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳು : **14395, 15099, 15058, 14862, 14908, 15087, 14906, 15093, 15039, 15094, 4430, 15056, 2238, 15136, 15138. 99/Call-2, 1242/Call-2, 582/Call-2, IND0305/Call-2, 94/Call-2 and 107/Call-3**

ಸೂಚನೆ: ಟೆಂಡರ್‌ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಇ–ಪೋರ್ಟಲ್ ಮುಖಾಂತರ ಸೂಚಿಸಲಾಗುವುದು.

ಸಹಿ/–ಕಾರ್ಯಪಾಲಕ ಅಭಿಯಂತರರು
ಶಿವಮೊಗ್ಗ ಮಹಾನಗರ ಪಾಲಿಕೆ
ಶಿವಮೊಗ್ಗ

ವಾ.ಸಾ.ಸಂ.ಇ./ಶಿ/ನಂ 104-02 ಝೇಂಕಾರ್/2023-24

ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕ ಇಂಜಿನೀಯರರು, ಧಾರವಾಡ ವಿಭಾಗ, ಧಾರವಾಡ.
ದೂರವಾಣಿ ಸಂಖ್ಯೆ: 0836–2747944, ಫ್ಯಾಕ್ಸ್ ಸಂಖ್ಯೆ: 0836–2747944
ಇ–ಮೇಲ್ ಐಡಿ: eepwddha@gmail.com

ಸಂಖ್ಯೆ: ಕಾನಿಇಂಧಾ/ಪಿಬಿ–4/2023–2024/5795 ದಿನಾಂಕ: 13–02–2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಐಎಫ್‌ಟಿ – ಕೆಡಬ್ಲ್ಯೂ–1, 2 ಮತ್ತು 4) (ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡ ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆಡಬ್ಲ್ಯೂ–4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. **(https://kppp.karnataka.gov.in)** ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಧಾರವಾಡ ವಿಭಾಗ ವ್ಯಾಪ್ತಿಯಲ್ಲಿ ಸಂಬಂಧಿಸಿದಂತೆ 8443 ಲೆಕ್ಕ ಶೀರ್ಷಿಕೆ ಅಡಿಯ ಕಾಮಗಾರಿಗೆ ಟೆಂಡರ್ ದಿನಾಂಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

ಲೆಕ್ಕ ಶೀರ್ಷಿಕೆ 2023–24 ನೇ ಸಾಲಿನ 5054 Appendix-e works

1) PWD/2023-24/RD/WORK_INDENT5828/Call-2

1) ಆಕ್ಷೇಪಣೆ–ಸಂದೇಹ / ಪ್ರಿ ಬಿಡ್ ಮೀಟಿಂಗ್ ದಿನಾಂಕ: **20–02–2024 ರಂದು ಮಧ್ಯಾಹ್ನ 12.30 ಗಂಟೆಯವರೆಗೆ.** 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **21–02–2024 ರಂದು ಸಾಯಂಕಾಲ 16.00 ಗಂಟೆಯವರೆಗೆ.** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **22–02–2024 ರಂದು ಸಾಯಂಕಾಲ 16.30 ಗಂಟೆಯ ನಂತರ.** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **23–02–2024 ರಂದು ಸಾಯಂಕಾಲ 16.30 ಗಂಟೆಯ ನಂತರ.**

ಲೆಕ್ಕ ಶೀರ್ಷಿಕೆ 2023–24 ನೇ ಸಾಲಿನ 3054–04–337–1–10–200
ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ

1) PWD/2023-24/RD/WORK_INDENT8871

1) ಆಕ್ಷೇಪಣೆ–ಸಂದೇಹ / ಪ್ರಿ ಬಿಡ್ ಮೀಟಿಂಗ್ ದಿನಾಂಕ: **21–02–2024 ರಂದು ಮಧ್ಯಾಹ್ನ 12.30 ಗಂಟೆಯವರೆಗೆ.** 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **22–02–2024 ರಂದು ಸಾಯಂಕಾಲ 16.00 ಗಂಟೆಯವರೆಗೆ.** 3) ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ: **23–02–2024 ರಂದು ಸಾಯಂಕಾಲ 16.30 ಗಂಟೆಯ ನಂತರ.**

ಲೆಕ್ಕ ಶೀರ್ಷಿಕೆ 2023–24 ನೇ ಸಾಲಿನ 5054 Appendix-e works

1) PWD/2023-24/RD/WORK_INDENT7577/CALL-2

1) ಆಕ್ಷೇಪಣೆ–ಸಂದೇಹ / ಪ್ರಿ ಬಿಡ್ ಮೀಟಿಂಗ್ ದಿನಾಂಕ: **23–02–2024 ರಂದು ಮಧ್ಯಾಹ್ನ 12.30 ಗಂಟೆಯವರೆಗೆ.** 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **26–02–2024 ರಂದು ಸಾಯಂಕಾಲ 16.00 ಗಂಟೆಯವರೆಗೆ.** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **27–02–2024 ರಂದು ಸಾಯಂಕಾಲ 16.30 ಗಂಟೆಯ ನಂತರ.** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **28–02–2024 ರಂದು ಸಾಯಂಕಾಲ 16.30 ಗಂಟೆಯ ನಂತರ.**

ಲೆಕ್ಕ ಶೀರ್ಷಿಕೆ 2023–24 ನೇ ಸಾಲಿನ 3054–03–337–0–05–200
ರಾಜ್ಯ ಹೆದ್ದಾರಿಗಳ ನಿರ್ವಹಣೆ

1) PWD/2023-24/RD/WORK_INDENT8421
(ತಾಂತ್ರಿಕ ಕಾರಣಗಳಿಂದ ತಡೆಹಿಡೆಯಲಾಗಿದೆ)

ಕಾಮಗಾರಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ: **https://www.kppp.karnataka.gov.in** ದಲ್ಲಿ ಹಾಗೂ ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ವಾಸಾಸಂಇ/ಧಾರವಾಡ/800/ಅಡ್ವರ್ಟೋರ್/2023–24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಉದ್ಯೋಗಕ್ಕೆ ಸಂಬಂಧಿಸಿದಂತೆ ನಾವು ಕೇಳಿಕೊಳ್ಳಬೇಕಾದುದು ‘ನಾನೇನು ಪಡೆಯುತ್ತಿದ್ದೇನೆ?’ ಎಂಬ ಪ್ರಶ್ನೆಯನ್ನಲ್ಲ, ‘ನಾನೇನು ಆಗುತ್ತಿದ್ದೇನೆ’ ಎಂಬ ಪ್ರಶ್ನೆಯನ್ನು.

-ಜಿಮ್ ರೌನ್

ಚುನಾವಣಾ ಬಾಂಡ್ ಯೋಜನೆ ರದ್ದತಿ ಸುಪ್ರೀಂ ಕೋರ್ಟ್ ತೀರ್ಪು ಚಾರಿತ್ರಿಕ

ಚುನಾವಣಾ ಬಾಂಡ್ ಯೋಜನೆಯು ಅಸಾಂವಿಧಾನಿಕ ಎಂದಿರುವ ಸುಪ್ರೀಂ ಕೋರ್ಟ್, ಅದನ್ನು ರದ್ದುಪಡಿಸಿದೆ. ರಾಜಕೀಯ ಪಕ್ಷಗಳಿಗೆ ಮತ್ತು ಅವುಗಳ ಚುನಾವಣಾ ನಿರ್ವಹಣೆಗೆ ಹಣ ನೀಡುತ್ತಿರುವವರು ಯಾರು ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಮತದಾರನಿಗೆ ಇದೆ ಎಂಬುದು ಚುನಾವಣಾ ಪ್ರಜಾತಂತ್ರದ ಮುಖ್ಯ ತತ್ವಗಳಲ್ಲಿ ಒಂದು. ಈಗಿನ ತೀರ್ಪು ಈ ವಿಚಾರದಲ್ಲಿ ಭಾರತದ ಜನರಿಗೆ ಬಹುದೊಡ್ಡ ವಿಜಯವನ್ನು ತಂದುಕೊಟ್ಟಿದೆ. ಚುನಾವಣಾ ಬಾಂಡ್ ಯೋಜನೆ ಕುರಿತು ವ್ಯಕ್ತವಾದ ಟೀಕೆ ಮತ್ತು ಕಳವಳಗಳೆಲ್ಲವೂ ಸಮಂಜಸವೇ ಆಗಿದ್ದವು ಎಂಬ ಮುದ್ರೆಯನ್ನು ಸುಪ್ರೀಂ ಕೋರ್ಟ್ ಒತ್ತಿದೆ. ಐವರು ನ್ಯಾಯಮೂರ್ತಿಗಳಿದ್ದ ಸಂವಿಧಾನ ಪೀಠವು ಸರ್ವಸಮ್ಮತಿಯಿಂದ ಈ ಮಹತ್ವದ ತೀರ್ಪನ್ನು ನೀಡಿದೆ. ಸಂವಿಧಾನದ 19(1)(ಎ) ವಿಧಿಯ ಅಡಿಯಲ್ಲಿ ನೀಡಿರುವ ಮಾಹಿತಿ ಪಡೆದುಕೊಳ್ಳುವ ಹಕ್ಕನ್ನು ಉಲ್ಲಂಘಿಸುತ್ತದೆ ಎಂದು ನ್ಯಾಯಾಲಯವು ಘೋಷಿಸಿದೆ. ಚುನಾವಣಾ ಬಾಂಡ್ ಯೋಜನೆಯನ್ನು ಸಮರ್ಥಿಸಿಕೊಳ್ಳಲು ಕೇಂದ್ರ ಸರ್ಕಾರವು ಮುಂದಿರಿಸಿದ ಯಾವುದೇ ವಾದವನ್ನು ಕೋರ್ಟ್ ಒಪ್ಪಿಕೊಂಡಿಲ್ಲ. ಕೇಂದ್ರ ಸರ್ಕಾರವು 2017-18ರ ಬಜೆಟ್‌ನಲ್ಲಿ ಚುನಾವಣಾ ಬಾಂಡ್ ಯೋಜನೆಯನ್ನು ಪರಿಚಯಿಸಿತ್ತು. ಹಣಕಾಸು ಮಸೂದೆಯ ಭಾಗವಾಗಿದ್ದ ಈ ಯೋಜನೆಯು ರಾಜಕೀಯ ಪಕ್ಷಗಳ ದೇಣಿಗೆ ಸಂಗ್ರಹದಲ್ಲಿ ಪಾರದರ್ಶಕತೆ ತರಲಿದೆ ಎಂದು ಆಗ ವಾದಿಸಲಾಗಿತ್ತು. ಬಾಂಡ್ ಯೋಜನೆಯ ಭಾಗವಾಗಿ ಉದ್ಯಮ ಸಂಸ್ಥೆಗಳು ಮತ್ತು ವ್ಯಕ್ತಿಗಳು ಅನಾಮಧೇಯವಾಗಿ ನೀಡಿದ ದೇಣಿಗೆಯ ಬಹುಭಾಗ ಎಂದರೆ, ₹ 13 ಸಾವಿರ ಕೋಟಿಗೂ ಹೆಚ್ಚಿನ ಮೊತ್ತವು ಆಡಳಿತಾರೂಢ ಬಿಜೆಪಿಯ ಬೊಕ್ಕಸವನ್ನೇ ಸೇರಿದೆ. ಆದಾಯ ತೆರಿಗೆ ಕಾಯ್ದೆ, ಜನಪ್ರಾತಿನಿಧ್ಯ ಕಾಯ್ದೆ ಮತ್ತು ಕಂಪನಿಗಳ ಕಾಯ್ದೆಗೆ ಮಾಡಿದ ತಿದ್ದುಪಡಿಗಳಿಂದಾಗಿ ರಾಜಕೀಯ ಪಕ್ಷಗಳಿಗೆ ವ್ಯಕ್ತಿಗಳು ಮತ್ತು ಉದ್ಯಮ ಸಂಸ್ಥೆಗಳು ಮಿತಿಯಿಲ್ಲದಷ್ಟು ದೇಣಿಗೆಯನ್ನು ಅನಾಮಧೇಯವಾಗಿ ನೀಡುವುದು ಸಾಧ್ಯವಾಗಿದೆ. ಈ ತಿದ್ದುಪಡಿಗಳ ಕಾರಣದಿಂದಾಗಿ, ದೇಣಿಗೆ ನೀಡುವವರು ಮತ್ತು ಪಡೆಯುವ ಪಕ್ಷಗಳಿಗೆ ತೆರಿಗೆಯಿಂದಲೂ ವಿನಾಯಿತಿ ನೀಡಲಾಗಿದೆ ಎಂಬುದೇ ಅಸಾಂವಿಧಾನಿಕ ಎಂದು ನ್ಯಾಯಾಲಯವು ಹೇಳಿದೆ.




ರಾಜಕೀಯ ಪಕ್ಷಗಳಿಗೆ ಮತ್ತು ಅವುಗಳ ಚುನಾವಣಾ ನಿರ್ವಹಣೆಗೆ ಹಣ ನೀಡುತ್ತಿರುವವರು ಯಾರು ಎಂಬುದನ್ನು ತಿಳಿದುಕೊಳ್ಳುವ ಮತದಾರನ ಹಕ್ಕನ್ನು ಈ ತೀರ್ಪು ಎತ್ತಿ ಹಿಡಿದಿದೆ

ಪಾರದರ್ಶಕತೆಯೇ ಇಲ್ಲ ಎಂಬುದು ಈ ಯೋಜನೆಯ ಕುರಿತು ಇದ್ದ ಬಹುದೊಡ್ಡ ಟೀಕೆ ಆಗಿತ್ತು. ಈ ಟೀಕೆಯು ಮೌಲಿಕವೇ ಆಗಿತ್ತು ಎಂಬುದನ್ನು ನ್ಯಾಯಾಲಯವು ದೃಢಪಡಿಸಿದೆ. ರಾಜಕೀಯ ಪಕ್ಷಗಳ ಕಾರ್ಯಚಟುವಟಿಕೆಗಳು ಸಾರ್ವಜನಿಕ ವಲಯದಲ್ಲಿಯೇ ನಡೆಯುತ್ತವೆ. ಹಾಗಾಗಿ, ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುತ್ತಿರುವವರು ಯಾರು ಎಂಬುದನ್ನು ತಿಳಿದುಕೊಳ್ಳುವ ಎಲ್ಲ ಹಕ್ಕುಗಳೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಗೆ ಇವೆ. ಈ ಪಕ್ಷಗಳೇ ಸರ್ಕಾರ ರಚಿಸುತ್ತವೆ ಮತ್ತು ಸಾರ್ವಜನಿಕ ನೀತಿಯನ್ನು ರೂಪಿಸುತ್ತವೆ. ವಿರೋಧ ಪಕ್ಷಗಳು ಜನರ ಅಭಿಮತವನ್ನು ಪ್ರತಿನಿಧಿಸುತ್ತವೆ ಹಾಗೂ ನೀತಿಯ ಮೇಲೆ ಪ್ರಭಾವ ಬೀರುತ್ತವೆ. ರಾಜಕೀಯ ಪಕ್ಷಗಳಿಗೆ ನೀಡುವ ಹಣಕಾಸು ಬೆಂಬಲವು ಪ್ರತಿಫಲಾಪೇಕ್ಷೆಯ ಉದ್ದೇಶದ್ದಾಗಿ ಬದಲಾಗಬಹುದು ಎಂದು ಕೋರ್ಟ್ ಹೇಳಿದೆ. ಸರ್ಕಾರ ತೆಗೆದುಕೊಳ್ಳುವ ನೀತಿ ನಿರ್ಧಾರಗಳು ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿರುವಂತಹವೇ ಅಥವಾ ಆಡಳಿತ ಪಕ್ಷಕ್ಕೆ ದೇಣಿಗೆ ನೀಡಿದವರ ಪರವಾಗಿ ಇರುವಂತಹವೇ ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಜನರಿಗೆ ಇದೆ. ಪಾರದರ್ಶಕತೆ ತತ್ವವು ಚುನಾವಣಾ ಪ್ರಜಾತಂತ್ರದ ಕೇಂದ್ರಸ್ಥಾನದಲ್ಲಿದೆ. ಹಾಗಾಗಿ, ಮತದಾರರಿಗೆ ಮಾಹಿತಿ ನಿರಾಕರಿಸುವುದು ಈ ತತ್ವದ ಉಲ್ಲಂಘನೆ ಆಗುತ್ತದೆ. ಈ ಪ್ರಶ್ನೆಯನ್ನು ಸಾರ್ವಜನಿಕವಾಗಿ ಎತ್ತಲಾಗಿದ್ದರೂ ಸರ್ಕಾರವು ಇದನ್ನು ಕಿವಿಗೇ ಹಾಕಿಕೊಂಡಿರಲಿಲ್ಲ. ರಾಜಕೀಯದಲ್ಲಿ ಕಪ್ಪುಹಣದ ಪ್ರಭಾವವನ್ನು ತಗ್ಗಿಸಲು ಈ ಯೋಜನೆಯು ನೆರವಾಗಿದೆ ಎಂಬ ವಾದವನ್ನೂ ನ್ಯಾಯಾಲಯವು ಪುರಸ್ಕರಿಸಿಲ್ಲ.

ದೇಣಿಗೆ ಸಂಗ್ರಹದ ವಿಚಾರದಲ್ಲಿ ವಿರೋಧ ಪಕ್ಷಗಳಿಗಿಂತ ಆಡಳಿತ ಪಕ್ಷವಾದ ಬಿಜೆಪಿಗೆ ಹೆಚ್ಚಿನ ಅನುಕೂಲ ಆಗಬೇಕು ಎಂಬ ರೀತಿಯಲ್ಲಿಯೇ ಈ ಯೋಜನೆಯನ್ನು ರೂಪಿಸಲಾಗಿದೆ. ದೇಣಿಗೆ ನೀಡಿದವರು ಯಾರು ಮತ್ತು ದೇಣಿಗೆಯ ಮೊತ್ತ ಎಷ್ಟು ಎಂಬುದನ್ನು ಆಡಳಿತ ಪಕ್ಷವು ಭಾರತೀಯ ಸ್ಟೇಟ್ ಬ್ಯಾಂಕ್ ಮೂಲಕ ತಿಳಿದುಕೊಳ್ಳುವ ಸಾಧ್ಯತೆ ಇದೆ. ಆದರೆ, ವಿರೋಧ ಪಕ್ಷಗಳಿಗೆ ಈ ಅವಕಾಶ ಇಲ್ಲವೇ ಇಲ್ಲ. ರಾಜಕೀಯ ದೇಣಿಗೆ ಪಡೆದುಕೊಳ್ಳುವ ವಿಚಾರದಲ್ಲಿ ಆಡಳಿತ ಪಕ್ಷಕ್ಕೆ ಹೆಚ್ಚಿನ ಅನುಕೂಲ ಇರುವುದು ನಿಜ. ಆದರೆ, ಸಮತೋಲನವೇ ಇಲ್ಲದ ರೀತಿಯಲ್ಲಿ ದೇಣಿಗೆ ಸಂದಾಯ ಆಗಿರುವುದನ್ನು ಗಮನಿಸಿದರೆ, ಬಿಜೆಪಿ ನ್ಯಾಯಯುತವಲ್ಲದ ರೀತಿಯಲ್ಲಿ ಅನುಕೂಲ ಪಡೆದುಕೊಂಡಿದೆ ಎಂಬುದು ದೃಢಪಡುತ್ತದೆ. ಚುನಾವಣಾ ಬಾಂಡ್ ನೀಡುವುದನ್ನು ನಿಲ್ಲಿಸಬೇಕು ಮತ್ತು ಎಲ್ಲ ದೇಣಿಗೆಗಳ ವಿವರಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು ಎಂದು ನ್ಯಾಯಾಲಯವು ನಿರ್ದೇಶನ ನೀಡಿದೆ. ಎಸ್‌ಬಿಐ ನೀಡಿದ ವಿವರಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಮಾರ್ಚ್ 31ರೊಳಗೆ ಪ್ರಕಟಿಸಬೇಕು ಎಂದೂ ಪೀಠವು ಸೂಚಿಸಿದೆ. ಪ್ರಜಾಪ್ರಭುತ್ವದಲ್ಲಿ ಪಾರದರ್ಶಕತೆ ಮತ್ತು ನ್ಯಾಯಯುತ ನಡವಳಿಕೆ ಅತ್ಯಗತ್ಯ ಎಂಬುದನ್ನು ಎತ್ತಿ ಹಿಡಿದಿರುವ ಈ ತೀರ್ಪು ಚಾರಿತ್ರಿಕ. ಲೋಕಸಭೆಗೆ ಈ ವರ್ಷ ನಡೆಯಲಿರುವ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ ಸೋಲು-ಗೆಲುವಿನ ಮೇಲೆ ಈ ತೀರ್ಪು ಯಾವುದೇ ಪರಿಣಾಮ ಬೀರದೇ ಇರಬಹುದು. ಆದರೆ, ನರೇಂದ್ರ ಮೋದಿ ನೇತೃತ್ವದ ಸರ್ಕಾರದ ನೈತಿಕತೆಯ ಕುರಿತು ಪ್ರಶ್ನೆ ಮೂಡುವಂತೆ ಮಾಡಿದೆ.

ದಿನದ ಟ್ವೀಟ್

ದೂರಗಾಮಿ ಪರಿಣಾಮ




ಅನಾಮಧೇಯ ಚುನಾವಣಾ ಬಾಂಡುಗಳನ್ನು ಮತ್ತು ಕಾರ್ಪೊರೇಟ್ ಸಂಸ್ಥೆಗಳು ರಾಜಕೀಯ ಪಕ್ಷಗಳಿಗೆ ಯಾವುದೇ ಮಿತಿ ಇಲ್ಲದೆ ದೇಣಿಗೆ ನೀಡುವುದನ್ನು ರದ್ದುಗೊಳಿಸಿರುವುದಕ್ಕೆ ಸುಪ್ರೀಂ ಕೋರ್ಟ್‌ಗೆ ಮೆಚ್ಚುಗೆಪೂರ್ವಕ ಧನ್ಯವಾದಗಳು. ಈವರೆಗೆ ನಗದೀಕರಿಸಿಕೊಂಡಿರುವ ಚುನಾವಣಾ ಬಾಂಡುಗಳ ಮಾಹಿತಿಯನ್ನು ಬಹಿರಂಗಪಡಿಸುವಂತೆಯೂ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ: ಯಾರು ಯಾರಿಗೆ ಕೊಟ್ಟರು? ನಮ್ಮ ಚುನಾವಣಾ ಪ್ರಜಾಪ್ರಭುತ್ವ ಮತ್ತು ರಾಜಕಾರಣದ ಮೇಲೆ ಇದು ದೂರಗಾಮಿ ಪರಿಣಾಮ ಬೀರುತ್ತದೆ.

ಪ್ರಶಾಂತ್ ಭೂಷಣ್, ಸುಪ್ರೀಂ ಕೋರ್ಟ್ ವಕೀಲ

ಕಿಡಿನುಡಿ

ಈಗ ಜನತಾದಳದ ಬೆನ್ನು, ತಲೆ ಮೇಲೆ ಸಂಘ ಪರಿವಾರ, ಬಿಜೆಪಿಯ ಛಿದ್ರಕಾರಿ ಶಕ್ತಿಗಳು ಸವಾರಿ ಮಾಡುತ್ತಿವೆ. ಮಕ್ಕಳು ಮತ್ತು ಸೊಸೆಯಂದಿರ ದಿಗ್ಬಂಧನಕ್ಕೆ ಒಳಗಾಗಿ ದೇವೇಗೌಡರು ಅಸಹಾಯಕತೆಯಿಂದ ಈ ಆಲಿಂಗನಕ್ಕೆ ಒಪ್ಪಿದ್ದಾರೆ ಎನ್ನುವ ಮಾತುಗಳಿವೆ.



ದೇವನೂರ ಮಹಾದೇವ, ಸಾಹಿತಿ

25 ವರ್ಷಗಳ ಹಿಂದೆ

ಮಂಗಳವಾರ, 16-2-1999

• ಬಿಹಾರ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ಲಾಲೂ-ರಾಬ್ಡಿ ಬಂಧನ, ಬಿಡುಗಡೆ

ಪಟ್ನಾ, ಫೆ. 15 (ಯುಎನ್‌ಐ, ಪಿಟಿಐ)- ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸಿರುವುದನ್ನು ವಿರೋಧಿಸಿ ರಾಷ್ಟ್ರೀಯ ಜನತಾ ದಳ ನೀಡಿದ್ದ ಬಿಹಾರ ಬಂದ್ ಕರೆಗೆ ಇಂದು ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ಸಾಮಾನ್ಯ ಜನಜೀವನವು ಭಾಗಶಃ ಅಸ್ತವ್ಯಸ್ತವಾಯಿತು.

ರಾಜಭವನದ ಬಳಿ ಜಾರಿಯಲ್ಲಿದ್ದ ನಿಷೇಧಾಜ್ಞೆ ಉಲ್ಲಂಘಿಸಿದ ಆರೋಪದ ಮೇಲೆ ಆರ್‌ಜೆಡಿ ಅಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಲಾಲೂ ಪ್ರಸಾದ್, ಪದಚ್ಯುತ ಮುಖ್ಯಮಂತ್ರಿ ರಾಬ್ಡಿ ದೇವಿ, ಕೇಂದ್ರದ ಮಾಜಿ ಸಚಿವೆ ಕಾಂತಿ ಸಿಂಗ್ ಹಾಗೂ ಇತರ ಮುಖಂಡರು ಸೇರಿ ಸಾವಿರಾರು ಆರ್‌ಜೆಡಿ ಕಾರ್ಯಕರ್ತರನ್ನು ಬಂಧಿಸಿ, ಸಂಜೆ ಬಿಡುಗಡೆ ಮಾಡಲಾಯಿತು.

ಹದಿನೈದು ದಿನಗಳ ಅಂತರದಲ್ಲಿ 34 ದಲಿತರ ಬರ್ಬರ ಹತ್ಯೆಯಾಗಿತ್ತು. ಈ ಘಟನೆ ಹದಿನೆಂಟು ತಿಂಗಳ ರಾಷ್ಟ್ರೀಯ ಜನತಾದಳ ನೇತೃತ್ವದ ರಾಬ್ಡಿದೇವಿ ಸರ್ಕಾರದ ವಜಾಕ್ಕೆ ಕಾರಣವಾಗಿತ್ತು.

50 ವರ್ಷಗಳ ಹಿಂದೆ

ಶನಿವಾರ, 16-2-1974

• ಪುನರ್ ವಿಂಗಡಣೆ ಶಾಸನ ವಿರುದ್ಧ ದರ್ಜೆ ಬದಲಾವಣೆಗೆ ಸರ್ಕಾರಿ ಮೋಟಾರ್ ಚಾಲಕರ ಆಕ್ಷೇಪ

ಬೆಂಗಳೂರು, ಫೆ. 15- ರಾಜ್ಯ ಪುನರ್ ವಿಂಗಡಣೆಗೆ ಮುಂಚೆ ಇದ್ದ ಸರ್ಕಾರಿ ನೌಕರರ ಸ್ಥಾನಮಾನಗಳನ್ನು ಬದಲಾಯಿಸುವುದನ್ನು ರಾಜ್ಯ ಪುನರ್ ವಿಂಗಡಣಾ ಶಾಸನದಂತೆ ನಿಷೇಧಿಸಿದ್ದರೂ ತಮ್ಮ ದರ್ಜೆಯನ್ನು ಬದಲಾಯಿಸಲಾಯಿತೆಂದು ಕರ್ನಾಟಕ ಸರ್ಕಾರದ ಮೋಟಾರ್ ಡ್ರೈವರ್‌ಗಳು ಆಕ್ಷೇಪಿಸಿದ್ದಾರೆ.

ರಾಜ್ಯ ಪುನರ್ ವಿಂಗಡಣೆಗೆ ಮುಂಚೆ ತಾವು ಮೂರನೇ ದರ್ಜೆ ನೌಕರರಾಗಿದ್ದು, ಈಗ ತಮ್ಮನ್ನು ನಾಲ್ಕನೇ ದರ್ಜೆ ನೌಕರರೆಂದು ಪರಿಗಣಿಸಲಾಗುತ್ತಿದೆಯೆಂದು ಸರ್ಕಾರಿ ಮೋಟಾರ್ ಡ್ರೈವರ್‌ಗಳ ಕೇಂದ್ರ ಸಂಘದ ಅಧ್ಯಕ್ಷ ವಿ.ಸಿ. ಕೃಷ್ಣಸ್ವಾಮಿ ಮತ್ತು ಕಾರ್ಯದರ್ಶಿ ವಿ.ಕೆ.ಶಂಕರ್‌ರವರು ಇಂದು ಪತ್ರಿಕಾಗೋಷ್ಠಿಯಲ್ಲಿ ಆಕ್ಷೇಪಿಸಿ, ಅನೇಕ ಸಂದರ್ಭಗಳಲ್ಲಿ ಯಾವುದೇ ಪರಿಹಾರವಿಲ್ಲದೆ ಒಂದೇ ಸಮನೆ 18 ಗಂಟೆಗಳ ಕಾಲ ಕೆಲಸ ಮಾಡಲಾಗುತ್ತಿದೆ ಎಂದರು.

ಕೋಮುವಾದ ಹಿಮ್ಮೆಟ್ಟಿಸಿದ ಬಹುಸಂಖ್ಯಾತರ ಧ್ವನಿ • ಸಕ್ಕರೆ ನಾಡಿನ ಶಾಂತಿ ಸಂದೇಶ

ಇಂಡಿಯಾಕ್ಕೆ ಮಾದರಿ ಕೊಟ್ಟ ಮಂಡ್ಯ



ಗತಿಬಿಂಬ

ವೈ.ಗ.ಜಗದೀಶ್

‘ಮತ ನಮಗೊಂದು ದೊಡ್ಡ ಬಂಧನವಾಗಿದೆ. ನಾಡಿನ ಏಳ್ಗೆಯ ಕುತ್ತಿಗೆಗೆ ಉರುಳಾಗಿದೆ. ಒಬ್ಬರಿಗೊಬ್ಬರು ಮುಟ್ಟದಿರುವುದು, ಒಬ್ಬರೊಡನೊಬ್ಬರು ಭೋಜನ ಮಾಡದಿರುವುದು, ನಾಮ ಹಾಕಿ ಕೊಳ್ಳುವುದು, ವಿಭೂತಿ ಹಚ್ಚಿಕೊಳ್ಳುವುದು, ಮುದ್ರೆ ಹೊಡೆದುಕೊಳ್ಳುವುದು, ಶಿಲುಬೆ ಧರಿಸಿಕೊಳ್ಳುವುದು, ಸಾರ್ವಜನಿಕ ಕೆರೆ ಬಾವಿಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು, ಕೆಲವರನ್ನು ದೇವಸ್ಥಾನದೊಳಗೆ ಸೇರಿಸದಿರುವುದು, ಮತ್ತೆ ಕೆಲವರನ್ನು ಗುಡಿಯೊಳಗೆ ಹತ್ತು ಮಾರು ಮಾತ್ರ ಬರಗೊಡಿಸುವುದು, ದೇವಸ್ಥಾನದೊಳಗೆ ಬರಗೊಡಿಸಬೇಕೇ ಬೇಡವೇ ಎಂಬ ಚರ್ಚೆ ನಡೆಸುವುದು... ಕೆಲಸಕ್ಕೂ ಬಾರದ, ಶ್ರೇಯಸ್ಕರವೂ ಅಲ್ಲದ ನೂರಾರು ಆಚಾರ, ವ್ಯವಹಾರಗಳ ಸಮಷ್ಟಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ. ಉಪನಿಷತ್ತು, ಭಗವದ್ಗೀತೆ ಮತ್ತು ಮಹಾವಿಭೂತಿಗಳು ಸಾರಿದ, ಸಾರುತ್ತಿರುವ ಅಮೃತ ಸಂದೇಶ ಅರಣ್ಯರೋದನವಾಗಿದೆ...’

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಕುವೆಂಪು ಅವರು ಮಾಡಿದ ‘ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ’ ಭಾಷಣದಲ್ಲಿ ಈ ಮೇಲಿನ ಮಾತುಗಳಿವೆ. ನಿರಂಕುಶಮತಿಗಳಾದ ಜೀವಪರ ಕಾಳಜಿಯುಳ್ಳ ಮಂಡ್ಯದ ಜನ ಕುವೆಂಪು ಅವರ ‘ವಿಚಾರಕ್ರಾಂತಿಗೆ ಆಹ್ವಾನ’ ಕೊಡುತ್ತಾ ಈ ದಿನಗಳಲ್ಲಿ ಮುಂದೆ ಸಾಗುತ್ತಿದ್ದಾರೆ. ಕೇಸರೀಕರಣವನ್ನು ಆವಾಹಿಸಿಕೊಳ್ಳಲಾರಂಭಿಸಿದ್ದ ಸಕ್ಕರೆ ನೆಲದಲ್ಲಿ ಬಹುಸಂಖ್ಯಾತರು ಕೋಮುವಾದದ ವಿರುದ್ಧ ಧ್ವನಿ ಎತ್ತಿದ್ದಾರೆ. ಕೋಮುವಾದವನ್ನು ಹಿಮ್ಮೆಟ್ಟಿಸುವ ಕೋಲ್ಮಿಂಚು ಹೊಳೆದಿದೆ. ಮಂಡ್ಯದಲ್ಲಿ ತಿಂಗಳಿಂದೀಚೆಗೆ ನಡೆದ ಈ ಪ್ರಯೋಗವು ಕೋಮುವಾದದ ಅಪಾಯಕ್ಕೆ ಸಿಲುಕಿರುವ ಇಂಡಿಯಾಕ್ಕೆ ಪರ್ಯಾಯ ಮಾದರಿಯೊಂದನ್ನು ಕಟ್ಟಿದಂತಿದೆ...

ಮರಾಠ ಪೇಶ್ವೆಗಳು ಶೃಂಗೇರಿ ಶಾರದಾ ಪೀಠದ ಮೇಲೆ ದಾಳಿ ಮಾಡಿದಾಗ, ಈ ಅಪ್ಪಟ ವೈದಿಕ ಮಠಕ್ಕೆ ರಕ್ಷಣೆ ಕೊಟ್ಟಿದ್ದ, ಬ್ರಿಟಿಷರ ವಿರುದ್ಧ ಹೋರಾಡುತ್ತಲೇ ಮಡಿದ ‘ಮೈಸೂರು ಹುಲಿ’ ಟಿಪ್ಪು ಸುಲ್ತಾನರ ಕರ್ಮಭೂಮಿ ಇದು. ಕುವೆಂಪು ಅವರ ವೈಚಾರಿಕ ಪ್ರಭೆಯನ್ನು ಮೈಗೂಡಿಸಿಕೊಂಡಿದ್ದ ಮಂಡ್ಯವು ರೈತ, ದಲಿತ, ಕಾರ್ಮಿಕ ಹೋರಾಟಗಳಿಗೂ ನೆಲೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಘಟ್ಟ ಹತ್ತಿದ ಆರ್‌ಎಸ್‌ಎಸ್, ಬಜರಂಗದಳ ಸಂಘಟನೆಗಳು ಇಲ್ಲಿ ತಮ್ಮ ಚಿಂತನೆಗಳನ್ನು ಪಸರಿಸಲಾರಂಭಿಸಿದವು. ಹಳೆ ಮೈಸೂರು ಭಾಗದಲ್ಲಿ ತಮ್ಮ ಬೇರುಗಳನ್ನು ಊರಿ, ರಾಜಕೀಯ ಬೆಳೆ ತೆಗೆಯುವುದು ಇದರ ಹಿಂದಿನ ಉದ್ದೇಶ.

ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆಗೆ ಮುನ್ನ ಆ ಸಂಬಂಧ ಮಂಡ್ಯದಲ್ಲಿ ತಾಲೀಮು ನಡೆಸಲಾಗಿತ್ತು ಎಂದು ತನಿಖಾ ವರದಿ ಹೇಳಿತ್ತು. ಆನಂತರದ ವರ್ಷಗಳಲ್ಲಿ ಹನುಮ ಜಯಂತಿಯ ‘ಸಂಭ್ರಮ’ ಹೆಚ್ಚಿತು. ಹಿಜಾಬ್ ವಿವಾದ ಅಂತರರಾಷ್ಟ್ರೀಯ ಮಟ್ಟದಲ್ಲಿ ಸದ್ದು ಮಾಡಿದ್ದು ಇಲ್ಲಿಂದಲೇ. ಹಿಜಾಬ್ ವಿರುದ್ಧದ ಹೋರಾಟದ ವ್ಯಾಪ್ತಿಯನ್ನು ವಿಸ್ತರಿಸಲು ಮುಂದಾದ ಕೆಲ ಸಂಘಟನೆಗಳು ಸಾವಿರಾರು ಕೇಸರಿ ಶಾಲುಗಳನ್ನು ತರಿಸಿ ವಿದ್ಯಾರ್ಥಿಗಳಿಗೆ ಹಂಚಿದವು. ಇದು ಉನ್ಮಾದ ಸೃಷ್ಟಿಸಿತು.

ಕೆರಗೋಡಿನ ಹನುಮಧ್ವಜ ವಿವಾದವನ್ನು ಅಂತರರಾಷ್ಟ್ರೀಯ ಮಟ್ಟದ ಸಮಸ್ಯೆಯಾಗಿ ಬಿಂಬಿಸುವ ಯತ್ನವನ್ನು ಕೆಲ ಸಂಘಟನೆಗಳು ಮಾಡಿದವು. ಒಪ್ಪಂದಕ್ಕೆ ವಿರುದ್ಧವಾಗಿ ಹಾರಿಸಿದ್ದ ಹನುಮಧ್ವಜವನ್ನು ಇಳಿಸಿದ ಜಿಲ್ಲಾಡಳಿತವು ರಾಷ್ಟ್ರಧ್ವಜವನ್ನು ಹಾರಿಸಿತು. ಅದನ್ನು ಪಾಕಿಸ್ತಾನದ ಧ್ವಜವೆಂದು ಬಿಜೆಪಿಯ ಕೆಲ ನಾಯಕರು ಬಣ್ಣಿಸಿದರು. ಬಿಜೆಪಿ ಜತೆಗೆ ಇತ್ತೀಚೆಗೆ ಕೂಡಿಕೆ ಮಾಡಿಕೊಂಡ ಜೆಡಿಎಸ್ ನಾಯಕ ಎಚ್‌.ಡಿ.ಕುಮಾರಸ್ವಾಮಿ ಇದಕ್ಕೆ ಕುಮ್ಮಕ್ಕು ಕೊಟ್ಟರು. ಕೆರಗೋಡಿಗೆ ಹೋದ ಅವರು, ಕೇಸರಿ ಶಾಲು ಧರಿಸಿ ಸರ್ಕಾರವನ್ನು ಟೀಕಿಸಿದರು. ದಳಪತಿಗಳ ಬೆಂಬಲ ಸಿಕ್ಕಿದ್ದು, ಸಂಘ ಪರಿವಾರದ ಸಂಘಟನೆಗಳಿಗೆ ಸೀರುಂಡೆ ದಕ್ಕಿದಂತಾಯಿತು. ಮಂಡ್ಯ ಬಂದ್‌ಗೆ ಕರೆ ಕೊಟ್ಟ ಬಿಜೆಪಿ, ಜೆಡಿಎಸ್ ಹಾಗೂ ಕೆಲ ಸಂಘಟನೆಗಳು ಜಿಲ್ಲೆಯ ಕೇಸರೀಕರಣಕ್ಕೆ ಮುಂದಾದವು. ಒಂದು ಲಕ್ಷಕ್ಕೂ ಹೆಚ್ಚು ಕೇಸರಿ ಬಾವುಟಗಳನ್ನು ತರಿಸಿ, ಮನೆಮನೆಯಲ್ಲಿ ಧ್ವಜ ಹಾರಿಸುವ ಅಭಿಯಾನ ಶುರುಮಾಡಿದವು. ಆದರೆ, ಅದು ಫಲ ಕೊಡಲಿಲ್ಲ.

ಸಮಾಜದ ಬಹುಸಂಖ್ಯಾತರ ಮೌನವನ್ನು ಕೆಲವು ಸಂಘಟನೆಗಳು ದುರ್ಬಳಕೆ ಮಾಡಿಕೊಳ್ಳುತ್ತಲೇ ಬಂದಿವೆ. ಇಲ್ಲಿ ಬಹುಸಂಖ್ಯಾತರು ಮೌನ ಮುರಿದರು. ಸೌಹಾರ್ದದ ನೆಲದಲ್ಲಿ ಕೋಮುವಾದ ಹರಡಲು ಬಿಡೆವು ಎಂದು ಘೋಷಿಸಿದರು. ‘ಹಿಂಸೆ-ದ್ವೇಷ’ದ ದಾರಿಗೆ ಶಾಂತಿ-ಸಾಮರಸ್ಯದ ಗೋಡೆ ಕಟ್ಟಿದರು. ಸುನಂದಾ ಜಯರಾಂ, ಗುರುಪ್ರಸಾದ್ ಕೆರಗೋಡು, ಜಗದೀಶ ಕೊಪ್ಪ, ಕೆ.ಬೋರಯ್ಯ, ಸಂತೋಷ್ ಕೌಲಗಿ, ಯಶವಂತ್, ಸಿ.ಕುಮಾರಿ, ಎಂ.ಬಿ.ನಾಗಣ್ಣ ಗೌಡ ಸೇರಿ ಹಲವರು ಜತೆಗೂಡಿದರು. ಕುವೆಂಪು ವಿಚಾರಧಾರೆಗಳನ್ನು ಸರಳವಾಗಿ ಪರಿಚಯಿಸುವ ಪುಸ್ತಕಗಳನ್ನು ಶಾಲಾ ಕಾಲೇಜುಗಳಲ್ಲಿ ಹಂಚಿ ಜಾಗೃತಿ ಮೂಡಿಸಲು ಮುಂದಾದರು. ವಿಚಾರಸಂಕಿರಣ, ಶಾಂತಿಯುತ ಧರಣಿಯ ದಾರಿ ಹಿಡಿದರು. ಜೀವಪರ ಕಾಳಜಿಯುಳ್ಳವರ ಧ್ವನಿಗೆ ಬಲ ಸಿಕ್ಕತೊಡಗಿತು. ದ್ವೇಷದ ಮಾರುಕಟ್ಟೆಯಲ್ಲಿ ಪ್ರೀತಿಯ ಅಂಗಡಿಗೆ ಬರುವವರ ಸಂಖ್ಯೆ ಹೆಚ್ಚಾಗತೊಡಗಿತು.

‘ಕುಮಾರಸ್ವಾಮಿ ಕೇಸರಿ ಶಾಲು ಹಾಕಿದ್ದು ಸರಿಯಲ್ಲ’ ಎಂದು ಎಚ್‌.ಡಿ.ದೇವೇಗೌಡರು ಹೇಳಿದ್ದೇ ತಡ, ಜೆಡಿಎಸ್‌ನವರಲ್ಲಿ ನಡುಕ ಶುರುವಾಯಿತು. ಬಂದ್‌ನಿಂದ ಜೆಡಿಎಸ್ ಹಿಂದೆ ಸರಿಯಿತು. ಘೋಷಿತ ಬಂದ್ ನಡೆಯಲೇ ಇಲ್ಲ. ಇಡೀ ಇಂಡಿಯಾವನ್ನು ಕಂಗೆಡಿಸಿರುವ ಕೋಮುವಾದದ ವಿಸ್ತರಣೆಗೆ ತಡೆ ಹಾಕುವ ಸಣ್ಣದೊಂದು ಬೆಳಕಿಂಡಿ ಇಲ್ಲಿಂದಲೇ ತೆರೆದುಕೊಂಡಂತಿದೆ.




ಧ್ವಜವೇ ವಿವಾದವಾದ ಹೊತ್ತಿನೊಳಗೆ, ಹಳೆ ಮೈಸೂರು ಭಾಗದಲ್ಲಿ ಸ್ವಾತಂತ್ರ್ಯದ ಕಿಚ್ಚು ಹಚ್ಚಿದ್ದ ಶಿವಪುರ ಧ್ವಜ ಸತ್ಯಾಗ್ರಹವನ್ನು ಮರೆಯಲಾದೀತೆ? ಬ್ರಿಟಿಷರ ವಿರುದ್ಧ ಹೋರಾಟಗಳೇ ಕಾಣದಂತಿದ್ದ ಈ ಭಾಗದಲ್ಲಿ ಕಾಂಗ್ರೆಸ್ ಪಕ್ಷ ಮಹಾಧಿವೇಶನ ನಡೆಸಲು ಮುಂದಾಯಿತು. ಅಂದು ಮೈಸೂರು ಜಿಲ್ಲೆಯ ಭಾಗವಾಗಿದ್ದ ಮಂಡ್ಯದ ಶಿವಪುರದಲ್ಲಿ ಅಧಿವೇಶನಕ್ಕೆ ಜಾಗ ನಿಗದಿ ಮಾಡಲಾಯಿತು. ‘ಬ್ರಿಟಿಷರ ವಿರುದ್ಧದ ಯಾವುದೇ ಕಾರ್ಯಕ್ರಮ ಆಯೋಜಿಸುವುದು ಮತ್ತು ಧ್ವಜ ಹಾರಿಸುವುದು ಕೂಡದು’ ಎಂದು ದಿವಾನ್ ಮಿರ್ಜಾ ಇಸ್ಮಾಯಿಲ್ ಆದೇಶಿಸಿದರು. ಮೂರು ದಿನಗಳ ಕಾಲ ಅಧಿವೇಶನ ನಡೆಯಿತು. ದಿವಾನರ ಆದೇಶ ಉಲ್ಲಂಘಿಸಿ ಹತ್ತು ಸಾವಿರಕ್ಕೂ ಹೆಚ್ಚು ಜನ ರಾಷ್ಟ್ರಧ್ವಜ ಹಾರಿಸಿ, ಸ್ವಾಭಿಮಾನದ ನಿನಾದ ಮೊಳಗಿಸಿದರು. ಅಂತಹ ನೆಲದಲ್ಲಿ ಈಗ ಕೇಸರಿ ಧ್ವಜದ ನಾಟಕವೇ ನಡೆದುಹೋಗಿದ್ದು ವಿಪರ್ಯಾಸ.

ಕೆ.ವಿ.ಶಂಕರೇಗೌಡ, ಎಚ್‌.ಟಿ.ಕೃಷ್ಣಪ್ಪ, ಎಸ್‌.ಎಂ.ಕೃಷ್ಣ, ಜಿ.ಮಾದೇಗೌಡ, ಕೆ.ಎಸ್‌.ಪುಟ್ಟಣ್ಣಯ್ಯ ಅವರಂತಹ ರಾಜಕೀಯ ನಾಯಕರು ನಾಡಿಗೆ ಹಲವು ಮೇಲ್ಪಂಕ್ತಿಗಳನ್ನು ಹಾಕಿಕೊಟ್ಟವರು. ಮಂಡ್ಯದ ಮಣ್ಣಿನಲ್ಲಿ ಸಕ್ಕರೆತನವೇ ತುಂಬಿದೆ. ನಾಡಿಗೆ ‘ಪುಣ್ಯಕೋಟಿ’ ಎಂಬ ಗೋವಿನ ಹಾಡನ್ನು ಕೊಟ್ಟವರು ಮದ್ದೂರಿನ ಕವಿ. ಕೃಷ್ಣನನ್ನು ಕಣ್ತುಂಬಿಕೊಳ್ಳುವಂತೆ ಅಕ್ಷರಗಳಲ್ಲಿ ಕಟ್ಟಿಕೊಟ್ಟ ಪು.ತಿ.ನರಸಿಂಹಾಚಾರ್, ಪ್ರೇಮವನ್ನೇ ನದಿಯಾಗಿ ಹರಿಸಿದ ಕೆ.ಎಸ್‌.ನರಸಿಂಹಸ್ವಾಮಿ, ಕನ್ನಡ ಶಬ್ದ ಭಂಡಾರದ ಸೊಬಗು ತೋರಿಸಿದ ಜಿ.ವೆಂಕಟಸುಬ್ಬಯ್ಯ, ವೈಚಾರಿಕತೆಯ ಬೆಳಕು ಹರಿಸಿದ ಎಚ್‌.ಎಲ್‌. ಕೇಶವಮೂರ್ತಿ ಇಲ್ಲಿಯದೇ ನೀರು ಕುಡಿದು ಬೆಳೆದವರು. ಇಂತಹ ವಿಶಿಷ್ಟ ಭೂಮಿಯಲ್ಲಿ ಕೇಸರಿ ಬೆಳೆ ತೆಗೆಯುವ ಪ್ರಯತ್ನ ಸದ್ಯಕ್ಕಂತೂ ವಿಫಲವಾಗಿದೆ. ಬಹುಸಂಖ್ಯಾತರು ಕೋಮುವಾದವನ್ನು ಹಿಮ್ಮೆಟ್ಟಿಸಿದ್ದಾರೆ.

ಈ ಬೆಳವಣಿಗೆಯ ಮಧ್ಯೆಯೇ, ಮಂಗಳೂರಿನ ಸೇಂಟ್ ಜೆರೋಸಾ ಶಾಲೆಯಲ್ಲಿ ಶಿಕ್ಷಕಿಯೊಬ್ಬರು, ಕವಿ ರವೀಂದ್ರನಾಥ ಟ್ಯಾಗೋರರ ಪದ್ಯವನ್ನು ಬೋಧಿಸಿದ್ದಕ್ಕೆ ಯಾವುದೇ ನೋಟಿಸ್ ನೀಡದೆ, ವಿಚಾರಣೆ ನಡೆಸದೆ ಅಮಾನತು ಮಾಡಲಾಗಿದೆ. ‘ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ’ ಎಂದು ಸಾರಿದ ಕುವೆಂಪು, ‘ದೇವರು ಸತ್ತ’ ಪುಸ್ತಕ ಬರೆದ ವಸುದೇವ ಭೂಪಾಲಂ ಇಂದು ಇದ್ದಿದ್ದರೆ, ಅವರು ಎಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತಿತ್ತು ಎಂಬುದನ್ನು ಊಹಿಸುವುದೂ ಕಷ್ಟ. ದ್ವೇಷವನ್ನೇ ಸಂಭ್ರಮಿಸುತ್ತಿರುವ ದುರಿತ ಕಾಲದೊಳಗೆ ಬುದ್ಧ, ಬಸವಣ್ಣ, ಗಾಂಧಿಯವರ ಶಾಂತಿಮಂತ್ರ, ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ಮಾತುಗಳು ಕರ್ಕಶ ಎನಿಸುವಂತೆ ಮಾಡಲಾಗುತ್ತಿದೆ. ಮೋದಿಯವರ ಭಜನೆಯೊಂದಿದ್ದರೆ ಬಜ್ಜಿ ಮಾರಿಯಾದರೂ ಜೀವಿಸಬಹುದೆಂಬ ಭ್ರಮೆಗಳನ್ನು ತುಂಬಲಾಗುತ್ತಿದೆ. ‘ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ...’ ಎಂಬ ಕುವೆಂಪು ಅವರ ಮಾತಿಗಿಂತ ‘ಮಸೀದಿ ಕೆಡವಿ ಮಂದಿರ ಕಟ್ಟುವ’ ಎಂಬಂತಹ ಮಾತುಗಳೇ ಹಿತವಾಗುತ್ತಿರುವುದು ಸಮಾಜಕ್ಕೆ, ಭವಿಷ್ಯಕ್ಕೆ ಅಹಿತಕರವಂತೂ ಹೌದು.

ಚುರುಮುರಿ



ಪ್ರೀತಿ ಇಲ್ಲದ ಮೇಲೆ...

• ಬಿ.ಎನ್.ಮಲ್ಲೇಶ್

‘ಪ್ರೀತಿ ಇಲ್ಲದ ಮೇಲೆ ಮಂಡಕ್ಕಿ ಅರಳೀತು ಹೇಗೆ, ಚಾ ‘ಘಂ’ ಅಂದೀತು ಹೇಗೆ... ಮಂಜಮ್ಮ ಒಳ್ಳೆ ಖಡಕ್ ಚಾ ಹಾಕು’ ಎಂದ ಗುಡ್ಡೆ.

‘ಉದ್ರಿ ಮಾನಭಂಗ, ನಗದು ಪ್ರೇಮಸಂಗ...’ ಎಂದಳು ಮಂಜಮ್ಮ.

‘ಏನು, ಪ್ರೇಮಸಂಗನಾ? ಇದ್ಯಾವಾಗಿಂದ?’

‘ರೊಕ್ಕ ಕೊಟ್ಟು ಪ್ರೀತಿಯಿಂದ ಚಾ ಕುಡುದು ನೋಡು, ಆಗ ಅದರ ರುಚಿನೇ ಬೇರೆ’.

‘ಹೌದಾ? ನನ್ನತ್ರ ರೊಕ್ಕಿಲ್ಲ. ಅಲ್ಲ, ನಮ್ ಸರ್ಕಾರದ ಗ್ಯಾರಂಟಿ ಎಲ್ಲ ತಗಂಡು ನಮಗೇ ಚಾ ಇಲ್ಲ ಅಂದ್ರೆ ಹೆಂಗೆ? ಇವತ್ತು ಸಿದ್ರಾಮಣ್ಣಂಗೇಳಿ ಬಜೆಟ್‌ನಾಗೆ ಚಾಪುಡಿ, ಸಕ್ಕರಿ ಇದಕ್ಕೆಲ್ಲ ಸಬ್ಸಿಡಿ ಕೊಡಿಸ್ತೀನಿ, ಎಲ್ರಿಗೂ ಚಾ ಕೊಡು’ ಗುಡ್ಡೆ ನಕ್ಕ.

‘ಚಾಕ್ಕೆ ಸಬ್ಸಿಡಿ ಕೊಟ್ರೂ ಕೊಡಬೋದು. ಆದ್ರೆ ಗುಂಡುಪ್ರಿಯರಿಗೆ ಬರೆ ಹಾಕೋದು ಗ್ಯಾರಂಟಿ’ ಎಂದ ದುಬ್ಬೀರ.

‘ಸರ್ಕಾರದ ಆರನೇ ಗ್ಯಾರಂಟಿ ಅದು, ರೇಟ್ ಏರಿಸ್ತಾನೇ ಇರೋದು. ನಮ್ ರೊಕ್ಕ ಎತ್ತಿ ಈ ಮಂಜಮ್ಮನಂತೋರಿಗೆ ಕೊಡೋದು. ನಾವು ಗುಂಡು ಹಾಕಿದ್ರೇನೇ ನಿನ್ ಹೋಟ್ಲು ನಡೆಯೋದು ತಿಳ್ಕ’ ಗುಡ್ಡೆಗೆ ಕೋಪ.

‘ಹೌದೌದು, ಪುಕ್ಸಟ್ಟೆ ಚಾ ಕುಡಿದು ಕವಿತಾ ಹೇಳಿದಂಗಲ್ಲ ಹೋಟ್ಲು ನಡ್ಸೋದು’ ಮಂಜಮ್ಮಗೂ ಸಿಟ್ಟು ಬಂತು.

‘ನಮ್ಗೂ ಟೈಂ ಬರ್ತತಿ, ನೋಡ್ಕಂತೀವಿ’ ಗುಡ್ಡೆ ಬೆದರಿಕೆ.

‘ಆ ಟೈಂನಿಂದಾನೇ ಅಲ್ವಾ ನಿನ್ ಮದ್ವಿ ಆಗಿದ್ದು. ಎರಡು ವರ್ಷದ ಹಿಂದೆ ವ್ಯಾಲೆಂಟೈನ್ಸ್ ಡೇ ದಿನ ಬಸ್‌ಸ್ಟ್ಯಾಂಡಿನಾಗೆ ಯಾವುದೋ ಹುಡುಗೀನ, ಅದೇ ಪಮ್ಮಕ್ಕನ್ನ ಟೈಂ ಕೇಳೋಕೋದಾಗ ಅದ್ಯಾರೋ ಸೇನೆ ಸಂಘಟನೆಯೋರು ನಿಮ್ಮನ್ನ ಪ್ರೇಮಿಗಳು ಅಂತ ಹಿಡಿದು ಡುಂ ಟಕ ಅಂತ ಅಲ್ಲೇ ನಿಮ್ಮ ಮದುವಿ ಮಾಡ್ಸಿದ್ದು?’ ತೆಪರೇಸಿ ಕಿಸಕ್ಕೆಂದ.

‘ಅದನ್ಯಾಕೆ ನೆನಸ್ತೀರಿ ಸುಮ್ಕಿರ್ರಲೆ...’ ಎಂದ ಗುಡ್ಡೆ.

‘ಹೋಗ್ಲಿ, ನಿನ್ನೆ ರಾತ್ರಿ ಗುಂಡು ಹಾಕಿ ಮನೆಗೆ ಹೋದಾಗ ಪಮ್ಮಕ್ಕ ಬಾಗಿಲು ತೆಗೆದ್ಲಾ? ಪ್ರೀತಿ ಇಲ್ಲದ ಮೇಲೆ ಚಾಪಿ ಹಾಸೀತು ಹೇಗೆ, ದಿಂಬು ಸಿಕ್ಕೀತು ಹೇಗೆ...’ ಎಂದಳು ಮಂಜಮ್ಮ ರಾಗವಾಗಿ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಶಾರ್ಕ್ ಶಿಕಾರಿ: ತಡೆಗೆ ಬೇಕು ರಹದಾರಿ

ಈವರೆಗೆ ಆರ್ಥಿಕವಾಗಿ ಹಿಂದುಳಿದವರ ಸಮುದ್ರ ಆಹಾರವೆನಿಸಿದ್ದ ಶಾರ್ಕ್, ಈಗ ಸ್ಥಿತಿವಂತರ ಆಹಾರವಾಗಿ ಬದಲಾಗುತ್ತಿರುವುದು ಪರಿಸರಾಸಕ್ತರ ಆತಂಕಕ್ಕೆ ಕಾರಣವಾಗಿದೆ

• ಗುರುರಾಜ್ ಎಸ್. ದಾವಣಗೆರೆ

ರಾಜ್ಯದ ಅನೇಕ ಪಟ್ಟಣ, ಅರೆಪಟ್ಟಣ ಮತ್ತು ಹೆದ್ದಾರಿ ಬದಿಯ ಹೋಟೆಲ್‌ಗಳ ಮುಂದೆ ‘ಊಟ ತಯಾರಿದೆ’, ‘ಮುದ್ದೆ ಊಟ ದೊರಕುತ್ತದೆ’, ‘ಆಂಧ್ರ ಸ್ಟೈಲ್’, ‘ನಾಟಿ ಸ್ಟೈಲ್ ಊಟ ತಯಾರಿದೆ’ ಎಂಬಂಥ ಬರಹಗಳ ಬೋರ್ಡ್‌ಗಳನ್ನು ಕಾಣುತ್ತಿರುತ್ತೇವೆ. ಹಾಗೆಯೇ ದೇಶದಲ್ಲಿ ಕರಾವಳಿ ಇರುವ ರಾಜ್ಯಗಳ ಸಮುದ್ರ ತಟದ ಹೋಟೆಲ್‌ಗಳ ಮುಂದೆ ‘ಬೇಬಿ ಶಾರ್ಕ್ ಊಟ ದೊರಕುತ್ತದೆ’ ಎಂಬ ಬೋರ್ಡ್‌ಗಳು ರಾರಾಜಿಸುತ್ತಿವೆ.

ಇದರಲ್ಲೇನು ವಿಶೇಷ ಅಂತೀರಾ? ತೀರಾ ಇತ್ತೀಚಿನವರೆಗೂ ಬರೀ ಮೀನುಗಾರ ಕುಟುಂಬಗಳ ಅಡುಗೆ ಮನೆಗಳಲ್ಲಿ ಆಹಾರವಾಗಿ ತಯಾರಾಗುತ್ತಿದ್ದ ಶಾರ್ಕ್‌ಗಳೀಗ ರೆಸ್ಟೋರೆಂಟ್‌ಗಳ ಮೆನ್ಯೂ ಕಾರ್ಡಿನಲ್ಲೂ ಕಾಣಿಸಿಕೊಳ್ಳುತ್ತಿವೆ. ಸಾಂಪ್ರದಾಯಿಕ ಆಹಾರಶೈಲಿಯ ಭಾಗವಾಗಿದ್ದ ಶಾರ್ಕ್ ಮಾಂಸ ಈಗ ಮುಕ್ತ ಮಾರುಕಟ್ಟೆಯನ್ನು ಪ್ರವೇಶಿಸುತ್ತಿದೆ. ಕರಾವಳಿ ಇರುವ 10 ರಾಜ್ಯಗಳ ಸಮುದ್ರತಟದ ಹೋಟೆಲ್‌ಗಳು ಆನ್‌ಲೈನ್‌ನಲ್ಲೂ ಶಾರ್ಕ್ ಮಾಂಸ ಮಾರಾಟ ಮಾಡುತ್ತಿವೆ.

ಹಿಂದಿನ 50 ವರ್ಷಗಳಲ್ಲಿ ವಿಶ್ವದ ಶೇಕಡ 70ರಷ್ಟು ಶಾರ್ಕ್‌ಗಳ ಸಂಖ್ಯೆ ಕುಸಿದಿರುವುದು ಸಂರಕ್ಷಣಾ ತಜ್ಞರ ನಿದ್ದೆಗೆಡಿಸಿರುವ ಬೆನ್ನಲ್ಲೇ ಶಾರ್ಕ್‌ಗಳು ಹೋಟೆಲ್‌ಗಳಲ್ಲಿ ಮಾಂಸದ ಖಾದ್ಯವಾಗಿ ಮಾರಾಟವಾಗುವುದು ಹೊಸ ಪಾರಿಸರಿಕ ಅಸಮತೋಲನಕ್ಕೆ ಕಾರಣವಾಗುತ್ತದೆ ಎಂಬ ಆತಂಕ ಎದುರಾಗಿದೆ. ನಮ್ಮಲ್ಲಿ ಕೆಲವು ಪ್ರಭೇದದ ಶಾರ್ಕ್‌ಗಳ ಮಾಂಸ ಮಾರಾಟ ನಿಷೇಧ ಇರುವಾಗಲೇ ಶಾರ್ಕ್‌ಗಳಿಂದ ತಯಾರಾದ ಆಹಾರ ರಾಜಾರೋಷವಾಗಿ ಮಾರಾಟವಾಗುತ್ತಿರುವುದು ಪರಿಸರಾಸಕ್ತರಲ್ಲಿ ಗೊಂದಲ ಮೂಡಿಸಿದೆ.

ನಮ್ಮಲ್ಲಿ 170 ಬಗೆಯ ಶಾರ್ಕ್ ಪ್ರಭೇದಗಳಿದ್ದು ಶೇಕಡ 11ರಷ್ಟು ಈಗಾಗಲೇ ಅಳಿವಿನಂಚಿಗೆ ಸರಿದಿವೆ ಎಂದು ಅಂತರರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟ (ಐಯುಸಿಎನ್) ವರದಿ ಮಾಡಿದೆ. ಇದುವರೆಗೂ ಆರ್ಥಿಕವಾಗಿ ಹಿಂದುಳಿದ ಸಮುದಾಯಗಳ ಸಮುದ್ರ ಆಹಾರವೆನಿಸಿದ್ದ ಶಾರ್ಕ್ ಈಗ ಸ್ಥಿತಿವಂತರ ಆಹಾರವಾಗಿ ಬದಲಾಗುತ್ತಿರುವುದು ಸಂರಕ್ಷಣಾ ಕ್ರಮಗಳಿಗೆ ತೀವ್ರ ಸವಾಲು ಒಡ್ಡಲಿದೆ. ಸಮೀಕ್ಷೆಯೊಂದರ ಪ್ರಕಾರ, ವಾರ್ಷಿಕ 250 ಟನ್ ಶಾರ್ಕ್ ಮಾಂಸ ಮಾರಾಟವಾಗುವ ಸಾಧ್ಯತೆಯಿದೆ. ಸುಮಾರು 3 ಕಿಲೊ ಗ್ರಾಂ ತೂಗುವ ಶಾರ್ಕ್ ಮರಿಗಳ ಮಾಂಸ, ತಿನ್ನುವವರ ಬಾಯಲ್ಲಿ ನೀರೂರಿಸುವುದರಿಂದ ತಿಂಗಳಿಗೆ ಸುಮಾರು 20 ಸಾವಿರ ಬೇಬಿ ಶಾರ್ಕ್‌ಗಳು ಭೋಜನಪ್ರಿಯರ ಹೊಟ್ಟೆ ಸೇರಲಿವೆ.

ಮೀನು ಶಿಕಾರಿ ಮಾಡುವಾಗ ಉಪ ಉತ್ಪನ್ನವಾಗಿ ದೊರಕುವ ಶಾರ್ಕ್‌ಗಳನ್ನು ಮೀನುಗಾರರು ತಾವು ಮಾತ್ರ ತಿನ್ನುತ್ತಿದ್ದರು. ಈಗ ಪ್ರವಾಸಿಗರಂತೂ ಶಾರ್ಕ್ ಮಾಂಸ ಬಡಿಸುವ ಐಷಾರಾಮಿ ಹೋಟೆಲ್‌ಗಳಲ್ಲಿ ಮುಂಗಡವಾಗಿ ಟೇಬಲ್ ಬುಕ್ ಮಾಡುತ್ತಿದ್ದಾರೆ.

ಅಶೋಕ ವಿಶ್ವವಿದ್ಯಾಲಯದ ಪರಿಸರ ವಿಭಾಗದ ಅಧ್ಯಾಪಕಿ ದಿವ್ಯ ಕಾರ್ನಾಡ್, ದೊಡ್ಡ ದೊಡ್ಡ ಹೋಟೆಲ್‌ಗಳ ‘ಮೆನ್ಯೂ ಕಾರ್ಡ್’ಗಳಲ್ಲಿ ಶಾರ್ಕ್ ಮಾಂಸ ಕಾಣಿಸಿಕೊಂಡಿರುವುದನ್ನು ಗಂಭೀರವಾಗಿ ಅಭ್ಯಸಿಸುತ್ತಿದ್ದಾರೆ. ‘ನಾವು ಈ ಕೂಡಲೇ ಮೀನುಗಾರರನ್ನು ಕಂಡು, ನೀವು ಶಾರ್ಕ್‌ಗಳನ್ನು ಹೋಟೆಲ್‌ನವರಿಗೆ ಮಾರಕೂಡದು ಎಂದು ಹೇಳುವುದು ಸರಿಯಲ್ಲ. ಅದರ ಬದಲಿಗೆ ಅವರು ಏನು ಮಾಡಬಹುದು ಎಂಬುದನ್ನು ಹೇಳಿದರೆ ಪರಿಸ್ಥಿತಿ ಸುಧಾರಿಸಬಹುದು’ ಎನ್ನುತ್ತಾರೆ. ಹಣವಂತರು ‘ನಾವು ಅದನ್ನೇ ತಿನ್ನಲು ಬಯಸುತ್ತೇವೆ, ಬೇರೆಯದು ಬೇಡ’ ಎಂದು ಹಟ ಹಿಡಿದರೆ ಅದು ದೊಡ್ಡ ಸಮಸ್ಯೆ ಆಗುತ್ತದೆ’ ಎನ್ನುತ್ತಾರೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಅಡಿ ಹೆಸರಿಸಿರುವ ಪ್ರಭೇದಗಳನ್ನು ಹೊರತುಪಡಿಸಿ ಬಹಳ ಹಿಂದಿನಿಂದಲೂ ಕರಾವಳಿ ಪ್ರದೇಶದ ಜನ ಶಾರ್ಕ್‌ಗಳನ್ನು ತಿನ್ನುತ್ತಿದ್ದಾರೆ. ಸಂಶೋಧಕರು ಗೋವಾ, ತಮಿಳುನಾಡು, ಮಹಾರಾಷ್ಟ್ರ ಸೇರಿದಂತೆ ಏಳು ರಾಜ್ಯಗಳ 292 ರೆಸ್ಟೋರೆಂಟ್‌ಗಳ ಮೆನ್ಯೂ ಕಾರ್ಡ್ ಪರಿಶೀಲಿಸಿದಾಗ, ಗೋವಾದಲ್ಲಿ ಅತಿ ಹೆಚ್ಚು ‘ಎಲಾಸ್ಮೋಬ್ರಾಂಚ್’ (ಮೀನು, ಸ್ಟಿಂಗ್ ರೇ ಮತ್ತು ಶಾರ್ಕ್) ಎಂಬ ಗುಂಪಿಗೆ ಸೇರಿದ ಶಾರ್ಕ್ ಮಾಂಸ ಮಾರಾಟವಾಗುವುದು ಕಂಡುಬಂದಿದೆ.



ವಿದೇಶಿ ಪ್ರವಾಸಿಗರು ‘ಬೇಬಿ ಶಾರ್ಕ್‌ಗಳ ಮಾಂಸದ ರುಚಿ ಅನನ್ಯ ಮತ್ತು ಇದು ನಮ್ಮದೇಶದಲ್ಲಿ ಸುಲಭವಾಗಿ ದೊರಕದ್ದರಿಂದ ಇಲ್ಲಿ ಆಸೆಪಟ್ಟು ತಿನ್ನುತ್ತೇವೆ’ ಎನ್ನುತ್ತಾರೆ. ಜನ ಇತ್ತೀಚೆಗೆ ಪ್ರತಿ ಆಹಾರದಲ್ಲೂ ಪೋಷಕಾಂಶ ಹುಡುಕುವುದನ್ನು ರೂಢಿಸಿಕೊಂಡಿದ್ದಾರೆ. ಶಾರ್ಕ್ ಮಾಂಸ ತಿಂದರೆ ತಾಯಿಯ ಎದೆ ಹಾಲು ವೃದ್ಧಿಸುತ್ತದೆ, ಇತರ ಪೋಷಕಾಂಶಗಳು ದೊರಕುತ್ತವೆ ಎಂಬ ಗ್ರಹಿಕೆಯಿಂದ ಅದರ ಮಾಂಸ ಸೇವನೆ ಹೆಚ್ಚಾಗುತ್ತಿದೆ.

ಇದಕ್ಕಿಂತ ದೊಡ್ಡ ಅಪಾಯವಾದ ‘ಶಾರ್ಕ್ ಫಿನ್ನಿಂಗ್’ ಎಲ್ಲ ಬಗೆಯ ಶಾರ್ಕ್‌ಗಳನ್ನೂ ಬಾಧಿಸುತ್ತಿದೆ. ಐಷಾರಾಮಿ ಹೋಟೆಲ್‌ಗಳಲ್ಲಿ ‘ಶಾರ್ಕ್ ಫಿನ್ ಸೂಪ್’ಗೆ ಭಾರಿ ಬೇಡಿಕೆ ಇರುವುದರಿಂದ ಶಾರ್ಕ್‌ನ ರೆಕ್ಕೆಗಳನ್ನು ಕತ್ತರಿಸಿಕೊಂಡು ಬಳಿಕ ಅದನ್ನು ನಿರ್ದಾಕ್ಷಿಣ್ಯವಾಗಿ ಸಮುದ್ರಕ್ಕೆ ಬಿಸಾಡಲಾಗುತ್ತದೆ. ಅದು ವಿಪರೀತ ಯಾತನೆಯಿಂದ ಬಳಲಿ ನಿಧಾನವಾಗಿ ಸಾವನ್ನಪ್ಪುತ್ತದೆ. ಒಂದು ಬಟ್ಟಲು ಶಾರ್ಕ್ ಫಿನ್ ಸೂಪಿಗೆ ಇನ್ನೂರು ಡಾಲರ್‌ನಷ್ಟು ದುಬಾರಿ ಬೆಲೆ ಇದ್ದರೂ ಅದನ್ನು ಕುಡಿಯುವವರ ಸಂಖ್ಯೆ ಕಡಿಮೆಯೇನಿಲ್ಲ. ಇದಕ್ಕಾಗಿ ವರ್ಷವೊಂದಕ್ಕೆ ಸುಮಾರು ಏಳು ಕೋಟಿಗೂ ಹೆಚ್ಚು ಶಾರ್ಕ್‌ಗಳು ಬಲಿಯಾಗುತ್ತಿವೆ.

ಒಂದೆಡೆ, ಎಳೆಯ ಮರಿಗಳು ಊಟದ ತಟ್ಟೆ ಸೇರಿದರೆ, ಇನ್ನೊಂದೆಡೆ, ಬಲಿತ ಶಾರ್ಕ್‌ಗಳು ಮನುಷ್ಯನ ಅಕ್ಷಮ್ಯ ಕ್ರೌರ್ಯಕ್ಕೆ ಬಲಿಯಾಗುತ್ತಿವೆ. ಕಾನೂನಿನಿಂದ ಇದನ್ನೆಲ್ಲಾ ತಡೆಯಲು ಸಾಧ್ಯವಿಲ್ಲ; ನಮ್ಮ ಅಂತಃಕರಣ ಜಾಗೃತವಾಗಬೇಕಷ್ಟೇ.

ವಾಚಕರ ವಾಣಿ

ರಾಷ್ಟ್ರಪತಿ ಪತ್ರ ಬರೆಯಲಿ

ತಮಿಳುನಾಡಿನ ರಾಜ್ಯಪಾಲ ಆರ್‌.ಎನ್‌.ರವಿ ಅವರು ಡಿಎಂಕೆ ನೇತೃತ್ವದ ಸರ್ಕಾರದ ಬಜೆಟ್ ಮಂಡನೆ ವೇಳೆ, ಸರ್ಕಾರ ಸಿದ್ಧಪಡಿಸಿಕೊಟ್ಟ ಭಾಷಣವನ್ನು ಓದದೇ ತಿರಸ್ಕರಿಸಿ ಹೊರನಡೆದ ವಿಚಾರ ವಿವಾದಕ್ಕೆ ಎಡೆಮಾಡಿಕೊಟ್ಟಿದೆ. ರವಿ ಅವರ ಇಂತಹ ಅನುಚಿತ ನಡೆ ಇದೇ ಮೊದಲೇನಲ್ಲ. ಚೆನ್ನೈನ ವಿಶ್ವವಿದ್ಯಾಲಯವೊಂದರಲ್ಲಿ ಈಚೆಗೆ ಏರ್ಪಡಿಸಿದ್ದ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಜಯಂತಿ ಆಚರಣೆ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ರವಿ, ‘1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟಿದ್ದು ಸುಭಾಷ್‌ಚಂದ್ರ ಬೋಸ್. ಅದರಲ್ಲಿ ಗಾಂಧೀಜಿ ಅವರ ಪಾತ್ರ ಇಲ್ಲ. 1942ರಲ್ಲೇ ಭಾರತದಲ್ಲಿ ಗಾಂಧೀಜಿ ಅಪ್ರಸ್ತುತರಾಗಿದ್ದರು’ ಎಂದು ಹೇಳಿದ್ದು ಮಾಧ್ಯಮಗಳಲ್ಲಿ ವರದಿಯಾಗಿತ್ತು. ಇದು ನಿಜಕ್ಕೂ ದುರ್ದೈವ.

ಮಕ್ಕಳಲ್ಲಿ ಆದರ್ಶಪ್ರಾಯ ಗುಣ ರೂಪುಗೊಳ್ಳಲು ಗಾಂಧೀಜಿ, ನೇತಾಜಿ ಅವರಂತಹ ಮಹನೀಯರು ನೀಡಿದ ಕೊಡುಗೆಗಳನ್ನು ತಮ್ಮ ಭಾಷಣಗಳ ಮೂಲಕ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಂಕುರಿಸುವಂತೆ ಮಾಡಬೇಕಾದುದು ಇಂತಹ ನಾಯಕರ ಕರ್ತವ್ಯ. ಆದರೆ ರವಿ ಅವರು ಅದನ್ನು ಬಿಟ್ಟು, ಒಬ್ಬ ರಾಷ್ಟ್ರ ನಾಯಕನನ್ನು ವೈಭವೀಕರಿಸಿ, ಮತ್ತೊಬ್ಬ ನಾಯಕನನ್ನು ಖಳನಾಯಕನಂತೆ ಬಿಂಬಿಸುವುದು ಎಷ್ಟು ಸರಿ? ಇದು ಬರೀ ಅನುಚಿತವಲ್ಲ, ಸಂವಿಧಾನವಿರೋಧಿ ನಡೆ. ಇದನ್ನು ಆಕ್ಷೇಪಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಜ್ಯಪಾಲರಿಗೆ ಪತ್ರ ಬರೆಯಬೇಕು.

ಆರ್.ವೆಂಕಟರಾಜು, ಬೆಂಗಳೂರು

ಅರ್ಥಪೂರ್ಣ ಚರ್ಚೆಯಿಂದ ಸತ್ವಪೂರ್ಣ ನಿರ್ಧಾರ

ವಿಧಾನಮಂಡಲದ ಬಜೆಟ್ ಅಧಿವೇಶನ ಆರಂಭವಾಗಿದ್ದು, ತಮ್ಮ ಕಷ್ಟಕಾರ್ಪಣ್ಯ ಹಾಗೂ ಸವಾಲುಗಳಿಗೆ ಸದನದಿಂದ ಸೂಕ್ತ ಪರಿಹಾರ ದೊರೆಯಬಹುದು ಎಂಬ ನಿರೀಕ್ಷೆಯಲ್ಲಿ ಜನಸಾಮಾನ್ಯರಿದ್ದಾರೆ. ಆದರೆ ಹಿಂದಿನ ಅಧಿವೇಶನಗಳ ಕಾರ್ಯಕಲಾಪಗಳ ಬಗ್ಗೆ ಗಮನಹರಿಸಿದರೆ, ಇಂತಹ ಅಪೇಕ್ಷೆ ಇಟ್ಟುಕೊಳ್ಳಬಹುದೇ ಎಂಬ ಪ್ರಶ್ನೆ ತಲೆದೋರುತ್ತದೆ. ಈ ಮೊದಲಿನ ಕಲಾಪಗಳಲ್ಲಿ ಕೆಲ ಸಂಗತಿಗಳು ಒಣ ಪ್ರತಿಷ್ಠೆಯಾಗಿ ಮಾರ್ಪಟ್ಟು, ಕಲಾಪದ ಅಮೂಲ್ಯ ಅವಧಿಯೇ ವ್ಯರ್ಥವಾದ ಕಹಿ ಅನುಭವ ಜನರ ನೆನಪಿನಿಂದ ಮರೆಯಾಗಿಲ್ಲ. ಚರ್ಚೆಗೂ ಅವಕಾಶ ಕೊಡದೆ, ಆಸಕ್ತಿಯೂ ಇಲ್ಲ ಎನ್ನುವ ರೀತಿಯಲ್ಲಿ ಆಡಳಿತ, ವಿರೋಧ ಪಕ್ಷಗಳ ಬಹಳಷ್ಟು ಸದಸ್ಯರು ವರ್ತಿಸಿರುವುದನ್ನು ರಾಜ್ಯದ ಜನ ಗಮನಿಸಿದ್ದಾರೆ.

ಈ ಬಾರಿ ಲೋಕಸಭಾ ಚುನಾವಣೆ ಎದುರಾಗಲಿರುವುದರಿಂದ, ರಾಜಕೀಯ ಲಾಭ ಗಳಿಸುವ ಉದ್ದೇಶದ ದಾಳಗಳಿಗೇ ಈ ಅಧಿವೇಶನ ವೇದಿಕೆಯಾಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ವಿವಿಧೆಡೆ ಉಲ್ಬಣಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆ, ರೈತರಿಗೆ ಪರಿಹಾರ ವಿತರಣೆಯಲ್ಲಿನ ವಿಳಂಬ, ಅನುದಾನ ಹಂಚಿಕೆಯಲ್ಲಿನ ತಾರತಮ್ಯದಂತಹ ವಿಷಯಗಳ ಕುರಿತು ಸೂಕ್ತ ಚರ್ಚೆ ನಡೆಯಬೇಕಿದೆ. ಅರ್ಥಪೂರ್ಣ ಚರ್ಚೆಯ ಮೂಲಕ ಸತ್ವಪೂರ್ಣ ನಿರ್ಧಾರಗಳು ಹೊರಹೊಮ್ಮಬೇಕಿದೆ.

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು

ಮಳಿಗೆ ಕಟ್ಟಿದರಷ್ಟೇ ಸಾಲದು...

ನಗರ, ಪಟ್ಟಣಗಳೆನ್ನದೆ ಈಗ ಎಲ್ಲಿ ನೋಡಿದರಲ್ಲಿ ವಾಣಿಜ್ಯ ಮಳಿಗೆಗಳ ಸಮುಚ್ಚಯಗಳು ತಲೆ ಎತ್ತುತ್ತಿವೆ. ಅಡಿಗಲ್ಲು ಮುಹೂರ್ತಕ್ಕೂ ಮೊದಲೇ ಅವುಗಳಲ್ಲಿನ ಮಳಿಗೆಗಳೆಲ್ಲವೂ ಬುಕ್ ಆಗಿರುತ್ತವೆ. ಆದರೆ ಈ ರೀತಿ ಮಳಿಗೆಗಳನ್ನು ಕಟ್ಟುವ ಎಷ್ಟೋ ಮಾಲೀಕರು ಅವುಗಳಲ್ಲಿ ಶೌಚಾಲಯಗಳನ್ನು ಕಟ್ಟಿಸುವ ಬಗ್ಗೆ ಯೋಚಿಸುವುದಿಲ್ಲ. ಬಾಡಿಗೆದಾರರೂ ಮಳಿಗೆಯನ್ನು ಬಾಡಿಗೆಗೆ ಪಡೆಯುವ ಮುನ್ನ ಅದರಲ್ಲಿ ಈ ವ್ಯವಸ್ಥೆ ಇದೆಯೋ ಇಲ್ಲವೋ ಎಂದು ನೋಡುವುದಿಲ್ಲ.

ಮಹಾನಗರಗಳಲ್ಲಿ ನಗರಪಾಲಿಕೆಯವರು ಅಲ್ಲಲ್ಲಿ ಶೌಚಾಲಯಗಳನ್ನು ನಿರ್ಮಿಸಿರುತ್ತಾರೆ. ಆದರೆ ಜಿಲ್ಲಾ ಕೇಂದ್ರ ಮತ್ತು ಸಣ್ಣ ಸಣ್ಣ ಪಟ್ಟಣಗಳಲ್ಲಿರುವ ಬಹುತೇಕ ಮಳಿಗೆಗಳಲ್ಲಿ ನೈಸರ್ಗಿಕ ಬಾಧೆಯನ್ನು ತೀರಿಸಿಕೊಳ್ಳಲು ಜನ, ಅದರಲ್ಲೂ ಹೆಣ್ಣುಮಕ್ಕಳು ಪರದಾಡಬೇಕಾಗಿದೆ. ವಾಣಿಜ್ಯ ಮಳಿಗೆಗಳನ್ನು ಕಟ್ಟಲು ಅನುಮತಿ ನೀಡುವ ಸ್ಥಳೀಯ ಆಡಳಿತಗಳು ಕಡ್ಡಾಯವಾಗಿ ಶೌಚಾಲಯ ನಿರ್ಮಿಸಲು ಮತ್ತು ಅದನ್ನು ಸರಿಯಾಗಿ ನಿರ್ವಹಿಸಲು ಷರತ್ತು ವಿಧಿಸಬೇಕು. ಆಗಲಾದರೂ ವಾಣಿಜ್ಯ ಮಳಿಗೆಗಳಲ್ಲಿ ಕೆಲಸ ಮಾಡುವ ಸಹೋದರಿಯರಿಗೆ ಆಗುತ್ತಿರುವ ತೊಂದರೆ ತಪ್ಪೀತು.

ವೆಂಕಟೇಶ ಬೈಲೂರು, ಕುಮಟಾ

ರೈತ ಚಳವಳಿ: ರಾಜಕೀಯ ಮೇಲಾಟ ಸಲ್ಲ

ತಮ್ಮ ಬೇಡಿಕೆಗಳನ್ನು ಈಡೇರಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆಕ್ರೋಶಗೊಂಡಿರುವ ರೈತರು ಈಗ ಚಳವಳಿಗೆ ಇಳಿದಿದ್ದಾರೆ. ಮತ್ತೆ ದೆಹಲಿಯತ್ತ ನುಗ್ಗಿದ್ದಾರೆ. ಸ್ವಾತಂತ್ರ್ಯಾನಂತರದ ವರ್ಷಗಳಿಂದಲೂ ಕೇಂದ್ರದಲ್ಲೇ ಆಗಲಿ ರಾಜ್ಯಗಳಲ್ಲೇ ಆಗಲಿ, ಆಡಳಿತ ನಡೆಸಿದ ಸರ್ಕಾರಗಳು ಕೃಷಿ ಕ್ಷೇತ್ರದಲ್ಲಿ ಅತ್ಯಗತ್ಯವಾಗಿ ಆಗಬೇಕಾದ ಸಮಗ್ರ ಸುಧಾರಣೆಗಳನ್ನು ಜಾರಿಗೆ ತರುವಲ್ಲಿ ವಿಫಲವಾಗಿರುವುದೇ ಕೃಷಿ ಕ್ಷೇತ್ರದ ತಳಮಳಗಳಿಗೆ ಕಾರಣ. ಸರ್ಕಾರಗಳ ಭರವಸೆಗಳ ಬಗ್ಗೆ ರೈತರಿಗೆ ನಂಬಿಕೆ ಇಲ್ಲದಂತಾಗಿದೆ. ರೈತರು ಇದುವರೆಗೂ ನಡೆಸಿರುವ ಚಳವಳಿಗಳಿಗೆ ಲೆಕ್ಕವಿಲ್ಲ. ಆದರೆ ಪ್ರತಿಸಲ ಚಳವಳಿ ನಡೆದಾಗಲೂ ಸರ್ಕಾರ ನೀಡುವ ಪರಿಹಾರ ಅಥವಾ ಆಶ್ವಾಸನೆ ಬರೀ ತಾತ್ಕಾಲಿಕ ಉಪಶಮನವಾಗಿರುತ್ತದೆಯೇ ವಿನಾ ರೈತರ ಗೋಳು ಕೊನೆಗೊಂಡಿಲ್ಲ.

ರೈತರ ಚಳವಳಿಗಳೇ ನೆಪವಾಗಿ ರಾಜಕೀಯ ಪಕ್ಷಗಳು ಮೇಲಾಟ ನಡೆಸುವುದು ಸಮಸ್ಯೆಯ ಇನ್ನೊಂದು ಮುಖ. ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರದಲ್ಲಿದ್ದಾಗ ನೇಮಿಸಿದ್ದ ಸ್ವಾಮಿನಾಥನ್ ಆಯೋಗ ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯ ವಿಷಯದಲ್ಲಿ ಮಾಡಿದ್ದ ಶಿಫಾರಸನ್ನು ಸರ್ಕಾರ ಒಪ್ಪಲಿಲ್ಲ. ಸುಮಾರು 20 ವರ್ಷಗಳಿಂದಲೂ ಇದು ಸಮಸ್ಯೆಯಾಗಿಯೇ ಉಳಿದಿದೆ. ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ರಚನೆಯಾದರೆ ಕನಿಷ್ಠ ಬೆಂಬಲ ಬೆಲೆ ಜಾರಿ ಮಾಡುವುದಾಗಿ ಪಕ್ಷದ ನಾಯಕ ರಾಹುಲ್ ಗಾಂಧಿ ಈಗ ಘೋಷಿಸಿದ್ದಾರೆ! ಹಿಂದೆ ಅಧಿಕಾರದಲ್ಲಿದ್ದಾಗ ಈ ಕೆಲಸ ಮಾಡದೆ ಈಗ ಇಂತಹ ಆಶ್ವಾಸನೆಯನ್ನು ನೀಡುವ ಮೂಲಕ ಚಳವಳಿಯನ್ನು ರಾಜಕೀಯಕ್ಕೆ ಬಳಸಿಕೊಳ್ಳುವ ಹುನ್ನಾರ ನಡೆಸಿದ್ದಾರೆ. 2014ರಿಂದಲೂ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರವು ಕೃಷಿ ಕ್ಷೇತ್ರಕ್ಕೆ ಮತ್ತು ರೈತರಿಗೆ ತಾನು ಒದಗಿಸಿರುವ ಲಕ್ಷಾಂತರ ಕೋಟಿ ಹಣದ ಬಗ್ಗೆ ಹೇಳುತ್ತದೆ. ಹಾಗಾದರೆ, ನಮ್ಮ ರೈತರು ಇನ್ನೂ ಯಾಕೆ ಆತಂಕದ ದಿನಗಳಲ್ಲೇ ಬದುಕು ಸಾಗಿಸುವಂತಾಗಿದೆ? ಎಲ್ಲ ರಾಜಕೀಯ ಪಕ್ಷಗಳದ್ದೂ ಆತ್ಮವಂಚನೆಯಲ್ಲವೇ?

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚುನಾವಣಾ ಬಾಂಡ್ ಮುಚ್ಚಿಟ್ಟಿದ್ದೇ ಹೆಚ್ಚು



ಚುನಾವಣಾ ಬಾಂಡ್ ಅಸಾಂವಿಧಾನಿಕ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಚುನಾವಣಾ ಬಾಂಡ್‌ಗಳನ್ನು ಯಾರು ಖರೀದಿಸುತ್ತಾರೆ, ಯಾರಿಗೆ ನೀಡುತ್ತಾರೆ ಎಂಬ ವಿವರ ಬಹಿರಂಗಕ್ಕೆ ನಿಷೇಧವಿತ್ತು. ಇದಕ್ಕೆ ಆಕ್ಷೇಪವೂ ಇತ್ತು. ಚುನಾವಣಾ ಬಾಂಡ್ ಯೋಜನೆ ಜಾರಿಗೆ ತರುವ ಮುನ್ನವೇ ಭಾರತೀಯ ರಿಸರ್ವ್ ಬ್ಯಾಂಕ್ ಅದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಆ ಆಕ್ಷೇಪವನ್ನು ಕಸದ ಬುಟ್ಟಿಗೆ ಎಸೆದಿದ್ದ ಕೇಂದ್ರ ಸರ್ಕಾರವು ಯೋಜನೆ ಜಾರಿಗೆ ಒಪ್ಪಿಗೆ ನೀಡಿತ್ತು

● ಜಯಸಿಂಹ ಆರ್., ಸುಕೃತ ಎಸ್.

ರಾಜಕೀಯ ಪಕ್ಷಗಳಿಗೆ ನೀಡುವ ದೇಣಿಗೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಚುನಾವಣಾ ಬಾಂಡ್ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ ಎಂದು 2017ರಲ್ಲಿ ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಲೋಕಸಭೆಯಲ್ಲಿ ಹೇಳಿದ್ದರು. ನಗದು ರೂಪದಲ್ಲಿ ದೇಣಿಗೆ ನೀಡುವ ಮತ್ತು ಆ ಮೂಲಕ ಕಪ್ಪು ಹಣವನ್ನು ರಾಜಕೀಯಕ್ಕೆ ಬಳಸಿಕೊಳ್ಳುವ ಪದ್ಧತಿಗೆ ಚುನಾವಣಾ ಬಾಂಡ್ ಕೊನೆ ಹಾಡಲಿದೆ. ಚುನಾವಣಾ ಬಾಂಡ್ ಸಂಪೂರ್ಣ ಪಾರದರ್ಶಕ ವ್ಯವಸ್ಥೆ ಎಂದೂ ಸಚಿವರು ಹೇಳಿದ್ದರು. ಆದರೆ ಯೋಜನೆ ಜಾರಿಗೆ ಬಂದ ಆರು ವರ್ಷಗಳ ನಂತರ ಸುಪ್ರೀಂ ಕೋರ್ಟ್ ಚುನಾವಣಾ ಬಾಂಡ್ ಎಂಬುದು ಅಸಾಂವಿಧಾನಿಕ ಎಂದು ತೀರ್ಪಿತ್ತಿದೆ.

ಈ ಬಾಂಡ್ ಯೋಜನೆ ಜಾರಿಗೆ ತರುವುದಕ್ಕೂ ಮೊದಲು ಹಣಕಾಸು ಸಚಿವಾಲಯವು ಆರ್‌ಬಿಐನ ಸಲಹೆಯನ್ನು ಕೇಳಿತ್ತು. ಇದು ಪ್ರಾಮಿಸರಿ ನೋಟ್ ಸ್ವರೂಪದ ಬಾಂಡ್. ಎಸ್‌ಬಿಐ ಈ ಬಾಂಡ್‌ಗಳನ್ನು ವಿತರಿಸುತ್ತದೆ ಎಂದು ಹೇಳಿತ್ತು. ಜತೆಗೆ ಬಾಂಡ್ ಖರೀದಿಸುವವರ ವಿವರವನ್ನು ಯಾವುದೇ ಕಾರಣಕ್ಕೂ ಎಸ್‌ಬಿಐ ಬಹಿರಂಗಪಡಿಸುವಂತಿಲ್ಲ (ನ್ಯಾಯಾಲಯ ಕೇಳಿದರೆ ಮಾತ್ರ ನೀಡಬೇಕು) ಎಂಬ ಷರತ್ತು ಆ ಯೋಜನೆಯಲ್ಲಿ ಇತ್ತು. ಈ ಎಲ್ಲಾ ಅಂಶಗಳಿಗೂ ರಿಸರ್ವ್ ಬ್ಯಾಂಕ್ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು.

ಆರ್‌ಬಿಐ ಆಕ್ಷೇಪ: 'ರಾಜಕೀಯ ಪಕ್ಷಗಳಿಗೆ ನೀಡಲಾಗುವ ದೇಣಿಗೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಚುನಾವಣಾ ಬಾಂಡ್ ವ್ಯವಸ್ಥೆ ಅಸ್ತಿತ್ವಕ್ಕೆ ಬರಲಿದೆ ಎನ್ನಲಾಗಿದೆ. ಆದರೆ, ಯಾರು ಈ ಬಾಂಡ್ ಖರೀದಿಸುತ್ತಾರೆ ಮತ್ತು ಯಾರು ಇದನ್ನು ರಾಜಕೀಯ ಪಕ್ಷಗಳಿಗೆ ನೀಡುತ್ತಾರೆ ಎಂಬುದರ ದಾಖಲೆ ಇರುವುದಿಲ್ಲ. ಈ ದಾಖಲೆ ಇಲ್ಲದಿರುವ ಕಾರಣ, ಈ ಯೋಜನೆಯ ಮೂಲ ಉದ್ದೇಶವನ್ನು ಸಾಧಿಸಲು ಸಾಧ್ಯವೇ ಇಲ್ಲ. ಬಾಂಡ್ ಖರೀದಿಸುವವರು 'ನಿಮ್ಮ ಗ್ರಾಹಕರನ್ನು ತಿಳಿಯಿರಿ' (ಕೆವೈಸಿ) ದಾಖಲೆಗಳನ್ನು ಸಲ್ಲಿಸಬೇಕು. ಅದರಲ್ಲಿ ಅವರ ಗುರುತು ಇರುತ್ತದೆ. ಆದರೆ, ಬಾಂಡ್ ಅನ್ನು ಪಡೆಯುವವರ ಗುರುತು ಇರುವುದಿಲ್ಲ. ಇದು ಹಣದ ಅಕ್ರಮ ವರ್ಗಾವಣೆಗೆ ದಾರಿ ಮಾಡಿಕೊಡುತ್ತದೆ.

'ಇಂತಹ ಬಾಂಡ್‌ಗಳನ್ನು ವಿತರಿಸುವ ಅಧಿಕಾರ ಇರುವುದು ರಿಸರ್ವ್ ಬ್ಯಾಂಕ್‌ಗೆ ಮಾತ್ರ. ಆದರೆ ಸರ್ಕಾರವು ರೂಪಿಸಿದ್ದ ಯೋಜನೆಯಲ್ಲಿ ಎಸ್‌ಬಿಐಗೆ ಅಧಿಕಾರ ನೀಡಲಾಗುತ್ತಿದೆ. ಕಾನೂನಿನಲ್ಲಿ ಇದಕ್ಕೆ ಅವಕಾಶವಿಲ್ಲ.

'ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವ ಉದ್ದೇಶದಿಂದ ಮಾತ್ರ ಈ ಚುನಾವಣಾ ಬಾಂಡ್‌ಗಳನ್ನು ಖರೀದಿಸಲಾಗುತ್ತದೆ. ಈಗ ಚಾಲ್ತಿಯಲ್ಲಿರುವ ಚೆಕ್, ಡಿಮ್ಯಾಂಡ್ ಡ್ರಾಫ್ಟ್–ಡಿ.ಡಿ, ಆನ್‌ಲೈನ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್ ಮತ್ತು ಇತರ ಡಿಜಿಟಲ್ ಪಾವತಿ ವ್ಯವಸ್ಥೆಗಳ ಮೂಲಕವೇ ದೇಣಿಗೆ ನೀಡಲು ಅವಕಾಶವಿದೆ. ಇಂತಹ ವ್ಯವಸ್ಥೆಗಳು ಇರುವಾಗಲೇ, ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವ ಉದ್ದೇಶದಿಂದ ವಿಶೇಷ ಮತ್ತು ಪ್ರತ್ಯೇಕ ವ್ಯವಸ್ಥೆಯನ್ನು ಜಾರಿಗೆ ತರುವ ಅವಶ್ಯಕತೆ ಇಲ್ಲ' ಎಂದು ಆರ್‌ಬಿಐನ ಅಂದಿನ ಗವರ್ನರ್ ಆಗಿದ್ದ ಉರ್ಜಿತ್ ಪಟೇಲ್ ಅವರು ಆಕ್ಷೇಪ ಸಹಿತ ಸಲಹೆ ನೀಡಿದ್ದರು.

ಆದರೆ ಆರ್‌ಬಿಐನ ಆಕ್ಷೇಪ ಮತ್ತು ಸಲಹೆ ಎರಡನ್ನೂ, ಆಗ ಕೇಂದ್ರ ಸರ್ಕಾರದ ರೆವಿನ್ಯೂ ಕಾರ್ಯದರ್ಶಿಯಾಗಿದ್ದ ಹಸಮುಖ್ ಆಧಿಯಾ ಅವರು ನಿರಾಕರಿಸಿದ್ದರು. ಆರ್‌ಬಿಐನ ಆಕ್ಷೇಪವನ್ನು ತಿರಸ್ಕರಿಸಿ ಅವರು ಹಣಕಾಸು ಸಚಿವಾಲಯದ ಕಾರ್ಯದರ್ಶಿಗೆ, 'ದೇಣಿಗೆ ನೀಡುವವರ ವಿವರವನ್ನು ಗೋಪ್ಯವಾಗಿ ಇಡುವುದರ ಹಿಂದಿನ ಉದ್ದೇಶವನ್ನು ಆರ್‌ಬಿಐ ಅರ್ಥಮಾಡಿಕೊಂಡಿಲ್ಲ. ಅಲ್ಲದೆ, ಆರ್‌ಬಿಐ ತಡವಾಗಿ ಸಲಹೆ ನೀಡಿದೆ. ಈಗಾಗಲೇ ಹಣಕಾಸು ಮಸೂದೆಯ ಮುದ್ರಣ ಮುಗಿದಿದೆ. ಹೀಗಾಗಿ, ಯೋಜನೆಯನ್ನು ಜಾರಿಗೆ ತರೋಣ' ಎಂದು 2017ರ ಜನವರಿ 30ರಂದು ಪತ್ರ ಬರೆದರು.

ರಿಸರ್ವ್ ಬ್ಯಾಂಕ್‌ನ ಅಧಿಕಾರಗಳನ್ನು ಮೊಟಕುಗೊಳಿಸುವ ಸ್ವರೂಪದ ನಿಯಮಗಳನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿತು. ಅಂತಹ ನಿಯಮಗಳಿಗೆ ಹಣಕಾಸು ಮಸೂದೆ (ಮನಿ ಬಿಲ್) ಹೆಸರಿನಲ್ಲಿ ಸಂಸತ್ತಿನ ಅನುಮೋದನೆ ಪಡೆದುಕೊಂಡಿತು. ಅಂದರೆ ಸಂಸತ್ತಿನಲ್ಲಿ ಯಾವುದೇ ಚರ್ಚೆ ಇಲ್ಲದೆ ಈ ಯೋಜನೆಯನ್ನು ಜಾರಿಗೆ ತರಲಾಗಿತ್ತು. 'ಚುನಾವಣಾ ಬಾಂಡ್ ಯೋಜನೆ–2018' ಎಂಬ ಒಂದು ಅಧಿಸೂಚನೆಯನ್ನು ಹೊರಡಿಸಿ, ಚಾಲನೆ ನೀಡಲಾಯಿತು.


ಎಡಿಆರ್ (ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್) ಸೇರಿದಂತೆ ಹಲವು ಸಂಘಸಂಸ್ಥೆಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಸುಪ್ರೀಂ ಕೋರ್ಟ್‌ನಲ್ಲಿ ಚುನಾವಣಾ ಬಾಂಡ್ ವಿರುದ್ಧ ಅರ್ಜಿ ಸಲ್ಲಿಸಿದ್ದರು. 'ಚುನಾವಣಾ ಬಾಂಡ್‌ಗಳಲ್ಲಿ ದೇಣಿಗೆ ನೀಡುವವರ ಹೆಸರೂ ಇರುವುದಿಲ್ಲ, ದೇಣಿಗೆ ಪಡೆಯುವವರ ಹೆಸರೂ ಇರುವುದಿಲ್ಲ. ಇನ್ನು ಚುನಾವಣಾ ಬಾಂಡ್ ಮೂಲಕ ಪಡೆದ ದೇಣಿಗೆ ಬಗ್ಗೆ ರಾಜಕೀಯ ಪಕ್ಷಗಳೂ ವಿವರ ಬಹಿರಂಗಪಡಿಸಬೇಕಿಲ್ಲ. ಇದು ಯಾವ ಸ್ವರೂಪದ ಪಾರದರ್ಶಕತೆ' ಎಂದು ಪ್ರಶ್ನಿಸಿದ್ದವು. ಈಗ ಚುನಾವಣಾ ಬಾಂಡ್ ವಿರುದ್ಧ ತೀರ್ಪು ನೀಡಿರುವ ಸುಪ್ರೀಂ ಕೋರ್ಟ್ ಸಹ ಸರಿಸುಮಾರು ಇಂಥದ್ದೇ ಅಭಿಪ್ರಾಯ ವ್ಯಕ್ತಪಡಿಸಿದೆ.

ಪಾರದರ್ಶಕತೆಗೆ ಮುಸುಕು

ಪಾರದರ್ಶಕತೆ ಹೆಸರಿನಲ್ಲಿ ಜಾರಿಗೆ ತರಲಾಗಿದ್ದ ಚುನಾವಣಾ ಬಾಂಡ್ ಮುಚ್ಚಿಡುತ್ತಿದ್ದ ವಿವರಗಳೇ ಹೆಚ್ಚು. ಅದೊಂದು ಕಾಗದದ ತುಂಡು. ಅದನ್ನು ಎಸ್‌ಬಿಐ ಮಾತ್ರ ಮಾರಾಟ ಮಾಡುತ್ತದೆ. ಎಸ್‌ಬಿಐ ಹೆಸರಿನ ಬಾಂಡ್, ಬ್ಯಾಂಕ್ ಶಾಖೆಯ ವಿವರ ಮತ್ತು ಯೋಜನೆಗೆ ಸಂಬಂಧಿಸಿದ ಷರತ್ತುಗಳು ಆ ಕಾಗದದಲ್ಲಿ ಇರುತ್ತವೆ. ಆ ಬಾಂಡ್‌ನಲ್ಲಿ ದೇಣಿಗೆಗೆ ಸಂಬಂಧಿಸಿದ ಅತ್ಯಂತ ಕನಿಷ್ಠ ವಿವರಗಳು ಮಾತ್ರ ಇರುತ್ತವೆ.

- ಭಾರತದ ಯಾವೊಬ್ಬ ಪ್ರಜೆ, ಹಿಂದೂ ಅವಿಭಕ್ತ ಕುಟುಂಬ, ಸಂಸ್ಥೆಗಳು, ಸಂಘಟನೆಗಳು ಚುನಾವಣಾ ಬಾಂಡ್ ಖರೀದಿಸಬಹುದು
- ಬಾಂಡ್ ಖರೀದಿ ವೇಳೆ ಎಸ್‌ಬಿಐಗೆ 'ಕೆವೈಸಿ' ದಾಖಲೆ ಎಂದು ಆಧಾರ್ ಮತ್ತು ಪ್ಯಾನ್/ಮತದಾರರ ಗುರುತಿನ ಚೀಟಿ/ವಿದ್ಯುತ್ ಬಿಲ್ ನೀಡಿದರೆ ಸಾಕಿತ್ತು
- ಬಾಂಡ್ ಖರೀದಿ ವೇಳೆ ನೀಡಲಾದ ಕೆವೈಸಿ ದಾಖಲೆಯನ್ನು ಸರ್ಕಾರದ ಯಾವ ಪ್ರಾಧಿಕಾರಕ್ಕೂ ನೀಡುವಂತಿಲ್ಲ. ಅವನ್ನು ಗೋಪ್ಯವಾಗಿ ಇರಿಸಬೇಕು. ನ್ಯಾಯಾಲಯವು ಕೇಳಿದರೆ ಮಾತ್ರ ಎಸ್‌ಬಿಐ ಆ ಮಾಹಿತಿಯನ್ನು ನೀಡಲು ಅವಕಾಶವಿಲ್ಲ
- ಒಬ್ಬ ವ್ಯಕ್ತಿ ಎಷ್ಟು ಬಾಂಡ್‌ಗಳನ್ನಾದರೂ ಖರೀದಿಸಬಹುದು
- ₹1,000, ₹10,000, ₹1 ಲಕ್ಷ, ₹10 ಲಕ್ಷ ಮತ್ತು ₹1 ಕೋಟಿ ಮುಖಬೆಲೆಯ ಬಾಂಡ್‌ಗಳನ್ನು ಖರೀದಿಸಬಹುದು. ಎಲ್ಲಾ ಮುಖಬೆಲೆಯ ಬಾಂಡ್‌ಗಳ ಖರೀದಿಗೂ ಏಕರೂಪದ ಗೋಪ್ಯತೆಯ ನಿಯಮ ಅನ್ವಯವಾಗುತ್ತದೆ

ಚುನಾವಣಾ ಬಾಂಡ್‌ನ ಅಧಿಕೃತ ಮಾದರಿ



SBI
भारतीय स्टेट बैंक STATE BANK OF INDIA
(भारतीय स्टेट बैंक अधिनियम, 1955 के तहत गठित / Constituted under the State Bank of India Act, 1955)
कॉर्पोरेट केन्द्र, स्टेट बैंक भवन, मादाम कामा रोड, नरीमन पॉइंट, मुंबई - 400021
Corporate Centre, State Bank Bhavan, Madame Cama Road, Nariman Point, Mumbai - 400021

इलेक्टोरल बॉन्ड / ELECTORAL BOND
(प्रोमेसरी नोट के स्वरूप में / IN THE FORM OF PROMISSORY NOTE)

जारी करने की तिथि / DATE OF ISSUE : 10 APR 2018
जारी करने की तिथि से 15 दिनों तक वैध / VALID UPTO 15 DAYS FROM THE DATE OF ISSUE
लिखत की राशि / VALUE OF THE INSTRUMENT : ₹ 1,000/- (रुपये एक हजार मात्र / Rupees One Thousand only)

For value received, the Bank hereby promises to pay on demand to the eligible Payee which is holding this instrument, upon surrender of the original instrument in the Designated Account of the eligible Political Party with the Bank, the sum representing the value of this instrument of ₹ 1,000/- (Rupees One Thousand only) in accordance with the Scheme called 'The Electoral Bond Scheme, 2018', notified by the Central Government vide Gazette Notification No. 20 dated the 2nd January, 2018.

On payment of the said amount, the liability of the Bank hereunder shall stand fully extinguished.

स्थान / Place : NEW DELHI
SAMPLE
प्राधिकृत हस्ताक्षरी / Authorized Signatory

- ಬಾಂಡ್‌ನಲ್ಲಿ ಬಾಂಡ್ ಅನ್ನು ವಿತರಿಸಿದ ದಿನ ಯಾವುದು ಎಂಬ ವಿವರ
- ಬಾಂಡ್‌ನ ಮೊತ್ತ ಎಷ್ಟು ಎಂಬ ವಿವರ
- ಬ್ಯಾಂಕ್ ಶಾಖೆಯ ವಿವರ


* ಇವುಗಳ ಹೊರತಾದ ಮತ್ತಾವ ವಿವರಗಳೂ ಬಾಂಡ್‌ನಲ್ಲಿ ಇರುವುದಿಲ್ಲ


- ಯಾವುದೇ ಒಬ್ಬ ವ್ಯಕ್ತಿ ಬಾಂಡ್ ಅನ್ನು ಖರೀದಿಸಬಹುದಿತ್ತು. ಅದನ್ನು ಯಾವ ರಾಜಕೀಯ ಪಕ್ಷಕ್ಕೆ ನೀಡುತ್ತೇನೆ ಎಂಬ ವಿವರವನ್ನೂ ಆತ ಎಸ್‌ಬಿಐಗೆ ನೀಡಬೇಕಿಲ್ಲ. ಅದನ್ನು ಯಾವುದೇ ರಾಜಕೀಯ ಪಕ್ಷಕ್ಕೂ ನೀಡಬಹುದು
- ಅಂತಹ ಬಾಂಡ್‌ಗಳನ್ನು ರಾಜಕೀಯ ಪಕ್ಷಗಳು ಎಸ್‌ಬಿಐಗೆ ಸಲ್ಲಿಸಬೇಕು. ಆಗ ತನಗೆ ಆ ಬಾಂಡ್ ನೀಡಿದವರು ಯಾರು ಎಂಬ ವಿವರವನ್ನು ಪಕ್ಷಗಳು ಎಸ್‌ಬಿಐಗೆ ನೀಡಬೇಕಿಲ್ಲ. ಪಕ್ಷಗಳ ಬ್ಯಾಂಕ್ ಖಾತೆಗೆ ಆ ಹಣ ಜಮೆಯಾಗುತ್ತದೆ
- ಚುನಾವಣಾ ಆಯೋಗಕ್ಕೆ ಸಲ್ಲಿಸಿದ ವಿವರದಲ್ಲಿ ರಾಜಕೀಯ ಪಕ್ಷಗಳು ತಮಗೆ ಎಷ್ಟು ಬಾಂಡ್‌ಗಳು ಮತ್ತು ಅವುಗಳ ಮೂಲಕ ದೊರೆತ ದೇಣಿಗೆಯ ಒಟ್ಟು ಮೊತ್ತ ಎಷ್ಟು ಎಂಬ ಮಾಹಿತಿ ನೀಡಿದರೆ ಸಾಕು. ಯಾರು ಬಾಂಡ್ ನೀಡಿದವರು ಎಂಬ ವಿವರ ನೀಡಬೇಕಿಲ್ಲ

ಆರು ವರ್ಷದಲ್ಲಿ ಬಿಜೆಪಿಗೆ ₹6,566 ಕೋಟಿ

'ಚುನಾವಣಾ ಬಾಂಡ್ ಯೋಜನೆ'ಯನ್ನು ಅಂದಿನ ಹಣಕಾಸು ಸಚಿವರಾಗಿದ್ದ ಅರುಣ್ ಜೇಟ್ಲಿ ಅವರು ಪ್ರಬಲವಾಗಿ ಸಮರ್ಥಿಸಿಕೊಂಡಿದ್ದರು. 'ಪಕ್ಷವೊಂದಕ್ಕೆ ದೇಣಿಗೆ ನೀಡಿದವರ ಹೆಸರನ್ನು ಬಹಿರಂಗಪಡಿಸದೇ ಇರುವ ವ್ಯವಸ್ಥೆಯು ಆಡಳಿತ ಪಕ್ಷಕ್ಕಿಂತ ವಿರೋಧ ಪಕ್ಷಗಳಿಗೆ ಹೆಚ್ಚು ಅನುಕೂಲ ಮಾಡಿಕೊಡಲಿದೆ. ದೇಣಿಗೆ ನೀಡಿದವರ ಹೆಸರನ್ನು ಬಹಿರಂಗ ಮಾಡುವುದರಿಂದ ಆಡಳಿತ ಪಕ್ಷಕ್ಕೆ ಹೆಚ್ಚೆಚ್ಚು ಅನುಕೂಲವಾಗುತ್ತಿತ್ತು' ಎಂದು ಪತ್ರಕರ್ತರು ಕೇಳಿದ್ದ ಪ್ರಶ್ನೆಗೆ ಅವರು ಉತ್ತರಿಸಿದ್ದರು.

ಆದರೆ, ಚುನಾವಣಾ ಬಾಂಡ್ ಯೋಜನೆಯಿಂದ 2017ರಿಂದ ಇಲ್ಲಿಯವರೆಗಿನ ಅಂಕಿ–ಅಂಶಗಳನ್ನು ಗಮನಿಸಿದರೆ, ಆಡಳಿತ ಪಕ್ಷವಾಗಿರುವ ಬಿಜೆಪಿಗೇ ಅತ್ಯಂತ ಅನುಕೂಲವಾಗಿದೆ. 2019–20ನೇ ವರ್ಷದಲ್ಲಿ ಬಿಜೆಪಿಗೆ ಅತ್ಯಂತ ಹೆಚ್ಚು ಪ್ರಮಾಣದ ದೇಣಿಗೆ ಸಂದಿದೆ. ಇದು ಲೋಕಸಭಾ ಚುನಾವಣಾ ವರ್ಷವೂ ಆಗಿತ್ತು. ಈ ವರ್ಷ ಚುನಾವಣಾ ಬಾಂಡ್ ಮೂಲಕ ಬಿಜೆಪಿಗೆ ₹2,555 ಕೋಟಿ ಸಂಗ್ರಹವಾಗಿತ್ತು. ಸ್ವತಃ ಬಿಜೆಪಿಗೂ ಸೇರಿದಂತೆ ಇನ್ನಿತರ ಯಾವ ಪಕ್ಷಕ್ಕೂ ಇಷ್ಟೊಂದು ದೊಡ್ಡ ಮೊತ್ತದ ದೇಣಿಗೆಯು





₹16,518 ಕೋಟಿ
2018ರ ಮಾರ್ಚ್‌ನಿಂದ 2024ರ ಜನವರಿವರೆಗೆ ಎಸ್‌ಬಿಐ ಮಾರಾಟ ಮಾಡಿದ ಎಲ್ಲ ಚುನಾವಣಾ ಬಾಂಡ್‌ಗಳ ಒಟ್ಟು ಮೌಲ್ಯ

₹15,631 ಕೋಟಿ
2018ರ ಮಾರ್ಚ್‌ನಿಂದ 2024ರ ಜನವರಿವರೆಗೆ ಎಸ್‌ಬಿಐ ಮಾರಾಟ ಮಾಡಿದ ₹1 ಕೋಟಿ ಮುಖಬೆಲೆಯ ಚುನಾವಣಾ ಬಾಂಡ್‌ಗಳ ಒಟ್ಟು ಮೌಲ್ಯ

- ಬೇರೆ ಯಾವ ಮುಖಬೆಲೆಯ ಬಾಂಡ್‌ಗಳೂ ಇಷ್ಟೊಂದು ಪ್ರಮಾಣದಲ್ಲಿ ಮಾರಾಟವಾಗಿಲ್ಲ. ಯಾರು ಈ ಬಾಂಡ್‌ಗಳನ್ನು ಖರೀದಿಸಿದರು, ಯಾವ ಪಕ್ಷಕ್ಕೆ ಈ ಬಾಂಡ್‌ಗಳನ್ನು ನೀಡಿದರು, ಎಷ್ಟು ಹಣವನ್ನು ದೇಣಿಗೆ ನೀಡಿದರು ಎಂಬ ಯಾವ ಮಾಹಿತಿಯೂ ಲಭ್ಯವಿಲ್ಲ. ಗೌಪ್ಯತೆ ನಿಯಮದ ಕಾರಣದಿಂದಾಗಿ ಈ ಯಾವ ಮಾಹಿತಿಗಳು ಲಭ್ಯವಿಲ್ಲ

ಆಧಾರ: 'ಚುನಾವಣಾ ಬಾಂಡ್ ಯೋಜನೆ–2018' ಅಧಿಸೂಚನೆ, ಚುನಾವಣಾ ಬಾಂಡ್ ಎಂದರೇನು–ಎಸ್‌ಬಿಐ ಕೈಪಿಡಿ, ಎಡಿಆರ್ ವರದಿಗಳು, ಸುಪ್ರೀಂ ಕೋರ್ಟ್ ತೀರ್ಪು, ಪಿಟಿಐ
ಪ್ರಜಾವಾಣಿ ಗ್ರಾಫಿಕ್ಸ್: ಶಶಿಧರ ಹಳೇಮನಿ

ಸಿನಿ ಬಿಟ್ಸ್




ಚಿತ್ರತಂಡದೊಂದಿಗೆ ಯುವ, ಸಂತೋಷ್ ಹಾಗೂ ವಿನಯ್ ರಾಜ್‌ಕುಮಾರ್

ಚಿತ್ರೀಕರಣ ಪೂರ್ಣಗೊಳಿಸಿದ ಯುವ

ಯುವ ರಾಜ್‌ಕುಮಾರ್ ಅಭಿನಯದ 'ಯುವ' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಸಿನಿಮಾ ಮಾ.28ರಂದು ಬಿಡುಗಡೆಯಾಗಲಿದೆ. ಸಿನಿಮಾದ ಫಸ್ಟ್ ಸಿಂಗಲ್ ಬಿಡುಗಡೆ ದಿನಾಂಕವನ್ನು ಶೀಘ್ರದಲ್ಲೇ ಘೋಷಿಸಲಾಗುವುದು ಎಂದಿದ್ದಾರೆ ನಿರ್ದೇಶಕ ಸಂತೋಷ್ ಆನಂದ್‌ರಾಮ್.

ಹೊಂಬಾಳೆ ಫಿಲ್ಮ್ಸ್ ಹಾಗೂ ಸಂತೋಷ್ ಆನಂದ್‌ರಾಮ್ ಕಾಂಬಿನೇಷನ್‌ನಲ್ಲಿ ಮೂಡಿಬಂದಿದ್ದ 'ರಾಜಕುಮಾರ' ಹಾಗೂ 'ಯುವರತ್ನ' ಬಾಕ್ಸ್ ಆಫೀಸ್‌ನಲ್ಲಿ ಗೆದ್ದಿದ್ದವು. ಇದಾದ ಬಳಿಕ 'ರಾಘವೇಂದ್ರ ಸ್ಟೋರ್ಸ್' ಸಿನಿಮಾವೂ ಪ್ರೇಕ್ಷಕರ ಮೆಚ್ಚುಗೆ ಪಡೆದಿದ್ದವು. ಇದೀಗ 'ಯುವ' ಸಿನಿಮಾ ಮೂಲಕ ದೊಡ್ಮನೆಯ ಕುಡಿಯನ್ನು ಆ್ಯಕ್ಷನ್ ಚಿತ್ರವೊಂದರ ಮೂಲಕ ಬೆಳ್ಳಿತೆರೆಗೆ ಪರಿಚಯಿಸುತ್ತಿದ್ದಾರೆ ಸಂತೋಷ್. ಸಿನಿಮಾದಲ್ಲಿ 'ಕಾಂತಾರ' ಖ್ಯಾತಿಯ ಸಪ್ತಮಿ ಗೌಡ ನಾಯಕಿಯಾಗಿ ನಟಿಸಿದ್ದಾರೆ. ಕಳೆದ ಮಾರ್ಚ್‌ನಲ್ಲಿ ನಡೆದ ಚಿತ್ರದ ಮುಹೂರ್ತದ ಸಂದರ್ಭದಲ್ಲೇ ಚಿತ್ರತಂಡ ಸಿನಿಮಾ ಬಿಡುಗಡೆ ದಿನಾಂಕವನ್ನು ಘೋಷಿಸಿತ್ತು. 2023ರ ಡಿ.22ರಂದೇ ಸಿನಿಮಾ ಬಿಡುಗಡೆಯಾಗಬೇಕಿತ್ತು. ಆದರೆ 2023ರ ಅಕ್ಟೋಬರ್‌ನಲ್ಲಿ ಚಿತ್ರತಂಡವು ಸಿನಿಮಾದ ಪರಿಷ್ಕೃತ ಬಿಡುಗಡೆ ದಿನಾಂಕವನ್ನು ಘೋಷಿಸಿತ್ತು.

ಕಡಲತಡಿಯ 'ಮತ್ಸ್ಯಗಂಧ'



ಪ್ರಶಾಂತ್ ಸಿದ್ದಿ

ಪೃಥ್ವಿ ಅಂಬಾರ್ ಮುಖ್ಯಭೂಮಿಕೆಯಲ್ಲಿರುವ 'ಮತ್ಸ್ಯಗಂಧ' ಚಿತ್ರದ ಟ್ರೇಲರ್ ಬಿಡುಗಡೆಗೊಂಡಿದೆ. ದುನಿಯಾ ವಿಜಯ್, ಸೂರಿ, ಯೋಗರಾಜ್ ಭಟ್, ತರುಣ್ ಸುಧೀರ್, ಶಶಾಂಕ್ ಮೊದಲಾದ ಚಿತ್ರೋದ್ಯಮದ ಗಣ್ಯರು ಈ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದ್ದು ವಿಶೇಷವಾಗಿತ್ತು.

ಕುಮುಟ, ಹೊನ್ನಾವರ ಭಾಗದ ಮೀನುಗಾರರ ಭಾಷೆ, ಬದುಕು, ಸಂಪ್ರದಾಯ, ಹೋರಾಟದ ಕಥೆ ಹೇಳುತ್ತಿರುವ ಚಿತ್ರದಲ್ಲಿ ನಾಯಕ ಪೃಥ್ವಿ ಅಂಬಾರ್ ಖಾಕಿ ತೊಟ್ಟಿದ್ದಾರೆ. ಖಾರ್ವಿ ಸಮುದಾಯದ ದೊಡ್ಡ ಹೋರಾಟದ ಕಥೆ ಇರುವ ಸುಳಿವನ್ನು ಟ್ರೇಲರ್‌ನಲ್ಲಿ ನೀಡಲಾಗಿದ್ದು, ಹಾಸ್ಯ ಪಾತ್ರಗಳ ಮೂಲಕ ಗುರುತಿಸಿಕೊಂಡಿದ್ದ ಪ್ರಶಾಂತ್ ಸಿದ್ದಿ ಪ್ರಮುಖ ಖಳನಾಯಕನಾಗಿ ಕಾಣಿಸಿಕೊಂಡಿದ್ದಾರೆ.

ಸಹ್ಯಾದ್ರಿ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಬಿ.ಎಸ್.ವಿಶ್ವನಾಥ್ ನಿರ್ಮಿಸಿರುವ ಈ ಚಿತ್ರವನ್ನು ದೇವರಾಜ್ ಪೂಜಾರಿ ನಿರ್ದೇಶಿಸಿದ್ದಾರೆ. ಫೆಬ್ರುವರಿ 23ಕ್ಕೆ ಚಿತ್ರ ತೆರೆಗೆ ಬರುತ್ತಿದೆ. ಪ್ರಶಾಂತ್ ಸಿದ್ದಿ ನಟನೆ ಜೊತೆಗೆ ಸಂಗೀತ ಸಂಯೋಜನೆಯನ್ನೂ ಮಾಡಿದ್ದಾರೆ. ಪ್ರವೀಣ್ ಛಾಯಾಗ್ರಹಣ ಚಿತ್ರಕ್ಕಿದ್ದು, ಭಜರಂಗಿ ಲೋಕಿ, ನಾಗರಾಜ್ ಬೈಂದೂರ್, ಶರತ್ ಲೋಹಿತಾಶ್ವ, ಮೈಮ್ ರಾಮದಾಸ್ ಸೇರಿದಂತೆ ದೊಡ್ಡ ತಾರಾಬಳಗ ಈ ಚಿತ್ರದಲ್ಲಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಗುಂಡಣ್ಣ



ನುಡಿ ಬೆಳಗು

ಸುಮ್ಮನೆ ಓದಿ, ಮಾತಾಡುವುದು ಬೇಡ





ಪ್ರೊ.ಎಂ. ಕೃಷ್ಣೇಗೌಡ

ಕವಿ ಎಚ್. ಎಸ್. ವೆಂಕಟೇಶಮೂರ್ತಿ ಅವರು ಒಂದು ಸಂದರ್ಭದಲ್ಲಿ ತಮ್ಮ ಗುರುಗಳಾದ ಜಿ. ಎಸ್. ಶಿವರುದ್ರಪ್ಪ ಅವರ ಬಗ್ಗೆ ಆಡಿದ ಮಾತುಗಳನ್ನು ಅವರ ಮಾತಿನಲ್ಲೇ ಕೇಳಿ- 'ನನ್ನ ಬದುಕಿನ ಅತ್ಯಂತ ದಾರುಣವಾದ ಕ್ಷಣ ಅಂದ್ರೆ ನನ್ನ ಪತ್ನಿಯನ್ನು ಕಳೆದುಕೊಂಡಂಥದ್ದು. ಜಿ.ಎಸ್.ಎಸ್. ಆವತ್ತು ಸಾಯಂಕಾಲ ನಮ್ಮನೆಗೆ ಬಂದ್ರು. ಕತ್ತಲು ಎಲ್ಲ ಕಡೆ ಹಬ್ಬುತಿರುವಂಥ ಕ್ಷಣ ಅದು. ನನ್ನ ಕೈ ಹಿಡ್ಕೊಂಡು ಕೂತ್ಕೊಂಡ್ರು. ಸುಮಾರು ಅರ್ಧ ಗಂಟೆ ಒಂದೂ ಮಾತಾಡದೆ ನನ್ನ ಕೈ ಹಿಡಿದು ಕೂತಿದ್ರು. ಆಮೇಲೆ ಬರ್ತೀನಿ ಅಂತ್ಹೇಳಿ ಹೊರಟ್ಹೋದ್ರು...ಇಷ್ಟೆ. ಬರ್ತೀನಿ ಅಂತ ಒಂದೇ ಪದ ಆವತ್ತವರು ಆಡಿದ್ದು. ಜಿ.ಎಸ್.ಎಸ್. ನನಗೆ ಆಗ ಕೇವಲ ಕವಿಯಾಗಿರಲಿಲ್ಲ ಅಥವಾ ಪ್ರಾಧ್ಯಾಪಕರಾಗಿರಲಿಲ್ಲ. ನನ್ನ ಆತ್ಮದ ಹತ್ತಿರದ ಜೀವ ಆಗಿದ್ರು'.

ಇನ್ನೊಂದು ಪ್ರಸಂಗ- ಕುವೆಂಪು ಅವರ ಮಾನಸಪುತ್ರ ಅನ್ನಿಸಿಕೊಂಡಿದ್ದ ಕನ್ನಡದ ಹಿರಿಯ ವಿದ್ವಾಂಸ ಮತ್ತು ಪ್ರಾಧ್ಯಾಪಕರಾಗಿದ್ದ ಡಾ. ಪ್ರಭುಶಂಕರ ಮತ್ತು ಶ್ರೀ ರಾಮಕೃಷ್ಣ ಆಶ್ರಮದ ಹಿರಿಯ ಯತಿಗಳಾಗಿದ್ದ ಸ್ವಾಮಿ ಶ್ರೀ ಸುರೇಶಾನಂದಜೀ ಅವರು ನಿಡುಗಾಲದ ಸ್ನೇಹಿತರಾಗಿದ್ದರು. ಅರ್ಧ ಶತಮಾನಕ್ಕೂ ಮೀರಿದ ಅತ್ಯಾಪ್ತ ಪರಿಶುದ್ಧ ಸ್ನೇಹ ಅದು. ಈರ್ವರೂ ಅತ್ಯಂತ ಹಾಸ್ಯಶೀಲರು. ಅವರಲ್ಲಿ ಪರಸ್ಪರ ತಮಾಷೆ, ಲೇವಡಿ ಇಲ್ಲದ ದಿನಗಳೇ ಇಲ್ಲ.

ಅಂಥ ಸ್ವಾಮೀಜಿಯವರು ಅವರ ಇಳಿವಯಸ್ಸಿನಲ್ಲಿ ಪಾರ್ಕಿನ್ಸನ್ ಕಾಯಿಲೆಗೆ ಒಳಗಾದರು. ಕಡೆಕಡೆಯಲ್ಲಿ ಅವರಿಗೆ ಮಾತಾಡಲೂ ಸಾಧ್ಯವಾಗದೆ ಏನನ್ನೋ ಧ್ಯಾನಿಸುತ್ತಾ ಸುಮ್ಮನೆ ಒಂದು ಗಾಲಿ ಕುರ್ಚಿಯಲ್ಲಿ ಕುಳಿತಿರುತ್ತಿದ್ದರು. ಪ್ರಭುಶಂಕರ್ ಅವರಿಗೂ ಅವರ ಇಳಿವಯಸ್ಸಿನಲ್ಲಿ ಮರೆವಿನ ಕಾಯಿಲೆ. ಅಂಥ ಸಂದರ್ಭದಲ್ಲಿ ಪ್ರಭುಶಂಕರ್ ಪ್ರತೀನಿತ್ಯ ಶ್ರೀ ರಾಮಕೃಷ್ಣ ಆಶ್ರಮದಲ್ಲಿದ್ದ ಸುರೇಶಾನಂದ ಜೀ ಅವರ ಕೊಠಡಿಗೆ ಹೋಗುತ್ತಿದ್ದರು. ಸ್ವಾಮೀಜೀಯವರ ಎದುರು ಕುಳಿತಿರುತ್ತಿದ್ದರು. ಮಾತಿಲ್ಲ, ಕತೆಯಿಲ್ಲ. ಒಂದಲ್ಲ, ಎರಡಲ್ಲ, ನಾಲ್ಕಾರು ಗಂಟೆಗಳ ಕಾಲ ಒಬ್ಬರನ್ನೊಬ್ಬರು ನೋಡುತ್ತಾ ಸುಮ್ಮನೆ ಕುಳಿತಿರುತ್ತಿದ್ದರು. ಇದು ಒಮ್ಮೆ ಇಮ್ಮೆಯಲ್ಲ, ಪ್ರತೀನಿತ್ಯ ನಡೆಯುತ್ತಿತ್ತು. ಮಾತು, ಗದ್ದಲಗಳ ನಮ್ಮ ಜಗತ್ತಿಗೆ ಅಂಥ ಮೌನದ ಪರಿಚಯವಿಲ್ಲ.

ಒಂದು ಮಾತಿದೆ- Never speak if you cannot improve upon silence. ಮೌನಕ್ಕಿಂತ ಚಂದವಿಲ್ಲದಿದ್ದರೆ ಮಾತಾಡುವುದೇ ಬೇಡ.

ಇದನ್ನು ಓದಿದಿರಷ್ಟೆ? ಇದರ ಬಗ್ಗೆ ಇನ್ನು ಮಾತಾಡುವುದು ಬೇಡ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಫೆಬ್ರುವರಿ 16, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಸಪ್ತಮಿ ಗಂ. 08-55 ನಕ್ಷತ್ರ: ಭರಣಿ ಗಂ. 08-47 ಯೋಗ: ಬ್ರಹ್ಮ ಗಂ. 15-17 ಕರಣ: ವಣಿಜ ಗಂ. 08-55, ಕುಂಭ ಮಾಸದ 03 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 3.
ರಾಹುಕಾಲ: ಬೆಳಿಗ್ಗೆ 10-30 – 12-00
ಸೂರ್ಯೋದಯ: 06-57 ಸೂರ್ಯಾಸ್ತ: 06-33
ಮುಸ್ಲಿಂ ದಿನಾಂಕ: 05 ಶಬನ್
ದಿನ ವಿಶೇಷ: ರಥ ಸಪ್ತಮಿ, ಅದೃಷ್ಟ ಸಂಖ್ಯೆ: 6, 9

ಮೇಷ: ನಿಮ್ಮ ಸಮಯವನ್ನು ಯಾಚಿಸುತ್ತಿರುವುದರಿಂದ ಸ್ವಂತ ಕೆಲಸಗಳು ನಿಧಾನಗತಿಯಲ್ಲಿ ಸಾಗಲಿದೆ. ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಹೆಚ್ಚಿನ ಅಧಿಕಾರವನ್ನು ಪಡೆದುಕೊಳ್ಳುವಿರಿ. ಶುಭಕ್ಕಾಗಿ ಗಣಪತಿಯನ್ನು ಆರಾಧಿಸಿ.

ವೃಷಭ: ಆಡಿದ ಮಾತುಗಳನ್ನು ಉಳಿಸಿಕೊಳ್ಳುವ ವಿಚಾರದಲ್ಲಿ ಸೋಲ ಬೇಕಾಗುತ್ತದೆ. ಮನೆಯಲ್ಲಿ ಯಾರ ನೆರವೂ ಇಲ್ಲದೆ ಎಲ್ಲಾ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವಿರಿ. ದಾಂಪತ್ಯ ಜೀವನ ಸುಖಮಯವಾಗಿರುವುದು.

ಮಿಥುನ: ನಿಮ್ಮಲ್ಲಿ ಸಹಾಯ ಸಿಗುವುದೆಂಬ ನಂಬಿಕೆಯಲ್ಲಿ ಈ ದಿನ ಮನೆಯವರು ತಮ್ಮ ಅಂತರಂಗದ ಮಾತುಗಳನ್ನು ಬಿಚ್ಚಿಡಲಿದ್ದಾರೆ. ಆರೋಗ್ಯದಲ್ಲಿ ಜೀರ್ಣಕ್ರಿಯೆಗೆ ಸಂಬಂಧಿಸಿದಂತೆ ಕಿರಿಕಿರಿ ಎನಿಸಲಿದೆ.

ಕರ್ಕಾಟಕ: ಸಲಹೆ ಸೂಚನೆಗಳನ್ನು ನಿಮ್ಮ ಮೇಲಧಿಕಾರಿಗಳು ಮಾನ್ಯ ಮಾಡಿದ್ದಕ್ಕೆ ಸಂತೋಷವಾಗಲಿದೆ. ಯೋಜನೆಗಳು ಕಾರ್ಯಗತಗೊಳ್ಳುವುದರ ಬಗ್ಗೆ ಶನೈಶ್ಚರನಲ್ಲಿ ಪೂಜೆ ಪ್ರಾರ್ಥನೆ ನಡೆಸುವುದು ಉತ್ತಮ.

ಸಿಂಹ: ಶ್ರಮದ ದುಡಿಮೆ ನಿಮ್ಮ ಮುಖ್ಯ ಧ್ಯೇಯವಾಗಿರಲಿ, ಅದರಿಂದ ಶತ್ರುಗಳು ಮಿತ್ರರಾಗುವರು. ಬಾಳೆ ಮತ್ತು ಕಾಫಿ ಬೆಳೆಗಾರರಿಗೆ ಉತ್ತಮ ಆದಾಯ ಲಭಿಸುವುದು. ಕೌಟುಂಬಿಕ ಸವಾಲುಗಳನ್ನು ಎದುರಿಸಬೇಕಾಗಲಿದೆ.

ಕನ್ಯಾ: ವೃತ್ತಿ ಅಥವಾ ಕೆಲಸಗಳಲ್ಲಿ ಬದಲಾವಣೆ ಸನ್ನಿಹಿತವಾಗಲಿದೆ. ಸಹವರ್ತಿಗಳು ಬೆಂಬಲಕ್ಕೆ ಬರುವರು. ಉದ್ಯೋಗದಲ್ಲಿ ಅನಿಶ್ಚಿತತೆ ದೂರಾಗುವುದು. ಮಹಾಲಕ್ಷ್ಮಿಯ ಅನುಗ್ರಹದಿಂದ ಸಂಪಾದನೆ ಅಧಿಕವಾಗಿರುವುದು.

ತುಲಾ: ಸರ್ಕಾರಿ ನೌಕರಿಯಲ್ಲಿರುವವರಿಗೆ ಅಪೇಕ್ಷಿತ ಸ್ಥಳಕ್ಕೆ ವರ್ಗಾವಣೆ ದೊರೆಯುವ ಸಂಭವವಿದೆ. ಅವಿವಾಹಿತರು ಬಾಳ ಸಂಗಾತಿಯನ್ನು ಪಡೆಯುವಂತಾಗಲಿದೆ. ಒಳ್ಳೆಯ ಪಾಲುದಾರರೊಬ್ಬರು ದೊರೆಯಲಿದ್ದಾರೆ.

ವೃಶ್ಚಿಕ: ಅಧಿಕವಾದ ಆತ್ಮವಿಶ್ವಾಸದಿಂದ ಸಾಮರ್ಥ್ಯಕ್ಕಿಂತ ದೊಡ್ಡ ಕೆಲಸವನ್ನು ಮಾಡಲು ಹೋಗುವುದು ಸರಿಯಲ್ಲ. ಲೆಕ್ಕಾಚಾರದ ಕಾಗದ-ಪತ್ರಗಳ ನಿರ್ವಹಣೆಯಲ್ಲಿ ಎಚ್ಚರಿಕೆ ಇರಲಿ. ನೆಮ್ಮದಿಯ ವಾತಾವರಣ ಅನುಭವಿಸುವಿರಿ.

ಧನು: ಗೃಹದಲ್ಲಿ ಶುಭ, ಮಂಗಳ ಕಾರ್ಯಗಳ ಚಟುವಟಿಕೆಗಳು ತೋರಿ ಬರುವವು. ಸಹೋದರನ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಪ್ರಯಾಣ ಬೆಳೆಸುವ ಸಾಧ್ಯತೆ ಇದೆ.

ಮಕರ: ಗುರಿ ಸಾಧಿಸಬೇಕು ಅಥವಾ ಗೆಲುವು ಬೇಕೆಂಬ ಛಲವನ್ನು ಇಟ್ಟುಕೊಳ್ಳುವುದು ಉತ್ತಮವೇ ಹೊರತು, ಹೋಲಿಕೆಯನ್ನು ಮನಸ್ಸಿಗೆ ಹಚ್ಚಿಕೊಳ್ಳುವುದು ಸರಿಯಲ್ಲ. ಸಮಸ್ಯೆಯ ಸರಪಳಿಯಿಂದ ಹೊರಬರಲು ಕಷ್ಟವಾಗಲಿದೆ.

ಕುಂಭ: ಕೆಲಸ ಕಾರ್ಯಗಳು ನಿರೀಕ್ಷಿತ ಹಾದಿಯಲ್ಲಿ ಸಾಗುವುದರಿಂದ ನಿಮ್ಮಲ್ಲಿ ನೈತಿಕ ಧೈರ್ಯ ಹೆಚ್ಚುತ್ತದೆ. ಉದ್ಯೋಗಿಗಳಿಗೆ ವೃತ್ತಿಯು ತಾತ್ಕಾಲಿಕ ಸಮಾಧಾನವನ್ನು ತಂದರೂ ಬದಲಾವಣೆಗೆ ಅವಕಾಶ ಇರುತ್ತದೆ.


ಮೀನ: ವ್ಯವಹಾರದಲ್ಲಿ ಉಂಟಾಗಿರುವ ಸಮಸ್ಯೆಗೆ ಸ್ನೇಹಿತರಿಂದ ಸೂಕ್ತ ಸಲಹೆ ಬರುವುದು. ಗೃಹಕ್ಕೆ ಅನಿರೀಕ್ಷಿತವಾಗಿ ಅಪರೂಪದ ವ್ಯಕ್ತಿಯ ಆಗಮನ ಆಗಬಹುದು. ಕಾಗದ ಕಾರ್ಖಾನೆಯವರಿಗೆ ಆಕಸ್ಮಿಕ ಲಾಭವಾಗಲಿದೆ.

ಪದಬಂಧ 5593

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಂಬದ ಹತ್ತಿರ ತೋರಿದ ಧಿಮಾಕು (2)
3.ಘನೀಭೂತವಾದ ಮಳೆಯ ಹನಿ (4)
5.ವನದೊಳಗಿರುವ ಬಟ್ಟೆ (3)
7.ಕಣ್ಣ ಕೊನೆಯ ನೋಟ (4)
9.ಯಾವುದೇ ವಿಷಯದ ಕ್ರಮಬದ್ಧವಾದ ನಿರೂಪಣೆ (3)
10.ಸಾಲ ಮಾಡಿ ನೋಡಿರುವ ಸಮುದ್ರ (3)
11.ಜೀರ್ಣೋದ್ಧಾರ ಮಾಡಿದುದು (4)
13.ಪ್ರಾಯಕ್ಕೆ ಬರುತ್ತಿರುವ ಹಸು (3)
15.ಈತ ರಸಿಕನಲ್ಲ! (4)
16.ಎದೆಯನ್ನು ಹೊಟ್ಟೆಯಿಂದ ಬೇರ್ಪಡಿಸುವ ಸೂಕ್ಷ್ಮ ಅಂಗ (2)

ಮೇಲಿಂದ ಕೆಳಕ್ಕೆ
2.ಈತ ದುಡ್ಡಿಲ್ಲದವ (3)
3.ಆತನ ಮುಖ ಇಲ್ಲಿ ಕಾಣುತ್ತಿದೆ (3)
4.ಸುಟ್ಟು ಕಪ್ಪಾದುದು (3)
6.ಸರ ಧರಿಸಿದವನ ಪಾಳಿ (3)
8.ಪಾಲು ಮಾಡೆಂದು ಬರೆದ ಪತ್ರ (3)
9.ವನದೊಳಗೆ ಮಾಡಿದ ಕ್ಷೌರ (3)
10.ಕಣದೊಳಗೆ ನಡೆದ ಮದುವೆ (3)
12.ಆಸಕ್ತನಾದವನು ಈ ತರ ಕಾಣುತ್ತಿದ್ದಾನೆ (3)
13.ಪುಸ್ತಕಕ್ಕೆ ಒರಗಿಸಿರುವ ತಲೆ (3)
14.ಕಕ್ಕಾವಿಕ್ಕಿಯಾಗಿರುವ ಪೆದ್ದ! (3)



5592ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜವಾಬ್ದಾರಿ 3.ಜಟಿಲ
4.ಪುರೋಹಿತ 6.ಜುಲುಮೆ
8.ಕಾರಣ 9.ಅಗುಳು
10.ಲಹರಿ 12.ಕಸರತ್ತು
14.ಕಮರಿ 15.ನವಿರೆಳೆ

ಮೇಲಿಂದ ಕೆಳಕ್ಕೆ
1.ಜಲ 2.ರಿಪು
3.ಜಹಜು 5.ತರುಣ
7.ಮೆದುಳು 8.ಕಾದಲ
9.ಅಳ್ಳಕ 11.ರಿಪೇರಿ
13.ತ್ತುನ 14.ಕಳೆ

ಸುಡೊಕು 5978

					7		1	4
8		7	6		4			
	2			8			5	6
	4			1		9		
		1	8		5		7	
7	5			9		3	4	
	8			7		4		3
	3		4		8			
9		4			2		6	8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5977 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಪ್ರತ್ಯೇಕ ಕಾಯ್ದೆಗೆ ವಿಧಾನ ಪರಿಷತ್‌ನ ವಿಶೇಷ ಸದನ ಸಮಿತಿ ಶಿಫಾರಸು: ಪ್ರತ್ಯೇಕ ನಿಯಮಕ್ಕಿಲ್ಲ ಅವಕಾಶ

ಪ್ರತಿಷ್ಠಿತ ಕ್ಲಬ್‌ಗಳಿಗೆ 'ಮೂಗುದಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಕ್ಷಗಟ್ಟಲೆ ಹಣ ಪಡೆದು ಸದಸ್ಯತ್ವ ಶುಲ್ಕ ನೀಡುವ, ತಮ್ಮದೇ ನಿಯಮಗಳನ್ನು ರೂಪಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ, ಶ್ರೀಮಂತರ ಪ್ರತಿಷ್ಠಿತ ತಾಣಗಳೆಂದೇ ಪ್ರಸಿದ್ಧವಾದ 'ಕ್ಲಬ್'ಗಳ ನಿಯಂತ್ರಣಕ್ಕೆ ಪ್ರತ್ಯೇಕ ಕಾಯ್ದೆ ರೂಪಿಸಲು ವೇದಿಕೆ ಸಿದ್ಧವಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ರಾಜ್ಯದ ಇತರೆ ಭಾಗಗಳಲ್ಲಿ ಇರುವ ಕ್ಲಬ್‌ಗಳ ಕಾರ್ಯವೈಖರಿ ಹಾಗೂ ಚಟುವಟಿಕೆಗಳ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ವಿಧಾನ ಪರಿಷತ್‌ನ ವಿಶೇಷ ಸದನ ಸಮಿತಿ ರಚಿಸಲಾಗಿತ್ತು. ಸಮಿತಿ ಅಧ್ಯಕ್ಷ ಎನ್.ರವಿಕುಮಾರ್ ವರದಿಯನ್ನು ಗುರುವಾರ ಪರಿಷತ್‌ನಲ್ಲಿ ಮಂಡಿಸಿದರು.

ಯಾವುದೇ ಕ್ಲಬ್ ಸ್ವಂತ ನಿಯಮಗಳನ್ನು ಹೊಂದಲು ಅವಕಾಶ ಇಲ್ಲ; ಎಲ್ಲವೂ ಸರ್ಕಾರದ ನಿಯಮಗಳ ಅಡಿ ಕಾರ್ಯನಿರ್ವಹಿಸುವುದೂ ಸೇರಿದಂತೆ ಹಲವು ಅಂಶಗಳನ್ನು ಒಳಗೊಂಡ ಮಸೂದೆಯನ್ನು ಮುಂದಿನ ಅಧಿವೇಶನದಲ್ಲೇ ಮಂಡಿಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.



ವಿಧಾನಪರಿಷತ್‌ನಲ್ಲಿ ಎನ್. ರವಿಕುಮಾರ್ ಅವರು ಮಾತಾನಾಡಿದರು

ಇತರೆ ಶಿಫಾರಸುಗಳು

- ಸರ್ಕಾರದ ಅನುಮೋದನೆ ಪಡೆದ ಏಕರೂಪದ ಬೈ–ಲಾ ಒಳಗೊಂಡ ಕ್ಲಬ್‌ಗಳಿಗೆ ಮಾತ್ರ ಅನುಮೋದನೆ ನೀಡಬೇಕು
- ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಸಾಂಪ್ರದಾಯಿಕ ವಸ್ತ್ರಗಳ ನಿಷೇಧಕ್ಕೆ ಕಡಿವಾಣ ಹಾಕಬೇಕು. ನಾಗರಿಕ ಸಭ್ಯತೆಯ ಉಡುಪುಗಳನ್ನು ಧರಿಸಿದವರಿಗೆ ಪ್ರವೇಶ ನೀಡಬೇಕು
- ಸದಸ್ಯತ್ವ ಶುಲ್ಕ ನಿಗದಿಗೆ ಮಾನದಂಡ ನಿಗದಿ ಮಾಡಬೇಕು. ಅದಕ್ಕಾಗಿ ಸಕ್ಷಮ ಪ್ರಾಧಿಕಾರ ರಚಿಸಬೇಕು
- ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಸದಸ್ಯತ್ವ ನೀಡಬೇಕು
- ಲಾಭದಾಯಕ ಕ್ಲಬ್‌ಗಳು ಕಡ್ಡಾಯವಾಗಿ ಸರ್ಕಾರಿ ಆಸ್ಪತ್ರೆ ಹಾಗೂ ಶಾಲೆಗಳನ್ನು ದತ್ತು ಪಡೆಯಬೇಕು
- ಸರ್ಕಾರದಿಂದ ಜಮೀನು ಪಡೆದ ಕ್ಲಬ್‌ಗಳ ಜಾಗ ಪುನರ್ ಅಳತೆ ಮಾಡಿಸಬೇಕು. ಒತ್ತುವರಿ ತೆರವುಗೊಳಿಸಬೇಕು. ಮೂಲ ಸೌಕರ್ಯ, ಆರೋಗ್ಯಕ್ಕೆ (ಹೆಲ್ತ್ ಕ್ಲಬ್) ಆದ್ಯತೆ ನೀಡಬೇಕು
- ಸೆಂಚುರಿ ಕ್ಲಬ್ ಆವರಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ವಿಶ್ವೇಶ್ವರಯ್ಯ ಅವರ ಪ್ರತಿಮೆ ಸ್ಥಾಪಿಸಬೇಕು

'ಟರ್ಫ್, ಗಾಲ್ಫ್ ಕ್ಲಬ್ ಜಾಗ ವಶಕ್ಕೆ ಪಡೆಯಲು ಶಿಫಾರಸು'

ಬೆಂಗಳೂರು ಟರ್ಫ್ ಕ್ಲಬ್ ಹಾಗೂ ಗಾಲ್ಫ್ ಕ್ಲಬ್ ಜಾಗವನ್ನು ಸರ್ಕಾರ ವಶಕ್ಕೆ ಪಡೆಯಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ಆ ಎರಡೂ ಕ್ಲಬ್‌ಗಳಿಗೆ ಜಕ್ಕೂರು ಏರೋಡ್ರಮ್ ಅಥವಾ ಕುಣಿಗಲ್‌ನಲ್ಲಿ ಜಮೀನು ಮಂಜೂರು ಮಾಡಬೇಕು. ಗಾಲ್ಫ್ ಕ್ಲಬ್ ಜಾಗವನ್ನು ಹಸಿರು ಉದ್ಯಾನವಾಗಿ ಪರಿವರ್ತಿಸಬೇಕು ಎಂದೂ ಹೇಳಿದೆ. ಪಾರಂಪರಿಕ ಕಟ್ಟಡವಿದ್ದರೂ, ಅನಧಿಕೃತ ಕಟ್ಟಡ ನಿರ್ಮಿಸಿರುವ ಬೌರಿಂಗ್ ಕ್ಲಬ್ ವಿರುದ್ಧ ಕ್ರಮ ಕೈಗೊಳ್ಳಬೇಕು. ಜಯನಗರದ ಕಾಸ್ಮೋಪಾಲಿಟನ್ ಕ್ಲಬ್‌ಗೆ ವಾಣಿಜ್ಯ ಕಟ್ಟಡದಿಂದ ಪ್ರತಿ ತಿಂಗಳು ಬರುತ್ತಿರುವ ₹18 ಲಕ್ಷ ಆದಾಯದಲ್ಲಿ ಶೇ 25ರಷ್ಟು ಸಮಾಜ ಸೇವೆಗಳಿಗೆ ಬಳಸಬೇಕು. ಉಳಿದ ಹಣವನ್ನು ಸರ್ಕಾರಕ್ಕೆ ಜಮೆ ಮಾಡಬೇಕು. ಕಬ್ಬನ್ ಉದ್ಯಾನದ ವ್ಯಾಪ್ತಿಯಿಂದ ಸೆಂಚುರಿ ಕ್ಲಬ್ ಹೊರಗಿಡಲು ಕರ್ನಾಟಕ ಸರ್ಕಾರಿ ಉದ್ಯಾನಗಳ ಕಾಯ್ದೆಗೆ ತಿದ್ದುಪಡಿ ತರಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ಶಾಸಕರಿಗೆ 2 ಕ್ಲಬ್ ಸದಸ್ಯತ್ವ

ಸರ್ಕಾರದಿಂದ ವಿನಾಯಿತಿ ದರದಲ್ಲಿ ಜಮೀನು ಹಾಗೂ ಇತರೆ ಸವಲತ್ತು ಪಡೆದಿರುವ ಕ್ಲಬ್‌ಗಳಲ್ಲಿ ಸಂಸದರು, ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರಿಗೆ ಸದಸ್ಯತ್ವ ನೀಡಬೇಕು. ಅವರು ಬಯಸುವ ಯಾವುದೇ ಎರಡು ಕ್ಲಬ್‌ಗಳ ಸದಸ್ಯತ್ವ ಪಡೆಯಲು ಅವಕಾಶ ಇರಬೇಕು ಎಂದು ಸಮಿತಿ ಪ್ರತಿಪಾದಿಸಿದೆ.


ಪ್ರತಿಯೊಂದು ತಾಲ್ಲೂಕಿನಲ್ಲೂ ಕ್ಲಬ್ ಆರಂಭಿಸಲು ಸರ್ಕಾರ ಜಮೀನು ಮಂಜೂರು ಮಾಡಬೇಕು. ಹೊಸ ಬಡಾವಣೆ ನಿರ್ಮಾಣಕ್ಕೆ ಅನುಮತಿ ನೀಡುವ ಸಮಯದಲ್ಲಿ ಕ್ಲಬ್ ನಿರ್ಮಾಣ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸ್ಥಳ ನಿಗದಿ ಮಾಡಬೇಕು ಎಂದು ಹೇಳಿದೆ.

ಸುದ್ದಿ 2 ನಿಮಿಷ

ಕಾಲ್ಪನಿಕ ಲೆಕ್ಕದಿಂದ ಪ್ರಯೋಜನ ಇಲ್ಲ: ಬಸವರಾಜ ಬೊಮ್ಮಾಯಿ

ಬೆಂಗಳೂರು: 'ಕೇಂದ್ರದಿಂದ ರಾಜ್ಯಕ್ಕೆ ನಿಜಕ್ಕೂ ಅನ್ಯಾಯವಾಗಿದ್ದರೆ ಎಲ್ಲರೂ ಕೂಡಿಯೇ ಕೇಳೋಣ. ಅದರ ಬದಲು ಯಾರದ್ದೋ ಸಲಹೆ ಕೇಳಿ ₹1.87 ಲಕ್ಷ ಕೋಟಿ ನಷ್ಟ ಆಗಿದೆ ಎಂದು ಕಾಲ್ಪನಿಕ ಶೇಖ್ ಮೊಹಮದ್ ಲೆಕ್ಕ ಹೇಳಿದರೆ ಪ್ರಯೋಜನವಿಲ್ಲ' ಎಂದು ಬಿಜೆಪಿ ಸದಸ್ಯ ಬಸವರಾಜ ಬೊಮ್ಮಾಯಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಅವರು, 'ಕೇಂದ್ರದಿಂದ ರಾಜ್ಯಕ್ಕೆ ಬರುವ ಅನುದಾನದ ಕುರಿತು ವಾಸ್ತವ



ಅಂಶಗಳ ಮೇಲೆ ಚರ್ಚೆ ಮಾಡಿದರೆ ಅನುಕೂಲ. ರಾಜಕೀಯ ಬೆರೆಸಿ ಮಾತನಾಡಿದರೆ ರಾಜ್ಯಕ್ಕೇ ನಷ್ಟ' ಎಂದು ಹೇಳಿದರು.

'ಈಗಾಗಲೇ 15ನೇ ಹಣಕಾಸು ಆಯೋಗದ ವರದಿ ಜಾರಿಯಲ್ಲಿದೆ. ಅದು ಏನು ಶಿಫಾರಸು ಮಾಡಿದೆಯೋ ಹಾಗೆಯೇ ನಡೆಯುತ್ತದೆ. ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಲು ಆಗುವುದಿಲ್ಲ. ಈಗ ಎಲ್ಲವೂ ಮುಗಿದು ಹೋಗಿದೆ. ಆಯೋಗದ ಅವಧಿ 2026ರವರೆಗೆ ಇದೆ. ಈ ಸಂದರ್ಭದಲ್ಲಿ ದೆಹಲಿಗೆ ಹೋಗಿ ಪ್ರತಿಭಟನೆ ಮಾಡುವುದು ರಾಜಕೀಯವಲ್ಲದೆ ಮತ್ತೇನೂ ಅಲ್ಲ' ಎಂದರು.

'ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ ₹5,300 ಕೋಟಿ ಅನುದಾನ ಘೋಷಣೆ ಮಾಡಿತ್ತು. ಅದನ್ನು ಹೇಗೆ ಪಡೆಯಬೇಕು ಎನ್ನುವ ಬಗ್ಗೆ ಚರ್ಚೆ ಮಾಡೋಣ. 16ನೇ ಹಣಕಾಸು ಆಯೋಗ ಬರುತ್ತಿದೆ. ಅದರಲ್ಲಿ ನಮಗೆ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕು ಅಷ್ಟೇ' ಎಂದು ಹೇಳಿದರು.

ಗುತ್ತಿಗೆ ಆಧಾರದಲ್ಲಿ ವೈದ್ಯರ ನೇಮಕ: ದಿನೇಶ್ ಗುಂಡೂರಾವ್

ಬೆಂಗಳೂರು: ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ಖಾಲಿ ಇರುವ 337 ತಜ್ಞ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಕಾಂಗ್ರೆಸ್‌ನ ಬೇಲೂರು ಗೋಪಾಲಕೃಷ್ಣ ಪ್ರಶ್ನೆಗೆ ವಿಧಾನಸಭೆಯಲ್ಲಿ ಗುರುವಾರ ಉತ್ತರಿಸಿದ ಸಚಿವರು, '337 ತಜ್ಞ ವೈದ್ಯರು ಮತ್ತು 250 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಪ್ರಕ್ರಿಯೆ ನಡೆಸಲು ಅನುಮತಿ ನೀಡಲಾಗಿದೆ. ಶೀಘ್ರದಲ್ಲಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು' ಎಂದರು.

ಅನುದಾನದ ಕೊರತೆ: ಜೆಡಿಎಸ್‌ನ ಸಿ.ಎನ್. ಬಾಲಕೃಷ್ಣ ಪ್ರಶ್ನೆಗೆ ಉತ್ತರಿಸಿದ ದಿನೇಶ್, 'ರಾಜ್ಯದಲ್ಲಿ ಆಸ್ಪತ್ರೆಗಳ ಕಟ್ಟಡ ನಿರ್ವಹಣೆಗೆ ವರ್ಷಕ್ಕೆ ₹25 ಕೋಟಿ ಮಾತ್ರ ಅನುದಾನ ನೀಡಲಾಗುತ್ತಿದೆ. ಇದರಿಂದಾಗಿ ಆಸ್ಪತ್ರೆಗಳ ಕಟ್ಟಡಗಳ ನಿರ್ವಹಣೆಗೆ ಸಮಸ್ಯೆಯಾಗಿದೆ. ಹೆಚ್ಚಿನ ಅನುದಾನ ಒದಗಿಸುವಂತೆ ಕೋರಲಾಗಿದೆ' ಎಂದು ತಿಳಿಸಿದರು.

'ರದ್ದಾದ ಪಡಿತರ ಚೀಟಿಗೆ ಮರುಜೀವ'

ಒಂದನೇ ಪುಟದಿಂದ...



ಕೆ.ಎಚ್. ಮುನಿಯಪ್ಪ

ಮೂಡಿಗೆರೆ ತಾಲ್ಲೂಕಿನಲ್ಲಿ ಆ ರೀತಿ 599 ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸಲಾಗಿದೆ. ಅವುಗಳನ್ನು ಆದ್ಯತೇತರ (ಎಪಿಎಲ್) ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲಾಗಿದೆ. ಅವುಗಳನ್ನೂ ಪರಿಶೀಲಿಸಿ, ಅರ್ಹ ಕುಟುಂಬಗಳಿಗೆ ಮರು ಮಂಜೂರಾತಿ ನೀಡಲಾಗುವುದು ಎಂದು ಅವರು ತಿಳಿಸಿದರು.

ಹೊಸ ಅರ್ಜಿ ಸ್ವೀಕರಿಸಲು ಆಗ್ರಹ: ರಾಜ್ಯದಲ್ಲಿ ದೀರ್ಘ ಸಮಯದಿಂದ ಬಿಪಿಎಲ್ ಪಡಿತರ ಚೀಟಿಗಳಿಗೆ ಅರ್ಜಿ ಸ್ವೀಕರಿಸಿಲ್ಲ. ಇದರಿಂದ ಅರ್ಹ ಕುಟುಂಬಗಳಿಗೆ ಅನ್ಯಾಯವಾಗುತ್ತಿದೆ. ವೈದ್ಯಕೀಯ ಚಿಕಿತ್ಸೆಗಳಿಗೆ ನೆರವು ಪಡೆಯುವುದಕ್ಕೂ ಸಮಸ್ಯೆಯಾಗಿದೆ. ಆದ್ದರಿಂದ ಹೊಸ ಅರ್ಜಿ ಸ್ವೀಕರಿಸಲು ಕ್ರಮ ಕೈಗೊಳ್ಳಬೇಕು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು. ಬಿಜೆಪಿ ಮತ್ತು ಕಾಂಗ್ರೆಸ್‌ನ ಹಲವರು ದನಿಗೂಡಿಸಿದರು.

'ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ 2.95 ಲಕ್ಷ ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ಈ ಪೈಕಿ 57,000 ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ಉಳಿದ ಪಡಿತರ ಚೀಟಿಗಳನ್ನು ವಿಲೇವಾರಿ ಮಾಡಿದ ಬಳಿಕ ಹೊಸ ಅರ್ಜಿ ಸ್ವೀಕರಿಸಲಾಗುವುದು. 60 ದಿನಗಳೊಳಗೆ ಪರಿಶೀಲನೆ ಪೂರ್ಣಗೊಳಿಸಿ ಪಡಿತರ ಚೀಟಿ ವಿತರಿಸಲಾಗುವುದು' ಎಂದು ಮುನಿಯಪ್ಪ ಉತ್ತರಿಸಿದರು.

'ಸಿದ್ದನಾಮಿಕ್ಸ್ ಅಪಾಯಕಾರಿ, ಅನಾಹುತಕಾರಿ'

ಜನರ ರಕ್ತ ಹೀರುವ ತೆರಿಗೆ ಪದ್ಧತಿ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಗ್ಯಾರಂಟಿ ಕೊಟ್ಟಂತೆ ಮಾಡಿ, ಜನಸಾಮಾನ್ಯರ ಮೇಲೆ ಅತ್ಯಧಿಕ ತೆರಿಗೆ ವಿಧಿಸಿ ಜನರ ರಕ್ತ ಹೀರುತ್ತಿರುವ 'ಸಿದ್ದನಾಮಿಕ್ಸ್' ಎಂಬ ಆರ್ಥಿಕತೆ ಅನಾಹುತಕಾರಿ, ವಿನಾಶಕಾರಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಕಿಡಿಕಾರಿದರು.

ವಿಧಾನಸಭೆಯಲ್ಲಿ ಗುರುವಾರ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ನಾನು ಹಿಂದೆ ಮನಮೋಹನ್ ಸಿಂಗ್ ಅವರ 'ಮನಮೋಹನಾಮಿಕ್ಸ್' ಬಗ್ಗೆ ಕೇಳಿದ್ದೇನೆ. ಈಗ ಮೋದಿ ಅವರ 'ಮೋದಿನಾಮಿಕ್ಸ್' ಬಗ್ಗೆ ತಿಳಿದಿದ್ದೇನೆ. ಜಪಾನ್‌ನ ಮಾಜಿ ಪ್ರಧಾನಿ ದಿವಂಗತ ಶಿಂಜೋ ಅಬೆ ಅವರ 'ಅಬೆನಾಮಿಕ್ಸ್' ಬಗ್ಗೆಯೂ ತಿಳಿದುಕೊಂಡಿದ್ದೇನೆ. ಆದರೆ, 'ಸಿದ್ದನಾಮಿಕ್ಸ್' ಬಲು ಅಪಾಯಕಾರಿ' ಎಂದು ಹೇಳಿದರು.

'ಒಂದು ಕೈಯಲ್ಲಿ ಗ್ಯಾರಂಟಿಗಳನ್ನು ಕೊಟ್ಟು ಜನರನ್ನು ಬಡತನದಿಂದ ಮಧ್ಯಮವರ್ಗಕ್ಕೆ ತಂದಿದ್ದೇನೆ ಎನ್ನುವ ರಾಜ್ಯ ಸರ್ಕಾರ, ಹಾಗೆ ಕೊಟ್ಟು ಹತ್ತು ಕೈಗಳಲ್ಲಿ ಹೀಗೆ ಆ ಹಣವನ್ನು ಕಿತ್ತುಕೊಳ್ಳುತ್ತಿದೆ. ಈ ಸಿದ್ದನಾಮಿಕ್ಸ್ ರಾಜ್ಯವನ್ನು ವಿನಾಶದ ಅಂಚಿಗೆ ದೂಡುತ್ತಿದೆ' ಎಂದು ದೂರಿದರು.

'ಗ್ಯಾರಂಟಿಗಳ ಮೂಲಕ ಜನರ ಆರ್ಥಿಕ ಶಕ್ತಿ, ಖರೀದಿ ಶಕ್ತಿ ಹೆಚ್ಚಿದೆ ಎನ್ನುವ ಸರ್ಕಾರ, ಮುದ್ರಾಂಕ ಶುಲ್ಕವನ್ನು ಐದು ಪಟ್ಟು ಹೆಚ್ಚಿಸಿದೆ. ಮಾರ್ಗಸೂಚಿ ದರ ಆಸ್ತಿ ದರಕ್ಕಿಂತಲೂ ಹೆಚ್ಚಾಗಿದೆ. ಅಬಕಾರಿ ಸುಂಕ ಏರುತ್ತಲೇ ಇದೆ.



ಕುಮಾರಸ್ವಾಮಿ ವಿಧಾನಸಭೆಯಲ್ಲಿ ಮಾತನಾಡಿದರು

ತೆರಿಗೆ ಮೂಲಕ ಜನರನ್ನು ಹೀರುವ ಆರ್ಥಿಕತೆಯು ರಾಜ್ಯದ ಅಭಿವೃದ್ಧಿಗೆ ಯಾವ ಸೀಮೆಯ ಉತ್ತೇಜನ ನೀಡುತ್ತದೆ' ಎಂದು ಪ್ರಶ್ನಿಸಿದರು.

ಸಂಘರ್ಷಕ್ಕೆ ಇಳಿದರೆ ಗೌರವ ಸಿಗುತ್ತಾ?: 'ರಾಜ್ಯವು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಲು ಕೇಂದ್ರ ಸರ್ಕಾರ ಕಾರಣ ಎಂದು ರಾಜ್ಯ ಸರ್ಕಾರ ಪ್ರಚಾರ ಮಾಡುತ್ತಿದೆ. ಸಂಘರ್ಷಕ್ಕೆ ಇಳಿದರೆ ಯಾರಾದರೂ ಗೌರವ ಕೊಡ್ತಾರಾ' ಎಂದೂ ಕುಮಾರಸ್ವಾಮಿ ಪ್ರಶ್ನಿಸಿದರು.

'ತಮಿಳುನಾಡಿನ ರಾಜ್ಯಪಾಲರು ಅಲ್ಲಿನ ಸರ್ಕಾರ ಸಿದ್ಧಪಡಿಸಿದ್ದ ಭಾಷಣವನ್ನು ತಿರಸ್ಕರಿಸಿದ್ದರು. ನಮ್ಮ ರಾಜ್ಯಪಾಲರು ರಾಜ್ಯ ಸರ್ಕಾರದ ಭಾಷಣವನ್ನು ಓದಿದ್ದಾರೆ. ತಮಿಳುನಾಡಿನ ರಾಜ್ಯಪಾಲರಂತಹ ಸಂಪ್ರದಾಯ ಇಲ್ಲಿ ನಡೆದಿಲ್ಲ. ಅದಕ್ಕಾಗಿ ರಾಜ್ಯಪಾಲರನ್ನು ಅಭಿನಂದಿಸುತ್ತೇನೆ' ಎಂದರು.

'ಎರಡು ಬಾರಿ ಆಕಸ್ಮಿಕವಾಗಿ ರಾಜ್ಯದ ಮುಖ್ಯಮಂತ್ರಿಯಾಗಿದ್ದೆ. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಯುಪಿಎ ಸರ್ಕಾರ ಹಾಗೂ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಕೇಂದ್ರದಿಂದ ನನಗೆ ಸಹಕಾರ ಸಿಕ್ಕಿತ್ತು. ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ದಿನಗಳ ಸಂಖ್ಯೆ ಹೆಚ್ಚಳ, ರಸ್ತೆ ವಿಸ್ತರಣೆಗೆ ರಕ್ಷಣಾ ಇಲಾಖೆ ಜಮೀನು ಹಸ್ತಾಂತರ ಸೇರಿದಂತೆ ಹಲವು ವಿಚಾರಗಳಲ್ಲಿ ಸಕಾರಾತ್ಮಕ ಸ್ಪಂದನೆ ದೊರಕಿತ್ತು' ಎಂದು ಹಲವು ಉದಾಹರಣೆಗಳನ್ನು ನೀಡಿದರು.

'ಕೇಂದ್ರ ಸರ್ಕಾರದಿಂದ ಅನ್ಯಾಯ ಆಗುತ್ತಿದೆ ಎಂದು ಹೇಳುತ್ತಿದ್ದೀರಿ. 14 ಮತ್ತು 15ನೇ ಹಣಕಾಸು ಆಯೋಗಗಳ ಶಿಫಾರಸುಗಳನ್ನು ಓದಿದ್ದೇನೆ. ನಿತ್ಯ ಆರೋಪ ಮಾಡಿದರೆ ಏಕೆ ಗೌರವ ಕೊಡುತ್ತಾರೆ? ಅನ್ಯಾಯ ಆಗಿರುವುದು ನಿಜವೇ ಆಗಿದ್ದಲ್ಲಿ ನಿಮ್ಮೊಂದಿಗೆ ಪ್ರಧಾನಿಯವರ ಭೇಟಿಗೆ ನಾನು ಸಿದ್ಧ' ಎಂದು ಆಡಳಿತ ಪಕ್ಷದ ಸದಸ್ಯರಿಗೆ ಹೇಳಿದರು.

ಪಾಲಿಸಿ ಫ್ರಂಟ್ ಗುಟ್ಟು ಬಿಚ್ಚಿಡಲು ಆಗ್ರಹ

ಬೆಂಗಳೂರು: 'ರಾಜ್ಯ ಸರ್ಕಾರದ ಗ್ಯಾರಂಟಿಗಳ ಸಮೀಕ್ಷೆ, ಪ್ರಚಾರದ ಹೆಸರಿನಲ್ಲಿ 'ದ ಪಾಲಿಸಿ ಫ್ರಂಟ್' ಎಂಬ ಅಪ್ಪ, ಅಮ್ಮ ಇಲ್ಲದ ಸಂಸ್ಥೆಗೆ ₹7.20 ಕೋಟಿ ನೀಡಲಾಗಿದೆ. ಪಾಲಿಸಿ ಫ್ರಂಟ್‌ನ ಗುಟ್ಟನ್ನು ಸದನದಲ್ಲೇ ರಟ್ಟು ಮಾಡಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವಿಧಾನಸಭೆಯಲ್ಲಿ ಗುರುವಾರ ಆಗ್ರಹಿಸಿದರು.

ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, 'ಪಾಲಿಸಿ ಫ್ರಂಟ್ ಎಂಬ ಕಂಪನಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಅದರ ಹಿಂದೆ, ಮುಂದೆ ಯಾರಿದ್ದಾರೆ ಎನ್ನುವುದೂ ತಿಳಿಸಿಲ್ಲ. ಆದರೆ, ಸರ್ಕಾರ ಇಷ್ಟೊಂದು ದೊಡ್ಡ ಮೊತ್ತವನ್ನು ಆ ಕಂಪನಿಗೆ ಕೊಟ್ಟಿದೆ. ಆ ಕಂಪನಿ ಯಾರದ್ದು' ಎಂದು ಪ್ರಶ್ನಿಸಿದರು.

'ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 1.37 ಲಕ್ಷ ಕಡತಗಳು ಕೊಳೆಯುತ್ತಾ ಬಿದ್ದಿವೆ. ಆದರೆ, ಪಾಲಿಸಿ ಫ್ರಂಟ್‌ಗೆ ಹಣ ನೀಡಲು ಪ್ರಸ್ತಾವ ಸಲ್ಲಿಸಿದ ಒಂದೇ ದಿನದಲ್ಲಿ ಶರವೇಗದಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಅದರ ಹಿಂದೆ ಯಾವ ಮಟ್ಟು, ಯಾವ ಪಟ್ಟು ಕೆಲಸ ಮಾಡಿದೆ. ಆ ಮಟ್ಟು ಯಾರದ್ದು ಎಂಬ ಗುಟ್ಟು ರಟ್ಟಾಗಬೇಕು' ಎಂದರು.

ಎಂ2ಎಂ ಎಂಬ ಸಂಸ್ಥೆಗೆ ಗ್ಯಾರಂಟಿಗಳ ಕುರಿತು ಸಮೀಕ್ಷೆಗೆ ₹1 ಕೋಟಿ ಕೊಡಲಾಗಿದೆ. ಮಂಡ್ಯ ಜಿಲ್ಲೆಯ ಶಾಸಕರೊಬ್ಬರ ಪತ್ನಿ ನಿರ್ದೇಶಕರಾಗಿರುವ ಕಂಪನಿಗೆ ಗ್ಯಾರಂಟಿಗಳ ಕುರಿತು ಪ್ರಚಾರಕ್ಕಾಗಿ ₹1 ಕೋಟಿ ನೀಡಲಾಗಿದೆ. ರಾಜ್ಯ ಸರ್ಕಾರದಲ್ಲಿ ಗ್ಯಾರಂಟಿಗಳ ಹೆಸರಿನಲ್ಲಿ ಲೂಟಿ ಜಾತ್ರೆ ನಡೆಯುತ್ತಿದೆ ಎಂದು ದೂರಿದರು.

'ಪರ್ಸಂಟೇಜ್ ನಿಂತಿದೆಯೇ?'

'ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದಲ್ಲಿ ಭಾರಿ ಭ್ರಷ್ಟಾಚಾರ ಇತ್ತು ಎಂದು ಜಾಹೀರಾತು ಕೊಟ್ಟು ಕಾಂಗ್ರೆಸ್ ಅಧಿಕಾರಕ್ಕೆ ಬಂತು. ಸರ್ಕಾರಿ ಅಧಿಕಾರಿಗಳ ಹುದ್ದೆಗಳ ದರ ಪಟ್ಟಿಯನ್ನೂ ನೀಡಿತ್ತು. ಈಗ, ಆ ಯಾವುದೂ ಇಲ್ಲವೇ? ಪರ್ಸಂಟೇಜ್ ಸಂಪೂರ್ಣವಾಗಿ ನಿಂತಿದೆಯೇ? ಕಡಿಮೆ ಆಗಿದೆಯೇ? ಅಥವಾ ಜಾಸ್ತಿ ಆಗಿದೆಯೇ? ಎಂಬುದನ್ನು ತಿಳಿಸಿ' ಎಂದು ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

'ಭ್ರಷ್ಟಾಚಾರರಹಿತ ಆಡಳಿತ ನೀಡುತ್ತೇವೆ ಎಂಬ ಭರವಸೆ ನೀಡಿ ಅಧಿಕಾರಕ್ಕೆ ಬಂದವರು ನೀವು. ನಿಜವಾಗಿಯೂ ಪರಿಸ್ಥಿತಿ ಬದಲಾಗಿದೆಯೇ? ಹಾಗಿದ್ದರೆ, ಮುಖ್ಯಮಂತ್ರಿಯವರ ಜನಸ್ಪಂದನಕ್ಕೆ ಏಕೆ 20 ಸಾವಿರಕ್ಕೂ ಹೆಚ್ಚು ಜನರು ಬಂದಿದ್ದರು' ಎಂದು ಕೇಳಿದರು.

'ಗ್ಯಾರಂಟಿಗಳನ್ನು ನಾನು ಟೀಕಿಸುವುದಿಲ್ಲ. ಲೋಕಸಭಾ ಚುನಾವಣೆಗಾಗಿ ಇನ್ನೂ ಐದು ಗ್ಯಾರಂಟಿ ಘೋಷಿಸಿ. ಆದರೆ, ಗ್ಯಾರಂಟಿಗಳಿಂದ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಸಿಗುತ್ತಿಲ್ಲ ಎಂದು ನಿಮ್ಮ ಪಕ್ಷದ ಸಚಿವರು, ಶಾಸಕರು ಹೇಳಿದ್ದಾರೆ. ಆ ಬಗ್ಗೆಯೂ ಸ್ಪಷ್ಟತೆ ಕೊಡಿ' ಎಂದು ಕುಮಾರಸ್ವಾಮಿ ಅವರು ಆಗ್ರಹಿಸಿದರು.

'ಪ್ರಜಾವಾಣಿ ವರದಿಗೂ ಎಚ್ಚೆತ್ತುಕೊಳ್ಳದ ಸರ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ನಾಲ್ಕು ವರ್ಷಗಳ ಹಿಂದೆಯೇ ರದ್ದುಗೊಂಡಿದ್ದ 313 ನಿಲಯ ಪಾಲಕರ (ಹಾಸ್ಟೆಲ್ ವಾರ್ಡನ್) ಹುದ್ದೆಗಳಿಗೆ ನಿಯಮಬಾಹಿರವಾಗಿ ಬಡ್ತಿ ನೀಡಿದ್ದ ಪ್ರಕರಣ ಸರ್ಕಾರದ ಕಾರ್ಯವೈಖರಿಗೆ ಸಾಕ್ಷಿ. 'ಪ್ರಜಾವಾಣಿ' ವರದಿ, ಸಂಪಾದಕೀಯಕ್ಕೂ ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಹಿಂದಿನ ಸರ್ಕಾರದ ಅವಧಿಯಲ್ಲೇ ಬಡ್ತಿ ಪ್ರಸ್ತಾವ ಬಂದಿತ್ತು. ಅಂದು ಸಚಿವನಾಗಿದ್ದ ನಾನು ತಿರಸ್ಕರಿಸಿದ್ದೆ. ಸಂಪುಟ ಸಭೆಯ ಮುಂದೆ ಮಂಡಿಸುವಂತೆ ಸೂಚಿಸಿದ್ದೆ. ಅಷ್ಟರಲ್ಲಿ ಚುನಾವಣೆ ಬಂತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಸಂಪುಟ ಸಭೆಯ ಒಪ್ಪಿಗೆ ಪಡೆಯದೇ ಹುದ್ದೆಗಳನ್ನು ಮರು ಸೃಜಿಸಿ ತರಾತುರಿಯಲ್ಲಿ ಬಡ್ತಿ ನೀಡಿತು. ಈ ಕುರಿತು ಆಗಸ್ಟ್‌ನಲ್ಲೇ 'ಪ್ರಜಾವಾಣಿ'ಯು ವರದಿ ಹಾಗೂ ಸಂಪಾದಕೀಯ ಬರೆದು ಎಚ್ಚರಿಸಿತ್ತು' ಎಂದು ವರದಿಗಳನ್ನು ಪ್ರದರ್ಶಿಸಿದರು.

ಸರ್ಕಾರ ತಪ್ಪು ತಿದ್ದಿಕೊಳ್ಳಲಿಲ್ಲ. ಈಗ ಹುದ್ದೆಗಳಿಗೆ ನೀಡಿದ್ದ ಬಡ್ತಿಯನ್ನು ರದ್ದುಪಡಿಸಿ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಆದೇಶ ಹೊರಡಿಸಿದೆ. ಅರ್ಜಿದಾರರಿಗೆ ತಲಾ ₹5 ಸಾವಿರ ಪರಿಹಾರ ನೀಡಲು ಸೂಚಿಸಿದೆ. ಇದೇನಾ ನಿಮ್ಮ ಪಾರದರ್ಶಕ ಆಡಳಿತ ಎಂದು ಪ್ರಶ್ನಿಸಿದರು.

ಮಹಾಭಾರತ ಯುದ್ಧದಲ್ಲಿ ದುರ್ಯೋಧನನಿಂದ 'ಅಶ್ವತ್ಥಾಮ ಹತಃ..ಕುಂಜರಹ' ಹೇಳಿಸಿದಂತೆ ಸತ್ಯವಂತ ರಾಜ್ಯಪಾಲರಿಂದ ಸರ್ಕಾರ ಹಲವು ಸುಳ್ಳುಗಳನ್ನು ಹೇಳಿಸಿದೆ ಎಂದು ಟೀಕಿಸಿದರು.

ಚರ್ಚೆಗೆ ನಾಂದಿಯಾದ 'ಹಾಲುವರ್ತಿ' ಘಟನೆ: ಪರಿಶಿಷ್ಟರ ಅನುದಾನ ಬಳಕೆ ಕುರಿತು ಮಾತನಾಡುವಾಗಲೂ 'ಪ್ರಜಾವಾಣಿ'ಯ ಫೆ.15ರ ಸಂಚಿಕೆಯಲ್ಲಿ ಪ್ರಕಟವಾದ ಕೊಪ್ಪಳ ತಾಲ್ಲೂಕಿನ ಹಾಲುವರ್ತಿ ಗ್ರಾಮದಲ್ಲಿ ದಲಿತರಿಗೆ ಹೋಟೆಲ್, ಕ್ಷೌರದ ಅಂಗಡಿಗಳಲ್ಲಿ ಪ್ರವೇಶ ನಿರಾಕರಣೆ ಕುರಿತ ಲೇಖನ ಪ್ರದರ್ಶಿಸಿದರು.

ಇಂತಹ ನಡವಳಿಕೆಗಳಿಗೆ ಮನು ಸಂಸ್ಕೃತಿ ಅನುಸರಣೆ ಕಾರಣ ಎಂಬ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಮತ್ತು ಉಮಾಶ್ರೀ ಅವರ ಹೇಳಿಕೆ ಬಿಜೆಪಿ–ಕಾಂಗ್ರೆಸ್ ಮಧ್ಯೆ ವಾಗ್ವಾದ ಹುಟ್ಟು ಹಾಕಿತು.

ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ಪುರಿ ದೇವಸ್ಥಾನದ ಪ್ರವೇಶ ನಿರಾಕರಣೆ, ದ್ರೌಪದಿ ಮುರ್ಮು ಅವರನ್ನು ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಗೆ ಆಹ್ವಾನಿಸದೇ ಇರುವುದು ಯಾವ ಪದ್ಧತಿ? ಇಂತಹ ಆಚರಣೆಗಳ ನಿರ್ಮೂಲನೆ ಮಾಡಲು ರಾಜ್ಯ ಸರ್ಕಾರ ಶ್ರಮಿಸುತ್ತಿದೆ. ಗಾಂಧಿ ಕೊಂದ ಗೋಡ್ಸೆ ಆರಾಧಕರು ಇಂತಹ ಕೆಲಸ ಮಾಡುತ್ತಿದ್ದಾರೆ ಎಂದು ಹರಿಪ್ರಸಾದ್ ಆರೋಪಿಸಿದರು.

'ನಿಮ್ಮದು ಸ್ವಾತಂತ್ರ್ಯ ಹೋರಾಟದ ಕಾಂಗ್ರೆಸ್ ಅಲ್ಲ, ಈಗ ಸೋನಿಯಾ ಕಾಂಗ್ರೆಸ್. ಮಹಾತ್ಮಾ ಗಾಂಧಿ ಬೇರೆ, ನಿಮ್ಮ ಸೋನಿಯಾ ಗಾಂಧಿ ಬೇರೆ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಟೀಕಿಸಿದರು.

ಸಿ.ಎಂ ಕ್ಷಮೆಗೆ ಪಟ್ಟು: ಬಿಜೆಪಿ–ಜೆಡಿಎಸ್ ಸದಸ್ಯರ ಸಭಾತ್ಯಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಳಸಿದ ಆಕ್ಷೇಪಾರ್ಹ ಪದಕ್ಕೆ ಕ್ಷಮೆ ಅಥವಾ ವಿಷಾದ ವ್ಯಕ್ತಪಡಿಸಬೇಕೆಂದು ಪಟ್ಟು ಹಿಡಿದ ಬಿಜೆಪಿ–ಜೆಡಿಎಸ್ ಸದಸ್ಯರು, ತಮ್ಮ ಬೇಡಿಕೆಗೆ ಮನ್ನಣೆ ಸಿಗಲಿಲ್ಲವೆಂದು ಗುರುವಾರ ಸಭಾತ್ಯಾಗ ಮಾಡಿದರು.

ವಿಧಾನಪರಿಷತ್ತಿನಲ್ಲಿ ಸಿದ್ದರಾಮಯ್ಯ ಬಳಸಿದ ಪದವೊಂದು ಆಡಳಿತ–ವಿರೋಧ ಪಕ್ಷಗಳ ಸದಸ್ಯರ ಆರೋಪ– ಪ್ರತ್ಯಾರೋಪ, ಅಬ್ಬರದ ಮಾತುಗಳಿಗೆ ಕಾಣವಾಯಿತು. ಪರಿಸ್ಥಿತಿ ನಿಭಾಯಿಸಲು ಸದನವನ್ನು 10 ನಿಮಿಷ ಅವಧಿಗೆ ಸಭಾಪತಿ ಬಸವರಾಜ ಹೊರಟ್ಟಿ ಮುಂದೂಡಿದರು.

ಸುಮಾರು ಒಂದೂವರೆ ತಾಸಿನ ಬಳಿಕ ಕಲಾಪ ಮತ್ತೆ ಆರಂಭವಾದರೂ ವಿರೋಧ ಪಕ್ಷಗಳ ಸದಸ್ಯರು ಪಟ್ಟು ಸಡಿಲಿಸಲಿಲ್ಲ. ಮುಖ್ಯಮಂತ್ರಿ ಬೆಂಬಲಕ್ಕೆ ಕಾಂಗ್ರೆಸ್ ಸದಸ್ಯರು ನಿಂತರೆ, ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಒಂದಾಗಿ ಕಾಂಗ್ರೆಸ್ ವಿರುದ್ಧ ಮುಗಿಬಿದ್ದರು. ಬಳಿಕ, ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಸಭಾಪತಿ ಅವಕಾಶ ನೀಡುತ್ತಿದ್ದಂತೆ ವಿರೋಧ ಪಕ್ಷಗಳ ಸದಸ್ಯರು ಸದನದಿಂದ ಹೊರನಡೆದರು.

ಪ್ರಶ್ನೋತ್ತರ ಕಲಾಪದ ವೇಳೆ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರ ನೀಡುತ್ತಿದ್ದ ವೇಳೆ, 'ಕೇಂದ್ರ ಸರ್ಕಾರ ನೀಡುವ ತೆರಿಗೆ ಪಾಲಿನಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ' ಎಂದು ಮುಖ್ಯಮಂತ್ರಿ ದೂರುತ್ತಿದ್ದಂತೆ ಬಿಜೆಪಿಯ ರುದ್ರೇಗೌಡ ಅವರು ಕೈ ಎತ್ತಿ ಮಾತನಾಡಲು ಮುಂದಾಗಿದ್ದರು. ಸಿಡಿಮಿಡಿಗೊಂಡ ಸಿದ್ದರಾಮಯ್ಯ, 'ನಾನಿನ್ನು ಉತ್ತರವನ್ನೇ ಮುಗಿಸಿಲ್ಲ. ಏಯ್ ಕುಳಿತುಕೊಳ್ಳಿ' ಎಂದು ಏರಿದ ಧ್ವನಿಯಲ್ಲಿ ಗದರಿಸಿದ್ದು ವಾಕ್ಸಮರ ಆರಂಭಕ್ಕೆ ಕಾರಣವಾಯಿತು.

ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ, 'ಪ್ರಶ್ನೋತ್ತರ ಅವಧಿಯಲ್ಲಿ ಒಂದು ಪ್ರಶ್ನೆಗೆ ಐದು ನಿಮಿಷಕ್ಕಿಂತ ಹೆಚ್ಚು ಸಮಯ ನೀಡುವಂತಿಲ್ಲ. ಮುಖ್ಯಮಂತ್ರಿಯದ್ದು ಉತ್ತರವೋ, ಭಾಷಣವೋ? ಮುಖ್ಯಮಂತ್ರಿ ಸುಳ್ಳು ಹೇಳಿ ಸದನದ ದಿಕ್ಕು ತಪ್ಪಿಸುವುದು ಬೇಡ' ಎಂದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನ ಪರಿಷತ್‌ನಲ್ಲಿ ಮಾತನಾಡಿದರು

'ನೀವು ಕನ್ನಡಿಗರ ಪರವೋ ಅಥವಾ ಕನ್ನಡಿಗರ ವಿರೋಧಿಗಳೋ? ನೀವು ಎದ್ದು ನಿಂತು ಮಾತನಾಡಿದರೆ ನಾವು ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳುವುದಿಲ್ಲ. ಇಂಥ ..... ವರ್ತನೆಗೆ ನಾನು ಜಗ್ಗುವುದಿಲ್ಲ' ಎಂದು ಸಿದ್ದರಾಮಯ್ಯ ಅಬ್ಬರಿಸಿದರು.

'ರಾಜ್ಯದ ಜನತೆ ನಿಮಗೆ ಛೀ, ಥೂ ಎಂದು ಉಗಿಯುತ್ತಿದ್ದಾರೆ. ನೀವು ಎಷ್ಟೇ ಸುಳ್ಳು ಹೇಳಿದರೂ ಜನ ನಂಬುವುದಿಲ್ಲ. ಇನ್ನು ಎಷ್ಟು ದಿನ ಇಂಥ ಸುಳ್ಳು ಹೇಳಿಕೊಂಡು ತಿರುಗುತ್ತೀರಿ. ನಿಮ್ಮ ವರ್ತನೆ ನೋಡಿ ನಾನು ಸುಮ್ಮನಿರಬೇಕೇ' ಎಂದೂ ಜೋರು ಧ್ವನಿಯಲ್ಲಿ ಪ್ರಶ್ನಿಸಿದರು.

ನಿರ್ದಿಷ್ಟ ಪದವೊಂದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕೋಟ ಶ್ರೀನಿವಾಸ ಪೂಜಾರಿ, ' ನೀವು ಪದ ಬಳಸಿದ್ದು ಸರಿಯಲ್ಲ. ವಿಧಾನಸೌಧದಲ್ಲಿ ತೊಡೆ ತಟ್ಟಿದವರು ಯಾರು ಎಂಬುದು ಗೊತ್ತಿದೆ. ನಮ್ಮ ಬಳಿಯೂ ದಾಖಲೆಗಳಿವೆ. ನಾವು ಚರ್ಚೆಗೆ ಸಿದ್ಧ' ಎಂದು ತಿರುಗೇಟು ನೀಡಿದರು. ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ವೈ.ಎ. ನಾರಾಯಣಸ್ವಾಮಿ ಸೇರಿದಂತೆ ಬಿಜೆಪಿಯ ಎಲ್ಲ ಸದಸ್ಯರೂ ದನಿಗೂಡಿಸಿದರು. ಗದ್ದಲ ಹೆಚ್ಚುತ್ತಿದ್ದಂತೆ ಕಲಾಪವನ್ನು ಸಭಾಪತಿ ಮುಂದೂಡಿದರು.

> ನಾನು ಯಾವುದೇ ದುರುದ್ದೇಶ ಇಟ್ಟುಕೊಂಡು ಆ ಪದ ಬಳಕೆ ಮಾಡಿಲ್ಲ. ಕಡತದಿಂದ ತೆಗೆದ ಮೇಲೆಯೂ ನೀವು ಸದನಕ್ಕೆ ಅಡ್ಡಿಪಡಿಸಿದರೆ ಹೇಗೆ? ಅವು ಅಸಂಸದೀಯ ಪದ ಅಲ್ಲ
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಮತ್ತೆ ಕಲಾಪ ಆರಂಭವಾಗುತ್ತಿದ್ದಂತೆ ಜೆಡಿಎಸ್‌ನ ಟಿ.ಎ. ಶರವಣ, 'ಮುಖ್ಯಮಂತ್ರಿ ಬಳಸಿದ ಕೆಲವು ಪದಗಳು ಎಷ್ಟರಮಟ್ಟಿಗೆ ಸರಿ' ಎಂದು ಪ್ರಶ್ನಿಸಿದರು. ಈ ವೇಳೆ ಮತ್ತೆ ಗದ್ದಲ ಉಂಟಾಯಿತು.

ಆಗ ಸಭಾಪತಿ, 'ಮುಖ್ಯಮಂತ್ರಿ ಬಳಸಿದ ಪದವನ್ನು ನಾನು ಕಡತದಿಂದ ಈಗಾಗಲೇ ತೆಗೆದುಹಾಕಲು ಸೂಚಿಸಿದ್ದೇನೆ. ಮತ್ತೆ ಅದೇ ವಿಷಯದ ಬಗ್ಗೆ ಚರ್ಚೆ ಬೇಡ' ಎಂದರು. 'ಕಡತದಿಂದ ತೆಗೆದು ಹಾಕಿದ್ದೇನೆ ಎಂದ ಮಾತ್ರಕ್ಕೆ ಯಾರು ಏನು ಬೇಕಾದರೂ ಮಾತನಾಡಬಹುದೇ? ಆಡಿದ ಮಾತಿಗೆ ವಿಷಾದ ಬೇಡವೇ' ಎಂದು ಕೋಟ ಶ್ರೀನಿವಾಸ ಪೂಜಾರಿ ಪ್ರಶ್ನಿಸಿದರೆ, 'ಮುಖ್ಯಮಂತ್ರಿ ವಿಷಾದ ವ್ಯಕ್ತಪಡಿಸುವಂತೆ ಸಭಾಪತಿ ನಿರ್ದೇಶನ ನೀಡಬೇಕು' ಎಂದು ಎನ್. ರವಿಕುಮಾರ್ ಕೋರಿದರು.

'ನಾನು ಯಾರಿಗೂ ನಿರ್ದೇಶನ ನೀಡಲು ಬರುವುದಿಲ್ಲ. ನಾನು ಯಾರಿಗೂ ಹೀಗೇ ಮಾತನಾಡಿ ಎಂದು ಹೇಳಲಾಗುವುದಿಲ್ಲ. ಸದನದಲ್ಲಿ ಪರಿಸ್ಥಿತಿ ತಿಳಿಯಾಗಲಿ ಎಂದು ಆ ಪದಗಳನ್ನು ಕಡತದಿಂದ ತೆಗೆದು ಹಾಕುವಂತೆ ಸೂಚಿಸಿದ್ದೇನೆ' ಎಂದರು.



ಸಭಾತ್ಯಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ನಡೆದ ವಿಧಾನ ಪರಿಷತ್ ಕಲಾಪದಲ್ಲಿ ವಿರೋಧ ಪಕ್ಷಗಳ ಎಲ್ಲ ನಾಯಕರು ಮತ್ತು ಸದಸ್ಯರನ್ನು ..... ಎಂದು ಸಂಬೋಧಿಸಿದ್ದನ್ನು ವಿರೋಧಿಸಿ ವಿಪಕ್ಷ ನಾಯಕರು ಮತ್ತು ಸದಸ್ಯರು ಸಭಾತ್ಯಾಗ ಮಾಡಿದರು –ಪ್ರಜಾವಾಣಿ ಚಿತ್ರ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿಕೆ

'2025ರೊಳಗೆ 500 ಇಂಗ್ಲಿಷ್ ಮಾಧ್ಯಮ ಶಾಲೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳತ್ತ ಮಕ್ಕಳನ್ನು ಸೆಳೆಯುವುದಕ್ಕಾಗಿ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯ ನೆರವಿನಲ್ಲಿ 500 ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು 2025ರೊಳಗೆ ಆರಂಭಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಆರಗ ಜ್ಞಾನೇಂದ್ರ ಅವರ ಪ್ರಶ್ನೆಗೆ ಗುರುವಾರ ಉತ್ತರಿಸಿದ ಸಚಿವರು, 'ರಾಜ್ಯದಲ್ಲಿ ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಹೆಚ್ಚಿನ ಬೇಡಿಕೆ ಇದೆ. ಆದರೆ, ಕನ್ನಡ ಭಾಷೆಗೂ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸಬೇಕಿದೆ. ಈ ಕಾರಣದಿಂದ ಕನ್ನಡ ಮತ್ತು ಇಂಗ್ಲಿಷ್ ಎರಡೂ ಮಾಧ್ಯಮಗಳ ಆಯ್ಕೆಯ ಸೌಲಭ್ಯವಿರುವ 500 ಶಾಲೆಗಳನ್ನು ಆರಂಭಿಸಲಾಗುವುದು' ಎಂದರು.

ಸರ್ಕಾರಿ ಶಾಲೆಗಳಿಂದ ಮಕ್ಕಳು ದೂರ ಹೋಗಲು ಇಂಗ್ಲಿಷ್ ಮಾಧ್ಯಮದ ಶಿಕ್ಷಣವೂ ಪ್ರಮುಖ ಕಾರಣ ಎಂಬುದು ಪರಿಶೀಲನೆ ವೇಳೆ ಗಮನಕ್ಕೆ ಬಂದಿದೆ. ಆದ್ದರಿಂದ ಒಂದೇ ಶಾಲೆಯ ಆವರಣದಲ್ಲಿ ಎರಡೂ ಮಾಧ್ಯಮದ ಶಾಲೆಗಳನ್ನು ಪ್ರಾರಂಭಿಸುವ ಹೊಸ ಯೋಜನೆ ಅನುಷ್ಠಾನಕ್ಕೆ ತರಲಾಗುವುದು ಎಂದು ಹೇಳಿದರು.

ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ ರಾಜ್ಯದಲ್ಲಿ ಇಂಗ್ಲಿಷ್ ಮಾಧ್ಯಮದ ಸರ್ಕಾರಿ ಶಾಲೆಗಳನ್ನು ಆರಂಭಿಸಲು ಅನುಮತಿ ನೀಡಲಾಗಿತ್ತು. ಶಿವಮೊಗ್ಗ ಜಿಲ್ಲೆಯಲ್ಲೂ ಅಂತಹ 59 ಶಾಲೆಗಳಿಗೆ ಅನುಮತಿ ನೀಡಲಾಗಿತ್ತು. ಅದರಲ್ಲಿ ಮಕ್ಕಳ ಸಂಖ್ಯೆಯ ಕೊರತೆಯೂ ಸೇರಿದಂತೆ ತಾಂತ್ರಿಕ ಕಾರಣಗಳಿಂದ ಕೆಲವು ಶಾಲೆಗಳು ಆರಂಭವಾಗಿಲ್ಲ ಎಂದರು.

ಅಧಿಕಾರಿಗಳ ವಿರುದ್ಧ ಆರಗ ವಾಗ್ದಾಳಿ: ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮಳಲಿಮಕ್ಕಿ ಮತ್ತು ಹೆದ್ದೂರು ಪ್ರೌಢ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ವಿಭಾಗ ಆರಂಭಿಸಲು ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ ಎಂಬ ಕಾರಣದಿಂದ ಅನುಮತಿ ನಿರಾಕರಿಸಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಜ್ಞಾನೇಂದ್ರ, 'ಸಚಿವರೇ ಐಎಎಸ್ ಅಧಿಕಾರಿಗಳ ಮಾತು ನಂಬಬೇಡಿ. ಇವರೆಲ್ಲರೂ ಸೇರಿಕೊಂಡು ಬಡವರ ಮಕ್ಕಳನ್ನು ತುಳಿಯುತ್ತಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

'ಐಎಎಸ್, ಕೆಎಎಸ್ ಅಧಿಕಾರಿಗಳ ಮಕ್ಕಳು ಒಳ್ಳೆಯ ಶಾಲೆಗಳಲ್ಲಿ ಕಲಿತು ಐಎಎಸ್, ಐಪಿಎಸ್ ಅಧಿಕಾರಿಗಳೇ ಆಗಬೇಕು. ಬಡವರ ಮಕ್ಕಳಿಗೆ ಆ ಸೌಲಭ್ಯ ದೊರಕಬಾರದು ಎಂಬ ದುರುದ್ದೇಶ ಅವರದ್ದು. ಐಎಎಸ್, ಕೆಎಎಸ್ ಅಧಿಕಾರಿಗಳ ಮಕ್ಕಳೂ ಸರ್ಕಾರಿ ಶಾಲೆಗಳಿಗೆ ಬರಲಿ. ಅವರಿಗೆ ಒಳ್ಳೆಯ ಊಟ ಹಾಕಿಸುತ್ತೇನೆ' ಎಂದರು.

ಸರ್ಕಾರಿ ಶಾಲೆಗಳಲ್ಲಿ ಸಾರ್ವಜನಿಕ ನೆರವಿನಲ್ಲಿ ಇಂಗ್ಲಿಷ್ ಮಾಧ್ಯಮ ವಿಭಾಗಕ್ಕೆ ಅನುಮತಿ ಕೋರಿದರೆ ತಿರಸ್ಕರಿಸಬಾರದು. 'ಸರ್ಕಾರದಿಂದ ಯಾವುದೇ ಸೌಲಭ್ಯ ಕೊಡುವುದಿಲ್ಲ' ಎಂಬ ಷರತ್ತು ವಿಧಿಸಿಯಾದರೂ ಅನುಮತಿ ನೀಡಬೇಕು ಎಂದು ಆಗ್ರಹಿಸಿದರು.

ಬೆಂಬಲಕ್ಕೆ ನಿಂತ ಸಭಾಧ್ಯಕ್ಷ ಖಾದರ್

ಆರಗ ಜ್ಞಾನೇಂದ್ರ ಬೆಂಬಲಕ್ಕೆ ನಿಂತ ಸಭಾಧ್ಯಕ್ಷ ಯು.ಟಿ. ಖಾದರ್, 'ನನ್ನ ಕ್ಷೇತ್ರದ ಸರ್ಕಾರಿ ಶಾಲೆಯೊಂದರಲ್ಲಿ 40 ಮಕ್ಕಳಿದ್ದರು. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ ಎಂಬ ಕಾರಣಕ್ಕೆ ಅಧಿಕಾರಿಗಳು ಶಾಲೆ ಮುಚ್ಚಲು ಹೊರಟಿದ್ದರು. ಸ್ಥಳೀಯರ ನೆರವಿನಲ್ಲಿ ಇಂಗ್ಲಿಷ್ ಮಾಧ್ಯಮ ವಿಭಾಗ ಆರಂಭಿಸಿದೆವು. ಈಗ 800 ಮಕ್ಕಳಿದ್ದಾರೆ. ಸಾರ್ವಜನಿಕರ ನೆರವು ಬಳಸಿಕೊಂಡು ಇಂಗ್ಲಿಷ್ ಮಾಧ್ಯಮ ವಿಭಾಗ ಆರಂಭಿಸಲು ಅನುಮತಿ ಕೊಡಿ' ಎಂದು ಸಚಿವರಿಗೆ ಸೂಚಿಸಿದರು.

ಅನುದಾನವಿಲ್ಲದೇ ಕೊಠಡಿ ಮಂಜೂರು

'ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ ಹೆಚ್ಚಿನ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿತ್ತು. ಆದರೆ, ಅನುದಾನ ಒದಗಿಸಿರಲಿಲ್ಲ. ಇದರಿಂದಾಗಿ ಇಲಾಖೆಯಲ್ಲಿ ಹೊಸ ಕೊಠಡಿಗಳ ಮಂಜೂರಾತಿಗೆ ತೊಡಕಾಗಿದೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ಕಾಂಗ್ರೆಸ್‌ನ ಪಿ.ಎಂ. ನರೇಂದ್ರಸ್ವಾಮಿ ಪ್ರಶ್ನೆಗೆ ಉತ್ತರಿಸಿದರು.

ಕೊಪ್ಪಳ ತಾಲ್ಲೂಕಿನ ಹಾಲವರ್ತಿ ಗ್ರಾಮದಲ್ಲಿ ನಡೆದಿದ್ದ ಪ್ರಕರಣ

ಅಸ್ಪೃಶ್ಯತೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಕೊಪ್ಪಳ: ತಾಲ್ಲೂಕಿನ ಹಾಲವರ್ತಿ ಗ್ರಾಮದಲ್ಲಿ ಅಸ್ಪೃಶ್ಯತೆ ಆಚರಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಅದೇ ಗ್ರಾಮದ ಮೂವರ ವಿರುದ್ಧ ಎಫ್ಐಆರ್ ದಾಖಲಾಗಿದ್ದು, ಇಬ್ಬರನ್ನು ಬಂಧಿಸಲಾಗಿದೆ.

ಹಾಲವರ್ತಿ ಗ್ರಾಮದಲ್ಲಿ ದಲಿತರು ಹೋಟೆಲ್ ಪ್ರವೇಶಿಸಿದರೆ ಹೋಟೆಲ್ ಬಂದ್ ಮಾಡಲಾಗುತ್ತಿತ್ತು. ಕ್ಷೌರದ ಅಂಗಡಿ, ದೇವಸ್ಥಾನ ಹಾಗೂ ಕೆರೆ ಪ್ರವೇಶಕ್ಕೆ ನಿರ್ಬಂಧವಿತ್ತು.

ಮಾಧ್ಯಮಗಳಲ್ಲಿ ಬುಧವಾರ ವರದಿ ಪ್ರಕಟವಾಗುತ್ತಿದ್ದಂತೆ ತಡರಾತ್ರಿ ಕ್ಷೌರಿಕ ಅಂಗಡಿಯವರಾದ ಯಂಕೋಬಾ ಹಡಪದ, ಅಂಜಿನಪ್ಪ ಮತ್ತು ಹೋಟೆಲ್ ಮಾಲೀಕ ಸಂಜೀವಪ್ಪ ಗುಳದಳ್ಳಿ ವಿರುದ್ಧ ಎಫ್ಐಆರ್ ದಾಖಲಾಗಿದೆ. ಇದರಲ್ಲಿ ಯಂಕೋಬಾ ಹಾಗೂ ಸಂಜೀವಪ್ಪ ಅವರನ್ನು ಬಂಧಿಸಲಾಗಿದ್ದು, ಇನ್ನೊಬ್ಬ ಆರೋಪಿಯ ಶೋಧ ನಡೆದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ತಿಳಿಸಿದ್ದಾರೆ.

ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಮತ್ತು ಡಿವೈಎಸ್‌ಪಿ ಮುತ್ತಣ್ಣ ಸವರಗೋಳ ಅವರು ಗುರುವಾರ ಎಲ್ಲ ಸಮುದಾಯಗಳ ಶಾಂತಿ ಸಭೆ ನಡೆಸಿದರು. 'ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಈ ರೀತಿಯ ಘಟನೆ ಮರುಕಳಿಸದಂತೆ ಕಠಿಣ ಕ್ರಮ ಜರುಗಿಸಲಾಗುವುದು' ಎಂದು ಭರವಸೆ ನೀಡಿದರು.

ದಲಿತರಿಗೆ ಪ್ರವೇಶ ನಿರ್ಬಂಧಿಸಿದ್ದ ಹೋಟೆಲ್‌ನಲ್ಲಿಯೇ ಉಪಾಹಾರ ವ್ಯವಸ್ಥೆ ಮಾಡಲಾಗಿತ್ತು. ಗ್ರಾಮದೇವತೆ ಮತ್ತು ಆಂಜನೇಯನ ದೇವಸ್ಥಾನಕ್ಕೆ ದಲಿತರನ್ನು ಕರೆದುಕೊಂಡು ಹೋದ ಅಧಿಕಾರಿಗಳು, ಎಲ್ಲರ ಸಮ್ಮುಖದಲ್ಲಿ ದೇವರ ಮೂರ್ತಿಗೆ ಪೂಜೆ ಸಲ್ಲಿಸಿದರು.



ಕೊಪ್ಪಳ ತಾಲ್ಲೂಕಿನ ಹಾಲವರ್ತಿ ಗ್ರಾಮದಲ್ಲಿ ದಲಿತರಿಗೆ ನಿರ್ಬಂಧಿಸಿದ್ದ ಹೋಟೆಲ್‌ನಲ್ಲಿ ಗುರುವಾರ ಎಲ್ಲ ಸಮುದಾಯದ ಜನ ಉಪಾಹಾರ ಸವಿದರು –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಗ್ರಾಮದ ಮೂವರ ವಿರುದ್ಧ ಎಫ್ಐಆರ್
- ಒಬ್ಬ ಆರೋಪಿಗಾಗಿ ಶೋಧ
- ಘಟನೆ ಮರುಕಳಿಸದಂತೆ ಕಠಿಣ ಕ್ರಮ: ಭರವಸೆ

ಸಾಗರದ 34 ಖನಿಜ ಘಟಕಗಳು ಹರಾಜಿಗೆ ಸಿದ್ಧ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಭಾರತದ ಆರ್ಥಿಕ ವಲಯದ ವ್ಯಾಪ್ತಿಯ ಸಾಗರದಲ್ಲಿ ಖನಿಜಗಳ 35 ಘಟಕಗಳನ್ನು ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆ (ಜಿಎಸ್ಐ) ಪತ್ತೆ ಹಚ್ಚಿದ್ದು, ಹರಾಜು ಪ್ರಕ್ರಿಯೆಗಾಗಿ ಅವುಗಳನ್ನು ಕೇಂದ್ರ ಸರ್ಕಾರದ ಸುಪರ್ದಿಗೆ ಒಪ್ಪಿಸಿದೆ. ಇಂತಹದ್ದೇ ಇನ್ನೂ 24 ಖನಿಜ ಘಟಕಗಳ ಪರಿಶೋಧನಾ ಕಾರ್ಯ ಪ್ರಗತಿಯಲ್ಲಿದೆ' ಎಂದು ಕೇಂದ್ರ ಗಣಿ ಸಚಿವಾಲಯದ ಕಾರ್ಯದರ್ಶಿ ವಿ.ಎಲ್. ಕಾಂತಾ ರಾವ್ ತಿಳಿಸಿದರು.

ಕೇಂದ್ರ ಗಣಿ ಸಚಿವಾಲಯ ಮತ್ತು ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆಯ (ಜಿಎಸ್ಐ) ಸಮುದ್ರ ಮತ್ತು ಕರಾವಳಿ ಸರ್ವೇಕ್ಷಣಾ ವಿಭಾಗದ (ಎಂಸಿಎಸ್‌ಡಿ) ಆಶ್ರಯದಲ್ಲಿ ಇಲ್ಲಿ ಗುರುವಾರ ಏರ್ಪಡಿಸಿದ್ದ ಸಾಗರ ಪರಿಶೋಧದಲ್ಲಿ ಸಮನ್ವಯ ಮತ್ತು ಅವಕಾಶಗಳು ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಸಾಗರದ ಖನಿಜ ಘಟಕಗಳ ಪರಿಶೋಧನೆ ಹಾಗೂ ಅವುಗಳ ಬಳಕೆ ನಮ್ಮ ಸಚಿವಾಲಯಕ್ಕೂ ಹೊಸ ಅನುಭವ. ಇದನ್ನು ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸಲು 2022ರ ಸಾಗರ ಪ್ರದೇಶಗಳ ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆಗೆ ತಿದ್ದುಪಡಿ ತರಲು ತಯಾರಿ ನಡೆದಿದೆ. ಈ ತಿದ್ದುಪಡಿ ಕಾಯ್ದೆ ಜಾರಿಯಾದ ಎರಡು ಮೂರು ತಿಂಗಳ ಒಳಗೆ ಸಾಗರದ ಖನಿಜ ಘಟಕಗಳ ಹರಾಜು ಪ್ರಕ್ರಿಯೆಯನ್ನು ಆರಂಭಿಸಲಿದ್ದೇವೆ. ಖಾಸಗಿ ರಂಗದವರು ಈ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕೆ ಅನುವು ಮಾಡಿಕೊಡಲಾಗುತ್ತದೆ. ಈ ಸಲುವಾಗಿ ನಿಯಮಾವಳಿಗಳನ್ನು ಹಾಗೂ ಪ್ರಮಾಣೀಕೃತ ಕಾರ್ಯವಿಧಾನಗಳನ್ನು ರೂಪಿಸಲಾಗುತ್ತಿದೆ' ಎಂದರು.


ವಿ.ಎಲ್. ಕಾಂತಾ ರಾವ್

ಜಿಎಸ್ಐನ ಪ್ರಧಾನ ನಿರ್ದೇಶಕ ಜನಾರ್ದನ ಪ್ರಸಾದ್, 'ದೇಶದ ಆರ್ಥಿಕ ವಲಯದ ವ್ಯಾಪ್ತಿಯ ಸಾಗರದಲ್ಲಿ ಬಹುಲೋಹ ಘಟಕಗಳು, ಭಾರ ಖನಿಜದ ಮರಳಿನ ಕಣಗಳು, ನಿರ್ಮಾಣ ಕಾರ್ಯಕ್ಕೆ ಬಳಸುವ ಮರಳು ಯಥೇಚ್ಛವಾಗಿ ಲಭ್ಯ. ಇಷ್ಟೊಂದು ಸಂಪನ್ಮೂಲಗಳಿದ್ದರೂ ಅವುಗಳ ಸದ್ಬಳಕೆ ಪ್ರಯತ್ನ ನಡೆದಿಲ್ಲ. 1970ರಿಂದಲೇ ಸಾಗರ ಪರಿಶೋಧನಾ ಕಾರ್ಯದಲ್ಲಿ ತೊಡಗಿದ್ದ ಜಿಎಸ್ಐ ಇಂತಹ ಅನೇಕ ಸಂಪನ್ಮೂಲಗಳನ್ನು ಪತ್ತೆ ಹಚ್ಚಿದೆ. ದೇಶವು ತ್ವರಿತವಾಗಿ ಆರ್ಥಿಕ ಅಭಿವೃದ್ಧಿ ಸಾಧಿಸಬೇಕೆಂಬ ಕಾರಣಕ್ಕೆ ಕೇಂದ್ರ ಸರ್ಕಾರವು ಸಾಗರದ ಖನಿಜ ಸಂಪನ್ಮೂಲಗಳ ಗಣಿಗಾರಿಕೆಗೆ ಅವಕಾಶ ಕಲ್ಪಿಸಲು ಮುಂದಾಗಿದೆ. ಈ ಸಂಪನ್ಮೂಲವನ್ನು ಸುಸ್ಥಿರವಾಗಿ ಹಾಗೂ ಅತ್ಯಂತ ಜತನವಾಗಿ ಬಳಕೆ ಮಾಡಬೇಕಿದೆ. ಭವಿಷ್ಯದ ತಲೆಮಾರುಗಳಿಗೂ ಇದರಿಂದ ಪ್ರಯೋಜನವಾಗುವಂತೆ ನೋಡಿಕೊಳ್ಳಬೇಕಿದೆ' ಎಂದರು.

2022ರ ಸಾಗರ ಪ್ರದೇಶಗಳ ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ ತಿದ್ದುಪಡಿಯ ಬಗ್ಗೆ ಕೇಂದ್ರ ಗಣಿ ಸಚಿವಾಲಯದ ನಿರ್ದೇಶಕ ಮುಷ್ತಾಕ್ ಅಹಮದ್ ವಿವರಿಸಿದರು. ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆಯ ಎಂಸಿಎಸ್ ವಿಭಾಗದ ಮುಖ್ಯಸ್ಥ ಬಸಬ್ ಮುಖೋಪಾಧ್ಯಾಯ ಭಾಗವಹಿಸಿದ್ದರು.

'ಕರಿಮಣಿ ಮಾಲೀಕ' ರೀಲ್ಸ್; ಪತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಹನೂರು (ಚಾಮರಾಜ ನಗರ): 'ಕರಿಮಣಿ ಮಾಲೀಕ ನೀನಲ್ಲ' ಎಂಬ ಹಾಡಿಗೆ ಪತ್ನಿಯು ಸೋದರ ಮಾವನೊಂದಿಗೆ ರೀಲ್ಸ್ ಮಾಡಿದ್ದರಿಂದ ಪತಿಯು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ಪಿ.ಜಿ.ಪಾಳ್ಯದಲ್ಲಿ ಬುಧವಾರ ರಾತ್ರಿ ನಡೆದಿದೆ.


ಕುಮಾರ್

ಗ್ರಾಮದ ಕುಮಾರ್ (33) ಆತ್ಮಹತ್ಯೆ ಮಾಡಿಕೊಂಡವರು. ಅವರ ಪತ್ನಿ ರೂಪಾ, ತನ್ನ ಸೋದರ ಮಾವ ಗೋವಿಂದ ಮತ್ತು ಸಹೋದರಿ ಯಶೋಧ ಜೊತೆ ಫೆ.10ರಂದು ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಿದ್ದರು. ಅದನ್ನು ಸ್ನೇಹಿತರು ಕುಮಾರ್ ಗಮನಕ್ಕೆ ತಂದಿದ್ದರು. ರೀಲ್ಸ್ ಬಗ್ಗೆ ದಂಪತಿ ನಡುವೆ ಮಾತಿನ ಚಕಮಕಿ ನಡೆದಿದ್ದು, ಕುಮಾರ್ ಮನೆ ಮುಂಭಾಗದ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರು ಎನ್ನಲಾಗಿದೆ. ರೂಪಾ ಹಾಗೂ ಇತರ ಇಬ್ಬರ ವಿರುದ್ಧ ಅವರ ಸೋದರ ಮಹದೇವಸ್ವಾಮಿ ಹನೂರು ಠಾಣೆಯಲ್ಲಿ ದೂರು ನೀಡಿದ್ದಾರೆ.

34.35 ಲಕ್ಷಕ್ಕೂ ಹೆಚ್ಚು ಅಧಿಕ ಸ್ವತ್ತುಗಳಿಗೆ ತೆರಿಗೆ ವಿಧಿಸಲು ಅವಕಾಶ

ಅಕ್ರಮ ಬಡಾವಣೆ: ಬಿ–ಖಾತೆಗೆ ಮಸೂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ನಗರ, ಪಟ್ಟಣಗಳ ಕಂದಾಯ ಭೂಮಿಯಲ್ಲಿ ಅನಧಿಕೃತ ಬಡಾವಣೆ ಮತ್ತು ನಕ್ಷೆ ಮಂಜೂರಾತಿ ಇಲ್ಲದೇ ನಿರ್ಮಿಸಿದ ಕಟ್ಟಡಗಳಿಗೆ ಬಿ–ಖಾತೆ ನೀಡಿ ಕಟ್ಟಡ ತೆರಿಗೆ ವಿಧಿಸುವ ಮಸೂದೆಯನ್ನು ಇದೇ ಅಧಿವೇಶನದಲ್ಲಿ ಮಂಡಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಬಿಬಿಎಂಪಿ ಕಾಯ್ದೆ 2020 ರ ಕಲಂ 144(6) ಮತ್ತು (21) ರ ಅಂಶಗಳನ್ನು ರಾಜ್ಯದ ಇತರ ಮಹಾನಗರ ಪಾಲಿಕೆಗಳು, ನಗರ ಸ್ಥಳೀಯ ಸಂಸ್ಥೆಗಳಿಗೆ ಸಹ ವಿಸ್ತರಣೆ ಮಾಡುವ ಸಂಬಂಧ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976 ಹಾಗೂ ಕರ್ನಾಟಕ ಪುರಸಭೆ ಕಾಯ್ದೆ 1964 ರಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಅರಣ್ಯ ಸಚಿವ ಈಶ್ವರ ಖಂಡ್ರೆ ಅಧ್ಯಕ್ಷತೆಯ ಸಂಪುಟ ಉಪಸಮಿತಿ ಶಿಫಾರಸು ನೀಡಿದೆ. ಇದನ್ನು ಸಂಪುಟ ಒಪ್ಪಿದೆ ಎಂದು ಮೂಲಗಳು ತಿಳಿಸಿವೆ.

ಈಗ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 54.91 ಲಕ್ಷಕ್ಕೂ ಹೆಚ್ಚು ಆಸ್ತಿಗಳಿದ್ದು, ಈ ಪೈಕಿ ಸುಮಾರು 34.35 ಲಕ್ಷಕ್ಕೂ ಹೆಚ್ಚು ಅನಧಿಕೃತ ಆಸ್ತಿಗಳಾಗಿವೆ. ಈ ಸ್ವತ್ತುಗಳಿಗೆ ಕುಡಿಯುವ ನೀರು, ವಿದ್ಯುತ್, ರಸ್ತೆ ಸೇರಿದಂತೆ ಮೂಲಭೂತ ಸೌಕರ್ಯವನ್ನು ಸ್ಥಳೀಯ ಸಂಸ್ಥೆಗಳ ಮೂಲಕ ಕಲ್ಪಿಸಲಾಗುತ್ತಿದ್ದರೂ ತೆರಿಗೆ ವಿಧಿಸಲು ಅವಕಾಶ ಇರಲಿಲ್ಲ.

ಅಕ್ರಮ ಬಡಾವಣೆ: ಕ್ರಿಮಿನಲ್ ಮೊಕದ್ದಮೆ

ಇನ್ನು ಮುಂದೆ ಅನಧಿಕೃತ ಬಡಾವಣೆ ನಿರ್ಮಿಸಿದರೆ ನಿರ್ಮಾಣದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಮತ್ತು ಅದಕ್ಕೆ ಅವಕಾಶ ನೀಡುವ ಅಧಿಕಾರಿಗಳು ಹಾಗೂ ಸಿಬ್ಬಂದಿಯ ವಿರುದ್ಧ ಶಿಸ್ತುಕ್ರಮ ಜರುಗಿಸಿ ಒಂದು ಲಕ್ಷ ರೂಪಾಯಿವರೆಗೂ ದಂಡ ವಿಧಿಸಲು ಮಸೂದೆಯಲ್ಲಿ ಅವಕಾಶ ನೀಡಲಾಗಿದ್ದು, ಇದಕ್ಕೂ ಸಂಪುಟ ಒಪ್ಪಿಗೆ ನೀಡಿದೆ ಎಂದು ಮೂಲಗಳು ಹೇಳಿವೆ.

ಹಿಂದಿನ ಸರ್ಕಾರದ ಅವಧಿಯಲ್ಲಿ 545 ಪಿಎಸ್ಐ ಹುದ್ದೆಗಳ ನೇರ ನೇಮಕದಲ್ಲಿ ನಡೆದಿರುವ ಅಕ್ರಮಗಳ ಕುರಿತು ತನಿಖೆ ನಡೆಸಿರುವ ನ್ಯಾ.ವೀರಪ್ಪ ಆಯೋಗ ವರದಿಯನ್ನು ಸದನದಲ್ಲಿ ಮಂಡಿಸುವ ಕುರಿತು ಚರ್ಚೆ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಇತರ ಪ್ರಮುಖ ನಿರ್ಣಯಗಳು:

- ಲಿಂಗತ್ವ ಅಲ್ಪಸಂಖ್ಯಾತರಿಗೂ ಗೃಹಲಕ್ಷ್ಮಿ ಯೋಜನೆ ವಿಸ್ತರಿಸಿ, ಅವರಿಗೆ ಗುರುತಿನ ಚೀಟಿ ನೀಡಲು ತೀರ್ಮಾನ
- ರಾಜ್ಯ ಕಾನೂನು ವಿಶ್ವವಿದ್ಯಾಲಯದ ಆವರಣದಲ್ಲಿ ₹39.49 ಕೋಟಿ ವೆಚ್ಚದಲ್ಲಿ ಆಡಳಿತ ಕಟ್ಟಡ ನಿರ್ಮಾಣ ಮಾಡಲು ಆಡಳಿತಾತ್ಮಕ ಒಪ್ಪಿಗೆ
- ಬೆಂಗಳೂರಿನ ನೆಫ್ರೋ ಯುರಾಲಜಿ ಸಂಸ್ಥೆಗೆ ರೊಬೋಟಿಕ್ ಯಂತ್ರವನ್ನು ₹20 ಕೋಟಿ ವೆಚ್ಚದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮತಿ
- ಬೆಳಗಾವಿ ನಗರದಲ್ಲಿ ಅಟಲ್ ಬಿಹಾರಿ ವಾಜಪೇಯಿ ಮಾರ್ಗದಲ್ಲಿ ನಿರ್ಮಾಣಗೊಂಡಿರುವ 54 ಮಳಿಗೆಗಳ ಲೀಸ್ ಅವಧಿಯನ್ನು 5 ವರ್ಷಗಳಿಂದ 30 ವರ್ಷಗಳಿಗೆ ವಿಸ್ತರಿಸುವ ಆದೇಶ ರದ್ದು

ಮಸೂದೆಗಳಿಗೆ ಒಪ್ಪಿಗೆ:

- ಕರ್ನಾಟಕ ವೃತ್ತಿಪರ ಸಿವಿಲ್ ಎಂಜಿನಿಯರ್‌ಗಳ ಮಸೂದೆ
- ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆ
- ಶ್ರೀ ಘಾಟಿ ಸುಬ್ರಹ್ಮಣ್ಯ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆ
- ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆ

ಅರಣ್ಯಾಧಿಕಾರಿ ಖುದ್ದು ಹಾಜರಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ನೀಡಿದ್ದ ಮಧ್ಯಂತರ ಆದೇಶವನ್ನು ಮಾನ್ಯ ಮಾಡದೆ, ಅರಣ್ಯ ಒತ್ತುವರಿ ಆರೋಪದಡಿ ಸಾಗುವಳಿ ಚೀಟಿ ಹೊಂದಿದ್ದ ರೈತರ ಮಾವಿನ ತೋಪುಗಳನ್ನು ತೆರವುಗೊಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಕೋಲಾರ ಜಿಲ್ಲೆ ಅರಣ್ಯ ಉಪ ಸಂರಕ್ಷಣಾಧಿಕಾರಿ ಏಡುಕೊಂಡಲ ಮತ್ತು ವಲಯ ಅರಣ್ಯಾಧಿಕಾರಿಗೆ ಸಮನ್ಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಉಪ್ಪಾರ ಪಲ್ಲಿಯ ಗುಲ್ಜಾರ್ ಪಾಷ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಮೊಕದ್ದಮೆಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಹಾಗೂ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಂ.ಶಿವಪ್ರಕಾಶ್, 'ಒತ್ತುವರಿ ಆರೋಪದಡಿ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಅರಣ್ಯಾಧಿಕಾರಿ ಏಡುಕೊಂಡಲು ಮತ್ತು ಅನಿಲ್ ಕುಮಾರ್ ಅವರು ಹೈಕೋರ್ಟ್ ನೀಡಿದ್ದ ಮಧ್ಯಂತರ ಆದೇಶವನ್ನು ಉಲ್ಲಂಘಿಸಿದ್ದಾರೆ' ಎಂದು ಆರೋಪಿಸಿದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ ಮುಂದಿನ ವಿಚಾರಣೆ ವೇಳೆಗೆ ಇಬ್ಬರೂ ಅಧಿಕಾರಿಗಳು ಕೋರ್ಟ್‌ಗೆ ಖುದ್ದು ಹಾಜರಾಗುವಂತೆ ಆದೇಶಿಸಿ ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿತು.

ಆರೋಪ ಏನು?: 'ಪ್ರಕರಣದ ಪ್ರತಿವಾದಿಗಳೂ ಆದ ಅರಣ್ಯ ಅಧಿಕಾರಿಗಳು ಹೈಕೋರ್ಟ್ ಆದೇಶ ಉಲ್ಲಂಘಿಸಿ ಶ್ರೀನಿವಾಸಪುರ ತಾಲ್ಲೂಕಿನ ಪಾಳ್ಯ, ಯಲವಳ್ಳಿ, ಕೇತಗಾನಹಳ್ಳಿ, ಚಿಂತೆ ಕುಂಟೆ, ನಾರಮಾಕಲ ಹಳ್ಳಿ, ಉಪ್ಪರಹಳ್ಳಿ, ಕೋಟಬಲ್ಲಪಲ್ಲಿ, ಇಲದೋಣಿ, ಲಕ್ಷ್ಮೀಪುರ, ಪಾತಪಲ್ಲಿ, ದ್ವಾರಸಂದ್ರ, ಆಲಂಬಗಿರಿ, ಸುಣ್ಣಕಲ್ಲು, ಜಿಂಕಲವಾರಿಪಲ್ಲಿ ಸೇರಿದಂತೆ ಮುಂತಾದ ಕಡೆ 1 ಲಕ್ಷ 30 ಸಾವಿರಕ್ಕೂ ಹೆಚ್ಚಿನ ಮರಗಳನ್ನು ಕಡಿಯಲು ಕಾರಣವಾಗಿದ್ದಾರೆ' ಎಂಬುದು ಅರ್ಜಿದಾರರ ಆರೋಪ.

ಗ್ಯಾನವಾಪಿ- ಪೂಜೆ ಪ್ರಶ್ನಿಸಿದ ಅರ್ಜಿ: 28ರಂದು ವಿಚಾರಣೆ

ವಾರಾಣಸಿ (ಪಿಟಿಐ): ಗ್ಯಾನವಾಪಿ ಮಸೀದಿಯ ನೆಲಮಹಡಿಯಲ್ಲಿ ಪೂಜೆ ಸಲ್ಲಿಸಲು ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಮಸೀದಿ ಸಮಿತಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಇದೇ 28ರಂದು ನಡೆಸಲು ಇಲ್ಲಿನ ನ್ಯಾಯಾಲಯವು ಪಟ್ಟಿ ಮಾಡಿದೆ ಎಂದು ಹಿಂದೂ ಅರ್ಜಿದಾರರ ಪರ ವಕೀಲ ಎಂ.ಎಂ. ಯಾದವ್ ಅವರು ಗುರುವಾರ ತಿಳಿಸಿದರು.

ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ಅನಿಲ್ ಕುಮಾರ್ ಅವರು ವಿಚಾರಣೆಗೆ ದಿನಾಂಕ ನಿಗದಿ ಪಡಿಸಿದ್ದಾರೆ ಎಂದು ಹೇಳಿದರು.

ಮಸೀದಿಯ ನೆಲಮಾಳಿಗೆಯಲ್ಲಿ ಪೂಜೆ ಸಲ್ಲಿಸಲು ಅರ್ಚಕರಿಗೆ ಅನುಮತಿ ನೀಡಿ ವಾರಾಣಸಿಯ ಜಿಲ್ಲಾ ನ್ಯಾಯಾಲಯವು ಜನವರಿ 31ರಂದು ಆದೇಶ ನೀಡಿತ್ತು. ಈ ಆದೇಶವನ್ನು ಪಶ್ನಿಸಿ ಮಸೀದಿ ಸಮಿತಿಯು ಅಲಹಾಬಾದ್ ಹೈಕೋರ್ಟ್‌ಗೂ ಅರ್ಜಿ ಸಲ್ಲಿಸಿತ್ತು.

ಮೂಲ ಹುಡುಕಿ ತಾಯ್ನಾಡಿಗೆ ಬಂದ ಸ್ವೀಡನ್ ಮಹಿಳೆ

ಪ್ರಜಾವಾಣಿ ವಾರ್ತೆ

ಮೈಸೂರು: 35 ವರ್ಷಗಳ ಹಿಂದೆ ಸ್ವೀಡನ್ ಕುಟುಂಬವೊಂದು ಬೆಂಗಳೂರಿನ ಆಶ್ರಯ ಚಿಲ್ಡ್ರನ್ಸ್ ಹೋಂ ಎಂಬ ಸಂಸ್ಥೆಯಿಂದ ಬಾಲಕಿಯೊಬ್ಬಳನ್ನು ದತ್ತು ಪಡೆದಿದ್ದು, ಈಗ ಆಕೆ ತನ್ನ ಕುಟುಂಬದ ಮೂಲ ಹುಡುಕಿಕೊಂಡು ಪತಿಯೊಂದಿಗೆ ಮೈಸೂರಿಗೆ ಬಂದಿದ್ದಾರೆ.

ಸ್ವೀಡನ್ ನಿವಾಸಿ ಜಾಲಿ ಸ್ಯಾಂಡ್‌ಬರ್ಗ್ ತನ್ನ ಪತಿ ಎಡಿನ್ ಹಾಗೂ ಪುಣೆಯ ವಕೀಲೆ ಅಂಜಲಿ ಪವಾರ್ ಜೊತೆಗೂಡಿ ಬಂದಿದ್ದು, ನಗರದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿ, ಸಾರ್ವಜನಿಕರು ಮಾಹಿತಿ ನೀಡುವಂತೆ ಮನವಿ ಮಾಡಿಕೊಂಡರು.

'ಮದ್ದೂರಿನ ಪ್ರೌಢಶಾಲೆ ಬಳಿಯಿಂದ ಹೆಣ್ಣುಮಗಳನ್ನು (ಜಾಲಿ ಸ್ಯಾಂಡ್‌ಬರ್ಗ್) ಆಶ್ರಮಕ್ಕೆ ಸೇರಿಸಲಾಗಿದೆ ಎಂಬ ಮಾಹಿತಿ ಆಧರಿಸಿ ತೆರಳಿದಾಗ ಅಲ್ಲಿ ಆಕೆಯನ್ನು ಜಾನು ಎಂದು ಕರೆಯುತ್ತಿದ್ದುದಾಗಿ ತಿಳಿದು ಬಂತು. ಆಕೆಯ ತಾಯಿ ವಸಂತಾ ಎರಡು ವಿವಾಹವಾಗಿದ್ದು, ಮೈಸೂರಿನಲ್ಲಿ ಮೊದಲ ಪತಿಯೊಂದಿಗೆ ಇದ್ದಾಗ ಜಾನು ಜನಿಸಿದ್ದಳು. ಪತಿಯ ಆತ್ಮಹತ್ಯೆ ಬಳಿಕ ಮಹಿಳೆಯು ಚನ್ನಪಟ್ಟಣದವರೊಬ್ಬರನ್ನು ಮದುವೆಯಾಗಿದ್ದರು. ಆಗ ಜಾನು ಪಕ್ಕದ ಮನೆಯ ಜಯಮ್ಮ ಎಂಬುವವರ ಮಡಿಲು ಸೇರಿದ್ದರು. ಯಾವುದೋ ಕಾರಣಕ್ಕೆ ವಸಂತಮ್ಮನೂ ಆತ್ಮಹತ್ಯೆ ಮಾಡಿಕೊಂಡರು. ಈ ಸಮಯದಲ್ಲಿ ಜಾನು ಅವರನ್ನು ಜಯಮ್ಮ ಬೆಂಗಳೂರಿನ ಸಂಸ್ಥೆಗೆ ಸೇರಿಸಿದ್ದರು ಎಂಬ ಮಾಹಿತಿ ಲಭ್ಯವಾಗಿದೆ' ಎಂದು ವಕೀಲೆ ಅಂಜಲಿ ಪವಾರ್ ತಿಳಿಸಿದರು.

'ಜಾಲಿ ಸ್ಯಾಂಡ್‌ಬರ್ಗ್ ಅವರ ಕುಟುಂಬದ ಇತರೆ ಮಾಹಿತಿ ತಿಳಿದುಬಂದಿಲ್ಲ. ಆಕೆಯ ಬಗ್ಗೆ ತಿಳಿದವರು ಇದ್ದರೆ ಮೊ.ಸಂ 9822206485 ಸಂಪರ್ಕಿಸಿ ಮಾಹಿತಿ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

ಬಿಜೆಪಿ ರಾಷ್ಟ್ರೀಯ ಮಂಡಳಿ ಸಭೆ ನಾಳೆಯಿಂದ

ನವದೆಹಲಿ (ಪಿಟಿಐ): ಎರಡು ದಿನಗಳು ನಡೆಯಲಿರುವ ಬಿಜೆಪಿ ರಾಷ್ಟ್ರೀಯ ಮಂಡಳಿ ಸಭೆಯು ಇಲ್ಲಿಯ ಭಾರತ ಮಂಟಪಂನಲ್ಲಿ ಫೆಬ್ರುವರಿ 17ರಂದು ಆರಂಭವಾಗಲಿದೆ. ಸುಮಾರು 11,500 ಪ್ರತಿನಿಧಿಗಳು ಸಭೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ಪಕ್ಷವು ಗುರುವಾರ ತಿಳಿಸಿದೆ.

ಬಿಜೆಪಿ ಹಿರಿಯ ನಾಯಕ ರವಿಶಂಕರ್ ಪ್ರಸಾದ್ ಅವರು ಪಕ್ಷದ ಮುಖ್ಯಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದರು. ದೇಶದಾದ್ಯಂತ ಇರುವ ಪಕ್ಷದ ಪದಾಧಿಕಾರಿಗಳು, ಚುನಾಯಿತ ಮೇಯರ್‌ಗಳು, ಹಾಲಿ ಮತ್ತು ಮಾಜಿ ಶಾಸಕರು ಹಾಗೂ ಸಂಸದರು ಸಭೆಯಲ್ಲಿ ಭಾಗಿಯಾಗುವ ಪ್ರತಿನಿಧಿಗಳಲ್ಲಿ ಸೇರಿದ್ದಾರೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಸಭೆಯ ಉದ್ಘಾಟನಾ ಭಾಷಣ ಮಾಡಲಿದ್ದಾರೆ. ಸಭೆಯ 2ನೇ ದಿನವಾದ ಫೆ.18ರಂದು ಪ್ರಧಾನಿ ನರೇಂದ್ರ ಮೋದಿ ಅವರು ಸಮಾರೋಪ ಭಾಷಣ ಮಾಡಲಿದ್ದಾರೆ ಎಂದು ಅವರು ಹೇಳಿದರು.

2014, 2019ರ ಲೋಕಸಭೆ ಚುನಾವಣೆಗಳ ವೇಳೆಯೂ ಮಂಡಳಿ ಸಭೆ ನಡೆಸಲಾಗಿತ್ತು. ಆ ಚುನಾವಣೆಗಳಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸಿತ್ತು. ಮುಂಬರಲಿರುವ ಲೋಕಸಭೆ ಚುನಾವಣೆ ಕುರಿತು ಈ ಸಭೆಯಲ್ಲಿ ಚರ್ಚೆ ನಡೆಸಲಾಗುವುದು. ಸದ್ಯ ಎರಡು ನಿರ್ಣಯಗಳು ಕಾರ್ಯಸೂಚಿಯಲ್ಲಿವೆ. 'ವಿಕಸಿತ ಭಾರತ ಅಭಿಯಾನ' ಕುರಿತ ವಸ್ತುಪ್ರದರ್ಶನವನ್ನೂ ಸಭೆ ನಡೆಯುವ ಸ್ಥಳದಲ್ಲಿ ಏರ್ಪಡಿಸಲಾಗುವುದು ಎಂದು ಹೇಳಿದರು.

ಸಂಘಟನೆಗೆ ಸಂಬಂಧಿಸಿದಂತೆ ಸಮಗ್ರ ಕಾರ್ಯಸೂಚಿಯನ್ನು ಸಭೆಯಲ್ಲಿ ನಿರ್ಧರಿಸಲಾಗುವುದು. ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ಬಿಜೆಪಿ ವಿರುದ್ಧ ಹಲವು ಟೀಕೆಗಳನ್ನು ಮಾಡುತ್ತವೆ. ಆದರೆ, ಪ್ರಜಾಪ್ರಭುತ್ವದ ಮಾದರಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಘಟನಾ ಕೆಲಸಗಳನ್ನು ಮಾಡುತ್ತಿರುವುದು ಬಿಜೆಪಿ ಮಾತ್ರ ಎಂದು ರವಿಶಂಕರ್ ಪ್ರಸಾದ್ ಅವರು ಹೇಳಿದರು.


ಪುಷ್ಪ ಪ್ರದರ್ಶನ

ಚೆನ್ನೈನ ಸಸ್ಯ ಉದ್ಯಾನದಲ್ಲಿ ನಡೆದ ಪುಷ್ಪ ಪ್ರದರ್ಶನದ ವೀಕ್ಷಣೆಗೆ ಬಂದಿದ್ದವರು, ಹಂಸ ರೂಪದ ಹೂವಿನ ಆಕೃತಿಯ ಫೋಟೊ ತೆಗೆದುಕೊಂಡರು. –ಎಎಫ್‌ಪಿ ಚಿತ್ರ

ಮಧ್ಯಪ್ರದೇಶಕ್ಕೆ ಎನ್‌ಎಚ್‌ಆರ್‌ಸಿ ನೋಟಿಸ್

ನವದೆಹಲಿ (ಪಿಟಿಐ): ಇಂದೋರ್‌ನಲ್ಲಿ ಮಹಿಳೆಯೊಬ್ಬರು ಐವರು ಮಕ್ಕಳನ್ನು ಭಿಕ್ಷಾಟನೆಗೆ ಒಳಪಡಿಸಿ ಆಸ್ತಿ ಗಳಿಸಿದ ಪ್ರಕರಣಕ್ಕೆ ಸಂಬಂಧಿಸಿ ಮಧ್ಯಪ್ರದೇಶ ಸರ್ಕಾರಕ್ಕೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ನೋಟಿಸ್ ಜಾರಿ ಮಾಡಿದೆ.

'ಪ್ರಕರಣದಲ್ಲಿ ಸಂತ್ರಸ್ತರಾಗಿರುವ ಅಪ್ರಾಪ್ತ ವಯಸ್ಸಿನ ಮಕ್ಕಳ ಕಾಳಜಿಗೆ ಕೈಗೊಂಡಿರುವ ಕ್ರಮ ಮತ್ತು ಪ್ರಕರಣಕ್ಕೆ ಸಂಬಂಧಿಸಿ ನಾಲ್ಕು ವಾರಗಳ ಒಳಗಾಗಿ ವರದಿ ನೀಡುವಂತೆ ಸೂಚಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೊಸ ವಂಟಮುರಿ ಘಟನೆ ಸಂತ್ರಸ್ತೆಗೆ ಜಮೀನು ಮಂಜೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳಗಾವಿ ಜಿಲ್ಲೆಯ ಹೊಸ ವಂಟಮುರಿ ಗ್ರಾಮದ ಘಟನೆಗೆ ಸಂಬಂಧಿಸಿದಂತೆ ಥಳಿತಕ್ಕೆ ಒಳಗಾಗಿದ್ದ ಮಹಿಳೆಗೆ ಸರ್ಕಾರ ಜಮೀನು ಮಂಜೂರು ಮಾಡಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಮಾಹಿತಿ ನೀಡಿ, 'ಪ್ರಕರಣದ ಸಂತ್ರಸ್ತೆಗೆ ಪರಿಹಾರ ಧನದ ಹೊರತಾಗಿ ಎರಡು ಎಕರೆ ಜಮೀನು ಮಂಜೂರು ಮಾಡುವುದಾಗಿ ಸರ್ಕಾರ ಘೋಷಿಸಿತ್ತು. ಅದರನ್ವಯ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಯೋಜನೆಯಡಿ ಜಮೀನು ಮಂಜೂರು ಮಾಡಲಾಗಿದೆ. ಈ ಸಂಬಂಧ ಜಮೀನಿನ ಕ್ರಯಪತ್ರವನ್ನು ಸಂತ್ರಸ್ತೆಗೆ ಹಸ್ತಾಂತರಿಸಲಾಗಿದೆ' ಎಂದು ತಿಳಿಸಿದರು.

ಶೀಘ್ರ ವಿಚಾರಣೆ: ಇದೇ ವೇಳೆ, 'ಸಂತ್ರಸ್ತೆ ಮೇಲೆ ದೌರ್ಜನ್ಯ ನಡೆಸಿರುವ ಸಂಬಂಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣದ ವಿಚಾರಣೆಯನ್ನು ತ್ವರಿತವಾಗಿ ಪೂರೈಸುವಂತೆ ಸಂಬಂಧಿಸಿದ ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಬೇಕು' ಎಂದೂ ಶಶಿಕಿರಣ ಶೆಟ್ಟಿ ನ್ಯಾಯಪೀಠಕ್ಕೆ ಮನವಿ ಮಾಡಿದರು. ಈ ಅಂಶಗಳನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆ ಮುಂದೂಡಿತು. ಬೆಳಗಾವಿ ಜಿಲ್ಲೆಯ ಹೊಸ ವಂಟಮುರಿ ಗ್ರಾಮದಲ್ಲಿ ಕಳೆದ ವರ್ಷದ ಡಿಸೆಂಬರ್‌ನಲ್ಲಿ ನಡೆದಿದ್ದ ಘಟನೆಯೊಂದರಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ, ಮೆರವಣಿಗೆ ಮಾಡಿ ಥಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಆಘಾತ ವ್ಯಕ್ತಪಡಿಸಿದ್ದ ಹೈಕೋರ್ಟ್, ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ.

ಹೇಮಂತ್ ಸೊರೇನ್ ನ್ಯಾಯಾಂಗ ಬಂಧನಕ್ಕೆ

ರಾಂಚಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಬಂಧಿಸಿರುವ ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರನ್ನು ಇಲ್ಲಿನ ವಿಶೇಷ ಪಿಎಂಎಲ್‌ಎ ನ್ಯಾಯಾಲಯವು ಗುರುವಾರ ನ್ಯಾಯಾಂಗ ಬಂಧನಕ್ಕೊಪ್ಪಿಸಿದೆ.

'ಸೊರೇನ್ ಅವರನ್ನು ವಿಶೇಷ ಪಿಎಂಎಲ್‌ಎ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಲಯವು ಅವರನ್ನು ಇದೇ 22ರ ವರೆಗೆ ನ್ಯಾಯಾಂಗ ಬಂಧನಕ್ಕೊಪ್ಪಿಸಿದೆ. ಅವರ ಜಾಮೀನಿಗಾಗಿ ನಾವು ಅರ್ಜಿ ಸಲ್ಲಿಸಲಿದ್ದೇವೆ' ಎಂದು ಸೊರೇನ್ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ರಾಜೀವ್ ರಂಜನ್ ತಿಳಿಸಿದರು.

ಸೊರೇನ್ ಅವರನ್ನು ರಾಂಚಿಯ ಬಿರ್ಸಾ ಮುಂಡಾ ಕೇಂದ್ರೀಯ ಕಾರಾಗೃಹಕ್ಕೆ ಕರೆದೊಯ್ಯಲಾಗಿದೆ ಎಂದು ಮೂಲಗಳು ತಿಳಿಸಿವೆ. ಸೊರೇನ್ ಅವರನ್ನು ಜನವರಿ 31ರಂದು ಇ.ಡಿ. ಅಧಿಕಾರಿಗಳು ಬಂಧಿಸಿದ್ದರು. ಬಳಿಕ ಅವರನ್ನು ನ್ಯಾಯಾಲಯವು ಇ.ಡಿ. ವಶಕ್ಕೆ ನೀಡಿತ್ತು.

'ಪ್ರತಿಭಟನೆಗಳು ಜನರಲ್ಲಿ ಭಯ ಹುಟ್ಟಿಸುತ್ತಿವೆ'

ಚಂಡೀಗಢ (ಪಿಟಿಐ): ರೈತ ಸಂಘಗಳು ಪ್ರತಿಭಟನೆ ಮೂಲಕ ಉತ್ತರ ರಾಜ್ಯಗಳ ಸಂಪರ್ಕದ ಜೀವನಾಡಿಗಳನ್ನು ಸ್ಥಗಿತಗೊಳಿಸಲು ಪ್ರಯತ್ನಿಸುತ್ತಿವೆ. ಆ ಮೂಲಕ ಅವು ರಾಜ್ಯಗಳ ಜನರಲ್ಲಿ ಭಯ ಹುಟ್ಟಿಸುವಲ್ಲಿ ತೊಡಗಿವೆ ಎಂದು ಹರಿಯಾಣ ಸರ್ಕಾರವು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ಗೆ ಗುರುವಾರ ತಿಳಿಸಿದೆ.

ಹಂಗಾಮಿ ಮುಖ್ಯ ನ್ಯಾಯಮೂರ್ತಿ ಜಿ.ಎಸ್.ಸಂಧವಾಲಿಯಾ ಮತ್ತು ನ್ಯಾಯಮೂರ್ತಿ ವಿಕಾಸ್ ಸೂರಿ ಅವರ ವಿಭಾಗೀಯ ಪೀಠದ ಮುಂದೆ ಸರ್ಕಾರ ಈ ಕುರಿತು ಪ್ರಮಾಣಪತ್ರ ಸಲ್ಲಿಸಿದೆ.

ರೈತರ 'ದೆಹಲಿ ಚಲೋ' ಪ್ರತಿಭಟನಾ ಮೆರವಣಿಗೆಗೆ ಸಂಬಂಧಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠವು, ಸ್ಥಿತಿಗತಿ ವರದಿ ಸಲ್ಲಿಸುವಂತೆ ಕೇಂದ್ರ, ಹರಿಯಾಣ ಮತ್ತು ಪಂಜಾಬ್ ರಾಜ್ಯಗಳಿಗೆ ನೋಟಿಸ್ ಜಾರಿಗೊಳಿಸಿತ್ತು.

ಪ್ರತ್ಯೇಕ ಅಫಿಡವಿಟ್ ಸಲ್ಲಿಸಿರುವ ಪಂಜಾಬ್ ಸರ್ಕಾರವು, 'ಗುರುವಾರ ಸಂಜೆಯವರೆಗೆ ಶಂಭು ಗಡಿಯಲ್ಲಿ 1,120 ಟ್ರ್ಯಾಕ್ಟರ್, 1,320 ಟ್ರಾಲಿಗಳೊಂದಿಗೆ ಸುಮಾರು 13,000 ಜನರು ಜಮಾಯಿಸಿದ್ದರು. ಖಾನೌರಿ ಗಡಿಯಲ್ಲಿ 450 ಟ್ರ್ಯಾಕ್ಟರ್, 470 ಟ್ರಾಲಿಗಳೊಂದಿಗೆ ಸುಮಾರು 5,000 ರೈತರು ಸೇರಿದ್ದರು ಎಂದು ತಿಳಿಸಿದೆ.

'ಕಿಸಾನ್ ಮಜ್ದೂರ್ ಮೋರ್ಚಾ' ಮತ್ತು 'ಸಂಯುಕ್ತ ಕಿಸಾನ್ ಮೋರ್ಚಾ'ಗಳ ಬ್ಯಾನರ್ ಅಡಿಯಲ್ಲಿ ಯಾವುದೇ ಅನುಮತಿ ಪಡೆಯದೇ ರೈತ ಸಂಘಗಳು ದೆಹಲಿ ಚಲೊ ಪ್ರತಿಭಟನಾ ಮೆರವಣಿಗೆಗೆ ಕರೆ ನೀಡಿವೆ ಎಂದು ಹರಿಯಾಣದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಗೃಹ) ಟಿ.ವಿ.ಎಸ್.ಎನ್. ಪ್ರಸಾದ್ ಹೈಕೋರ್ಟ್‌ಗೆ ತಿಳಿಸಿದ್ದಾರೆ.

'ರೈತ ಸಂಘಗಳು ಈ ಹಿಂದೆ ನಡೆಸಿದ ಕೆಲ ಹೋರಾಟಗಳು ಹಿಂಸಾತ್ಮಕವಾಗಿದ್ದವು. 2021ರ ಜನವರಿ 26ರಂದು ದೆಹಲಿಯಲ್ಲಿ ಗದ್ದಲ ಸೃಷ್ಟಿಯಾಗಿ, ಕೆಂಪುಕೋಟೆಯಿಂದ ತ್ರಿವರ್ಣ ಧ್ವಜವನ್ನು ತೆಗೆದುಹಾಕುವ ಮೂಲಕ ಚಳವಳಿಗಾರರು ಅಪರಾಧದಲ್ಲಿ ಭಾಗಿಯಾಗಿದ್ದರು' ಎಂದು ಸರ್ಕಾರ ತಿಳಿಸಿದೆ.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರತಿಭಟನಕಾರರು ಧರಣಿ ಕುಳಿತುಕೊಳ್ಳುವುದರಿಂದ ವಾಹನಗಳ ಚಲನೆ, ಸರಕು ಸಾಗಣೆ ಮತ್ತು ಇತರ ಸೇವೆಗಳಿಗೆ ತೊಡಕುಂಟಾಗುತ್ತದೆ ಎಂದು ಸರ್ಕಾರ ಹೇಳಿದೆ.

ಶಂಭು ಮತ್ತು ಖಾನೌರಿ ಗಡಿಗಳಲ್ಲಿ ಉದ್ವಿಗ್ನ ಪರಿಸ್ಥಿತಿ ಇದ್ದರೂ, ನಿಯಂತ್ರಣದಲ್ಲಿದೆ ಎಂದು ಪ್ರಮಾಣಪತ್ರದಲ್ಲಿ ಹೇಳಲಾಗಿದೆ. ಪ್ರಕರಣದ ವಿಚಾರಣೆಯನ್ನು ನ್ಯಾಯಪೀಠವು ಇದೇ 20ಕ್ಕೆ ನಿಗದಿಪಡಿಸಿದೆ.

'ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಉಳಿಗಾಲವಿಲ್ಲ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಒಂಟಿ ಸಲಗದಂತೆ ಎಲ್ಲವನ್ನೂ ತುಳಿದುಕೊಂಡು ಓಡಾಡುತ್ತಿರುವ ಆರ್‌ಎಸ್‌ಎಸ್‌ನ ಬಿಜೆಪಿ ಮತ್ತೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಜನರಿಗೆ ಉಳಿಗಾಲವಿಲ್ಲ. ಜನಸಮುದಾಯಗಳಿಗೆ ಧ್ವನಿಯಾಗಿರುವ ಜನಾಂದೋಲನಕ್ಕೆ ಧಕ್ಕೆ ಉಂಟಾಗಲಿದೆ. ಕುಂಟುತ್ತಿರುವ ಮಾಧ್ಯಮಗಳು ತೆವಳುವ ಪರಿಸ್ಥಿತಿ ಬರಲಿದೆ' ಎಂದು ಲೇಖಕ ದೇವನೂರ ಮಹಾದೇವ ಎಚ್ಚರಿಸಿದರು.

ಕೆರಗೋಡು ಹನುಮಧ್ವಜ ವಿವಾದದ ಹಿನ್ನೆಲೆಯಲ್ಲಿ, ಪ್ರಗತಿಪರ ಸಂಘಟನೆಗಳ ಒಕ್ಕೂಟವು ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಗುರುವಾರ ಏರ್ಪಡಿಸಿದ್ದ 'ಶಾಂತಿ ಸೌಹಾರ್ದಕ್ಕಾಗಿ ಪ್ರತಿಭಟನೆ'ಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಲೋಕಸಭಾ ಚುನಾವಣೆ ಎದುರಾಗುತ್ತಿದ್ದು ಜನರು ಸಂಘಪರಿವಾರ ಹಾಗೂ ಬಿಜೆಪಿಯ ಮರ್ಮವನ್ನು ಮನದಟ್ಟು ಮಾಡಿಕೊಳ್ಳಬೇಕು. ಆರ್‌ಎಸ್‌ಎಸ್ ಗುರು ಗೋಳ್ವಾಳ್ಕರ್ ಚಾತುರ್ವರ್ಣ ಸಮಾಜವೇ ದೇವರು ಎಂದಿದ್ದಾರೆ. ಅದನ್ನೇ ಸಾವರ್ಕರ್ ಹಿಂದುತ್ವ ಎನ್ನುತ್ತಾರೆ. ಕೇಂದ್ರ ಸರ್ಕಾರವೂ ಅದನ್ನೇ ಅನುಷ್ಠಾನಗೊಳಿಸಲು ಹೊರಟಿದೆ. ಬಿಜೆಪಿ ಗೆದ್ದರೆ ರೈತರು, ಶೂದ್ರರು, ದುಡಿಯುವ ಜನರೆಲ್ಲರೂ ಮೇಲಿನವರ ಕಾಲಾಳುಗಳಾಗಿ ಇರಬೇಕಾಗುವಂಥ ಅಪಾಯವಿದೆ' ಎಂದರು.

'ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ಬಂದು ಊರನ್ನೇ ಛಿದ್ರಗೊಳಿಸಿದೆ. ದೇವರು, ಧರ್ಮ, ಧ್ವಜ, ಬಣ್ಣಗಳನ್ನು ನಿಜ ಭಕ್ತಿ ಇಲ್ಲದವರು ಹಣ ಮಾಡಲು, ಅಧಿಕಾರ ಹಿಡಿಯಲು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಛಿದ್ರತೆ, ಭಿನ್ನಭಾವ ಹೆಚ್ಚುತ್ತಿದ್ದು ದೆವ್ವ, ಪಿಶಾಚಿಗಳು ಪ್ರವೇಶ ಪಡೆದಂತೆ ಕಾಣುತ್ತಿದೆ. ಇದನ್ನು ಮಂಡ್ಯದಲ್ಲಿ ಯಾರೂ ನಿರೀಕ್ಷಿಸಿರಲಿಲ್ಲ' ಎಂದರು.


ದೇವನೂರ ಮಹಾದೇವ

'ಮಂಡ್ಯದಲ್ಲಿ ಇಂಥ ಬದಲಾವಣೆಯಾಗಲು, ಜೆಡಿಎಸ್ ಜಾತ್ಯತೀತತೆಯನ್ನು ತುಳಿದು ಆರ್‌ಎಸ್‌ಎಸ್, ಬಿಜೆಪಿಯನ್ನು ಆಲಂಗಿಸಿಕೊಂಡಿದ್ದೇ ಕಾರಣ. ಆ ಗಳಿಗೆಯಿಂದಲೇ ಜೆಡಿಎಸ್ ಜನತಾದಳ ಮಾತ್ರ, ಜಾತ್ಯತೀತವಲ್ಲ, ಆ ಪಕ್ಷದ ನೈತಿಕತೆ ಪತನವಾಗಿದೆ. ಕೇವಲ 10 ತಿಂಗಳ ಅವಧಿಯಲ್ಲಿ ಪ್ರಧಾನಿಯಾಗಿ ನೆನಪಿನಲ್ಲುಳಿಯುವ ಕೆಲಸ ಮಾಡಿದ ಮುತ್ಸದ್ದಿ ಎಚ್.ಡಿ.ದೇವೇಗೌಡರ ಪಕ್ಷಕ್ಕೆ ಈ ಅವನತಿ ಬರಬಾರದಿತ್ತು' ಎಂದರು.

'ಈಗ ಜನತಾದಳದ ಬೆನ್ನು, ತಲೆ ಮೇಲೆ ಸಂಘ ಪರಿವಾರ, ಬಿಜೆಪಿಯ ಛಿದ್ರಕಾರಿ ಶಕ್ತಿಗಳು ಸವಾರಿ ಮಾಡುತ್ತಿವೆ. ದೇವೇಗೌಡರು ಅಮಾಯಕರು. ಮಕ್ಕಳು ಮತ್ತು ಸೊಸೆಯರ ದಿಗ್ಬಂಧನಕ್ಕೆ ಒಳಗಾಗಿ, ಅಸಹಾಯಕತೆಯಿಂದ ಈ ಆಲಿಂಗನಕ್ಕೆ ಒಪ್ಪಿದ್ದಾರೆ ಎನ್ನುವ ಮಾತುಗಳಿವೆ' ಎಂದರು.

'ಅಪ್ರತಿಮ ದೇಶಪ್ರೇಮಿ, ಕ್ರಾಂತಿಕಾರಿ ಆಡಳಿತಗಾರ ಟಿಪ್ಪು ಸುಲ್ತಾನ್ ವಿರುದ್ಧ ಚೇಷ್ಟೆಯ ಕಟ್ಟುಕತೆಯಂತೆ ಉರಿಗೌಡ, ದೊಡ್ಡನಂಜೇಗೌಡರನ್ನು ಛೂಬಿಟ್ಟರು. ಆದರೆ ಅವೆಲ್ಲವೂ ನೆಗೆದು ಬಿದ್ದು ಹೋದವು. ಮುಂದೆ ಅವರು ಪಂಜು ಹಿಡಿದು ಬೆಂಕಿ ಹಚ್ಚಲು ಬಂದಾಗ ನಾವು ಮನೆಗಳಲ್ಲಿ ಸಹಬಾಳ್ವೆಯ ಹಣತೆ ಬೆಳಗಿಸಬೇಕು' ಎಂದರು.

ಅಶೋಕನಗರ ಠಾಣಾ ವ್ಯಾಪ್ತಿಯಲ್ಲಿ ಪ್ರೇಮಿಗಳ ದಿನ ನಡೆದಿದ್ದ ಘಟನೆ: ಯುವತಿಯ ಸ್ನೇಹಿತನ ಮೇಲೆ ಸಿಟ್ಟಾಗಿದ್ದ ಪ್ರಿಯಕರ

ಪ್ರೇಯಸಿ ಭೇಟಿಗೆ ಬಂದ ಯುವಕನ ಹಿಡಿದಿದ್ದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಕಳ್ಳನೆಂದು ತಪ್ಪಾಗಿ ಭಾವಿಸಿ ಯುವಕರೊಬ್ಬರನ್ನು ಪೊಲೀಸರು ಬೆನ್ನಟ್ಟಿ ಹಿಡಿದಿದ್ದು, ಅವರು ಅಮಾಯಕ ಎಂಬುದು ಗೊತ್ತಾಗುತ್ತಿದ್ದಂತೆ ಠಾಣೆಯಿಂದ ಬಿಟ್ಟು ಕಳುಹಿಸಿದ್ದಾರೆ.

'ಪ್ರೇಮಿಗಳ ದಿನವಾದ ಬುಧವಾರ (ಫೆ. 14) ನಡೆದಿರುವ ಘಟನೆಯಿಂದ ಯುವಕ ನೊಂದಿದ್ದರು. ಅವರ ಹಿನ್ನೆಲೆ ಬಗ್ಗೆ ಮಾಹಿತಿ ಕಲೆಹಾಕಿದಾಗ, ಅಮಾಯಕ ಎಂಬುದು ತಿಳಿಯಿತು. ನಂತರ, ಎಚ್ಚರಿಕೆ ನೀಡಿ ಕಳುಹಿಸಲಾಗಿದೆ' ಎಂದು ಅಶೋಕನಗರ ಠಾಣೆ ಮೂಲಗಳು ಹೇಳಿವೆ.

ಬೇರೊಬ್ಬನ ಜೊತೆ ಪ್ರೇಯಸಿ: 'ರಾಯಚೂರಿನ ಯುವಕ, ಹಲವು ವರ್ಷಗಳಿಂದ ಯುವತಿಯೊಬ್ಬರನ್ನು ಪ್ರೀತಿಸುತ್ತಿದ್ದ. ಯುವತಿ, ಬೆಂಗಳೂರಿನ ಕಾಲೇಜಿನಲ್ಲಿ ಓದುತ್ತಿದ್ದರು. ಪ್ರೇಮಿಗಳ ದಿನವಿದ್ದಿದ್ದರಿಂದ ಯುವತಿಯನ್ನು ಭೇಟಿಯಾಗಿ ಶುಭಾಶಯ ಕೋರಲು ಯುವಕ ರಾಯಚೂರಿನಿಂದ ಬೆಂಗಳೂರಿಗೆ ಬಂದಿದ್ದರು. ಯುವಕ ಬಂದಿದ್ದ ವಿಷಯ ಯುವತಿಗೆ ಗೊತ್ತಿರಲಿಲ್ಲ' ಎಂದು ಮೂಲಗಳು ತಿಳಿಸಿವೆ.

'ಯುವಕ ಕಾಲೇಜು ಬಳಿ ತೆರಳಿದ್ದರು. ಅದೇ ಸಂದರ್ಭದಲ್ಲಿ ಯುವತಿ, ಕಾಲೇಜು ಸ್ನೇಹಿತನಾಗಿದ್ದ ಯುವಕನ ಜೊತೆ ಸಲುಗೆಯಿಂದ ಓಡಾಡುತ್ತಿದ್ದ ದೃಶ್ಯಗಳನ್ನು ನೋಡಿದ್ದರು. ಆದರೆ, ಯುವತಿ ಬಳಿ ಹೋಗಿ ಮಾತನಾಡಿರಲಿಲ್ಲ. ಕೆಲ ಹೊತ್ತಿನ ನಂತರ ಯುವತಿ ಸ್ಥಳದಿಂದ ಹೊರಟು ಹೋಗಿದ್ದರು. ಯುವತಿಯ ಸ್ನೇಹಿತ ಸಹ ಮನೆಯತ್ತ ಹೊರಟಿದ್ದ.'

'ಸಲುಗೆಯಿಂದ ಓಡಾಡುತ್ತಿದ್ದ ಸ್ನೇಹಿತನನ್ನು ರಸ್ತೆಯಲ್ಲಿ ಅಡ್ಡಗಟ್ಟಿದ್ದ ರಾಯಚೂರು ಯುವಕ, 'ನನ್ನ ಪ್ರೇಯಸಿ ಜೊತೆ ನಿನಗೇನು ಕೆಲಸ' ಎಂದು ಪ್ರಶ್ನಿಸಿದ್ದರು. ಮೊಬೈಲ್ ಕಸಿದುಕೊಂಡು, ಫೋಟೊ ಹಾಗೂ ವಿಡಿಯೊ ಪರಿಶೀಲಿಸುತ್ತಿದ್ದರು. ಯುವತಿ ಜೊತೆಗಿನ ಫೋಟೊಗಳು ಸಿಕ್ಕಿದ್ದವು. ಇದರಿಂದ ಯುವಕ ಸಿಟ್ಟಾಗಿದ್ದರು. ಯುವತಿ ತಂಟೆಗೆ ಹೋಗದಂತೆ ಎಚ್ಚರಿಕೆ ನೀಡಿದ್ದರು. ಅದೇ ಸಂದರ್ಭದಲ್ಲಿ ಯುವತಿ ಸ್ನೇಹಿತ, 'ಕಳ್ಳ... ಕಳ್ಳ...' ಎಂದು ಕೂಗಿದ್ದರು. ಸಮೀಪದ ಜಂಕ್ಷನ್‌ನಲ್ಲಿ ನಿಂತಿದ್ದ ಸಿಬ್ಬಂದಿ ಸ್ಥಳಕ್ಕೆ ಬಂದಿದ್ದರು.'

'ಪೊಲೀಸರನ್ನು ನೋಡಿ ರಾಯಚೂರು ಯುವಕ, ಸ್ಥಳದಿಂದ ಓಡಲಾರಂಭಿಸಿದ್ದರು. ಪೊಲೀಸರು ಆತನನ್ನು ಬೆನ್ನಟ್ಟಿ ಹಿಡಿದಿದ್ದರು. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ, ಇದೊಂದು ಪ್ರೇಮದ ವಿಚಾರವಾಗಿ ನಡೆದ ಘಟನೆ ಎಂಬುದಾಗಿ ಗೊತ್ತಾಯಿತು. ಯುವತಿ ಸ್ನೇಹಿತನನ್ನೂ ವಿಚಾರಿಸಿದಾಗ, ತಾನೇ ತಪ್ಪಾಗಿ ಕೂಗಿರುವುದಾಗಿ ಹೇಳಿದರು' ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

ಯಲಹಂಕದಲ್ಲಿ ಸರಣಿ ಅಪಘಾತ: ಆಟೊ ಚಾಲಕ ಸಾವು

ಬೆಂಗಳೂರು: ಯಲಹಂಕ ರೈಲ್ವೆ ಸೇತುವೆ ಬಳಿ ಗುರುವಾರ ಬೆಳಿಗ್ಗೆ ಸರಣಿ ಅಪಘಾತ ಸಂಭವಿಸಿದ್ದು, ಆಟೊ ಚಾಲಕ ಎಸ್. ಸೆಲ್ವರಾಜ್ ಮೃತಪಟ್ಟಿದ್ದಾರೆ.

'ದ್ವಿಚಕ್ರ ವಾಹನ, ಆಟೊ ಹಾಗೂ ಕೆಎಸ್‌ಆರ್‌ಟಿಸಿ ಬಸ್ ನಡುವೆ ಸರಣಿ ಅಪಘಾತ ಸಂಭವಿಸಿದೆ. ಆಟೊದಲ್ಲಿ ಪ್ರಯಾಣಿಸುತ್ತಿದ್ದ ಲಕ್ಷ್ಮಿ ಹಾಗೂ ದ್ವಿಚಕ್ರ ವಾಹನ ಸವಾರ ಜಶ್ವಂತ್ ಸಿಂಗ್ ಗಾಯಗೊಂಡಿದ್ದಾರೆ' ಎಂದು ಯಲಹಂಕ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಹೆಬ್ಬಾಳದ ಸೆಲ್ವರಾಜ್, ಪ್ರಯಾಣಿಕರನ್ನು ಕರೆದುಕೊಂಡು ಹೊರಟಿದ್ದರು. ಅದೇ ಮಾರ್ಗದಲ್ಲಿ ಕೆಎಸ್‌ಆರ್‌ಟಿಸಿ ಬಸ್ ತೆರಳುತ್ತಿತ್ತು. ಏಕಮುಖ ಸಂಚಾರದ ವಿರುದ್ಧ ದಿಕ್ಕಿನಲ್ಲಿ ದ್ವಿಚಕ್ರ ವಾಹನ ಬಂದಿತ್ತು. ಅದನ್ನು ನೋಡಿದ್ದ ಚಾಲಕ ಸೆಲ್ವರಾಜ್, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಆಟೊವನ್ನು ಬಲಕ್ಕೆ ತಿರುಗಿಸಿದ್ದರು. ಬಸ್‌ಗೆ ಆಟೊ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡು ಸೆಲ್ವರಾಜ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದರು.

ಅಪರಾಧ ಸುದ್ದಿ

ಸರ ಕಳವು: ಇಬ್ಬರು ಬಂಧನ

ಪ್ರಜಾವಾಣಿ ವಾರ್ತೆ


ಬಾಲಾಜಿ


ಕಮಲನಾಥನ್

ಬೆಂಗಳೂರು: ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯರ ಚಿನ್ನದ ಸರಗಳನ್ನು ಕಿತ್ತೊಯ್ಯುತ್ತಿದ್ದ ಇಬ್ಬರು ಆರೋಪಿಗಳನ್ನು ಕಂಟೋನ್ಮೆಂಟ್ ರೈಲ್ವೆ ಪೊಲೀಸ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ಬಂಗಾರಪೇಟೆ ದೇಶಿಹಳ್ಳಿಯ ಎಸ್.ಕೆ. ಕಮಲನಾಥನ್ (42) ಹಾಗೂ ಕೆ. ಬಾಲಾಜಿ (24) ಬಂಧಿತರು. ಬಂಗಾರಪೇಟೆ ರೈಲು ನಿಲ್ದಾಣದಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಸುತ್ತಾಡುತ್ತಿದ್ದ ಇವರಿಬ್ಬರನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಕಳ್ಳತನ ಸಂಗತಿ ಪತ್ತೆಯಾಯಿತು' ಎಂದು ರೈಲ್ವೆ ಪೊಲೀಸರು ಹೇಳಿದರು.

'ಆರೋಪಿ ಕಮಲನಾಥ್, ಕೇಟರಿಂಗ್ ಕೆಲಸ ಮಾಡುತ್ತಿದ್ದ. ಜೀವನ ನಿರ್ವಹಣೆಗೆ ಸಂಬಳ ಸಾಲುತ್ತಿರಲಿಲ್ಲ. ಹಲವರ ಬಳಿ ಸಾಲ ಮಾಡಿದ್ದ. ನಿಗದಿತ ಅವಧಿಯೊಳಗೆ ಸಾಲ ತೀರಿಸಲು ಆಗಿರಲಿಲ್ಲ. ಸಾಲಗಾರರು ತಮ್ಮ ಹಣ ವಾಪಸು ನೀಡುವಂತೆ ಕಿರುಕುಳ ನೀಡಲಾರಂಭಿಸಿದ್ದರು' ಎಂದರು.

'ಸಾಲ ತೀರಿಸಲು ಅಗತ್ಯವಿರುವ ಹಣ ಹೊಂದಿಸಲೆಂದು ಕಮಲನಾಥ್ ಕಳ್ಳತನಕ್ಕೆ ಸಂಚು ರೂಪಿಸಿದ್ದ. ಈ ಬಗ್ಗೆ ಕೆ. ಬಾಲಾಜಿ ಸಹಾಯ ಕೋರಿದ್ದ. ಬಾಲಾಜಿಗೂ ಹಣದ ಅಗತ್ಯವಿತ್ತು. ಇಬ್ಬರೂ ಸೇರಿ ಕಳ್ಳತನಕ್ಕೆ ಸಿದ್ಧವಾಗಿದ್ದರು' ಎಂದು ಪೊಲೀಸರು ತಿಳಿಸಿದರು.

ಚಲಿಸುತ್ತಿದ್ದ ರೈಲಿನಿಂದ ಜಿಗಿದು ಪರಾರಿ: 'ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಆರೋಪಿಗಳು, ಚಿನ್ನದ ಸರ ಧರಿಸಿರುತ್ತಿದ್ದ ಮಹಿಳೆಯರನ್ನು ಗುರುತಿಸುತ್ತಿದ್ದರು. ನಿಲ್ದಾಣದಲ್ಲಿ ರೈಲು ನಿಧಾನವಾಗುತ್ತಿದ್ದಂತೆ, ಮಹಿಳೆಯ ಸರವನ್ನು ಕಿತ್ತುಕೊಂಡು ರೈಲಿನಿಂದ ಜಿಗಿದು ಆರೋಪಿಗಳು ಪರಾರಿಯಾಗುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಕದ್ದ ಚಿನ್ನದ ಸರವನ್ನು ಮಾರಾಟ ಮಾಡಿ, ಬಂದ ಹಣವನ್ನು ಆರೋಪಿಗಳು ಹಂಚಿಕೊಳ್ಳುತ್ತಿದ್ದರು. ಜ. 18ರಂದು ಕುಪ್ಪಂ ನಿವಾಸಿಯಾದ ಮಹಿಳೆಯೊಬ್ಬರ ಚಿನ್ನದ ಮಾಂಗಲ್ಯ ಸರವನ್ನು ಆರೋಪಿಗಳು ಕಿತ್ತೊಯ್ದಿದ್ದರು. ಈ ಬಗ್ಗೆ ಪ್ರಕರಣವೂ ದಾಖಲಾಗಿತ್ತು. ಆರೋಪಿಗಳಿಂದ ₹ 4.34 ಲಕ್ಷ ಮೌಲ್ಯದ 79 ಗ್ರಾಂ ತೂಕದ ಚಿನ್ನದ ಸರಗಳನ್ನು ಜಪ್ತಿ ಮಾಡಲಾಗಿದೆ. ಆಂಧ್ರಪ್ರದೇಶದಲ್ಲೂ ಆರೋಪಿಗಳು ಕೃತ್ಯ ಎಸಗಿರುವ ಮಾಹಿತಿ ಇದೆ' ಎಂದು ತಿಳಿಸಿದರು.

ಬೆಂಗಳೂರು ರೇಸ್

ನಾಟಿ ಲೆಜೆಂಡ್ ಗೆಲ್ಲುವ ನಿರೀಕ್ಷೆ

ರೋಚ್ ಲೈಫ್‌ಸ್ಕೇಪ್ಸ್ ಬೆಂಗಳೂರು ಜುವೆನೈಲ್ ಮಿಲಿಯನ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾಟಿ ಲೆಜೆಂಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಜೆರ್ಸಿ ಲೆಜೆಂಡ್ 2, ಡಲ್ಲಾಸ್ ಡ್ರಿಫ್ಟರ್ 1, ಅಕಾಸಿ 9
2ನೇ ರೇಸ್: ಎಬೊಟ್ಸೆ 3, ಸನ್‌ವೇ ಲಾಗೂನ್ 2, ಮೆಮೆಂಟಸ್ 1
3ನೇ ರೇಸ್: ಸೆಕ್‌ಮೆಟ್ 4, ರಷ್ಯನ್ ರೊಮಾನ್ಸ್ 6. ಟರ್ಕೊಮ್ಯಾನ್ 3
4ನೇ ರೇಸ್: ಹೈ ಸ್ಪೀಡ್ ಡ್ರೈವ್ 5, ನಾಟಿ ಚಾಲೆಂಜರ್ 3, ಸ್ಟಾರ್ ಕಾನ್ಸೆಪ್ಟ್ 1
5ನೇ ರೇಸ್: ಮಕೊಟೊ 5, ಲಾ ಮಾಕ್ವಿನ್ 3, ಲಾಕ್‌ಹೀಡ್ 4
6ನೇ ರೇಸ್: ನಾಟಿ ಲೆಜೆಂಡ್ 1, ಮೊಸೊಟೊ 2, ಸ್ಟಾರ್ಮ್ ಶ್ಯಾಡೊ 4
7ನೇ ರೇಸ್: ಅಹರ್ನೆ 4, ಡೆವಿಲ್ಸ್ ಮ್ಯಾಜಿಕ್ 1, ಸದರ್ನ್ ಅರಿಸ್ಟೊಕ್ರಾಟ್ 10

ಉತ್ತಮ ಬೆಟ್: ಎಬೊಟ್ಸೆ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3, 4,5,6,7	2,3,4	6,7,8



ಮಂಡ್ಯ ಹೈದ
ಭೂಮಿಕಾ, ಅಭಯ್

ಅಪಹಾಸ್ಯಕ್ಕೆ ರಾಯಭಾರಿ ಆಗಲಾರೆ

ವಿನಾಯಕ ಕೆ.ಎಸ್

'ಬ್ರಹ್ಮಗಂಟು' ಧಾರಾವಾಹಿ ಮೂಲಕ ಜನಪ್ರಿಯರಾದ ಗೀತಾ ಭಾರತಿ ಭಟ್ ನಟನೆಯ 'ರವಿಕೆ ಪ್ರಸಂಗ' ಚಿತ್ರ ಇಂದು (ಫೆ.16) ಕಾಣುತ್ತಿದೆ. ಈ ಚಿತ್ರದಲ್ಲಿಯೂ ದಪ್ಪ ಇರುವ ಹುಡುಗಿಯರ ಪ್ರತಿನಿಧಿಯಂತಹ ಪಾತ್ರ ನಿಭಾಯಿಸಿರುವ ಅವರು, ತಮ್ಮ ಭಾವನೆಗಳನ್ನು ಹಂಚಿಕೊಂಡಿದ್ದು ಹೀಗೆ...

• ಸಿನಿಮಾದಲ್ಲಿ ನಿಮ್ಮ ಪಾತ್ರವೇನು?

'ಸಾನ್ವಿ ಸಂಪಾಜೆ' ಎಂಬ ಪಾತ್ರ ಮಾಡಿರುವೆ. ಮನೆಯಲ್ಲಿರುವ ಹುಡುಗಿಯ ಪಾತ್ರ. ಮದುವೆ ಮಾಡಲು ಮನೆಯಲ್ಲಿ ಹುಡುಗನನ್ನು ಹುಡುಕುತ್ತ ಇರುತ್ತಾರೆ. ನೋಡಲು ದಪ್ಪ ಇರುವುದರಿಂದ ಹುಡುಗ ಸಿಗುತ್ತಾನಾ ಎಂಬ ಚಿಂತೆ ಕಾಡುತ್ತಿರುತ್ತದೆ. ಆಗ ವಿದೇಶದಲ್ಲಿರುವ ಹುಡುಗನಿಂದ ಪ್ರಪೋಸಲ್ ಬರುತ್ತದೆ. ಈ ಸನ್ನಿವೇಶಕ್ಕೆ ಆಕೆ ಟೈಲರ್ ಬಳಿ ಹೊಲಿಯಲು ಕೊಟ್ಟ ರವಿಕೆ ಹೇಗೆ ಸಿಂಕ್ ಆಗುತ್ತದೆ ಎಂಬುದನ್ನು ಚಿತ್ರದಲ್ಲಿಯೇ ನೋಡಬೇಕು.ಈ ಪಾತ್ರದ ಹೆಗಲ ಮೇಲೆ ಇಡೀ ಕಥೆ ಸಾಗುತ್ತದೆ. ಹೆಣ್ಣುಮಕ್ಕಳಿಗೆ ಎಷ್ಟೇ ಆಪ್ತರ ಬಳಿಯೂ ಹೇಳಿಕೊಳ್ಳಲಾಗದ ಒಂದಷ್ಟು ವಿಷಯಗಳಿರುತ್ತವೆ. ಅಂತಹ ಮಾತುಗಳು ಈ ಚಿತ್ರದಲ್ಲಿನ ಹಲವು ಪಾತ್ರಗಳ ಮೂಲಕ ಹೊರಬರುತ್ತದೆ. ಒಳ್ಳೆಯ ಸಾಮಾಜಿಕ ಸಂದೇಶ ನೀಡುವ ಚಿತ್ರ.

• ನಿಮ್ಮ ಸಿನಿ ಪಯಣ ಹೇಗಿದೆ?

ಇದು ನನ್ನ ಆರನೇ ಸಿನಿಮಾ. ರೂಪೇಶ್ ಶೆಟ್ಟಿ ಅವರ ಜೊತೆಗೆ 'ಮಂಕುಬಾಯ್ ಫಾಕ್ಸಿರಾಣಿ' ಎಂಬ ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿದ್ದೆ. 'ಅಂಬಿ ನಿಂಗೆ ವಯಸ್ಸಾಯ್ತು' ನಟಿಸಿದ ಮೊದಲ ಸಿನಿಮಾ. 'ಲವ್ ಮಾಕ್ಟೇಲ್' ಚಿತ್ರದಲ್ಲಿ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡಿದ್ದೆ. ಪೂರ್ಣ ಪ್ರಮಾಣದ ನಾಯಕಿಯಾಗಿ 'ರವಿಕೆ ಪ್ರಸಂಗ' ಮೊದಲ ಸಿನಿಮಾ.

• ಮತ್ತೆ ಧಾರಾವಾಹಿಯತ್ತ ಹೋಗುವಿರಾ?

ಉದಯ ಟಿವಿಯಲ್ಲಿ 'ರಾಧಿಕಾ' ಎಂಬ ಧಾರಾವಾಹಿಯಲ್ಲಿ ಅತಿಥಿ ಪಾತ್ರ ಮಾಡುತ್ತಿರುವೆ. ವೈಯಕ್ತಿಕ ಕಾರಣದಿಂದ ಧಾರಾವಾಹಿಗಳಿಂದ ದೂರ ಉಳಿದಿದ್ದೆ. ಒಳ್ಳೆಯ ಪಾತ್ರಗಳು ಬಂದರೆ ಸಿನಿಮಾ ಅಥವಾ ಧಾರಾವಾಹಿ ಎಂಬ ತಾರತಮ್ಯವಿಲ್ಲ.

• ದಪ್ಪ ಇರುವ ಹುಡುಗಿಯ ಪಾತ್ರಗಳೇ ನಿಮ್ಮನ್ನು ಹುಡುಕಿಕೊಂಡು ಬರುತ್ತಿವೆಯಾ?

ಪ್ಲಸ್ ಸೈಜ್ ಕಲಾವಿದರನ್ನು ಸಿನಿಮಾ, ಧಾರಾವಾಹಿಗಳಲ್ಲಿ ಕಾಮಿಡಿ, ಬಾಡಿ ಶೇಮಿಂಗ್‌ಗೆ ಬಳಸಿಕೊಳ್ಳುತ್ತಾರೆ. ಆದರೆ ನಾನು ಮಾಡುವ ಸಿನಿಮಾಗಳಲ್ಲಿ ಆ ರೀತಿ ಇಲ್ಲ. ಒಂದರಲ್ಲಿ ಆ ರೀತಿ ಪಾತ್ರ ಮಾಡಿದೆ. ಇವತ್ತಿಗೂ ಅದಕ್ಕೆ ಪಶ್ಚಾತ್ತಾಪ ಪಡುತ್ತೇನೆ. ಬೇರೆಯವರಿಗೆ ನೋವು ಕೊಡುವ ಪಾತ್ರ ಬೇಡ. ದಪ್ಪ ಇರುವ ಹುಡುಗಿಯರನ್ನು ಅಪಹಾಸ್ಯ ಮಾಡುವುದಕ್ಕೆ ರಾಯಭಾರಿ ಆಗಲಾರೆ. ಈಗ ಹಳೆ ಮೈಂಡ್‌ಸೆಟ್‌ನಲ್ಲಿ ಜನ ಇಲ್ಲ. ಜಾಹೀರಾತಿನಲ್ಲಿ ಕೂಡ ಪ್ಲಸ್ ಸೈಜ್ ಕಲಾವಿದರನ್ನು ಬಳಸಿಕೊಳ್ಳುತ್ತಿದ್ದಾರೆ.

• ಕೈಯಲ್ಲಿರುವ ಮುಂದಿನ ಚಿತ್ರಗಳು?

ಒಂದು ಸಿನಿಮಾ ಮಾತುಕತೆ ಹಂತದಲ್ಲಿದೆ. ಸದ್ಯಕ್ಕೆ ಬೇರೆ ಯಾವುದನ್ನೂ ಒಪ್ಪಿಕೊಂಡಿಲ್ಲ.

• ಸಿನಿಮಾ ಮತ್ತು ಧಾರಾವಾಹಿಯಲ್ಲಿ ನಿಮ್ಮ ಆಯ್ಕೆ ಯಾವುದು?

ಎರಡೂ ಕಡೆ ತುಂಬ ಕಲಿಕೆ ಇದೆ. ಧಾರಾವಾಹಿ ದೀರ್ಘ ಪ್ರಕ್ರಿಯೆ. ಸಿನಿಮಾ ಚುಟುಕು. ಧಾರಾವಾಹಿಯಲ್ಲಿ ಸಾಕಷ್ಟು ಇತಿಮಿತಿಗಳಿವೆ. ಸಿನಿಮಾದಲ್ಲಿ ಪಾತ್ರಕ್ಕೆ ಅವಕಾಶ ಜಾಸ್ತಿ ಇರುತ್ತದೆ. ಚಿತ್ರಮಂದಿರದ ಅನುಭವವೇ ಬೇರೆ. ಎರಡೂ ಕಡೆ ಒಳ್ಳೊಳ್ಳೆ ಪಾತ್ರ ಸಿಕ್ಕಿವೆ. ದಪ್ಪ ಇರುವವರಿಗೆ ಬೇಸರಪಟ್ಟುಕೊಳ್ಳದೆ, ಸ್ಫೂರ್ತಿ ತುಂಬುವ ಪಾತ್ರಗಳು ಸಿಕ್ಕಿವೆ ಎಂಬ ಖುಷಿಯಿದೆ. ❖



ಗೀತಾ ಭಾರತಿ ಭಟ್



'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಎರಡನೇ ಆವೃತ್ತಿ

ಕಳೆದ ವರ್ಷ ಪ್ರಾರಂಭಗೊಂಡು ವ್ಯಾಪಕ ಪ್ರಶಂಸೆ ಪಡೆದ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಎರಡನೇ ಆವೃತ್ತಿಯೊಂದಿಗೆ ಮತ್ತೆ ಬಂದಿದೆ. 2023ನೇ ಸಾಲಿನಲ್ಲಿ ತೆರೆಕಂಡ ಚಿತ್ರಗಳ ನಾಮನಿರ್ದೇಶನ ಪ್ರಕ್ರಿಯೆ ಆರಂಭವಾಗಿದ್ದು, ನಿಮ್ಮ ಸಿನಿಮಾಗಳನ್ನು ನೋಂದಾಯಿಸಲು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ. 'ಸಿನಿ ಸಮ್ಮಾನ' ಕುರಿತಾದ ಇನ್ನಷ್ಟು ಮಾಹಿತಿಗಾಗಿ https://www.prajavani.net/cinesamman/season2 ನೋಡಿ.

'ರಿಜಿಸ್ಟ್ರೇಷನ್'ಗೆ ಸಿದ್ಧವಾದ ಪೃಥ್ವಿ

ನಟ ಪೃಥ್ವಿ ಅಂಬಾರ್, ಮಿಲನಾ ನಾಗರಾಜ್ ಜೋಡಿಯಾಗಿ ನಟಿಸಿರುವ 'ಫಾರ್ ರಿಜಿಸ್ಟ್ರೇಷನ್' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಿರ್ದೇಶಕರಾದ ಶಶಾಂಕ್ ಹಾಗೂ ಚೇತನ್ ಕುಮಾರ್ ಟ್ರೇಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ನವೀನ್ ದ್ವಾರಕಾನಾಥ್ ನಿರ್ದೇಶನದ ಚಿತ್ರ ಫೆ.23ರಂದು ತೆರೆ ಕಾಣಲಿದೆ. ನಿಶ್ಚಲ್ ಫಿಲ್ಮ್ಸ್ ಅಡಿಯಲ್ಲಿ ನವೀನ್ ರಾವ್ ನಿರ್ಮಾಣವಿದೆ. ಪೃಥ್ವಿ ಅಂಬಾರ್ ಮಾತನಾಡಿ, 'ಜಾಗ, ವಾಹನದಿಂದ ಹಿಡಿದು ಹಲವಕ್ಕೆ ರಿಜಿಸ್ಟ್ರೇಷನ್ ಮಾಡಿಸಲೇಬೇಕು. ಅದೇ ರೀತಿ ಸಂಬಂಧಗಳಿಗೂ ಮನಸ್ಸಿನಲ್ಲಿ ರಿಜಿಸ್ಟ್ರೇಷನ್ ಇರಬೇಕು ಎಂಬ ಆಶಯದ ಈ ಸಿನಿಮಾ ಎಲ್ಲರಿಗೂ ಇಷ್ಟವಾಗಲಿದೆಯೆಂಬ ನಂಬಿಕೆಯಿದೆ' ಎಂದರು.

ರವಿಶಂಕರ್, ತಬಲಾ ನಾಣಿ, ಸುಧಾ ಬೆಳವಾಡಿ, ಬಾಬು ಹಿರಣಯ್ಯ, ಸ್ವಾತಿ, ರಮೇಶ್ ಭಟ್, ಉಮೇಶ್ ಸೇರಿದಂತೆ ಹಲವರು ತಾರಾ ಬಳಗದಲ್ಲಿದ್ದಾರೆ. ಆರ್.ಕೆ ಹರೀಶ್ ಸಂಗೀತ ಸಂಯೋಜನೆ, ಅಭಿಲಾಷ್ ಕಲಾತಿ–ಅಭಿಷೇಕ್ ಜಿ.ಕಾಸರಗೋಡು ಛಾಯಾಚಿತ್ರಗ್ರಹಣ, ಮನು ಶೇಡ್ಗರ್ ಸಂಕಲನ ಚಿತ್ರಕ್ಕಿದೆ. ❖



'ಮಂಡ್ಯ ಮಣ್ಣಿನ ಘಮಲಿನ ಕಥೆ'

ಮಂಡ್ಯ ಗ್ರಾಮೀಣ ಸೊಗಡಿನ ಕಥೆಯನ್ನು ಹೊಂದಿರುವ 'ಮಂಡ್ಯ ಹೈದ' ಚಿತ್ರ ಇಂದು (ಫೆ.16) ತೆರೆ ಕಾಣುತ್ತಿದೆ. ವಿ.ಶ್ರೀಕಾಂತ್ ನಿರ್ದೇಶನದ ಈ ಚಿತ್ರದಲ್ಲಿ ನಾಯಕನಾಗಿ ಕಾಣಿಸಿಕೊಂಡಿರುವ ಯುವನಟ ಅಭಯ್ ಚಂದ್ರಶೇಖರ್ ತಮ್ಮ ಚಿತ್ರ, ಸಿನಿ ಪಯಣದ ಬಗ್ಗೆ ಮಾತನಾಡಿದ್ದಾರೆ...

'ಓದುತ್ತಿರುವಾಗಲೇ ಸಿನಿಮಾದಲ್ಲಿ ಆಸಕ್ತಿ ಇತ್ತು. ಬಾಲ ನಟನಾಗಿ 'ಬರ್ತ್' ಎಂಬ ಸಿನಿಮಾದ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟೆ. 2022ರಲ್ಲಿ 'ಮನಸಾಗಿದೆ' ಸಿನಿಮಾದಲ್ಲಿ ನಾಯಕನಾಗಿ ಕಾಣಿಸಿಕೊಂಡಿದ್ದೆ. ಕೋವಿಡ್‌ನಿಂದಾಗಿ ಸಿನಿಮಾ ಹೆಚ್ಚು ಜನರಿಗೆ ತಲುಪಲಿಲ್ಲ. ಆದರೆ ನಟನಾಗಿ ಗುರುತಿಸಿಕೊಂಡೆ. 'ಮಂಡ್ಯ ಹೈದ' ನನ್ನ ಎರಡನೇ ಸಿನಿಮಾ' ಎಂದು ತಮ್ಮ ಸಿನಿಮಾ ಹಿನ್ನೆಲೆಯನ್ನು ಬಿಚ್ಚಿಟ್ಟರು ಅಭಯ್.

ಈ ಚಿತ್ರದಲ್ಲಿ ಶಿವ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 'ಒಳ್ಳೆಯ ಮನಸ್ಸು ಹೊಂದಿರುವ ಹಳ್ಳಿ ಹುಡುಗ. ಸ್ನೇಹಿತರಿಗೆ ತುಂಬ ಮಹತ್ವ ನೀಡುತ್ತಿರುತ್ತಾನೆ. ಕುಟುಂಬ, ಸ್ನೇಹ, ಪ್ರೀತಿ ಎಲ್ಲ ಅಂಶಗಳು ಈ ಪಾತ್ರದಲ್ಲಿ ಬರುತ್ತದೆ. ಇಷ್ಟ ಆಗುವವರಿಗೆ ಇಷ್ಟವಾಗುತ್ತಾನೆ. ಊರಲ್ಲಿ ಕೆಲವರಿಗೆ ಈತನನ್ನು ಕಂಡರೆ ಆಗುವುದಿಲ್ಲ ಎಂಬ ಪಾತ್ರ' ಎಂದು ಪಾತ್ರದ ಕುರಿತು ವಿವರಿಸಿದರು.

'ಪೂರ್ತಿ ಸಿನಿಮಾ ಮಂಡ್ಯ ಸೊಗಡಿನಿಂದ ಕೂಡಿದೆ. 'ಕಿರಾತಕ', 'ರಾಜಾಹುಲಿ' ರೀತಿಯ ಹಳ್ಳಿ ಸೊಗಡಿನ ಚಿತ್ರ. ಹಳ್ಳಿಯ ಭಾಷೆ, ಸಂಸ್ಕೃತಿ, ಆಚರಣೆಗಳನ್ನು ಇಲ್ಲಿ ಸವಿಯಬಹುದು. ಇಡೀ ಸಿನಿಮಾದ ಕಥೆ ಹಳ್ಳಿಯಲ್ಲಿ ನಡೆಯುತ್ತದೆ. ಆದರೆ ಕಥೆ ಮಂಡ್ಯಕ್ಕೆ ಮಾತ್ರ ಸೀಮಿತವಲ್ಲ. ಎಲ್ಲ ಕಡೆಯವರು ನೋಡಬಹುದಾದ ಕಥಾವಸ್ತು. 45 ದಿನ ಚಿತ್ರೀಕರಣ ಮಾಡಿದ್ದೇವೆ. ಶೇಕಡ 80 ರಷ್ಟು ಶ್ರೀರಂಗಪಟ್ಟಣ, ಮಂಡ್ಯ ಸುತ್ತಮುತ್ತ ಚಿತ್ರೀಕರಣ ಮಾಡಿದ್ದೇವೆ. ಉಳಿದ ಭಾಗ ಬೆಂಗಳೂರಿನಲ್ಲಿ ಚಿತ್ರೀಕರಣಗೊಂಡಿದೆ. 'ಕಾಮಿಡಿ ಕಿಲಾಡಿಗಳು' ರಿಯಾಲಿಟಿ ಶೋನ ಅನೇಕ ನಟರಿದ್ದಾರೆ. ಬಲ ರಾಜವಾಡಿ ತಂದೆಯ ಪಾತ್ರ ಮಾಡಿದ್ದಾರೆ. ಮೊದಲಾರ್ಧ ಪೂರ್ತಿ ಕಾಮಿಡಿ ಇದೆ. ದ್ವಿತೀಯಾರ್ಧ ಒಂದು ಸಂದೇಶ ನೀಡುತ್ತದೆ' ಎಂದು ಚಿತ್ರದ ಕುರಿತು ಇನ್ನಷ್ಟು ಮಾಹಿತಿ ನೀಡಿದರು. ❖

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

'ನೈಟ್‌ಕರ್ಫ್ಯೂ' ವಿಧಿಸಿದ ಮಾಲಾಶ್ರೀ

ವಿರಾಮದ ನಂತರ 'ಮಾರಕಾಸ್ತ್ರ' ಹಿಡಿದು ಚಿತ್ರರಂಗ ಮರು ಪ್ರವೇಶಿಸಿದ್ದ ಮಾಲಾಶ್ರೀ ಈಗ 'ನೈಟ್ ಕರ್ಫ್ಯೂ'ಗೆ ಜೊತೆಯಾಗಿದ್ದಾರೆ. ಚಿತ್ರದಲ್ಲಿ ಸೇನಾ ವೈದ್ಯೆಯಾಗಿ ಮಾಲಾಶ್ರೀ ಕಾಣಿಸಿಕೊಂಡಿದ್ದಾರೆ. ರವೀಂದ್ರವಂಶಿ ನಿರ್ದೇಶನದ ಚಿತ್ರಕ್ಕೆ ಬಿ.ಎಸ್.ಚಂದ್ರಶೇಖರ್ ಬಂಡವಾಳ ಹೂಡಿದ್ದಾರೆ.

'ಕೋವಿಡ್ 19 ಸಂದರ್ಭದಲ್ಲಿ ನಡೆದ ಸತ್ಯ ಘಟನೆಗಳನ್ನು ಆಧರಿಸಿದ ಚಿತ್ರ. ಸೆನ್ಸಾರ್ ಮುಗಿದಿದ್ದು ಏಪ್ರಿಲ್‌ನಲ್ಲಿ ಚಿತ್ರ ತೆರೆಗೆ ಬರಲಿದೆ. ಶಕ್ತಿಗಾಗಿ ಮಾಲಾಶ್ರೀ, ಯುಕ್ತಿಗಾಗಿ ರಂಜನಿ ರಾಘವನ್ ಕೂಡ ವೈದ್ಯೆಯಾಗಿ ನಟನೆ ಮಾಡಿದ್ದಾರೆ. ಪ್ರಮೋದ್ ಶೆಟ್ಟಿ, ರಂಗಾಯಣ ರಘು, ಸಾಧು ಕೋಕಿಲ ಮೊದಲಾದವರು ಚಿತ್ರದಲ್ಲಿದ್ದಾರೆ' ಎಂದರು ನಿರ್ದೇಶಕರು. ಎಂ.ಎಸ್.ಮಾರುತಿ ಸಂಗೀತ, ಪ್ರಮೋದ್ ಭಾರತೀಯ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.



ಮಾಲಾಶ್ರೀ

ಹತ್ತು ಸಿನಿಮಾಗಳು ತೆರೆಗೆ

ಜನವರಿ–ಫೆಬ್ರುವರಿ ತಿಂಗಳುಗಳು ಸ್ಯಾಂಡಲ್‌ವುಡ್‌ಗೆ ಸ್ಟಾಕ್ ಕ್ಲಿಯರೆನ್ಸ್ ತಿಂಗಳಿನಂತಾಗಿವೆ. ವಾರದಿಂದ ವಾರಕ್ಕೆ ತೆರೆ ಕಾಣುತ್ತಿರುವ ಚಿತ್ರಗಳ ಸಂಖ್ಯೆ ಹೆಚ್ಚುತ್ತಿದೆ. ಈ ವಾರ ಒಟ್ಟು ಹತ್ತು ಚಿತ್ರಗಳು ಬಿಡುಗಡೆಗೊಳ್ಳುತ್ತಿವೆ.



ಅದ್ವಿತಿ ಶೆಟ್ಟಿ

5ಡಿ: ಕಲಾ ಸಾಮ್ರಾಟ್ ಎಸ್.ನಾರಾಯಣ್ ನಿರ್ದೇಶನದ '5ಡಿ' ಚಿತ್ರ ಇಂದು ತೆರೆ ಕಾಣುತ್ತಿದೆ. ಆದಿತ್ಯ, ಅದಿತಿ ಪ್ರಭುದೇವ ಜೋಡಿಯಾಗಿ ನಟಿಸಿರುವ ಚಿತ್ರ ಕ್ರೈಂ, ಥ್ರಿಲ್ಲರ್ ಕಥೆಯನ್ನು ಹೊಂದಿದೆ. ಕುಮಾರ್‌ಗೌಡ ಛಾಯಾಗ್ರಹಣ ಮಾಡಿದ್ದು, 1 ಟು 100 ಡ್ರೀಮ್ ಮೂವೀಸ್ ಲಾಂಛನದಲ್ಲಿ ಸ್ವಾತಿ ಕುಮಾರ್ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ.

ಸಾರಾಂಶ: ನಟಿ ಶ್ರುತಿ ಹರಿಹರನ್ ಮುಖ್ಯಭೂಮಿಕೆಯಲ್ಲಿರುವ 'ಸಾರಾಂಶ' ಚಿತ್ರ ಇಂದು ತೆರೆ ಕಾಣುತ್ತಿದೆ. ಧಾರಾವಾಹಿ, ಸಿನಿಮಾಗಳ ಮೂಲಕ ನಟರಾಗಿದ್ದ ಸೂರ್ಯ ವಸಿಷ್ಠ ಈ ಚಿತ್ರದ ನಿರ್ದೇಶಕರು. ರವಿ ಕಶ್ಯಪ್ ಮತ್ತು ಆರ್.ಕೆ ನಲ್ಲಮ್ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ಆಸಿಫ್ ಕ್ಷತ್ರಿಯಾ, ರವಿ ಭಟ್, ರಾಮ್ ಮಂಜುನಾಥ್ ಮುಂತಾದವರ ತಾರಾಗಣ, ಉದಿತ್ ಹರಿತಾಸ್ ಸಂಗೀತ ನಿರ್ದೇಶನ, ಅಪರಾಜಿತ್ ಹಿನ್ನೆಲೆ ಸಂಗೀತ, ಅನಂತ್ ಭಾರದ್ವಾಜ್ ಛಾಯಾಚಿತ್ರಗ್ರಹಣ, ಪ್ರದೀಪ್ ನಾಯಕ್ ಸಂಕಲನ ಈ ಚಿತ್ರಕ್ಕಿದೆ.

ಶಾಖಾಹಾರಿ: ರಂಗಾಯಣ ರಘು, ಗೋಪಾಲಕೃಷ್ಣ ದೇಶಪಾಂಡೆ ಮುಖ್ಯಭೂಮಿಕೆಯಲ್ಲಿರುವ 'ಶಾಖಾಹಾರಿ' ಸಿನಿಮಾ ಇಂದು ಬಿಡುಗಡೆ ಕಾಣುತ್ತಿರುವ ಮತ್ತೊಂದು ಸಿನಿಮಾ. ಮಲೆನಾಡಿನ ಕಥೆ ಹೊಂದಿರುವ ಚಿತ್ರವನ್ನು ಸಂದೀಪ್ ಸುಂಕದ್ ನಿರ್ದೇಶಿಸಿದ್ದಾರೆ. ರಂಗಾಯಣ ರಘು ಅಡುಗೆ ಭಟ್ಟನಾಗಿ, ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಗೋಪಾಲಕೃಷ್ಣ ದೇಶಪಾಂಡೆ ನಟಿಸಿದ್ದಾರೆ. ಸುಜಯ್ ಶಾಸ್ತ್ರಿ ಈ ಸಿನಿಮಾದ ಒಂದು ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ರಾಜೇಶ್ ಕೀಳಂಬಿ ಮತ್ತು ರಂಜಿನಿ ಪ್ರಸನ್ನ ಬಂಡವಾಳ ಹೂಡಿದ್ದಾರೆ. ವಿಶ್ವಜಿತ್ ರಾವ್ ಕ್ಯಾಮೆರಾ, ಶಶಾಂಕ್ ನಾರಾಯಣ ಸಂಕಲನ, ಮಯೂರ್ ಅಂಬೆಕಲ್ಲು ಸಂಗೀತ ಈ ಸಿನಿಮಾಗಿದೆ.

ಅಬ್ಬಬ್ಬ: ಕೆ.ಎಂ.ಚೈತನ್ಯ ನಿರ್ದೇಶನದಲ್ಲಿ ಲಿಖಿತ್ ಶೆಟ್ಟಿ, ಅಮೃತ ಅಯ್ಯಂಗಾರ್ ಜೋಡಿಯಾಗಿ ನಟಿಸಿರುವ ಅಬ್ಬಬ್ಬ ತೆರೆಗೆ ಬರುತ್ತಿದೆ. ಫ್ರೈಡೇ ಫಿಲ್ಮ್ ಹೌಸ್ ಹಾಗೂ ಮೀರಾಮಾರ್ ಸಂಸ್ಥೆ ಈ ಚಿತ್ರ ನಿರ್ಮಿಸಿದೆ. ಅನುಷಾ ರೈ, ತಾಂಡವ್ ರಾಮ್, ಅಜಯ್ ರಾಜ್, ಧನರಾಜ್ ಆಚಾರ್, ಶರತ್ ಲೋಹಿತಾಶ್ವ, ಸಿಹಿಕಹಿ ಚಂದ್ರು, ಸುಧಾ ಬೆಳವಾಡಿ, ವಿಜಯ್ ಚೆಂಡೂರು ಮುಂತಾದವರು ತಾರಾಗಣದಲ್ಲಿದ್ದಾರೆ. ಇದು ಮಲಯಾಳದ 'ಅದಿ ಕಪ್ಯಾರೆ ಕೂಟಮನಿ' ಚಿತ್ರದ ರಿಮೇಕ್.

ಧೀರ ಸಾಮ್ರಾಟ್: ರಾಕೇಶ್ ಬಿರಾದಾರ್, ಅದ್ವಿತಿ ಶೆಟ್ಟಿ ಅಭಿನಯದ 'ಧೀರಸಾಮ್ರಾಟ್' ತೆರೆಗೆ ಬರುತ್ತಿರುವ ಮತ್ತೊಂದು ಚಿತ್ರ. ಖಾಸಗಿ ವಾಹಿನಿಯಲ್ಲಿ ಕೆಲಸ ಮಾಡಿದ ಅನುಭವ ಹೊಂದಿರುವ ಪವನ್‌ಕುಮಾರ್ ಸಿನಿಮಾಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ತನ್ವಿ ಪ್ರೊಡಕ್ಷನ್ ಹೌಸ್ ಚಿತ್ರವನ್ನು ನಿರ್ಮಿಸುತ್ತಿದೆ. ಶೋಭರಾಜ್, ನಾಗೇಂದ್ರಅರಸು, ಬಲರಾಜವಾಡಿ, ರಮೇಶ್ ಭಟ್ ಮುಂತಾದವರು ನಟಿಸಿದ್ದಾರೆ. ರಾಘವ್ ಸುಭಾಷ್ ಸಂಗೀತ ಸಂಯೋಜಿಸಿದ್ದಾರೆ.

ಲೇಡೀಸ್ ಬಾರ್: ಡಿ.ಎಂ.ಸಿ. ಪ್ರೊಡಕ್ಷನ್ಸ್ ಮೂಲಕ ಟಿ.ಎಂ.ಸೋಮರಾಜು ನಿರ್ಮಿಸಿ, ಮುತ್ತು ಎ.ಎನ್. ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ 'ಲೇಡಿಸ್‌ಬಾರ್' ಬಿಡುಗಡೆಗೊಳ್ಳುತ್ತಿದೆ. ಬಹುತೇಕ ಹೊಸಬರೇ ಇರುವ ಚಿತ್ರಕ್ಕೆ ಹರ್ಷ ಕಾಗೋಡ್ ಅವರ ಸಂಗೀತ ನಿರ್ದೇಶನ, ವೀನಸ್‌ಮೂರ್ತಿ ಅವರ ಛಾಯಾಚಿತ್ರಗ್ರಹಣವಿದೆ. ಸಿದ್ದು ಕಟ್ಟಿಮನಿ ನಿರ್ದೇಶನದ 'ಅಲೆಮಾರಿ ಈ ಬದುಕು' ಕೂಡ ಈ ವಾರ ತೆರೆಗೆ ಬರುತ್ತಿದೆ. ❖

ಕೆಟಿಎಂ

ದೀಕ್ಷಿತ್ ಶೆಟ್ಟಿ, ಸಂಜನಾ ದಾಸ್, ಕಾಜಲ್ ಕುಂದರ್ ಅಭಿನಯದ 'ಕೆಟಿಎಂ' ಚಿತ್ರ ಕೂಡ ಇಂದೇ ತೆರೆ ಕಾಣುತ್ತಿದೆ. ಉಷಾ ಭಂಡಾರಿ, ರಘು ರಮಣಕೊಪ್ಪ, ಪ್ರಕಾಶ್ ತುಮ್ಮಿನಾಡು, ಬಾಬು ಹಿರಣ್ಣಯ್ಯ ಮೊದಲಾದವರು ತಾರಾಬಳಗದಲ್ಲಿದ್ದಾರೆ. ಈ ಮೊದಲು 'ಅಥರ್ವ' ಸಿನಿಮಾ ಮಾಡಿದ್ದ ಅರುಣ್ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಮಹಾಸಿಂಹ ಮೂವೀಸ್ ಬ್ಯಾನರ್ ಅಡಿಯಲ್ಲಿ ವಿನಯ್ ನಿರ್ಮಾಣ ಮಾಡಿದ್ದಾರೆ. ನವೀನ್ ಛಾಯಾಚಿತ್ರಗ್ರಹಣ, ಚೇತನ್ ಅವರ ಸಂಗೀತ ಸಂಯೋಜನೆ, ಅರ್ಜುನ್ ಕಿಟ್ಟು ಸಂಕಲನ ಇದೆ.



ಕಾರ್ಮಿಕ ಮಹಿಳೆ ಈಗ ಮೇಯರ್



ಬೆಳಗಾವಿ ಮೇಯರ್ ಆದ ಬಳಿಕ ಮನೆಗೆ ಮರಳಿದ ಸವಿತಾ ಕಾಂಬಳೆ ಅವರನ್ನು, ಅವರ ಒಡನಾಡಿ ಪೌರಕಾರ್ಮಿಕ ಮಹಿಳೆಯರು ಸ್ವಾಗತಿಸಿ ಸಂಭ್ರಮಿಸಿದ್ದು ಹೀಗೆ – ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಎರಡನೇ ಮುಖಪುಟದಿಂದ

ಮೇಯರ್ ಆಗಿ ಅಧಿಕಾರ ವಹಿಸಿಕೊಂಡಾಗ ಸವಿತಾ ಅವರ ಕೈಗಳು ನಡುಗಿದವು. ಮೇಯರ್ ಗೌನು ಧರಿಸಿ, ಕುರ್ಚಿ ಮೇಲೆ ಕೂತಾಗ ಕಣ್ಣಾಲಿಗಳು ತುಂಬಿದ್ದವು. ಮೂಕವಿಸ್ಮಿತರಾಗಿ ಎಲ್ಲರಿಗೂ ಕೈಮುಗಿಯುತ್ತಲೇ ಇದ್ದರು.

ಮುಳ್ಳಿನ ಹಾದಿಯಿಂದ ಮೇಯರ್ ಕುರ್ಚಿವರೆಗೆ: ರಾಯಬಾಗ ತಾಲ್ಲೂಕಿನ ಶಿರಗೂರು ಗ್ರಾಮದ ಸವಿತಾ ತಮ್ಮ ತಂದೆ-ತಾಯಿ ಜತೆಗೆ ಕೂಲಿ ಅರಸಿ ಬೆಳಗಾವಿ ನಗರಕ್ಕೆ ಬಂದವರು. ಹೆತ್ತವರೊಂದಿಗೆ ದಿನಗೂಲಿ ಮಾಡುತ್ತ ಅವರು ಜೆಒಸಿ ಓದಿದರು. ಸದ್ಯ ಸದಾಶಿವನಗರದಲ್ಲಿ 19 ವರ್ಷದ ಪುತ್ರನೊಂದಿಗೆ ವಾಸವಿದ್ದಾರೆ.

ಆರಂಭದ ದಿನಗಳಲ್ಲಿ ಸದಾಶಿವನಗರದ ಸುತ್ತಲಿನ ಮನೆಗಳಲ್ಲಿ ಪಾತ್ರೆ, ಬಟ್ಟೆ ತೊಳೆಯುವ ಕೆಲಸ ಮಾಡಿದರು. ನಂತರ ಊದುಬತ್ತಿ ತಯಾರಿಕಾ ಕಾರ್ಖಾನೆಯಲ್ಲಿ ದುಡಿದರು. ಪಾಲಿಕೆ ಸದಸ್ಯರಾಗುವ ಮುನ್ನ ಹೆಲ್ಮೆಟ್ ತಯಾರಿಕಾ ಕಾರ್ಖಾನೆಯಲ್ಲಿ ಕಾರ್ಮಿಕರಾಗಿದ್ದರು. ತಿಂಗಳಿಗೆ ₹8,000 ಸಂಬಳದಲ್ಲಿ ಜೀವನ ಸಾಗಿಸಿದರು.

'ಈಗಲೂ ಮನೆಯಲ್ಲಿ ಟೇಲರಿಂಗ್ ಕೆಲಸ ಮಾಡುತ್ತೇನೆ. ಜೆಒಸಿ ಓದಿದ ಕಾರಣ ಕೆಲವರಿಗೆ ಟೇಲರಿಂಗ್ ಹೇಳಿಕೊಡಲು ಸಾಧ್ಯವಾಗಿದೆ. ಉಪಜೀವನ ಸಾಗುತ್ತಿದೆ. ಮಗ ಎಂಜಿನಿಯರಿಂಗ್ ಓದುತ್ತಿದ್ದಾನೆ. ನನ್ನ ಸಹೋದರಿಯರೂ ಆತನ ಓದಿಗೆ ನೆರವಾಗಿದ್ದಾರೆ' ಎಂದು ಸವಿತಾ ಕಾಂಬಳೆ ಅವರು 'ಪ್ರಜಾವಾಣಿ' ತಿಳಿಸಿದರು.

ಬಡತನದ ಬೇಗೆಯಲ್ಲಿ ಬೆಂದ ಸವಿತಾ ಅವರಿಗೆ ಪೌರಕಾರ್ಮಿಕರ ಬದುಕನ್ನು ಹಸನಾಗಿಸುವ ಕನಸು ಇದೆ. ತನ್ನಂತೆ ದುಡಿಯುವ ಮಹಿಳೆಯರಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಬೇಕು ಎಂಬ ಒಲವೂ ಇದೆ.

ಮುರುಕಲು ಮನೆ ಎದುರು ಕಾರು: ಸವಿತಾ ಅವರು ಮೇಯರ್ ಕಾರಿನಲ್ಲಿ ತಮ್ಮ ಮನೆಗೆ ಬಂದಿದ್ದೇ ತಡ; ಸುತ್ತಲಿನ ಜನ ಅವರನ್ನು ಮುತ್ತಿಕೊಂಡರು. ಅವರೊಂದಿಗೆ ದುಡಿದ ಮಹಿಳೆಯರು ಪುಷ್ಪವೃಷ್ಟಿ ಮಾಡಿದರು. ಮುರುಕಲು ಮನೆಯ ಮುಂದೆ ದೊಡ್ಡ ಕಾರು ಬಂದು ನಿಂತಿದ್ದನ್ನು ಜನ ಅಚ್ಚರಿಯಿಂದ ನೋಡಿದರು.

ಒಂದು ಕೊಠಡಿ, ಇನ್ನೊಂದು ಅಡುಗೆ ಕೋಣೆಯುಳ್ಳ ಹೆಂಚಿನ ಮನೆಯಲ್ಲಿ ಅವರು ವಾಸವಿದ್ದಾರೆ. ಮಳೆಗೆ ಸೋರುವ ಕಾರಣ ಹೆಂಚಿನ ಕೆಳಗೆ ಪ್ಲಾಸ್ಟಿಕ್ ಚೀಲ ಹಾಕಿದ್ದಾರೆ.

ಸಿಬಿಐ ಪ್ರಶ್ನೆಗೆ ಪ್ರತಿಕ್ರಿಯೆ ಸಲ್ಲಿಸಿದ ಮಹುವಾ



ಮಹುವಾ ಮೊಯಿತ್ರಾ

ನವದೆಹಲಿ (ಪಿಟಿಐ): ಸಂಸತ್‌ನಲ್ಲಿ ಪ್ರಶ್ನೆ ಕೇಳಲು ಲಂಚ ಪಡೆಯಲಾಗಿದೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ ಕೇಳಿರುವ ಪ್ರಶ್ನೆಗಳಿಗೆ ಟಿಎಂಸಿ ನಾಯಕಿ ಹಾಗೂ ಉಚ್ಚಾಟಿತ ಸಂಸದೆ ಮಹುವಾ ಮೊಯಿತ್ರಾ ಅವರು ಪ್ರತಿಕ್ರಿಯೆ ಸಲ್ಲಿಸಿದ್ದಾರೆ.

ಮಹುವಾ ಅವರು ಸಲ್ಲಿಸಿರುವ ಪ್ರತಿಕ್ರಿಯೆಯನ್ನು ಪರಿಶೀಲಿಸಿ, ಲೋಕಪಾಲ್‌ಗೆ ವರದಿ ಸಲ್ಲಿಸಲಾಗುವುದು ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ. ಮಹುವಾ ವಿರುದ್ಧ ಸಿಬಿಐ ತನಿಖೆಗೆ ಲೋಕಪಾಲ್ ಆದೇಶಿಸಿತ್ತು.

ಮಹುವಾ ಅವರು ಸಂಸತ್‌ನಲ್ಲಿ ಪ್ರಶ್ನೆ ಕೇಳಲು ಲಂಚ ಪಡೆದಿದ್ದಾರೆ ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಆರೋಪಿಸಿದ್ದರು.

ಇ.ಡಿ ಸಮನ್ಸ್: ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಅಡಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿ ಇದೇ 19 ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ, ಮಹುವಾ ಅವರಿಗೆ ಇ.ಡಿ ಅಧಿಕಾರಿಗಳು ಗುರುವಾರ ಸಮನ್ಸ್ ನೀಡಿದ್ದಾರೆ.

ಇ.ಡಿ.ಯ ದೆಹಲಿ ಕಚೇರಿಗೆ ಹಾಜರಾಗುವಂತೆ ಮಹುವಾ ಅವರಿಗೆ ಸೂಚಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೈತ ನಾಯಕರ ಜತೆ ಸಚಿವರ ಸಭೆ

ಚಂಡೀಗಢ (ಪಿಟಿಐ): ಪಂಜಾಬ್-ಹರಿಯಾಣ ಗಡಿಯಲ್ಲಿ ಎರಡು ಕಡೆಗಳಲ್ಲಿ ಪ್ರತಿಭಟನಕಾರರು ಮತ್ತು ಭದ್ರತಾ ಸಿಬ್ಬಂದಿ ಮಧ್ಯೆ ಘರ್ಷಣೆ ನಡೆಯುತ್ತಿರುವಾಗಲೇ ಮೂವರು ಕೇಂದ್ರ ಸಚಿವರು ಚಂಡೀಗಢದಲ್ಲಿ ಪ್ರತಿಭಟನನಿರತ ರೈತ ಸಂಘಟನೆಗಳ ಮುಖಂಡರೊಂದಿಗೆ ಗುರುವಾರ ಮೂರನೇ ಸುತ್ತಿನ ಮಾತುಕತೆ ನಡೆಸಿದರು.

ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿಪಡಿಸುವ ಕಾನೂನು ಸೇರಿ ರೈತ ಸಂಘಗಳ ವಿವಿಧ ಬೇಡಿಕೆಗಳ ಕುರಿತು ಸಭೆಯಲ್ಲಿ ತಡರಾತ್ರಿಯವರೆಗೂ ಮಾತುಕತೆ ನಡೆಯಿತು.

ಸಭೆಯಲ್ಲಿ ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವ ಅರ್ಜುನ್ ಮುಂಡಾ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್, ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಅವರು ಕೇಂದ್ರ ಸರ್ಕಾರದ ಪ್ರತಿನಿಧಿಗಳಾಗಿ ಪಾಲ್ಗೊಂಡಿದ್ದರು.

30,000 ಅಶ್ರುವಾಯು ಶೆಲ್ ಖರೀದಿ

ಎರಡನೇ ಮುಖಪುಟದಿಂದ

ಅಲ್ಲದೆ, ಮಧ್ಯಪ್ರದೇಶದ ಗ್ವಾಲಿಯರ್‌ನ ಟೆಕನ್‌ಪುರದಲ್ಲಿರುವ ಬಿಎಸ್‌ಎಫ್‌ನ 'ಟಿಯರ್ ಸ್ಮೋಕ್ ಯುನಿಟ್'ನಿಂದ 30,000ಕ್ಕೂ ಹೆಚ್ಚು ಅಶ್ರುವಾಯು ಶೆಲ್‌ಗಳ ಖರೀದಿಗೆ ಆದೇಶಿಸಲಾಗಿದ್ದು, ಅವುಗಳನ್ನು ದೆಹಲಿಗೆ ತರಲಾಗುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ರೈತರು ಮತ್ತು ಅವರ ಟ್ರ್ಯಾಕ್ಟರ್-ಟ್ರಾಲಿಗಳು ರಾಷ್ಟ್ರ ರಾಜಧಾನಿ ಪ್ರವೇಶಿಸದಂತೆ ಎಚ್ಚರದಿಂದ ಕೆಲಸ ಮಾಡಬೇಕು ಎಂದು ಪೊಲೀಸರಿಗೆ ನಿರ್ದೇಶಿಸಲಾಗಿದೆ. ಅಲ್ಲದೆ ಈ ಭಾಗಗಳಲ್ಲಿ ಸೆಕ್ಷನ್ 144ರ ಪ್ರಕಾರ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

10 ಜಿಲ್ಲೆಗಳಲ್ಲಿ ಇಂಟರ್‌ನೆಟ್ ಸ್ಥಗಿತ: ರೈತರ 'ದೆಹಲಿ ಚಲೋ' ಪ್ರತಿಭಟನೆಯ ಹಿನ್ನೆಲೆಯಲ್ಲಿ ಪಂಜಾಬ್‌ನ ಮೂರು ಹಾಗೂ ಹರಿಯಾಣದ ಏಳು ಜಿಲ್ಲೆಗಳಲ್ಲಿ ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸಲಾಗಿದೆ. ಪಂಜಾಬ್‌ನ ಪಟಿಯಾಲ, ಸಂಗ್ರೂರ್, ಫತೇಹಗಢ ಸಾಹಿಬ್ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಶುಕ್ರವಾರದವರೆಗೆ ಇಂಟರ್‌ನೆಟ್ ಸೇವೆಗಳನ್ನು ಸ್ಥಗಿತಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ.

ಹರಿಯಾಣ ಸರ್ಕಾರವೂ ಅಂಬಾಲಾ, ಕುರುಕ್ಷೇತ್ರ, ಕೈತಾಲ್, ಜಿಂದ್, ಹಿಸಾರ್, ಫತೇಹಾಬಾದ್ ಮತ್ತು ಸಿರ್ಸಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಮೊಬೈಲ್ ಇಂಟರ್‌ನೆಟ್ ಸೇವೆಗಳು ಮತ್ತು ಎಸ್‌ಎಂಎಸ್ ಸೇವೆಗಳನ್ನು ಸ್ಥಗಿತಗೊಳಿಸಿದೆ.

ಬಂದ್‌ಗೆ ಬೆಂಬಲ: ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರೈತರು ಶುಕ್ರವಾರ ನಡೆಸಲಿರುವ ಬಂದ್‌ಗೆ ರಾಜಸ್ಥಾನ ಕಾಂಗ್ರೆಸ್ ಬೆಂಬಲ ಸೂಚಿಸಿದೆ.

ರೈತರ ವಿಧಾನ ಸರಿಯಲ್ಲ- ಖಟ್ಟರ್: 'ರೈತರು ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಲು ಅನುಸರಿಸುತ್ತಿರುವ ವಿಧಾನ ಒಪ್ಪಿತವಲ್ಲ. ಅವರು ಆಕ್ರಮಣಕಾರಿ ಸೈನ್ಯದಂತೆ ದೆಹಲಿಯತ್ತ ಸಾಗಲು ಪ್ರಯತ್ನಿಸುತ್ತಿರುವುದೂ ಸರಿಯಲ್ಲ' ಎಂದು ಹರಿಯಾಣ ಮುಖ್ಯಮಂತ್ರಿ ಮನೋಹರ್ ಖಟ್ಟರ್ ಗುರುವಾರ ಆಕ್ಷೇಪಿಸಿದರು.

'ರೈತರು ಸೇನೆಯ ರೀತಿಯಲ್ಲಿ ಆಹಾರ ಸಾಮಗ್ರಿಗಳೊಂದಿಗೆ ಟ್ರ್ಯಾಕ್ಟರ್, ಟ್ರಾಲಿ, ಅರ್ಥ್ ಮೂವರ್‌ಗಳನ್ನು ಚಲಿಸಿಕೊಂಡು ದೆಹಲಿಯತ್ತ ಸಾಗುತ್ತಿದ್ದಾರೆ. ಅವರು ದೆಹಲಿಗೆ ಹೋಗುವುದಕ್ಕೆ ಅಭ್ಯಂತರವಿಲ್ಲ. ಆದಕ್ಕೆ ರೈಲು, ಬಸ್ಸು ಮತ್ತು ಅವರ ಸ್ವಂತ ವಾಹನಗಳಲ್ಲಿ ಚಲಿಸಲಿ. ಅದನ್ನು ಬಿಟ್ಟು ಕೃಷಿ ಉಪಕರಣಗಳಾದ ಟ್ರ್ಯಾಕ್ಟರ್‌ಗಳಲ್ಲಿ ಸಾಗುವುದು ಸರಿಯಲ್ಲ' ಎಂದು ಖಟ್ಟರ್ ಹೇಳಿದರು.

ಮಮತಾ ವಾಗ್ದಾಳಿ

ಕೋಲ್ಕತ್ತ (ಪಿಟಿಐ): ರೈತರ ಪ್ರತಿಭಟನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, 'ಕೇಂದ್ರದಲ್ಲಿ ರಾವಣ ಸರ್ಕಾರ ನಡೆಯುತ್ತಿದ್ದು, ಅದು ಸಭ್ಯತೆಯ ಎಲ್ಲ ಮಿತಿಗಳನ್ನು ಮೀರಿದೆ' ಎಂದು ಹೇಳಿದರು.

ವಿಧಾನಸಭೆಯಲ್ಲಿ ಗುರುವಾರ ಮಾತನಾಡಿದ ಅವರು, 'ಕೇಂದ್ರ ಸರ್ಕಾರವು ಲಕ್ಷಣ ರೇಖೆಯನ್ನು ದಾಟಿದೆ. ರೈತರು ದೆಹಲಿ ತಲುಪಿದ ದಿನ, ಬಿಜೆಪಿ ನಾಯಕರಿಗೆ ವಾಸ್ತವ ಅರ್ಥವಾಗುತ್ತದೆ' ಎಂದರು.

ರೈಲು ತಡೆದು ಪ್ರತಿಭಟನೆ

ಎರಡನೇ ಮುಖಪುಟದಿಂದ...

ಅಲ್ಲದೆ ಟೋಲ್ ಪ್ಲಾಜಾಗಳ ಬಳಿಯೂ ಧರಣಿ ನಡೆಸಿದ ಪ್ರತಿಭಟನಕಾರರು, ಟೋಲ್ ಶುಲ್ಕ ವಿಧಿಸದಂತೆ ಸಿಬ್ಬಂದಿಯನ್ನು ಒತ್ತಾಯಿಸಿದರು.

ಪಂಜಾಬ್‌ನ ವಿವಿಧೆಡೆ ಭಾರತೀಯ ಕಿಸಾನ್ ಯೂನಿಯನ್ (ಏಕ್ತಾ ಉಗ್ರನ್), ಬಿಕೆಯು ದಕುಂದ (ಧನೇರ್) ಸಂಘಟನೆಯ ನೇತೃತ್ವದಲ್ಲಿ ರೈತರು ಸುಮಾರು 4 ಗಂಟೆಗಳ ಕಾಲ ರೈಲು ತಡೆ ನಡೆಸಿದರು. 'ರೈತರು ಹಳಿಗಳ ಮೇಲೆ ಕುಳಿತಿದ್ದರಿಂದ ಕೆಲ ರೈಲುಗಳ ಮಾರ್ಗವನ್ನು ಬದಲಿಸಲಾಯಿತು. ಇನ್ನೂ ಕೆಲ ರೈಲುಗಳ ಸಂಚಾರವನ್ನು ಹಿಂದಿನ ನಿಲ್ದಾಣಗಳಲ್ಲಿ ಕೊನೆಗೊಳಿಸಲಾಯಿತು' ಎಂದು ಭಾರತೀಯ ರೈಲ್ವೆ ವಕ್ತಾರರು ತಿಳಿಸಿದ್ದಾರೆ.

ನ್ಯಾಷನಲ್ ಕಾನ್ಫರೆನ್ಸ್ 'ಇಂಡಿಯಾ' ಭಾಗ: ಒಮರ್



ಒಮರ್ ಅಬ್ದುಲ್ಲಾ

ಶ್ರೀನಗರ (ಪಿಟಿಐ): ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಪಕ್ಷವು 'ಇಂಡಿಯಾ' ಮೈತ್ರಿಕೂಟದ ಭಾಗವಾಗಿದ್ದು, ಹಾಗೆಯೇ ಮುಂದುವರೆಯಲಿದೆ ಎಂದು ಎನ್‌ಸಿ ಮುಖಂಡ ಒಮರ್ ಅಬ್ದುಲ್ಲಾ ಗುರುವಾರ ಸ್ಪಷ್ಟಪಡಿಸಿದ್ದಾರೆ.

ಪಕ್ಷವು ಜಮ್ಮು ಕಾಶ್ಮೀರ ಮತ್ತು ಲಡಾಖ್‌ನ ಆರು ಲೋಕಸಭಾ ಸ್ಥಾನಗಳ ಪೈಕಿ ಮೂರು ಸ್ಥಾನಗಳಿಗಾಗಿ ಕಾಂಗ್ರೆಸ್ ಜತೆಗೆ ಮಾತುಕತೆಯಲ್ಲಿ ನಿರತವಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಎನ್‌ಸಿ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ ಅವರು ಪಕ್ಷವು ಕೇಂದ್ರಾಡಳಿತ ಪ್ರದೇಶದಲ್ಲಿ ಮುಂಬರುವ ಲೋಕಸಭಾ ಚುನಾವಣೆಯನ್ನು ಏಕಾಂಗಿಯಾಗಿ ಎದುರಿಸಲಿದೆ ಎಂದು ಹೇಳಿದ್ದರು. ಅದರ ಬೆನ್ನಹಿಂದೆಯೇ ಒಮರ್ ಅಬ್ದುಲ್ಲಾ ಅವರು ಸ್ಪಷ್ಟೀಕರಣ ನೀಡಿದ್ದಾರೆ.


'ಫಾರೂಕ್ ಅಬ್ದುಲ್ಲಾ ಅವರ ಹೇಳಿಕೆಯು ಪಕ್ಷದ ಕಾರ್ಯಕರ್ತರ ಭಾವನೆಯ ಪ್ರತೀಕವಾಗಿವೆ. ಎಲ್ಲ ಆರು ಲೋಕಸಭಾ ಕ್ಷೇತ್ರಗಳಲ್ಲಿ ಪಕ್ಷವು ಏಕಾಂಗಿ ಹೋರಾಟ ನಡೆಸಬೇಕೆನ್ನುವುದು ಕಾರ್ಯಕರ್ತರ ಬಯಕೆ. ಆದರೆ, ಕೆಲವೊಮ್ಮೆ ದೊಡ್ಡ ಗುರಿ ಸಾಧಿಸಲು ಚಿಕ್ಕ ತ್ಯಾಗ ಮಾಡಬೇಕಾಗುತ್ತದೆ. ಇದೇ ವಾಸ್ತವ' ಎಂದು ಪಕ್ಷದ ಉಪಾಧ್ಯಕ್ಷರೂ ಅಗಿರುವ ಒಮರ್ ಅಬ್ದುಲ್ಲಾ ತಿಳಿಸಿದ್ದಾರೆ.

'ಬಿಜೆಪಿಯಿಂದ ಕ್ಷೇತ್ರಗಳನ್ನು ಮರಳಿ ಗೆದ್ದುಕೊಳ್ಳಬೇಕು ಎನ್ನುವುದು ದೊಡ್ಡ ಗುರಿಯಾಗಿದ್ದು, ಕಾಂಗ್ರೆಸ್ ಜತೆ ಸ್ಥಾನ ಹಂಚಿಕೆ ಒಪ್ಪಂದ ಮಾಡಿಕೊಳ್ಳುವುದು ಎನ್‌ಸಿಗೆ ಅಗತ್ಯವಾಗಿದೆ. ನಮ್ಮ ಬಾಗಿಲು ತೆರೆದಿದೆ. ಈಗಾಗಲೇ ಅನೌಪಚಾರಿಕ ಮಾತುಕತೆ ಆರಂಭವಾಗಿದ್ದು, ಮುಂದಿನ ಚರ್ಚೆಗಳಿಗೆ ಹಾದಿ ಮುಕ್ತವಾಗಿದೆ' ಎಂದು ಒಮರ್ ಅವರು ಹೇಳಿದ್ದಾರೆ.

ಜಮ್ಮು ಕಾಶ್ಮೀರ ಮತ್ತು ಲಡಾಖ್‌ನ ಆರು ಲೋಕಸಭಾ ಕ್ಷೇತ್ರಗಳ ಪೈಕಿ ಮೂರು ಬಿಜೆಪಿ ತೆಕ್ಕೆಯಲ್ಲಿದ್ದರೆ, ಇನ್ನು ಮೂರು ಎನ್‌ಸಿ ಹಿಡಿತದಲ್ಲಿವೆ.

ಇಂಡಿಯಾ ಮೈತ್ರಿಕೂಟದ ಭಾಗವಾಗಿದ್ದ ತೃಣಮೂಲ ಕಾಂಗ್ರೆಸ್ ಮತ್ತು ಎಎಪಿ ಕ್ರಮವಾಗಿ ಪಶ್ಚಿಮ ಬಂಗಾಳ ಮತ್ತು ಪಂಜಾಬ್‌ನಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಈಗಾಗಲೇ ಘೋಷಿಸಿವೆ.

ಷೇರುಪೇಟೆ ವಹಿವಾಟು 227



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,840
ಇಂದಿನ ಅಂತ್ಯ	21,910
▲	70
ದಿನದ ಗರಿಷ್ಠ	21,953

ವಿನಿಮಯ ದರ

$ ಡಾಲರ್	83.05
£ ಪೌಂಡ್	104.27
€ ಯುರೊ	89.15
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹600
12 ಕ್ಕೆ	₹80
ಮೈಸೂರು	
100ಕ್ಕೆ	₹600

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1450 (1440)
ಸೋಯಾ (ರಿಫೈನ್ಡ್)	₹885 (895)
ಸೂರ್ಯಕಾಂತಿ (ರಿಫೈನ್ಡ್)	₹910 (910)
ಪಾಮೋಲಿನ್	₹855 (862)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹196-439
ದ್ವಿತಳಿ (ಬಿ.ವಿ) ₹266-545

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹160.50
ಆರ್‌ಎಸ್‌ಎಸ್-5 ₹155.50
ಗುಡ್ ಲಾಟ್ ₹139

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1600-2200
ಮಧ್ಯಮ	₹1400-1600
ಸಣ್ಣ	₹800-1200

ಮುಂಬೈ ಧಾರಣೆ

ಶೇಂಗಾ

15-02-2024


ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1450 (1450)
ಒಂದು ವಾರದ ಡೆಲಿವರಿ	1445 (1445)
ಸೋಯಾ ಕಚ್ಚಾ	850 (855)
ಪಾಮ್ ವಾರದ ಡೆಲಿವರಿ	853 (860)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹61,350 (61,300)
ಬೆಳ್ಳಿ ಕೆ.ಜಿ ₹70,250 (69,200)
ಆವರಣದಲ್ಲಿ ಹಿಂದಿನ ದಿನದ ಧಾರಣೆ



ಇ.ಡಿಯಿಂದ ಪೇಟಿಎಂ ಬ್ಯಾಂಕ್ ದಾಖಲೆ ಪರಿಶೀಲನೆ

ನವದೆಹಲಿ (ಪಿಟಿಐ): ಪೇಟಿಎಂ ಪೇಮೆಂಟ್ ಬ್ಯಾಂಕ್ ಲಿಮಿಟೆಡ್ (ಪಿಪಿಬಿಎಲ್) ವಿರುದ್ಧ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಅಡಿ ಔಪಚಾರಿಕ ತನಿಖೆ ಆರಂಭಿಸುವುದಕ್ಕೂ ಮೊದಲು ಜಾರಿ ನಿರ್ದೇಶನಾಲಯವು (ಇ.ಡಿ) ದಾಖಲೆಗಳ ಪ್ರಾಥಮಿಕ ಪರಿಶೀಲನೆ ನಡೆಸುತ್ತಿದೆ.

ಫೆಬ್ರುವರಿ 29ರ ನಂತರ ಎಲ್ಲ ಬಗೆಯ ಸೇವೆಗಳನ್ನು ಸ್ಥಗಿತಗೊಳಿಸುವಂತೆ ಪಿಪಿಬಿಎಲ್‌ಗೆ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಬಂಧ ಹೇರಿದೆ. ಇ.ಡಿ ಅಧಿಕಾರಿಗಳು ಈ ಕುರಿತ ದಾಖಲೆಗಳ ಪರಿಶೀಲನೆಯಲ್ಲಿ ತೊಡಗಿದ್ದು, ಪೇಟಿಎಂನ ಹಿರಿಯ ಕಾರ್ಯ ನಿರ್ವಾಹಕ ರನ್ನು ಪ್ರಶ್ನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇ.ಡಿ ಕೇಳಿದ ಕೆಲವು ದಾಖಲೆಗಳನ್ನು ಕಾರ್ಯನಿರ್ವಾಹಕರು ಸಲ್ಲಿಸಿದ್ದಾರೆ. ಮತ್ತಷ್ಟು ಮಾಹಿತಿಗಳನ್ನು ಕಲೆ ಹಾಕಲಾಗುತ್ತಿದೆ ಎಂದು ತಿಳಿಸಿವೆ.

ನಿಯಮಾವಳಿಗಳು ಉಲ್ಲಂಘನೆಯಾಗಿರುವುದು ಕಂಡುಬಂದರೆ ಫೆಮಾ ಅಡಿಯಲ್ಲಿ ಪ್ರಕರಣ ದಾಖಲಿಸಲಾಗುತ್ತದೆ. ಸದ್ಯ ಇಲ್ಲಿಯವರೆಗೂ ಅಕ್ರಮಗಳು ಪತ್ತೆಯಾಗಿಲ್ಲ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿಯೂ ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	530
ಅಡಿಕೆ	
ಬಂಟ್ವಾಳ	
ಕೋಕ	18000-28500
ಹೊಸತು	28500-34000
ಹಳತು	34000-43500
ಕುಮಟ	
ಚಿಪ್ಪು	21611-31689
ಕೋಕ	13501-29569
ಹಳೆಚಾಲಿ	34069-37069
ಹೊಸಚಾಲಿ	28001-32419
ಪುತ್ತೂರು	
ಹೊಸತು	26500-34500
ಸಾಗರ	
ಬಿಳಿಗೋಟು	19290-25599
ಚಾಲಿ	24699-35199
ಕೋಕ	14899-24989
ಕೆಂಪುಗೋಟು	24099-35699
ರಾಶಿ	29499-47801
ಸಿಪ್ಪೆಗೋಟು	10690-17266
ಶಿವಮೊಗ್ಗ	
ಬೆಟ್ಟೆ	41000-53659
ಗೊರಬಲು	20019-38000
ರಾಶಿ	25099-48299
ಸರಕು	45500-83396
ಸಿದ್ದಾಪುರ	
ಬಿಳಿಗೋಟು	26299-28989
ಚಾಲಿ	35399-37099
ಕೋಕ	25299-29099
ಹೊಸಚಾಲಿ	30579-36899
ಕೆಂಪುಗೋಟು	31289-35689
ರಾಶಿ	42809-47099
ತಟ್ಟಿಬೆಟ್ಟೆ	39009-43219
ಶಿರಸಿ	
ಬೆಟ್ಟೆ	38218-44208
ಬಿಳಿಗೋಟು	24499-31099
ಚಾಲಿ	35007-38399
ಕೆಂಪುಗೋಟು	26905-31298
ರಾಶಿ	43039-46692
ಯಲ್ಲಾಪುರ	
ಅಪಿ	55369-65000
ಬಿಳಿಗೋಟು	22899-29069
ಚಾಲಿ	31899-38509
ಕೋಕ	14899-28399
ಕೆಂಪುಗೋಟು	23050-37719
ರಾಶಿ	43940-54889
ತಟ್ಟಿಬೆಟ್ಟೆ	35140-43609

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14,100	14,000	-	187.05 ಸೆಂಟ್ಸ್
ಎಸಿ	7,952	7,700	-	
ಆರ್‌ಪಿ	13,000	13,200	-	ಲಂಡನ್
ಆರ್‌ಸಿ	7,425	7,300	-	3,187 ಡಾಲರ್ಸ್

ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆ ಸ್ಥಾನಕ್ಕೇರಿದ ಜರ್ಮನಿ

4ನೇ ಸ್ಥಾನಕ್ಕೆ ಜಾರಿದ ಜಪಾನ್

ಟೋಕಿಯೊ (ಎಪಿ/ ರಾಯಿಟರ್ಸ್): ಆರ್ಥಿಕ ಹಿಂಜರಿಕೆಗೆ ಸಿಲುಕಿರುವ ಜಪಾನ್, ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಿಂದ ನಾಲ್ಕನೇ ಸ್ಥಾನಕ್ಕೆ ಜಾರಿದೆ. ಅಮೆರಿಕ, ಚೀನಾ ಬಳಿಕ ಈಗ ಜರ್ಮನಿಯು ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ.

2023ನೇ ಸಾಲಿನ ಸೆಪ್ಟೆಂಬರ್ ಮತ್ತು ಡಿಸೆಂಬರ್ ತ್ರೈಮಾಸಿಕಗಳಲ್ಲಿ ದೇಶೀಯ ಬೇಡಿಕೆಯು ದುರ್ಬಲವಾಗಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಆರ್ಥಿಕ ಬೆಳವಣಿಗೆ ದರ ಶೇ 0.4ರಷ್ಟು ಕಸಿದಿದೆ. ಇದರಿಂದ ದಿಢೀರ್ ಆರ್ಥಿಕ ಹಿಂಜರಿತ ತಲೆದೋರಿದೆ. ಬ್ಯಾಂಕ್ ಆಫ್ ಜಪಾನ್‌ನ ಆರ್ಥಿಕ ನೀತಿಗಳು ಅನಿಶ್ಚಿತತೆ ಸೃಷ್ಟಿಗೆ ಕಾರಣವಾಗಿವೆ ಎಂದು ಹಣಕಾಸು ವಿಶ್ಲೇಷಕರು ಹೇಳಿದ್ದಾರೆ.

ಜಪಾನಿಗರ ವಯಸ್ಸು ಹಾಗೂ ಪೋಷಕರ ಸಂತಾನ ಮಿತಿ ಪಾಲನೆಯಿಂದಾಗಿ ಆರ್ಥಿಕತೆಯು ಕ್ರಮೇಣವಾಗಿ ಸ್ಪರ್ಧಾತ್ಮಕತೆ ಮತ್ತು ಉತ್ಪಾದಕತೆಯ ಶಕ್ತಿಯನ್ನು ಕಳೆದು-ಕೊಳ್ಳುತ್ತಿದೆ. ಸರ್ಕಾರ ಗುರುವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಇದಕ್ಕೆ ಪುಷ್ಟಿ ನೀಡುತ್ತವೆ ಎಂದು ಹೇಳಿದ್ದಾರೆ.

2010ರಲ್ಲಿ ಚೀನಾವು ಎರಡನೇ ಅತಿದೊಡ್ಡ ಆರ್ಥಿಕತೆಯಾಗಿದ್ದ ಜಪಾನ್ ಅನ್ನು ಹಿಂದಿಕ್ಕಿತ್ತು. ಅಲ್ಲದೇ, ಕಳೆದ ವರ್ಷ ಜಪಾನ್ ನಾಲ್ಕನೇ ಸ್ಥಾನಕ್ಕೆ ಕುಸಿಯುತ್ತದೆ ಎಂದು ಅಂತರ ರಾಷ್ಟ್ರೀಯ ಹಣಕಾಸು ನಿಧಿಯು ಅಂದಾಜಿಸಿತ್ತು.

2023ರಲ್ಲಿ ಜಪಾನ್‌ನ ಜಿಡಿಪಿ ಗಾತ್ರ ₹348 ಲಕ್ಷ ಕೋಟಿಗೆ ತಲುಪಿದೆ (4.2 ಟ್ರಿಲಿಯನ್ ಅಮೆರಿಕನ್ ಡಾಲರ್). ಕಳೆದ ತಿಂಗಳ ವರದಿ ಪ್ರಕಾರ ಜರ್ಮನಿಯ ಜಿಡಿಪಿ ಗಾತ್ರ ₹365 ಲಕ್ಷ ಕೋಟಿಗೆ (4.4 ಟ್ರಿಲಿಯನ್ ಅಮೆರಿಕನ್ ಡಾಲರ್) ಏರಿಕೆ ಆಗಿದೆ.

ಜರ್ಮನಿಯು, ಯೂರೊ ಕರೆನ್ಸಿ ಹಾಗೂ ಹಣದುಬ್ಬರ ನಿಯಂತ್ರಣದ ಮೂಲಕ ಸದೃಢವಾದ ಆರ್ಥಿಕತೆ ರೂಪಿಸುವಲ್ಲಿ ಯಶಸ್ವಿಯಾಗಿದೆ. ಇದಕ್ಕೆ ಹೋಲಿಸಿದರೆ ಜಪಾನ್ ಕರೆನ್ಸಿ ಯೆನ್ ದುರ್ಬಲವಾಗಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಬ್ರಿಟನ್‌ನಲ್ಲೂ ಆರ್ಥಿಕ ಹಿಂಜರಿತ

ಲಂಡನ್ (ಪಿಟಿಐ): ಬ್ರಿಟನ್ ಕೂಡ ಆರ್ಥಿಕ ಹಿಂಜರಿತದ ಸುಳಿಗೆ ಸಿಲುಕಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಗುರುವಾರ ಬಿಡುಗಡೆ ಮಾಡಿರುವ ಅಂಕಿಅಂಶಗಳ ಪ್ರಕಾರ, ಜಿಡಿಪಿಯು 2023ರ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 0.1ರಷ್ಟು ಹಾಗೂ ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 0.3ರಷ್ಟು ಕುಸಿದಿದೆ.


ರಿಷಿ ಸುನಕ್

‘ಹಣದುಬ್ಬರ ಹೆಚ್ಚಳವೇ ಆರ್ಥಿಕತೆ ಬೆಳವಣಿಗೆಗೆ ಅತಿದೊಡ್ಡ ತಡೆಗೋಡೆಯಾಗಿದೆ. ಹಣದುಬ್ಬರದ ಸ್ಥಿರತೆ ಕಾಯ್ದುಕೊಳ್ಳಲು ಬ್ಯಾಂಕ್ ಆಫ್ ಇಂಗ್ಲೆಂಡ್ ಬಡ್ಡಿದರವನ್ನು ಹೆಚ್ಚಿಸಿದೆ. ಹಾಗಾಗಿ, ಜಿಡಿಪಿ ಕುಸಿತಗೊಂಡಿರುವುದರಲ್ಲಿ ಅಚ್ಚರಿಯೇನಲ್ಲ’ ಎಂದು ದೇಶದ ಹಣಕಾಸು ಸಚಿವ ಜೆರೆಮಿ ಹಂಟ್ ಹೇಳಿದ್ದಾರೆ.

ಪ್ರಧಾನಿ ರಿಷಿ ಸುನಕ್ ಅವರು ದೇಶದ ಆರ್ಥಿಕತೆಯನ್ನು ಮೇಲೆತ್ತುವ ಭರವಸೆ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿದಿದ್ದರು. ಆದರೆ, ಈ ವರ್ಷ ನಡೆಯಲಿರುವ ಚುನಾವಣೆಯಲ್ಲಿ ಮತ್ತೆ ಸ್ಪರ್ಧಿಸಲು ಸಜ್ಜಾಗಿರುವ ಅವರಿಗೆ ಆರ್ಥಿಕ ಹಿಂಜರಿತವು ಸವಾಲೊಡ್ಡುವ ಸಾಧ್ಯತೆಯಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಜಪಾನ್‌ನನ್ನು ಮೀರಿಸಲಿದೆ ಭಾರತ

‘ಸರ್ಕಾರದ ಅಂಕಿಅಂಶಗಳು ದೇಶದ ದುರ್ಬಲ ಆರ್ಥಿಕ ಸ್ಥಿತಿಗೆ ಕನ್ನಡಿ ಹಿಡಿದಿವೆ. ಅಲ್ಲದೇ, ಜಾಗತಿಕ ಮಟ್ಟದಲ್ಲಿ ತನ್ನ ಅಸ್ತಿತ್ವ ಕಳೆದುಕೊಳ್ಳು-ವುದನ್ನು ತೋರಿಸುತ್ತವೆ’ ಎಂದು ಟೋಕಿಯೊ ವಿಶ್ವವಿದ್ಯಾ-ಲಯದ ಅರ್ಥಶಾಸ್ತ್ರಜ್ಞ ಟೆಟ್ಸುಜಿ ಒಕಾಝುಕಿ ಹೇಳಿದ್ದಾರೆ.

ದೇಶವು ಹಲವು ವರ್ಷಗಳ ಹಿಂದೆ ವಾಹನಗಳ ತಯಾರಿಕಾ ಕ್ಷೇತ್ರದಲ್ಲಿ ಬಲಿಷ್ಠವಾಗಿತ್ತು. ಎಲೆಕ್ಟ್ರಿಕ್ ವಾಹನಗಳ ಪ್ರವೇಶದಿಂದಾಗಿ ಈ ಕ್ಷೇತ್ರದ ಅಲುಗಾಡುತ್ತಿದೆ. ಇತ್ತೀಚೆಗೆ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ನಡುವಿನ ಅಂತರ ಕುಗ್ಗುತ್ತಿದೆ. ಭಾರತವು ಕೆಲವೇ ವರ್ಷಗಳಲ್ಲಿ ಜಪಾನ್‌ನ ಸಾಂಕೇತಿಕ ಜಿಡಿಪಿಯನ್ನು ಹಿಂದಿಕ್ಕಲಿದೆ ಎಂದಿದ್ದಾರೆ.

‘21 ಲಕ್ಷ ಹೂಡಿಕೆದಾರರಿಗೆ ಹಣ ಮರುಪಾವತಿ’

ನವದೆಹಲಿ (ಪಿಟಿಐ): ಹಣ ಅಕ್ರಮ ಸಂಗ್ರಹ ಪ್ರಕರಣದಲ್ಲಿ ಭಾಗಿಯಾಗಿರುವ ಪರ್ಲ್ಸ್ ಆಗ್ರೋಟೆಕ್ ಕಾರ್ಪೊರೇಷನ್ ಲಿಮಿಟೆಡ್‌ನಲ್ಲಿ (ಪಿಎಸಿಎಲ್) ಹೂಡಿಕೆ ಮಾಡಿದ್ದ 21 ಲಕ್ಷ ಹೂಡಿಕೆದಾರರಿಗೆ ₹1,022 ಕೋಟಿ ಮೊತ್ತವನ್ನು ಮರುಪಾವತಿ ಮಾಡಲಾಗಿದೆ ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಗುರುವಾರ ತಿಳಿಸಿದೆ.

‘ಪಿಎಸಿಎಲ್’ ಕಾನೂನುಬಾಹಿರವಾದ ಹೂಡಿಕೆ ಯೋಜನೆಗಳಲ್ಲಿ ತೊಡಗಿತ್ತು. ಕೃಷಿ ಮತ್ತು ರಿಯಲ್ ಎಸ್ಟೇಟ್ ವಹಿವಾಟಿನ ಹೆಸರಿನಡಿ ಸಾರ್ವಜನಿಕರಿಂದ ₹60 ಸಾವಿರ ಕೋಟಿಗೂ ಹೆಚ್ಚು ಮೊತ್ತವನ್ನು ಸಂಗ್ರಹಿಸಿರುವುದನ್ನು ಸೆಬಿ ಪತ್ತೆ ಹಚ್ಚಿತ್ತು. ಹೂಡಿಕೆದಾರರಿಗೆ ಹಣ ಹಿಂದಿರುಗಿಸುವ ಸಂಬಂಧ ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಅವರ ನೇತೃತ್ವದಡಿ ಸಮಿತಿ ರಚಿಸಿತ್ತು.


ಒಟ್ಟು ₹19 ಸಾವಿರ ಕೋಟಿ ಮೊತ್ತದಲ್ಲಿ ಅರ್ಹರಿಗೆ ಹಣ ಮರುಪಾವತಿ ಮಾಡುವಲ್ಲಿ ಸಮಿತಿಯ ಯಶಸ್ವಿಯಾಗಿದೆ ಎಂದು ಸೆಬಿ ತಿಳಿಸಿದೆ.

ಸಕಾಲದಲ್ಲಿ ಹೂಡಿಕೆದಾರರಿಗೆ ಹಣ ಹಿಂದಿರುಗಿಸುವಲ್ಲಿ ಪಿಎಸಿಎಲ್ ಮತ್ತು ಅದರ 9 ಪ್ರವರ್ತಕರು, ನಿರ್ದೇಶಕರು ವಿಫಲರಾಗಿದ್ದರು. ಹಾಗಾಗಿ, 2015ರಲ್ಲಿ ಅವರಿಗೆ ಸೇರಿದ ಸ್ವತ್ತುಗಳನ್ನು ಜಪ್ತಿ ಮಾಡಲು ಆದೇಶಿಸಿತ್ತು.

‘ಹಣದುಬ್ಬರ ನಿಯಂತ್ರಣ ಕಷ್ಟಸಾಧ್ಯ’

ಮುಂಬೈ (ಪಿಟಿಐ): ‘ಆಹಾರ ಪದಾರ್ಥಗಳ ಬೆಲೆ ಏರಿಕೆ ಹಾಗೂ ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾಗುತ್ತಿರುವ ಹೊಸ ಬಿಕ್ಕಟ್ಟುಗಳಿಂದಾಗಿ ಹಣದುಬ್ಬರವನ್ನು ನಿಯಂತ್ರಿಸುವುದು ಕಷ್ಟಸಾಧ್ಯ-ವಾಗಿದೆ’ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಗುರುವಾರ ನಡೆದ 59ನೇ ಸೌತ್ ಈಸ್ಟ್ ಏಷ್ಯನ್ ಸೆಂಟ್ರಲ್ ಬ್ಯಾಂಕ್ಸ್ ಸಮಾವೇಶದಲ್ಲಿ ಮಾತನಾಡಿದ ಅವರು, ‘ಬೆಲೆ ಇಳಿಕೆಯ ಮೇಲೆ ಆರ್‌ಬಿಐ ನಿಗಾ ಇಟ್ಟಿದೆ. ಹಣದುಬ್ಬರ ಇಳಿಕೆಯಾದರಷ್ಟೇ ಸುಸ್ಥಿರ ಆರ್ಥಿಕ ಬೆಳವಣಿಗೆ ಸಾಧ್ಯ’ ಎಂದರು.


ಶಕ್ತಿಕಾಂತ ದಾಸ್

‘2024–25ನೇ ಹಣಕಾಸು ವರ್ಷದಲ್ಲಿ ಭಾರತದ ಆರ್ಥಿಕತೆ ಬೆಳವಣಿಗೆಯು ಶೇ7.0ರಷ್ಟು ಪ್ರಗತಿ ಕಾಣಲಿದೆ ಎಂದು ಆರ್‌ಬಿಐ ಅಂದಾಜಿಸಿದೆ’ ಎಂದರು.


ಬ್ಯಾಡಗಿ ಮಾರುಕಟ್ಟೆಯಲ್ಲಿ ಗುರುವಾರ ಮಾರಾಟಕ್ಕೆ ತರಲಾಗಿದ್ದ ಮೆಣಸಿನಕಾಯಿ ಚೀಲಗಳನ್ನು ಟೆಂಡರ್‌ಗೆ ಇಟ್ಟಿರುವ ದೃಶ್ಯ

ಮೆಣಸಿನಕಾಯಿ ದಾಖಲೆ ಆವಕ


ಪ್ರಜಾವಾಣಿ ವಾರ್ತೆ

ಬ್ಯಾಡಗಿ (ಹಾವೇರಿ ಜಿಲ್ಲೆ): ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆಗೆ ಗುರುವಾರ 83,568 ಕ್ವಿಂಟಲ್ (3,34,272 ಚೀಲ) ಮೆಣಸಿನಕಾಯಿ ಮಾರಾಟಕ್ಕೆ ತರಲಾಗಿದ್ದು, ಆವಕದಲ್ಲಿ ದಿಢೀರ್ ಹೆಚ್ಚಳ ಕಂಡುಬಂದಿದೆ. ಮಾರುಕಟ್ಟೆ ಇತಿಹಾಸದಲ್ಲಿ ಇದು ದಾಖಲೆಯ ಆವಕವಾಗಿದೆ.

ಎರಡು ವರ್ಷಗಳ ಹಿಂದೆ ಗರಿಷ್ಠ 61,782 ಕ್ವಿಂಟಲ್ (2,47,127 ಚೀಲ) ಆವಕವಾಗಿತ್ತು. ರಾಜ್ಯದಲ್ಲಿ ಬರ ಇದ್ದರೂ ಮೆಣಸಿನಕಾಯಿ ಬೆಳೆಗಾರರು ಬಂಪರ್ ಬೆಳೆ ಬೆಳೆದಿದ್ದಾರೆ ಎನ್ನಲಾಗಿದೆ.

ಒಟ್ಟಾರೆ ಗುರುವಾರ 33,118 ಲಾಟ್ ಮೆಣಸಿನಕಾಯಿ ಚೀಲಗಳನ್ನು ಟೆಂಡರ್‌ಗೆ ಇಡಲಾಗಿದ್ದು, ಈ ಪೈಕಿ ತೇವಾಂಶ ಹೆಚ್ಚಿರುವ ಹಾಗೂ ಗುಣಮಟ್ಟ ಇಲ್ಲದ 774 ಲಾಟ್‌ಗಳಿಗೆ ಟೆಂಡರ್ ನಮೂದಿಸಿಲ್ಲ. 18 ಚೀಲ ಡಬ್ಬಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹52,009, 12 ಚೀಲ ಕಡ್ಡಿ ಮೆಣಸಿನಕಾಯಿ ₹41,369ಕ್ಕೆ ಗರಿಷ್ಠ ಬೆಲೆಯಲ್ಲಿ ಮಾರಾಟ ಆಗಿದೆ. ಕಳೆದ ಸೋಮವಾರಕ್ಕಿಂತ ಡಬ್ಬಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹5 ಸಾವಿರ, ಕಡ್ಡಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹10 ಸಾವಿರ ದರ ಇಳಿಕೆಯಾಗಿದೆ.

ಗುಂಟೂರು ತಳಿ ಮಾತ್ರ ಕ್ವಿಂಟಲ್‌ಗೆ ₹18,129ರಂತೆ ಗರಿಷ್ಠ ಬೆಲೆಯಲ್ಲಿ ಮಾರಾಟವಾಗುವ ಮೂಲಕ ಧಾರಣೆಯಲ್ಲಿ ಸ್ಥಿರತೆ ಕಾಯ್ದುಕೊಂಡಿದೆ. ಸರಾಸರಿ ಬೆಲೆಯಲ್ಲಿ ಬ್ಯಾಡಗಿ ಡಬ್ಬಿ ₹40,059, ಬ್ಯಾಡಗಿ ಕಡ್ಡಿ ₹36,059 ಹಾಗೂ ಗುಂಟೂರು ತಳಿ ₹14,009ಕ್ಕೆ ಮಾರಾಟವಾಗಿದೆ. ಗುರುವಾರದ ಟೆಂಡರ್ ಪ್ರಕ್ರಿಯೆಯಲ್ಲಿ 379 ಖರೀದಿದಾರರು ಪಾಲ್ಗೊಂಡಿದ್ದರು ಎಂದು ಎಪಿಎಂಸಿ ಮೂಲಗಳು ತಿಳಿಸಿವೆ.



ಮಾರುಕಟ್ಟೆ ದರ (ಕ್ವಿಂಟಲ್‌ನಲ್ಲಿ)

	ಕನಿಷ್ಠ	ಗರಿಷ್ಠ
ಬ್ಯಾಡಗಿ ಕಡ್ಡಿ	₹2,589	₹41,369
ಬ್ಯಾಡಗಿ ಡಬ್ಬಿ	₹3,009	₹52,009
ಗುಂಟೂರು ತಳಿ	₹1,609	₹18,129

ಲೆಬನಾನ್ ಮೇಲೆ ದಾಳಿ; 10 ಮಂದಿ ಮೃತ

ಬೈರೂತ್ (ಎಪಿ): ಲೆಬನಾನ್ ಮೇಲೆ ಇಸ್ರೇಲ್ ನಡೆಸಿದ ವಾಯುದಾಳಿಯಲ್ಲಿ 10 ನಾಗರಿಕರು ಮೃತಪಟ್ಟಿದ್ದಾರೆ ಎಂದು ಅಲ್ಲಿಯ ಮಾಧ್ಯಮ ವರದಿ ಮಾಡಿದೆ.

ಈ ಬೆನ್ನಲ್ಲೇ, ಇಸ್ರೇಲ್ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಲೆಬನಾನ್‌ನ ಹಿಜ್ಬುಲ್ಲಾ ಬಂಡುಕೋರ ಪಡೆ ಹೇಳಿದೆ.

ಹಿಜ್ಬುಲ್ಲಾ ಪಡೆಯು ಇಸ್ರೇಲ್‌ನ ಸಫೇದ್ ಪಟ್ಟಣದ ಮೇಲೆ ಬುಧವಾರ ದಾಳಿ ನಡೆಸಿತ್ತು. ಈ ವೇಳೆ ಇಸ್ರೇಲ್‌ನ ಯೋಧೆ ಮೃತಪಟ್ಟಿದ್ದರು ಮತ್ತು ಎಂಟು ಮಂದಿ ಇತರರು ಗಾಯಗೊಂಡಿದ್ದರು. ಈ ಹಿನ್ನೆಲೆಯಲ್ಲಿ ಇಸ್ರೇಲ್ ದಾಳಿ ನಡೆಸಿದೆ. ದಾಳಿಯಲ್ಲಿ ಲೆಬನಾನ್‌ನ ನಾಬಾತಿಯೇಹ್ ಪಟ್ಟಣದಲ್ಲಿ ಒಂದೇ ಕುಟುಂಬದ ಏಳು ಮಂದಿ ಮೃತಪಟ್ಟಿದ್ದಾರೆ. ಸೌವಾನೆಹ್‌ನಲ್ಲಿ ಮಹಿಳೆ ಮತ್ತು ಆಕೆಯ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ.

ಇಸ್ರೇಲ್ ಮತ್ತು ಹಮಾಸ್ ನಡುವೆ ಯುದ್ಧ ಆರಂಭವಾದಾಗಿ-ನಿಂದ ಇಸ್ರೇಲ್– ಲೆಬನಾನ್ ಗಡಿಯಲ್ಲಿ ಘರ್ಷಣೆ ನಡೆಯುತ್ತಿದೆ. ಆದರೆ ಬುಧವಾರ ನಡೆದಿದ್ದು ಅತ್ಯಂತ ಭೀಕರ ದಾಳಿ ಎನ್ನಲಾಗಿದೆ.

ಅಮೆರಿಕ: ಭಾರತ ಮೂಲದ ವೃದ್ಧನಿಗೆ ಗುಂಡಿಕ್ಕಿ ಕೊಲೆ

ವಾಷಿಂಗ್ಟನ್ (ಪಿಟಿಐ): ಭಾರತ ಮೂಲದ ಪ್ರವೀಣ್ ರಾವ್‌ಜಿ ಭಾಯ್ ಪಟೇಲ್ ಎಂಬ 73 ವರ್ಷದ ಮೋಟೆಲ್ (ರಸ್ತೆ ಪಕ್ಕದ ಹೋಟೆಲ್) ಮಾಲೀಕನನ್ನು ಗ್ರಾಹಕನೊಬ್ಬ ಗುಂಡಿಕ್ಕಿ ಕೊಲೆ ಮಾಡಿದ ಘಟನೆ ಕಳೆದ ವಾರ ಅಮೆರಿಕದ ಅಲಬಾಮ ರಾಜ್ಯದಲ್ಲಿ ನಡೆದಿದೆ.

ಪ್ರವೀಣ್ ಅವರು ಶೆಫೀಲ್ಡ್‌ನಲ್ಲಿ ಹಿಲ್‌ಕ್ರೆಸ್ಟ್ ಎಂಬ ಮೋಟೆಲ್ ಅನ್ನು ನಡೆಸುತ್ತಿದ್ದರು. ಕೋಣೆಯೊಂದರ ವಿಚಾರವಾಗಿ ಗ್ರಾಹಕ ಮತ್ತು ಪ್ರವೀಣ್ ನಡುವೆ ಜಗಳವಾದ ಸಂಬಂಧ ಈ ಕೊಲೆ ನಡೆದಿದೆ. ‘ಫೆಬ್ರುವರಿ 8ರಂದು ಪ್ರವೀಣ್ ಅವರನ್ನು ವಿಲಿಯಂ ಜೆರೆಮಿ ಮೂರ್ ಎಂಬಾತ ಕೊಲೆ ಮಾಡಿದ್ದು, ಆತನನ್ನು ಬಂಧಿಸಲಾಗಿದೆ ಎಂದು ಶೆಫೀಲ್ಡ್ ಪೊಲೀಸ್ ಮುಖ್ಯಸ್ಥ ರಿಕಿ ಟೆರಿ ಹೇಳಿದ್ದಾರೆ’ ಎಂದು ಡಬ್ಲ್ಯುಎಎಫ್‌ಎಫ್ ಸುದ್ದಿ ವಾಹಿನಿ ವರದಿ ಮಾಡಿದೆ.

ಜರ್ದಾರಿ ಪಾಕಿಸ್ತಾನದ ನೂತನ ಅಧ್ಯಕ್ಷ?

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಪೀಪಲ್ಸ್ ಪಾರ್ಟಿಯ (ಪಿಪಿಪಿ) ನಾಯಕ ಆಸಿಫ್ ಅಲಿ ಜರ್ದಾರಿ ಅವರು ದೇಶದ ಮುಂದಿನ ಅಧ್ಯಕ್ಷರಾಗುವ ಸಾಧ್ಯತೆ ಇದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಪಾಕಿಸ್ತಾನ ಮುಸ್ಲಿಂ ಲೀಗ್ –ನವಾಜ್ (ಪಿಎಂಎಲ್–ಎನ್) ಪಕ್ಷದ ಜೊತೆಗೆ ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಲು ಪಿಪಿಪಿ ಈಚೆಗೆ ಸಮ್ಮತಿಸಿತ್ತು.

‘ಪರಿಸ್ಥಿತಿಯಲ್ಲಿ ಯಾವುದೇ ಬದಲಾ-ವಣೆಯಾಗದಿದ್ದರೆ ದೇಶವು ಪಿಎಂಎಲ್–ಎನ್‌ನ ಪ್ರಧಾನಿಯನ್ನು ಮತ್ತು ಪಿಪಿಪಿಯ ಅಧ್ಯಕ್ಷರನ್ನು ಹೊಂದಲಿದೆ’ ಎಂದು ‘ದಿ ನ್ಯೂಸ್ ಇಂಟರ್‌ನ್ಯಾಷನಲ್’ ಪತ್ರಿಕೆಯು ವರದಿಯಲ್ಲಿ ಹೇಳಿದೆ. ಎರಡೂ ಪಕ್ಷಗಳ ಮೂಲಗಳನ್ನು ಉಲ್ಲೇಖಿಸಿ ಪತ್ರಿಕೆಯು ಈ ವರದಿ ಮಾಡಿದೆ.

ಆಸಿಫ್ ಅಲಿ ಜರ್ದಾರಿ ಅವರು 2008 ರಿಂದ 2013ರ ವರೆಗೆ ಪಾಕಿಸ್ತಾನದ ಅಧ್ಯಕ್ಷರಾಗಿದ್ದರು.


ಆಸಿಫ್ ಅಲಿ ಜರ್ದಾರಿ

ಸದ್ಯದ ಅಧ್ಯಕ್ಷ ಡಾ. ಆರಿಫ್ ಅಲ್ವಿ ಅವರು ಈ ತಿಂಗಳ ಕೊನೆಗೆ ತಮ್ಮ ಸ್ಥಾನದಿಂದ ಹೊರನಡೆಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಫೆ.8ರಂದು ನಡೆದಿದ್ದ ಚುನಾವಣೆಯಲ್ಲಿ ಪ್ರಮುಖ ಪಕ್ಷಗಳು ಸ್ಪಷ್ಟ ಬಹುಮತ ಪಡೆಯದ ಕಾರಣ ಪಾಕಿಸ್ತಾನದಲ್ಲಿ ಯಾವುದೇ ಸರ್ಕಾರ ರಚನೆಯಾಗಿಲ್ಲ.

ಉಮರ್ ಅಯೂಬ್ ಪ್ರಧಾನಿ ಅಭ್ಯರ್ಥಿ: ಜೈಲಿನಲ್ಲಿರುವ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಪಾಕಿಸ್ತಾನ ತೆಹ್ರೀಕ್–ಇ–ಇನ್ಸಾಫ್ (ಪಿಟಿಐ) ಪಕ್ಷವು, ಪ್ರಧಾನಿ ಅಭ್ಯರ್ಥಿಯಾಗಿ ಪಕ್ಷದ ಪ್ರಧಾನ ಕಾರ್ಯದರ್ಶಿ ಉಮರ್ ಅಯೂಬ್ ಖಾನ್ ಅವರನ್ನು ಗುರುವಾರ ನಾಮನಿರ್ದೇಶನ ಮಾಡಿದೆ.

‘ಅನಪೇಕ್ಷಿತ ಕರೆಗಳಿಗೆ ಕಡಿವಾಣಕ್ಕೆ ಕ್ರಮ’

ನವದೆಹಲಿ (ಪಿಟಿಐ): ಗ್ರಾಹಕರಿಗೆ ಅನಪೇಕ್ಷಿತ ಕರೆಗಳಿಂದ ಆಗುತ್ತಿರುವ ಕಿರಿಕಿರಿ ತಪ್ಪಿಸುವ ಸಂಬಂಧ ಕರಡು ಮಾರ್ಗಸೂಚಿ ರಚಿಸಲು ಸಮಿತಿಯೊಂದನ್ನು ರಚಿಸಲಾಗುವುದು ಎಂದು ಕೇಂದ್ರ ಸರ್ಕಾರ ಗುರುವಾರ ತಿಳಿಸಿದೆ.

ಇಂತಹ ಕರೆಗಳಿಂದ ಗ್ರಾಹಕರ ಖಾಸಗೀತನಕ್ಕೆ ತೊಂದರೆಯಾಗುತ್ತಿದೆ. ಹಾಗಾಗಿ, ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

ಈ ಸಮಿತಿಯಲ್ಲಿ ದೂರಸಂಪರ್ಕ ಇಲಾಖೆ, ಹಣಕಾಸು ಸೇವಾ ಇಲಾಖೆ, ಕೇಂದ್ರ ಗೃಹ ಮತ್ತು ನಗರ ಸಚಿವಾಲಯ, ಆರ್‌ಬಿಐ, ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ ಹಾಗೂ ಭಾರತದ ದೂರಸಂಪರ್ಕ ಸೇವಾದಾತರ ಸಂಘಟನೆಗಳ ಪ್ರತಿನಿಧಿಗಳು ಇರಲಿದ್ದಾರೆ ಎಂದು ತಿಳಿಸಿದೆ.

ಹಣಕಾಸು, ತಂತ್ರಜ್ಞಾನ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಹಕಾರ ವಿಸ್ತರಿಸಲು ಚರ್ಚೆ

ಕತಾರ್ ದೊರೆ ಜೊತೆ ಮೋದಿ ಮಾತುಕತೆ

ದೋಹಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಕತಾರ್‌ನ ದೊರೆ ಶೇಖ್ ತಮೀಮ್ ಬಿನ್ ಹಮ್ಮದ್ ಅಲ್ ಥಾಣಿ ಅವರ ಜೊತೆ ಗುರುವಾರ ಇಲ್ಲಿ ಮಾತುಕತೆ ನಡೆಸಿದರು. ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ವೃದ್ಧಿ ಕುರಿತು ಅವರು ಈ ವೇಳೆ ಚರ್ಚಿಸಿದರು.

ಎರಡು ದಿನಗಳ ಯುಎಇ ಪ್ರವಾಸದ ಬಳಿಕ ಮೋದಿ ಅವರು ಬುಧವಾರ ರಾತ್ರಿ ಕತಾರ್‌ಗೆ ಬಂದು, ಇಲ್ಲಿನ ಪ್ರಮುಖರ ಜತೆ ಮಾತುಕತೆ ನಡೆಸಿದರು.

ಭಾರತೀಯ ನೌಕಾಪಡೆಯ ಎಂಟು ಮಂದಿ ಮಾಜಿ ಸಿಬ್ಬಂದಿಗೆ ಕತಾರ್‌ನಲ್ಲಿ ವಿಧಿಸಲಾಗಿದ್ದ ಮರಣದಂಡನೆಯನ್ನು ಹಿಂಪಡೆದು, ಅವರನ್ನು ಬಿಡುಗಡೆ ಮಾಡಿದ್ದಕ್ಕಾಗಿ ಶೇಖ್ ತಮೀಮ್ ಅವರಿಗೆ ಪ್ರಧಾನಿ ಧನ್ಯವಾದ ಸಲ್ಲಿಸಿದರು.


ಪ್ರಧಾನಿ ನರೇಂದ್ರ ಮೋದಿ ಅವರು ಕತಾರ್‌ನ ದೊರೆ ಶೇಖ್ ತಮೀಮ್ ಬಿನ್ ಹಮ್ಮದ್ ಅಲ್ ಥಾಣಿ ಅವರ ಜೊತೆ ದೋಹಾದಲ್ಲಿ ಗುರುವಾರ ಮಾತುಕತೆ ನಡೆಸಿದರು —ಪಿಟಿಐ ಚಿತ್ರ

ಭಾರತ– ಕತಾರ್ ನಡುವಣ ವ್ಯಾಪಾರ, ಹೂಡಿಕೆ, ಇಂಧನ, ಹಣಕಾಸು ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ದ್ವಿಪಕ್ಷೀಯ ಸಹಕಾರವನ್ನು ವಿಸ್ತರಿಸುವ ಕುರಿತು ಉಭಯ ನಾಯಕರು ಚರ್ಚಿಸಿದರು.

ಪಶ್ಚಿಮ ಏಷ್ಯಾದಲ್ಲಿ ಈಚೆಗೆ ನಡೆದಿರುವ ಪ್ರಾದೇಶಿಕ ಬೆಳವಣಿಗೆ ಮತ್ತು ಈ ಭಾಗದಲ್ಲಿ ಶಾಂತಿ, ಸ್ಥಿರತೆಯನ್ನು ಎತ್ತಿಹಿಡಿಯಬೇಕಿರುವ ಅಗತ್ಯಗಳ ಕುರಿತೂ ಅವರು ಮಾತನಾಡಿದರು. ಬಳಿಕ ಮೋದಿ ಅವರು ಕತಾರ್‌ನ ದೊರೆಗೆ ಭಾರತಕ್ಕೆ ಭೇಟಿ ನೀಡುವಂತೆಯೂ ಆಹ್ವಾನಿಸಿದರು.

ನಂತರ ಕತಾರ್ ಪ್ರಧಾನಿ ಮೊಹಮ್ಮದ್ ಬಿನ್ ಅಬ್ದುಲ್‌ರಹಮಾನ್ ಬಿನ್ ಜಸ್ಸಿಮ್ ಅಲ್ ಥಾಣಿ ಅವರು ಮೋದಿ ಅವರಿಗಾಗಿ ಔತಣಕೂಟ ಏರ್ಪಡಿಸಿದ್ದರು.

‘ಚುನಾಯಿತರಾದವರು ಜನರ ಕರೆಗೆ ಕಿವಿಗೊಡದೆ ಇದ್ದರೆ ಪ್ರಜಾತಂತ್ರ ಉಳಿಯುತ್ತದೆಯೇ?’

ಅಮಿತ ದೇಣಿಗೆ: ‘ಸುಪ್ರೀಂ’ ಅಸಮ್ಮತಿ

ನವದೆಹಲಿ (ಪಿಟಿಐ): ಪ್ರಜಾತಂತ್ರ ವ್ಯವಸ್ಥೆಯು ಚುನಾವಣೆಯಲ್ಲಿ ಆರಂಭವಾಗಿ, ಚುನಾವಣೆಯಲ್ಲೇ ಮುಕ್ತಾಯಗೊಳ್ಳುವುದಿಲ್ಲ ಎಂದು ಹೇಳಿರುವ ಸುಪ್ರೀಂ ಕೋರ್ಟ್, ರಾಜಕೀಯ ಪಕ್ಷಗಳಿಗೆ ಯಾವುದೇ ಮಿತಿಯಿಲ್ಲದೆ ದೇಣಿಗೆ ನೀಡಲು ಕಾರ್ಪೊರೇಟ್ ಸಂಸ್ಥೆಗಳಿಗೆ ಅವಕಾಶ ನೀಡುವುದರಿಂದ ಆಗುವ ಅಪಾಯಗಳ ಬಗ್ಗೆ ಎಚ್ಚರಿಸುವ ಕೆಲಸ ಮಾಡಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಸಂವಿಧಾನ ಪೀಠವು, ಚುನಾವಣಾ ಬಾಂಡ್ ಯೋಜನೆ ಅಸಾಂವಿಧಾನಿಕ ಎಂದು ಸಾರಿದ ತೀರ್ಪಿನಲ್ಲಿ ಈ ಮಾತುಗಳನ್ನು ಕೂಡ ಹೇಳಿದೆ.

‘ಚುನಾಯಿತರಾದವರು ತಮ್ಮನ್ನು ಚುನಾಯಿಸಿದವರಿಗೆ ಉತ್ತರ ಹೇಳಬೇಕಿರುವ ಕಾರಣಕ್ಕೆ ಪ್ರಜಾತಂತ್ರವು ನಿರಂತರವಾಗಿ ಇರುತ್ತದೆ... ಆದರೆ, ಚುನಾಯಿತರಾದವರು ಸಹಾಯ ಬೇಕಿರುವವರ ಕರೆಗೆ ಕಿವಿಗೊಡದೆ ಇದ್ದರೆ ಪ್ರಜಾತಂತ್ರ ವ್ಯವಸ್ಥೆ ಉಳಿದು



ಕೊಳ್ಳುತ್ತದೆಯೇ’ ಎಂದು ಸಿಜೆಐ ಚಂದ್ರಚೂಡ್ ಅವರು ತೀರ್ಪಿನಲ್ಲಿ ಪ್ರಶ್ನಿಸಿದ್ದಾರೆ.

‘ಭಾರಿ ಪ್ರಮಾಣದ ಹಣಕಾಸಿನ ಮೂಲ ಹೊಂದಿರುವ ಹಾಗೂ ರಾಜಕೀಯ ಪಕ್ಷಗಳ ಜೊತೆ ಕೊಡು–ಕೊಳ್ಳುವ ಹೊಂದಾಣಿಕೆಯನ್ನು ಮಾಡಿಕೊಳ್ಳುವ ಕಂಪನಿಗಳಿಗೆ ಯಾವ ಮಿತಿಗಳೂ ಇಲ್ಲದೆ ದೇಣಿಗೆ ನೀಡಲು ಅವಕಾಶ ಕಲ್ಪಿಸಿದರೆ ಚುನಾಯಿತರಾದ-ವರು, ಮತದಾರರಿಗೆ ನಿಜವಾಗಿಯೂ ಸ್ಪಂದನಶೀಲರಾಗಿ ಉಳಿಯುತ್ತಾರೆಯೇ ಎಂಬ ಪ್ರಶ್ನೆಯನ್ನು ನಮಗೆ ನಾವು ಕೇಳಿಕೊಳ್ಳುತ್ತಿದ್ದೇವೆ’ ಎಂದು ಅವರು ಬರೆದಿದ್ದಾರೆ.

> ಚುನಾವಣಾ ಪ್ರಕ್ರಿಯೆಯು ಋಜು ಮಾರ್ಗದಲ್ಲಿ ಇರುವಂತೆ, ನಿಷ್ಕಳಂಕವಾಗಿ ಇರುವಂತೆ ನೋಡಿಕೊಳ್ಳುವ ಹೊಣೆ ಇರುವುದು ಚುನಾವಣಾ ಆಯೋಗಕ್ಕೆ ಮಾತ್ರವೇ ಅಲ್ಲ. ಸರ್ಕಾರದ ಇತರ ಸಂಸ್ಥೆಗಳು, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಕೂಡ ಚುನಾವಣಾ ಪ್ರಕ್ರಿಯೆಯು ಋಜು ಮಾರ್ಗದಲ್ಲಿ ನಡೆಯುವಂತೆ ನೋಡಿಕೊಳ್ಳುವ ಸಾಂವಿಧಾನಿಕ ಕರ್ತವ್ಯ-ವನ್ನು ಹೊಂದಿವೆ
>
> **ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಸಂವಿಧಾನ ಪೀಠ**

ಕಾರ್ಪೊರೇಟ್ ದೇಣಿಗೆಯನ್ನು ಅದಕ್ಕೆ ಪ್ರತಿಯಾಗಿ ಏನನ್ನಾದರೂ ಪಡೆಯುವ ಉದ್ದೇಶದಿಂಲೂ ನೀಡಲಾಗುತ್ತದೆ ಎಂಬುದನ್ನು ಕೇಂದ್ರ ಸರ್ಕಾರದ ಪರವಾಗಿ ವಾದಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ–ಪ್ರತಿವಾದದ ಸಂದರ್ಭದಲ್ಲಿ ಒಪ್ಪಿದ್ದರು.

‘ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ಕಂಪನಿಗಳು ಯಾವ ಮಿತಿಗಳೂ ಇಲ್ಲದೆ ದೇಣಿಗೆ ನೀಡಲು ಅವಕಾಶ ಕಲ್ಪಿಸುವ ರೀತಿಯಲ್ಲಿ ಕಂಪನಿಗಳ ಕಾಯ್ದೆಯಲ್ಲಿ ಬದಲಾವಣೆ ತಂದಿದ್ದು ಸಮಾನತೆಯ ಹಕ್ಕಿಗೆ ವಿರುದ್ಧವಾದುದು’ ಎಂದು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ.

ಕಂಪನಿಗಳು ಯಾವ ಮಿತಿಯೂ ಇಲ್ಲದಂತೆ ದೇಣಿಗೆ ನೀಡುವ ವ್ಯವಸ್ಥೆಯು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳಿಗೆ ಪೂರಕವಾಗಿಲ್ಲ. ಇಂತಹ ವ್ಯವಸ್ಥೆಗೆ ಅವಕಾಶ ನೀಡಿದರೆ ಕೆಲವು ವ್ಯಕ್ತಿಗಳಿಗೆ ಅಥವಾ ಕಂಪನಿಗಳಿಗೆ ತಮ್ಮ ಸಂಪನ್ಮೂಲ ಬಳಸಿಕೊಂಡು ನೀತಿ ನಿರೂಪಣೆಯ ಮೇಲೆ ಪ್ರಭಾವ ಬೀರಲು ಅವಕಾಶ ಸಿಕ್ಕಂತಾಗುತ್ತದೆ ಎಂದು ತೀರ್ಪಿನಲ್ಲಿ ವಿವರಿಸಲಾಗಿದೆ.

ರಾಜಕೀಯ ದೇಣಿಗೆ ಮೂಲಕ ಚುನಾವಣಾ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವು ಕಾರ್ಪೊರೇಟ್ ಕಂಪನಿಗಳಿಗೆ ವ್ಯಕ್ತಿಗಳಿಗೆ ಇರುವುದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇರುತ್ತದೆ. ವ್ಯಕ್ತಿಗಳು ನೀಡುವ ದೇಣಿಗೆಯ ಹಿಂದೆ ರಾಜಕೀಯ ಪಕ್ಷಕ್ಕೆ ಬೆಂಬಲ ನೀಡುವ ಇರಾದೆಯೂ ಒಂದಿಷ್ಟು ಇರುತ್ತದೆ. ಆದರೆ, ಕಂಪನಿಗಳು ನೀಡುವ ದೇಣಿಗೆಗಳು ಶುದ್ಧ ವಾಣಿಜ್ಯ ಉದ್ದೇಶದವು, ದೇಣಿಗೆಗೆ ಪ್ರತಿಯಾಗಿ ಪ್ರಯೋಜನಗಳನ್ನು ಪಡೆಯುವ ಉದ್ದೇಶ ಹೊಂದಿರುತ್ತವೆ ಎಂದು ಕೋರ್ಟ್ ಹೇಳಿದೆ.

‘ಈ ಕಾರಣಗಳಿಗಾಗಿ, ರಾಜಕೀಯ ದೇಣಿಗೆಯ ವಿಚಾರದಲ್ಲಿ ವ್ಯಕ್ತಿ ಹಾಗೂ ಕಂಪನಿಗಳನ್ನು ಒಂದೇ ಬಗೆಯಲ್ಲಿ ಕಾಣುವುದು ಸರಿಯಲ್ಲ’ ಎಂದು ಪೀಠವು ಹೇಳಿದೆ.

‘ಇದರ ಅರ್ಥವು ಶಾಸಕಾಂಗವು ವ್ಯಕ್ತಿಗಳಿಂದ ಬರುವ ದೇಣಿಗೆಗೆ ಮಿತಿ ವಿಧಿಸಬಾರದು ಎಂಬುದಲ್ಲ. ಆದರೆ, ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳ ಮೇಲೆ ಉಂಟಾಗುವ ಕೆಟ್ಟ ಪರಿಣಾಮಗಳನ್ನು ಗಮನಿಸಿ, ವ್ಯಕ್ತಿ ಹಾಗೂ ಕಂಪನಿಗಳನ್ನು ಕಾನೂನು ಒಂದೇ ಬಗೆಯಲ್ಲಿ ಕಾಣಬಾರದು’ ಎಂದು ಪೀಠವು ಸ್ಪಷ್ಟಪಡಿಸಿದೆ.

ಚುನಾವಣಾ ಬಾಂಡ್ ರದ್ದು

ಒಂದನೇ ಪುಟದಿಂದ

ಬಾಂಡ್ ಖರೀದಿಸಿದವರ ಹೆಸರು, ಬಾಂಡ್‌ನ ಮೌಲ್ಯ ಮತ್ತು ಬಾಂಡ್ ಪಡೆದವರು ಯಾರು ಎಂಬುದನ್ನು ಬಹಿರಂಗಪಡಿಸಬೇಕು ಎಂದು ಕೋರ್ಟ್ ಸೂಚಿಸಿದೆ. ಚುನಾವಣಾ ಬಾಂಡ್ ನೀಡುವ ಪ್ರಕ್ರಿಯೆಯು ತಕ್ಷಣದಿಂದಲೇ ಸ್ಥಗಿತಗೊಳ್ಳಬೇಕು ಎಂದು ಪೀಠವು ತಾಕೀತು ಮಾಡಿದೆ. ಸಂವಿಧಾನ ಪೀಠವು ಸರ್ವಾನುಮತದಿಂದ ಈ ತೀರ್ಪು ಪ್ರಕಟಿಸಿದೆ.

ರಾಜಕೀಯ ಪಕ್ಷಗಳಿಗೆ ನೀಡುವ ದೇಣಿಗೆಗಳಲ್ಲಿ ಕಪ್ಪು ಹಣದ ಚಲಾವಣೆಯನ್ನು ಹತ್ತಿಕ್ಕಲು ಹಾಗೂ ಪಾರದರ್ಶ-ಕತೆಯನ್ನು ಹೆಚ್ಚಿಸಲು ಇದನ್ನು ಜಾರಿಗೆ ತರಲಾಗಿದೆ ಎಂದು ಕೇಂದ್ರ ಸರ್ಕಾರ ನೀಡಿದ್ದ ವಿವರಣೆಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠ ಒಪ್ಪಿಲ್ಲ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಬಿ.ಆರ್. ಗವಾಯಿ, ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರು ಈ ಪೀಠದಲ್ಲಿ ಇದ್ದ ಇತರ ನ್ಯಾಯಮೂರ್ತಿಗ-ಳು. ನ್ಯಾಯಪೀಠವು 232 ಪುಟಗಳಲ್ಲಿ ಎರಡು ಪ್ರತ್ಯೇಕ ತೀರ್ಪುಗಳನ್ನು ಪ್ರಕಟಿಸಿದರೂ, ಚುನಾವಣಾ ಬಾಂಡ್ ವಿಚಾರವಾಗಿ ಅವುಗಳಲ್ಲಿ ಭಿನ್ನಮತ ಇಲ್ಲ.

ನ್ಯಾಯಮೂರ್ತಿಗಳಾದ ಗವಾಯಿ, ಪಾರ್ದಿವಾಲಾ ಮತ್ತು ಮಿಶ್ರಾ ಅವರ ಪರವಾಗಿ ಸಿಜೆಐ ಚಂದ್ರಚೂಡ್ ಅವರು ತೀರ್ಪು ಬರೆದಿದ್ದಾರೆ. ನ್ಯಾಯಮೂರ್ತಿ ಖನ್ನಾ ಅವರು ಪ್ರತ್ಯೇಕವಾಗಿ ತೀರ್ಪು ಬರೆದಿದ್ದಾರೆ.

ಚುನಾವಣಾ ಬಾಂಡ್ ಯೋಜನೆಯ ಅಡಿಯಲ್ಲಿ ಆಡಳಿತಾರೂಢ ರಾಜಕೀಯ ಪಕ್ಷಗಳು ಸಾರ್ವಜನಿಕರಿ-ಗೆ ಹಾಗೂ ಸಂಸ್ಥೆಗಳಿಗೆ ದೇಣಿಗೆ ನೀಡುವಂತೆ ಬಲವಂತ ಮಾಡಲು ಅವಕಾಶ ಇದೆ ಎಂದು ಪೀಠ ಹೇಳಿದೆ. ದೇಣಿಗೆ ನೀಡುವವರ ಗೋಪ್ಯತೆಯನ್ನು ಈ ಯೋಜನೆಯು ರಕ್ಷಿಸುತ್ತದೆ, ಇದು ಮತದಾನದಷ್ಟೇ ಗೋಪ್ಯವಾಗಿ ಇರುತ್ತದೆ ಎಂದು ಕೇಂದ್ರವು ಮಂಡಿಸಿದ್ದ ವಾದವನ್ನು ಪೀಠವು ‘ತಪ್ಪು’ ಎಂದು ಹೇಳಿದೆ.

ತೀರ್ಪು ಪ್ರಕಟಿಸಿದ ಸಿಜೆಐ ಚಂದ್ರಚೂಡ್ ಅವರು, ಈ ಯೋಜನೆಯು ಸಂವಿಧಾನದ 19(1)(ಎ) ವಿಧಿಯು ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉಲ್ಲಂಘಿಸುತ್ತದೆ ಎಂದು ಹೇಳಿದ್ದಾರೆ. ‘ಚುನಾವಣಾ ಬಾಂಡ್ ಯೋಜನೆಯು ದೇಣಿಗೆಗಳನ್ನು ಗೋಪ್ಯವಾಗಿಸುವ ಮೂಲಕ ಮತದಾರರು ಹೊಂದಿರುವ ಮಾಹಿತಿಯ ಹಕ್ಕನ್ನು ಉಲ್ಲಂಘಿಸುವಂತಿದೆ. ಅಷ್ಟರಮಟ್ಟಿಗೆ ಈ ಯೋಜನೆಯು ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ಉಲ್ಲಂಘಿಸುವಂ-ತಿದೆ’ ಎಂದು ಪೀಠವು ಸ್ಪಷ್ಟ ಮಾತುಗಳಲ್ಲಿ ಹೇಳಿದೆ.

ಖಾಸಗಿತನವನ್ನು ಕಾಪಿಟ್ಟುಕೊಳ್ಳುವ ಮೂಲಭೂತ ಹಕ್ಕಿನ ಭಾಗವಾಗಿ, ಪ್ರಜೆಗಳಿಗೆ ರಾಜಕೀಯ ಒಲವುಗಳ ವಿಚಾರದಲ್ಲಿ ಖಾಸಗಿತನವನ್ನು ಕಾಪಾಡಿಕೊಳ್ಳುವ ಹಕ್ಕು ಕೂಡ ಇದೆ ಎಂದು ಹೇಳಿದೆ. ಚುನಾವಣಾ ಬಾಂಡ್ ಯೋಜನೆಯ ಜಾರಿಗಾಗಿ ಬೇರೆ ಬೇರೆ ಕಾನೂನುಗಳಿಗೆ ತಂದಿದ್ದ ತಿದ್ದುಪಡಿಗಳನ್ನು ಪೀಠವು ಅಮಾನ್ಯಗೊಳಿಸಿದೆ. ಈ ಯೋಜನೆಯ ಜಾರಿಗೆ ಪ್ರಜಾ ಪ್ರಾತಿನಿಧ್ಯ ಕಾಯ್ದೆ ಹಾಗೂ ಆದಾಯ ತೆರಿಗೆ ಕಾನೂನುಗಳಿಗೆ ತಿದ್ದುಪಡಿ ತರಲಾಗಿತ್ತು.

ಕಾಂಗ್ರೆಸ್ಸಿನ ನಾಯಕ ಜಯಾ ಠಾಕೂರ್, ಸಿಪಿಎಂ ಪಕ್ಷ, ಸರ್ಕಾರೇತರ ಸಂಘಟನೆಯಾದ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಪರವಾಗಿ ಚುನಾವಣಾ ಬಾಂಡ್‌ನ ಸಿಂಧುತ್ವವನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಲಾಗಿತ್ತು.

ಮತದಾರರು ಮತ ಚಲಾವಣೆಯ ಸ್ವಾತಂತ್ರ್ಯವನ್ನು ಪರಿ-ಣಾಮಕಾರಿಯಾಗಿ ಬಳಸಿಕೊಳ್ಳಬೇಕು ಎಂದಾದರೆ, ರಾಜಕೀಯ ಪಕ್ಷವೊಂದಕ್ಕೆ ಸಿಗುವ ದೇಣಿಗೆ ಬಗ್ಗೆ ಮಾಹಿತಿ ಪಡೆಯುವುದು ಅಗತ್ಯ ಎಂದು ಪೀಠ ಹೇಳಿದೆ.

> ಈ ತೀರ್ಪು ದೇಶದ ಪ್ರಜಾತಂತ್ರಕ್ಕೆ ದೊಡ್ಡ ಶಕ್ತಿ ನೀಡಿದೆ. ಈ ಪ್ರಕರಣದಲ್ಲಿ ಒಂದು ಸಣ್ಣ ಪಾತ್ರವನ್ನು ವಹಿಸಿದ್ದಕ್ಕಾಗಿ ನಮಗೆ ಹೆಮ್ಮೆಯಿದೆ
> **ತ್ರಿಲೋಚನ ಶಾಸ್ತ್ರಿ,** ಎಡಿಆರ್ ಸಂಸ್ಥಾಪಕ ಸದಸ್ಯ

> ತೀರ್ಪಿನ ಕಾರಣದಿಂದಾಗಿ ರಾಜಕೀಯ ಪಕ್ಷಗಳಿಗೆ ಬರುವ ದೇಣಿಗೆಗಳು ಪಾರದರ್ಶಕವಾಗಲಿವೆ. ಜನರ ಹಿತವನ್ನು ಇದು ರಕ್ಷಿಸಲಿದೆ
> **ಜಯಾ ಠಾಕೂರ್**
> ಅರ್ಜಿದಾರರಲ್ಲಿ ಒಬ್ಬರು

> ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಪ್ರಜಾತಂತ್ರದಲ್ಲಿ ಪಾರದರ್ಶಕತೆ ಮರುಸ್ಥಾಪಿಸುವ ನಿಟ್ಟಿನಲ್ಲಿ ಮತ್ತು ಚುನಾವಣಾ ವ್ಯವಸ್ಥೆಯ ಸುಧಾರಣೆಯಲ್ಲಿ ದಿಟ್ಟ ಕ್ರಮ
> **ಸಿದ್ದರಾಮಯ್ಯ**
> ಕರ್ನಾಟಕ ಮುಖ್ಯಮಂತ್ರಿ

> ಈ ತೀರ್ಪಿನ ನಂತರ ಕೇಂದ್ರ ಇಂತಹ ಕುಚೋದ್ಯದ ಆಲೋಚನೆಗಳನ್ನು ನಿಲ್ಲಿಸುತ್ತದೆ ಎಂದು ಆಶಿಸುತ್ತೇನೆ. ಈ ಯೋಜನೆ ಪ್ರಜಾತಂತ್ರ ವಿರೋಧಿ ಎಂದೂ ಕಾಂಗ್ರೆಸ್ ಹೇಳಿತ್ತು
> **ಮಲ್ಲಿಕಾರ್ಜುನ ಖರ್ಗೆ**
> ಎಐಸಿಸಿ ಅಧ್ಯಕ್ಷ

> ತೀರ್ಪು ಸ್ವಾಗತಾರ್ಹ. ಚುನಾವಣಾ ಬಾಂಡ್‌ಗಳ ಮೂಲಕ ಪಡೆದಿರುವ ದೇಣಿಗೆ ವಿವರಗಳನ್ನು ವೈ.ಎಸ್.ಆರ್ ಕಾಂಗ್ರೆಸ್ ಪಕ್ಷ ಬಹಿರಂಗಪಡಿಸಬೇಕು
> **ದೀಪಕ್ ರೆಡ್ಡಿ**
> ಟಿಡಿಪಿ ವಕ್ತಾರ

> ಈ ತೀರ್ಪು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಂಬಿಕೆ ಇರಿಸುವಂತೆ ಜನರಿಗೆ ಖಾತರಿ ಒದಗಿಸಿದೆ. ಪಾರದರ್ಶಕ ಚುನಾವಣಾ ವ್ಯವಸ್ಥೆಯನ್ನೂ ಖಾತರಿಪಡಿಸುವಂತಿದೆ
> **ಎಂ.ಕೆ.ಸ್ಟಾಲಿನ್**
> ತಮಿಳುನಾಡು ಮುಖ್ಯಮಂತ್ರಿ

> ಸರ್ಕಾರ ಕೈಗೊಳ್ಳುವ ತೀರ್ಮಾನಗಳಿಗೆ ಜನಾದೇಶ ಕಾರಣವೇ ಅಥವಾ ಸರ್ಕಾರಕ್ಕೆ ಹಣ ನೀಡುವವರು ಕಾರಣವೇ ಎಂಬುದು ಜನರಿಗೆ ತಿಳಿಯುವುದು ಮುಖ್ಯ
> **ಆತಿಶಿ**
> ಎಎಪಿ ನಾಯಕಿ

> ಚುನಾವಣೆಗೆ ದೇಣಿಗೆ ನೀಡುವ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರುವ ಉದ್ದೇಶವನ್ನು ಚುನಾವಣಾ ಬಾಂಡ್ ಯೋಜನೆ ಒಳಗೊಂಡಿತ್ತು. ಆದಾಗ್ಯೂ, ತೀರ್ಪನ್ನು ಗೌರವಿಸುತ್ತೇವೆ
> **ರವಿಶಂಕರ್ ಪ್ರಸಾದ್**
> ಬಿಜೆಪಿ ಮುಖಂಡ, ಮಾಜಿ ಸಚಿವ

ರಾಜ್ಯಸಭಾ ಚುನಾವಣೆ: ಚವ್ಹಾಣ್, ದೇವ್ರಾ ನಾಮಪತ್ರ

ವೈಷ್ಣವ್, ಮುರುಗನ್, ನಡ್ಡಾ ಕಣಕ್ಕೆ



ಕೇಂದ್ರ ಸಚಿವ ಎಲ್‌ಮುರುಗನ್ ಬಿಜೆಪಿ ಅಭ್ಯರ್ಥಿಯಾಗಿ ರಾಜ್ಯಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಿದ ನಂತರ ಪಕ್ಷದ ಇತರ ಅಭ್ಯರ್ಥಿಗಳೊಂದಿಗೆ ವಿಜಯದ ಸಂಕೇತ ಪ್ರದರ್ಶಿಸಿದರು –ಪಿಟಿಐ ಚಿತ್ರ

ಭುವನೇಶ್ವರ/ಗಾಂಧಿನಗರ/ಮುಂಬೈ/ಭೋಪಾಲ್ (ಪಿಟಿಐ): ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್, ಎಲ್. ಮುರುಗನ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಈಚೆಗಷ್ಟೇ ಕಾಂಗ್ರೆಸ್ ತೊರೆದಿದ್ದ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಅಶೋಕ್ ಚವ್ಹಾಣ್, ಮಾಜಿ ಸಂಸದ ಮಿಲಿಂದ್ ದೇವರಾ ಅವರು ರಾಜ್ಯಸಭೆ ಚುನಾವಣೆಗೆ ಗುರುವಾರ ನಾಮಪತ್ರ ಸಲ್ಲಿಸಿದರು.

15 ರಾಜ್ಯಗಳ 56 ಸ್ಥಾನಗಳಿಗೆ ಫೆ. 27ರಂದು ದ್ವೈವಾರ್ಷಿಕ ಚುನಾವಣೆ ನಡೆಯಲಿದ್ದು, ವಿವಿಧ ರಾಜ್ಯಗಳಿಂದ ಬಿಜೆಪಿ, ಕಾಂಗ್ರೆಸ್, ಆರ್‌ಜೆಡಿ ಹಾಗೂ ಎನ್‌ಸಿಪಿಯ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಗುರುವಾರ ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿತ್ತು.

ಒಡಿಶಾದಿಂದ ಬಿಜೆಪಿ ಅಭ್ಯರ್ಥಿಯಾಗಿ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ನಾಮಪತ್ರ ಸಲ್ಲಿಸಿದರು. ಆಡಳಿತಾರೂಢ ಬಿಜೆಡಿ ವೈಷ್ಣವ್‌ಗೆ ಬೆಂಬಲ ನೀಡಿದೆ.

ಗುಜರಾತ್‌ನಿಂದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಸ್ಥಳೀಯ ಮುಖಂಡರಾದ ಜಸವಂತಸಿಂಹ ಪರಮಾರ್, ಗೋವಿಂದ ಢೋಲಕಿಯಾ, ಮಯಂಕ್ ನಾಯಕ್ ಗಾಂಧಿನಗರದಲ್ಲಿ ನಾಮಪತ್ರ ಸಲ್ಲಿಸಿದರು.

ಮಹಾರಾಷ್ಟ್ರದಿಂದ ಆರು ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಈಚೆಗಷ್ಟೇ ಕಾಂಗ್ರೆಸ್ ತೊರೆದಿದ್ದ ಮಾಜಿ ಮುಖ್ಯಮಂತ್ರಿ ಅಶೋಕ್ ಚವ್ಹಾಣ್ ಬಿಜೆಪಿಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು. ಮಾಜಿ ಶಾಸಕರಾದ ಮೇಧಾ ಕುಲಕರ್ಣಿ, ಆರ್‌ಎಸ್‌ಎಸ್ ಕಾರ್ಯಕರ್ತ ಡಾ.ಅಜಿತ್ ಗೋಪ್ಚಡೆ ಸಹ ಕಮಲ ಪಕ್ಷದ ಉಮೇದುವಾರರಾಗಿ ನಾಮಪತ್ರ ಸಲ್ಲಿಸಿದರು.

ಮುಖ್ಯಮಂತ್ರಿ ಏಕನಾಥ ಶಿಂದೆ ಬಣದ ಶಿವಸೇನೆ ಅಭ್ಯರ್ಥಿಯಾಗಿ ಈಚೆಗಷ್ಟೇ ಕಾಂಗ್ರೆಸ್ ತೊರೆದು ಪಕ್ಷಕ್ಕೆ ಸೇರಿದ್ದ ಮಾಜಿ ಸಂಸದ ಮಿಲಿಂದ್ ದೇವರಾ, ಉಪಮುಖ್ಯ-ಮಂತ್ರಿ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯಿಂದ ಪ್ರಫುಲ್ ಪಟೇಲ್, ಕಾಂಗ್ರೆಸ್ ಅಭ್ಯರ್ಥಿಯಾಗಿ ಚಂದ್ರಕಾಂತ್ ಹಂಡೋರೆ ತಮ್ಮ ಉಮೇದುವಾರಿಕೆ ಸಲ್ಲಿಸಿದ್ದಾರೆ.

ಮಧ್ಯಪ್ರದೇಶದಿಂದ ಬಿಜೆಪಿ ಅಭ್ಯರ್ಥಿಗಳಾಗಿ ಕೇಂದ್ರ ಸಚಿವ ಎಲ್. ಮುರುಗನ್, ಕಿಸಾನ್ ಮೋರ್ಚಾದ ರಾಷ್ಟ್ರೀಯ ಉಪಾಧ್ಯಕ್ಷ ಬನ್ಸಿಲಾಲ್ ಗುರ್ಜರ್, ಮಹಿಳಾ ಘಟಕದ ಅಧ್ಯಕ್ಷೆ ಮಾಯಾ ನರೋಲಿಯಾ, ವಾಲ್ಮೀಕಿ ಧಾಮ್ ಆಶ್ರಮದ ಮುಖ್ಯಸ್ಥ ಉಮೇಶ್ ನಾಥ್ ಮಹಾರಾಜ್ ನಾಮಪತ್ರ ಸಲ್ಲಿಸಿದರೆ, ಕಾಂಗ್ರೆಸ್‌ನ ರಾಜ್ಯ ಘಟಕದ ಖಜಾಂಚಿ ಅಶೋಕ್ ಸಿಂಗ್ ನಾಮಪತ್ರ ಸಲ್ಲಿಸಿದರು.

ಬಿಹಾರದಿಂದ ರಾಷ್ಟ್ರೀಯ ಜನತಾದಳದ ಅಭ್ಯರ್ಥಿಗಳಾಗಿ (ಆರ್‌ಜೆಡಿ) ಮನೋಜ್ ಕುಮಾರ್ ಝಾ ಮತ್ತು ಸಂಜಯ್ ಯಾದವ್ ನಾಮಪತ್ರ ಸಲ್ಲಿಸಿದರು. ಝಾ ಅವರು ಆರ್‌ಜೆಡಿಯ ರಾಷ್ಟ್ರೀಯ ವಕ್ತಾರ. ಯಾದವ್ ಅವರು ವಿಧಾನಸಭೆಯ ಪ್ರತಿಪಕ್ಷ ನಾಯಕ ತೇಜಸ್ವಿ ಯಾದವ್ ಆಪ್ತರು.

ಉತ್ತರಾಖಂಡ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಮಹೇಂದ್ರ ಭಟ್ ಅವರೂ ತಮ್ಮ ಉಮೇದುವಾರಿಕೆ ಸಲ್ಲಿಸಿದ್ದಾರೆ.

ಬಿಜೆಪಿಯಿಂದ ಎಂಟನೇ ಅಭ್ಯರ್ಥಿ ಅಖಾಡಕ್ಕೆ (ಲಖನೌ ವರದಿ): ಉತ್ತರ ಪ್ರದೇಶದಿಂದ ರಾಜ್ಯ ಸಭೆಯ 10 ಸ್ಥಾನಗಳಿಗೆ ಈಗಾಗಲೇ ಏಳು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದ ಬಿಜೆಪಿಯು, ಎಂಟನೇ ಅಭ್ಯರ್ಥಿಯನ್ನಾಗಿ ಸಮಾಜವಾದಿ ಪಕ್ಷದ ಮಾಜಿ ಮುಖಂಡನನ್ನು ಗುರುವಾರ ಅಖಾಡಕ್ಕಿಳಿಸಿದೆ. 2019ರಲ್ಲಿ ಪಕ್ಷಕ್ಕೆ ಸೇರ್ಪಡೆಯಾಗಿದ್ದ ಸಂಜಯ್ ಸೇಠ್ ಬಿಜೆಪಿಯ 8ನೇ ಅಭ್ಯರ್ಥಿಯಾಗಿ ಸ್ಪರ್ಧೆಗಿಳಿದಿದ್ದು, ಒಂದು ಸ್ಥಾನಕ್ಕೆ ತೀವ್ರ ಪೈಪೋಟಿ ಏರ್ಪಟ್ಟಿದೆ.

ರೌಡಿಗಳ ಜೊತೆ ಕೈಜೋಡಿಸಿರುವ ಪೊಲೀಸರು: ಪಶ್ಚಿಮ ಬಂಗಾಳ ರಾಜ್ಯಪಾಲ ಬೋಸ್

‘ಸಂದೇಶ್‌ಖಾಲಿ: ಪರಿಸ್ಥಿತಿ ಶೋಚನೀಯ’

ಕೋಲ್ಕತ್ತ(ಪಿಟಿಐ): ‘ಟಿಎಂಸಿ ನಾಯಕ ಷಹಜಹಾನ್ ಶೇಖ್ ಹಾಗೂ ಅತನ ಬೆಂಬಲಿಗರಿಂದ ನಡೆದಿದೆ ಎನ್ನಲಾದ ದೌರ್ಜನ್ಯದ ವಿರುದ್ಧ ಮಹಿಳೆಯರು ಪ್ರತಿಭಟನೆ ನಡೆಸುತ್ತಿರುವ ಸಂದೇಶ್‌ಖಾಲಿ-ಯಲ್ಲಿನ ಪರಿಸ್ಥಿತಿ ಶೋಚನೀಯವಾಗಿದೆ. ರೌಡಿಗಳೊಂದಿಗೆ ಪೊಲೀಸರು ಕೈಜೋಡಿಸಿದ್ದಾರೆ’ ಎಂದು ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ. ಆನಂದಬೋಸ್ ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ.



ಸಿ.ವಿ.ಆನಂದ ಬೋಸ್

ಕಳೆದ ಕೆಲ ದಿನಗಳಿಂದ ಬಿಗುವಿನ ವಾತಾವರಣದಿಂದ ಕೂಡಿರುವ ಸಂದೇಶ್‌ಖಾಲಿಗೆ ಇತ್ತೀಚೆಗೆ ಭೇಟಿ ನೀಡಿದ್ದ ರಾಜ್ಯಪಾಲ ಬೋಸ್ ಅವರು, ಪ್ರತಿಭಟನಕಾರರೊಂದಿಗೂ ಮಾತನಾಡಿದ್ದರು. ನಂತರ, ಗೃಹ ಸಚಿವಾಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ ಅವರು ಅಲ್ಲಿನ ಪರಿಸ್ಥಿತಿ ಕುರಿತು ವಿವರಿಸಿದ್ದಾರೆ ಎಂದು ರಾಜಭವನ ಮೂಲಗಳು ಹೇಳಿವೆ.

‘ತಮ್ಮ ಆರೋಪಗಳ ಕುರಿತು ಸಮಗ್ರ ತನಿಖೆ ನಡೆಸುವಂತೆ ಸಂದೇಶ್‌ಖಾಲಿ ನಿವಾಸಿಗಳು ಒತ್ತಾಯಿಸುತ್ತಿದ್ದಾರೆ. ಇದಕ್ಕಾಗಿ ವಿಶೇಷ ಕಾರ್ಯಪಡೆ ಇಲ್ಲವೇ ವಿಶೇಷ ತನಿಖಾ ತಂಡ ರಚಿಸಬೇಕು ಎಂಬುದು ಅವರ ಬೇಡಿಕೆಯಾಗಿದೆ’ ಎಂದು ಬೋಸ್ ಅವರು ವರದಿಯಲ್ಲಿ ತಿಳಿಸಿದ್ದಾರೆ.

‘ಸಂದೇಶ್‌ಖಾಲಿಗೆ ಭೇಟಿ ನೀಡಿದ ವೇಳೆ, ಉದ್ವಿಗ್ನಗೊಂಡಿದ್ದ ಸ್ಥಳಗಳಿಗೆ ಭೇಟಿ ನೀಡಿದ್ದೇನೆ. ಅಲ್ಲಿನ ಜನರು ಹಾಗೂ ಸಂತ್ರಸ್ತರೊಂದಿಗೆ ನೇರವಾಗಿ ಮಾತನಾಡಿದ್ದೇನೆ. ನನ್ನ ಪ್ರಕಾರ, ಅಲ್ಲಿನ ಒಟ್ಟಾರೆ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ’ ಎಂದು ಅವರು ಕೇಂದ್ರ ಗೃಹ ಸಚಿವಾಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ ವಿವರಿಸಿದ್ದಾರೆ.

‘ಮಹಿಳೆಯರು ಮತ್ತು ಪುರುಷರಿಗೆ ಹಿಂಸೆ ನೀಡಿದ್ದಲ್ಲದೆ, ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡಲಾಗಿದೆ ಎಂಬ ಆರೋಪಗಳು ವ್ಯಾಪಕವಾಗಿ ಕೇಳಿಬಂದಿವೆ. ಇದಲ್ಲದೇ, ಸಿಗಡಿ ಕೃಷಿಗಾಗಿ ಜಮೀನುಗಳನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ. ಇಂತಹ ಕಿರುಕುಳದ ವಿರುದ್ಧ ಸಂತ್ರಸ್ತರು ಪೊಲೀಸರಿಗೆ ನೀಡಿದ್ದ ದೂರುಗಳನ್ನು ವಾಪಸು ಪಡೆಯುವಂತೆ ಗ್ರಾಮಸ್ಥರಿಗೆ ಬಲವಂತ ಮಾಡಿರುವ ಆರೋಪಗಳು ಕೇಳಿಬಂದಿವೆ ಎಂಬುದಾಗಿಯೂ ಬೋಸ್ ಅವರು ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ’ ಎಂದು ಇವೇ ಮೂಲಗಳು ಹೇಳಿವೆ.

‘ಪೊಲೀಸರು ದುಷ್ಕರ್ಮಿಗಳ ವಿರುದ್ಧ ಪ್ರಕರಣ ದಾಖಲಿಸುವ ಬದಲು, ಅವರೊಂದಿಗೆ ‘ಹೊಂದಾಣಿಕೆ’ ಮಾಡಿಕೊಳ್ಳುವಂತೆ ಗ್ರಾಮಸ್ಥರಿಗೆ ಸೂಚನೆ ನೀಡಿದ್ದಾರೆ. ಪೊಲೀಸರಂತೆ ವೇಷಭೂಷಣ ಧರಿಸಿದ್ದ ಗೂಂಡಾಗಳು, ರಾತ್ರಿ ಹೊತ್ತಿನಲ್ಲಿ ಸಂತ್ರಸ್ತರ ಮನೆಗಳನ್ನು ಪ್ರವೇಶಿಸಿದ್ದರು’ ಎಂದೂ ವರದಿಯಲ್ಲಿ ವಿವರಿಸಿದ್ದಾರೆ.

ಬಿಜೆಪಿ ನಿಯೋಗ ಇಂದು ಭೇಟಿ

ನವದೆಹಲಿ(ಪಿಟಿಐ): ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪಕ್ಷದ ಐವರು ಸಂಸದೆಯರು ಸೇರಿದಂತೆ 6 ಸದಸ್ಯರಿರುವ ಸಮಿತಿಯನ್ನು ರಚಿಸಿದ್ದು, ಈ ತಂಡವು ಸಂದೇಶ್‌ಖಾಲಿಗೆ ಶುಕ್ರವಾರ ಭೇಟಿ ನೀಡಲಿದೆ.

ಕೇಂದ್ರ ಸಚಿವರಾದ ಪ್ರತಿಮಾ ಭೌಮಿಕ್, ಅನ್ನಪೂರ್ಣ ದೇವಿ ಅವರು ಸಮಿತಿ ಸಂಚಾಲಕರಾ-ಗಿದ್ದಾರೆ. ಸುನೀತಾ ದುಗ್ಗಲ್, ಕವಿತಾ ಪಾಟೀದಾರ, ಸಂಗೀತಾ ಯಾದವ್ ಹಾಗೂ ಉತ್ತರ ಪ್ರದೇಶ ಮಾಜಿ ಡಿಜಿಪಿ ಬ್ರಿಜ್ ಲಾಲ್ ಅವರು ಸಮಿತಿ ಸದಸ್ಯರಾ-ಗಿದ್ದಾರೆ ಎಂದು ಬಿಜೆಪಿ ತಿಳಿಸಿದೆ.

‘ತಪ್ಪಿತಸ್ಥರ ರಕ್ಷಿಸುವ ಪ್ರಶ್ನೆಯೇ ಇಲ್ಲ’

ರಾಜ್ಯದ ಸಂದೇಶ್‌ಖಾಲಿಯಲ್ಲಿ ನಡೆದ ಘಟನೆಗಳಿಗೆ ಸಂಬಂಧಿಸಿ 17 ಮಂದಿಯನ್ನು ಬಂಧಿಸಲಾಗಿದ್ದು, ದುಷ್ಕೃತ್ಯ-ಗಳಲ್ಲಿ ಶಾಮೀಲಾದವರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಹೇಳಿದ್ದಾರೆ.

ವಿಧಾನಸಭೆಯಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಯಾರಿಗೇ ಆಗಲಿ ಅನ್ಯಾಯವಾಗಲು ಬಿಟ್ಟಿಲ್ಲ; ಬಿಡುವುದೂ ಇಲ್ಲ’ ಎಂದರು.

ಟಿಎಂಸಿ ನಾಯಕರಿಂದ ಸಂದೇಶ್‌ಖಾಲಿ ನಿವಾಸಿಗಳ ಮೇಲೆ ನಡೆದಿದೆ ಎನ್ನಲಾದ ದೌರ್ಜನ್ಯ ಖಂಡಿಸಿ ನಡೆಯುತ್ತಿರುವ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಮಮತಾ ಬ್ಯಾನರ್ಜಿ ಅವರು ಈ ಹೇಳಿಕೆ ನೀಡಿದ್ದಾರೆ.

ಬಿಜೆಪಿ ಸಭಾತ್ಯಾಗ: ಕಲಾಪ ಆರಂಭವಾದಾಗ, ಸಂದೇಶ್‌ಖಾಲಿಯಲ್ಲಿ ಸ್ಥಳೀಯರ ಮೇಲೆ ನಡೆದಿದೆ ಎನ್ನಲಾದ ದೌರ್ಜನ್ಯಗಳನ್ನು ಪ್ರಸ್ತಾಪಿಸಿದ ಬಿಜೆಪಿ ಸದಸ್ಯರು, ಈ ಕುರಿತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಹೇಳಿಕೆ ನೀಡಬೇಕು ಎಂದು ಒತ್ತಾಯಿಸಿದರು.



ಮಮತಾ ಬ್ಯಾನರ್ಜಿ

ಈ ವೇಳೆ, ಮಮತಾ ಬ್ಯಾನರ್ಜಿ ಸದನದಲ್ಲಿ ಇರಲಿಲ್ಲ.

ವಿಷಯ ಪ್ರಸ್ತಾಪಿಸಿ ಮಾತನಾಡಿದ ಬಿಜೆಪಿ ಮುಖ್ಯಸಚೇತಕ ಮನೋಜ್ ತಿಗ್ಗಾ ಹಾಗೂ ಶಾಸಕರು, ಮುಖ್ಯಮಂತ್ರಿ ಬ್ಯಾನರ್ಜಿ ಅವರು ಈ ವಿಷಯವಾಗಿ ಹೇಳಿಕೆ ನೀಡಬೇಕು ಎಂದು ಪಟ್ಟು ಹಿಡಿದರು.

ಬಿಜೆಪಿ ಶಾಸಕರ ಬೇಡಿಕೆಗೆ ಒಪ್ಪದ ಸಭಾಧ್ಯಕ್ಷ ಬಿಮನ್ ಬಂದೋಪಾಧ್ಯಾಯ, ಶಿಸ್ತಿನಿಂದ ವರ್ತಿಸುವಂತೆ ಸೂಚನೆ ನೀಡಿದರು. ಇದಕ್ಕೆ ಕಿವಿಗೊಡದ ಬಿಜೆಪಿ ಶಾಸಕರು, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ, ಸದನದಿಂದ ಹೊರ ನಡೆದರು.

ಆರೆಸ್ಸೆಸ್ ನಂಟು: ಮಮತಾ ಹೇಳಿಕೆಗೆ ಬಿಜೆಪಿ ಖಂಡನೆ

ನವದೆಹಲಿ(ಪಿಟಿಐ): ಸಂದೇಶ್‌ಖಾಲಿ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಲೈಂಗಿಕ ಕಿರುಕುಳ ಪ್ರಕರಣಗಳಿಗೆ ಆರ್‌ಎಸ್‌ಎಸ್‌ಗೂ ನಂಟಿರುವ ಶಂಕೆ ವ್ಯಕ್ತಪಡಿಸಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೀಡಿರುವ ಹೇಳಿಕೆಯನ್ನು ಬಿಜೆಪಿ ಗುರುವಾರ ಖಂಡಿಸಿದೆ.

‘ಒಬ್ಬ ಮಹಿಳಾ ಮುಖ್ಯಮಂತ್ರಿ ಇಂತಹ ಹೇಳಿಕೆ ನೀಡುತ್ತಿರುವುದು ನಾಚಿಕೆಗೇಡು. ನೀವು ಇಷ್ಟೊಂದು ಕ್ರೂರ, ಅಸಹ್ಯ ಹಾಗೂ ಮಹಿಳಾ ವಿರೋಧಿ ಆಗಿರುವುದೇಕೆ’ ಎಂದು ಬಿಜೆಪಿ ನಾಯಕ ರವಿಶಂಕರ ಪ್ರಸಾದ್ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದ್ದಾರೆ. ‘ಒಂದು ವೇಳೆ, ಇದೇ ರೀತಿಯ ಮಾತುಗಳನ್ನು ಬಿಜೆಪಿ ಆಡಳಿತವಿರುವ ರಾಜ್ಯದ ಮುಖ್ಯಮಂತ್ರಿಯೊಬ್ಬರು ಹೇಳಿದ್ದರೆ, ದೇಶದಾದ್ಯಂತ ಪ್ರತಿಭಟನೆಗಳು ನಡೆಯುತ್ತಿದ್ದವು. ರಾಹುಲ್ ಗಾಂಧಿ ಸೇರಿದಂತೆ ವಿಪಕ್ಷಗಳ ನಾಯಕರು ಹಾಗೂ ಮಾನವ ಹಕ್ಕುಗಳ ಗುಂಪುಗಳು ದೊಡ್ಡ ದನಿಯಲ್ಲಿ ಮಾತನಾಡುತ್ತಿದ್ದರು. ಇದನ್ನು ನಾಚಿಕೆಗೇಡಿನಿಂದ ಕೂಡಿದ ಇಬ್ಬಗೆ ನೀತಿಯಲ್ಲದೇ ಇನ್ನೇನು’ ಎಂದು ಟೀಕಿಸಿದರು.

ಲೋಕಸಭೆಗೆ ಸ್ಪರ್ಧಿಸಲ್ಲ: ಸೋನಿಯಾ

ನವದೆಹಲಿ (ಪಿಟಿಐ): ಆರೋಗ್ಯ ಮತ್ತು ವಯಸ್ಸಿನ ಕಾರಣಕ್ಕೆ ತಾವು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪ-ರ್ಧಿಸುವುದಿಲ್ಲ ಎಂದು ಕಾಂಗ್ರೆಸ್ ಪಕ್ಷದ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಉತ್ತರ ಪ್ರದೇಶದ ರಾಯ್ ಬರೇಲಿ ಕ್ಷೇತ್ರದ ಮತದಾರರಿಗೆ ಗುರುವಾರ ಭಾವುಕ ಸಂದೇಶ ಕಳಿಸಿದ್ದಾರೆ.

‘ಇವತ್ತು ನಾನು ಏನಾಗಿದ್ದೇನೋ ಅದು ನಿಮ್ಮಿಂದ ಎಂದು ಹೆಮ್ಮೆಯಿಂದ ಹೇಳುತ್ತೇನೆ. ನಿಮ್ಮ ನಂಬಿಕೆ ಉಳಿಸಿಕೊಳ್ಳಲು ನಾನು ಸದಾ ಶ್ರಮಿಸಿದ್ದೇನೆ’ ಎಂದಿರುವ ಸೋನಿಯಾ, ‘ನಾನು ಇನ್ನು ಮುಂದೆ ನೇರವಾಗಿ ನಿಮ್ಮ ಸೇವೆ ಮಾಡಲು ಆಗದಿರಬಹುದು. ಆದರೆ, ನನ್ನ ಹೃದಯ ಮತ್ತು ಆತ್ಮ ಸದಾ ನಿಮ್ಮೊಂದಿಗಿರುತ್ತದೆ. ಹಿಂದಿನಂತೆಯೇ ನೀವು ನನ್ನೊಂದಿಗೆ ಮತ್ತು ನನ್ನ ಕುಟುಂಬದೊಂದಿಗೆ ನಿಲ್ಲುವಿರಿ ಎಂಬ ವಿಶ್ವಾಸವಿದೆ’ ಎಂದು ಸೋನಿಯಾ ಸಂದೇಶದಲ್ಲಿ ತಿಳಿಸಿದ್ದಾರೆ.

2004ರಿಂದ ತಾವು ಪ್ರತಿನಿಧಿಸುತ್ತಿದ್ದ ಕ್ಷೇತ್ರದ ಮತದಾರರಿಗೆ ಹಿಂದಿ ಭಾಷೆಯಲ್ಲಿ ಭಾವುಕ ಸಂದೇಶ ಕಳಿಸಿರುವ 77 ವರ್ಷದ ಸೋನಿಯಾ, ರಾಯ್ ಬರೇಲಿಯಿಂದ ತಮ್ಮ ಕುಟುಂಬದ ಸದಸ್ಯರೊಬ್ಬರು ಸ್ಪರ್ಧಿಸುವ ಬಗ್ಗೆ ಸೂಕ್ಷ್ಮ ಸುಳಿವನ್ನೂ ನೀಡಿದ್ದಾರೆ. ಪ್ರಿಯಾಂಕಾ ಗಾಂಧಿ ರಾಯ್ ಬರೇಲಿಯಿಂದ ಸ್ಪರ್ಧಿಸಬಹುದೆನ್ನುವ ಮಾತುಗಳಿವೆ.

‘ಜನಾಂಗೀಯ ಕಲಹದಿಂದ ನಲುಗಿದ ಈಶಾನ್ಯ ರಾಜ್ಯಗಳು’

ಔರಂಗಾಬಾದ್ (ಪಿಟಿಐ): ‘ಒಂದು ಸಮುದಾಯದ ವಿರುದ್ಧ ಇನ್ನೊಂದು ಸಮುದಾಯವನ್ನು ಎತ್ತಿಕಟ್ಟುವ ಮೂಲಕ ಮಣಿಪುರದಲ್ಲಿ ಬೆಂಕಿ ಹೊತ್ತಿಕೊಳ್ಳುವಂತೆ ಮಾಡಲಾಯಿತು. ಕಳೆದ ವರ್ಷದ ಮೇ ತಿಂಗಳಿನಿಂದ ಈಶಾನ್ಯ ರಾಜ್ಯಗಳು ಜನಾಂಗೀಯ ಕಲಹದಿಂದ ನಲುಗಿವೆ’ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿರುದ್ಧ ಕಿಡಿಕಾರಿದರು.

ಔರಂಗಾಬಾದ್‌ನಲ್ಲಿ ನಡೆಯುತ್ತಿರುವ ಭಾರತ್ ಜೋಡೋ ನ್ಯಾಯ ಯಾತ್ರೆಯಲ್ಲಿ ಮಾತನಾಡಿದ ರಾಹುಲ್ ಗಾಂಧಿ, ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರೈತರು ನಡೆಸುತ್ತಿರುವ ‘ದೆಹಲಿ ಚಲೋ’ ಪ್ರತಿಭಟನಾ ಮೆರವಣಿಗೆಗೆ ಬೆಂಬಲವನ್ನೂ ವ್ಯಕ್ತಪಡಿಸಿದರು.



ರಾಹುಲ್

‘ಶ್ರೀಮಂತರ ₹14 ಲಕ್ಷ ಕೋಟಿ ಸಾಲವನ್ನು ಮನ್ನಾ ಮಾಡಿರುವ ಕೇಂದ್ರ ಸರ್ಕಾರ ನರೇಗಾಕ್ಕೆ ವೆಚ್ಚ ಮಾಡಿರುವುದು ಕೇವಲ ₹70,000 ಕೋಟಿ’ ಎಂದು ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಅಯೋಧ್ಯೆ ರಾಮಮಂದಿರ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗಣ್ಯರನ್ನು ಆಹ್ವಾನಿಸಿರುವುದಕ್ಕೆ ಸರ್ಕಾರವನ್ನು ಟೀಕಿಸಿದ ರಾಹುಲ್ ಗಾಂಧಿ, ‘ಕಾರ್ಯಕ್ರಮ-ದಲ್ಲಿ ಬಡವರ ಅನುಪಸ್ಥಿತಿ ಎದ್ದು ಕಾಣುತ್ತಿತ್ತು’ ಎಂದಿದ್ದಾರೆ.

ಮುಂದುವರಿದ ನ್ಯಾಯ ಯಾತ್ರೆ: ರಾಹುಲ್ ಗಾಂಧಿಯವರ ಭಾರತ್ ಜೋಡೋ ನ್ಯಾಯ ಯಾತ್ರೆಯು ಮುಂದುವರೆದಿದ್ದು, ಯಾತ್ರೆಯ ಭಾಗವಾಗಿ ಗುರುವಾರ ಔರಂಗಾಬಾದ್‌ನಲ್ಲಿ ಸಾರ್ವಜನಿಕ ಸಭೆ ನಡೆಯಿತು.

‘ಶುಕ್ರವಾರ ಉತ್ತರಪ್ರದೇಶ ಗಡಿ ಸಮೀಪದ ಕೈಮುರ ಜಿಲ್ಲೆಗೆ ಯಾತ್ರೆ ಸಾಗಲಿದೆ’ ಎಂದು ಕಾಂಗ್ರೆಸ್ ಹಿರಿಯ ನಾಯಕ ಪ್ರೇಮ್ ಚಂದ್ರ ಮಿಶ್ರಾ ತಿಳಿಸಿದರು.

ಮಹಾರಾಷ್ಟ್ರ ವಿಧಾನಸಭೆ ಸ್ಪೀಕರ್ ಹೇಳಿಕೆ

‘ಅಜಿತ್ ಬಣವೇ ನಿಜವಾದ ಎನ್‌ಸಿಪಿ’

ಮುಂಬೈ (ಪಿಟಿಐ): ‘ಅಜಿತ್ ಪವಾರ್ ನೇತೃತ್ವದ ಬಣವೇ ನಿಜವಾದ ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ (ಎನ್‌ಸಿಪಿ)’ ಎಂದು ಮಹಾರಾಷ್ಟ್ರ ವಿಧಾನಸಭೆ ಸ್ಪೀಕರ್ ರಾಹುಲ್ ನಾರ್ವೇಕರ್ ಅವರು ಗುರುವಾರ ಹೇಳಿದ್ದಾರೆ.

‘ಶಾಸಕರನ್ನು ಅನರ್ಹಗೊಳಿಸಬೇ-ಕೆಂದು ಉಭಯ ಬಣಗಳು ಸಲ್ಲಿಸಿದ್ದ ಎಲ್ಲ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಪಕ್ಷದ ಸಂಸ್ಥಾಪಕ ಶರದ್ ಪವಾರ್ ಅವರನ್ನು ಪ್ರಶ್ನಿಸುವ ಅಥವಾ ಅವರ ಇಚ್ಛೆಯನ್ನು ವಿರೋಧಿಸುವ ಪ್ರಕ್ರಿಯೆಗಳು ಪಕ್ಷಾಂತರ ಎಂದೆನಿಸಿಕೊಳ್ಳುವುದಿಲ್ಲ. ಅವು ಕೇವಲ ಪಕ್ಷದ ಆಂತರಿಕ ಭಿನ್ನಾಭಿಪ್ರಾಯಗಳ-ಷ್ಟೇ ಆಗಿವೆ. ಅಲ್ಲದೇ, ಈ ಪ್ರಕರಣದಲ್ಲಿ ಸಂವಿಧಾನದ ಹತ್ತನೇ ಶೆಡ್ಯೂಲ್‌ನ ಪಕ್ಷಾಂತರ ನಿಷೇಧದ ನಿಬಂಧನೆಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ’ ಎಂದು ಅವರು ರೂಲಿಂಗ್ ನೀಡಿದರು.

2023ರ ಜುಲೈನಲ್ಲಿ ಶರದ್ ಪವಾರ್ ಅವರ ಸೋದರ ಸಂಬಂಧಿ ಅಜಿತ್ ಪವಾರ್ ಅವರು ತಮ್ಮ ಬೆಂಬಲಿಗರೊಂದಿಗೆ ಶಿವಸೇನಾ– ಬಿಜೆಪಿ ನೇತೃತ್ವದ ಮಹಾರಾಷ್ಟ್ರ ಸರ್ಕಾರಕ್ಕೆ ಸೇರ್ಪಡೆಯಾಗಿ, ಉಪ ಮುಖ್ಯಮಂತ್ರಿ-ಯಾಗಿಯೂ ಪ್ರಮಾಣವಚನ ಸ್ವೀಕರಿ-ಸಿದ್ದರು. ಬಳಿಕ, ಅಜಿತ್ ಹಾಗೂ ಶರದ್ ಅವರ ಬಣಗಳು ವಿರೋಧಿ ಬಣದ ಶಾಸಕರನ್ನು ಅನರ್ಹಗೊಳಿಸಬೇಕೆಂದು ಅರ್ಜಿ ಸಲ್ಲಿಸಿದ್ದವು.

‘ಬಹುಸಂಖ್ಯಾತ ಸದಸ್ಯರ ಭಿನ್ನಾ-ಭಿಪ್ರಾಯಗಳನ್ನು ಹತ್ತಿಕ್ಕಲು ‘ಪಕ್ಷದಿಂದ ಅನರ್ಹಗೊಳಿಸುವ ಬೆದರಿಕೆ’ಯನ್ನು ಪಕ್ಷದ ನಾಯಕರು ಒಡ್ಡಲು ಸಾಧ್ಯವಿಲ್ಲ. 2023ರ ಜುಲೈನಲ್ಲಿ ಎನ್‌ಸಿಪಿಯಲ್ಲಿ ನಡೆದ ಘಟನೆಗಳು ಸ್ಪಷ್ಟವಾಗಿ ಪಕ್ಷದ ಆಂತರಿಕ ಭಿನ್ನಾಭಿಪ್ರಾಯಗಳೇ ಆಗಿವೆ’ ಎಂದು ನಾರ್ವೇಕರ್ ಅವರು ಹೇಳಿದ್ದು, ‘ಪಕ್ಷವು ಇಬ್ಭಾಗವಾದಾಗ ಅಜಿತ್ ಅವರ ಬಣವು ಹೆಚ್ಚು ಶಾಸಕರ ಬೆಂಬಲವನ್ನು ಹೊಂದಿತ್ತು’ ಎಂಬುದನ್ನೂ ಅವರು ಪರಿಗಣನೆಗೆ ತೆಗೆದುಕೊಂಡಿದ್ದಾರೆ.

ಅಜಿತ್ ಪವಾರ ನೇತೃತ್ವದ ಬಣವೇ ನಿಜವಾದ ಎನ್‌ಸಿಪಿ ಎಂದು ಭಾರತದ ಚುನಾವಣಾ ಆಯೋಗ ಕಳೆದ ವಾರ ಆದೇಶ ನೀಡಿದ ಬೆನ್ನಲ್ಲೇ ನಾರ್ವೇಕರ್ ಅವರು ಈ ರೂಲಿಂಗ್ ನೀಡಿದ್ದಾರೆ.

ಅಗೋಚರ ಶಕ್ತಿಯ ಕೈವಾಡ: ಸುಳೆ

ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ– ಶರದ್‌ಚಂದ್ರ ಪವಾರ್ ಬಣದ ನಾಯಕಿ ಸುಪ್ರಿಯಾ ಸುಳೆ ಅವರು ಬಿಜೆಪಿಯ ಹೆಸರನ್ನು ಉಲ್ಲೇಖಿಸಿದೇ, ಆ ಪಕ್ಷದ ವಿರುದ್ಧ ಗುರುವಾರ ವಾಗ್ದಾಳಿ ನಡೆಸಿದ್ದಾರೆ.



ಸುಪ್ರಿಯಾ ಸುಳೆ

‘ಶರದ್ ಪವಾರ್ ಅವರು ಹಿಂದೆಯೂ ಎನ್‌ಸಿಪಿಯ ಸಂಸ್ಥಾಪಕ ಮತ್ತು ಅಧ್ಯಕ್ಷರಾಗಿದ್ದರು. ಮುಂದೆಯೂ ಅವರೇ ಪಕ್ಷದ ಸಂಸ್ಥಾಪಕ ಮತ್ತು ಅಧ್ಯಕ್ಷರಾಗಿರುತ್ತಾರೆ. ನಮ್ಮ ತಂದೆಯಿಂದ ಪಕ್ಷವನ್ನು ಕಸಿದುಕೊಳ್ಳಲು ಯಾವುದೋ ‘ಅಗೋಚರ ಶಕ್ತಿ’ ಪ್ರಯತ್ನಿಸುತ್ತಿದೆ’ ಎಂದು ಹೇಳಿದ್ದಾರೆ.

‘ಅಜಿತ್ ಪವಾರ್ ಅವರ ನೇತೃತ್ವದ ಬಣವೇ ನಿಜವಾದ ಎನ್‌ಸಿಪಿ ಎಂದು ಭಾರತೀಯ ಚುನಾವಣಾ ಆಯೋಗ ಹೇಳಿದೆ. ಪಕ್ಷವನ್ನು ಕಟ್ಟಿದವರಿಂದಲೇ ಪಕ್ಷ ಮತ್ತು ಚಿಹ್ನೆಯನ್ನು ಕಸಿದುಕೊಳ್ಳಲಾಗಿದೆ. ಆದ್ದರಿಂದ ಚುನಾವಣಾ ಆಯೋಗದ ನಿರ್ಧಾರವನ್ನು ಪ್ರಶ್ನಿಸಿ ನಾವು ಸುಪ್ರೀಂ ಕೋರ್ಟ್ ಮೊರೆಹೋಗಿದ್ದೇವೆ’ ಎಂದರು.

ಫಿಫಾ ರ‍್ಯಾಂಕಿಂಗ್: ಭಾರತಕ್ಕೆ ಹಿನ್ನಡೆ

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ತಂಡ, ಫಿಫಾ ವಿಶ್ವ ಕ್ರಮಾಂಕ ಪಟ್ಟಿಯಲ್ಲಿ 15 ಸ್ಥಾನಗಳಷ್ಟು ಕುಸಿತ ಕಂಡಿದ್ದು, 117ನೇ ಸ್ಥಾನಕ್ಕೆ ಸರಿ ದಿದೆ. ಇದು ಏಳು ವರ್ಷಗಳಲ್ಲಿ ಭಾರತದ ಅತ್ಯಂತ ಕಳಪೆ ರ‍್ಯಾಂಕಿಂಗ್ ಆಗಿದೆ.

ಎಎಫ್‌ಸಿ ಏಷ್ಯನ್ ಕಪ್‌ನಲ್ಲಿ ಭಾರತದ ವೈಫಲ್ಯ ಈ ಕುಸಿತಕ್ಕೆ ಕಾರಣವಾಗಿದೆ. ಭಾರತ ಗುಂಪು ಹಂತದ ಮೂರೂ ಪಂದ್ಯಗಳಲ್ಲಿ ಸೋಲನುಭವಿಸಿತ್ತು. 2017ರಲ್ಲಿ ಭಾರತ 129ನೇ ಸ್ಥಾನಕ್ಕೆ ಸರಿದಿತ್ತು. ಆದಾದ ನಂತರ ಇದೇ ಕಳಪೆ ರ‍್ಯಾಂಕಿಂಗ್ ಆಗಿದೆ.

2013ರ ಡಿಸೆಂಬರ್ 21ರಂದು ಪ್ರಕಟವಾದ ಕ್ರಮಾಂಕಪಟ್ಟಿಯಲ್ಲಿ ಭಾರತ 102ನೇ ಸ್ಥಾನಕ್ಕೇರಿತ್ತು. ಏಷ್ಯನ್ ರಾಷ್ಟ್ರಗಳ ಪೈಕಿ ಭಾರತ 22ನೇ ಸ್ಥಾನದಲ್ಲಿದೆ. ಏಷ್ಯನ್ ಕಪ್‌ನಲ್ಲಿ, ಇಗೊರ್ ಸ್ಟಿಮ್ಯಾಚ್ ತರಬೇತಿಯ ಭಾರತ ಒಂದೂ ಪಾಯಿಂಟ್ ಪಡೆಯಲು ಆಗಿರಲಿಲ್ಲ ಮಾತ್ರವಲ್ಲ, ಗೋಲು ಕೂಡ ಗಳಿಸಲು ಆಗಿರಲಿಲ್ಲ.

ಮೊದಲ 10 ತಂಡಗಳ ಸ್ಥಾನಗಳು ಬದಲಾಗಿಲ್ಲ. ಅರ್ಜೆಂಟೀನಾ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಏಷ್ಯನ್ ಕಪ್ ಚಾಂಪಿಯನ್ ಕತಾರ್ 21 ಸ್ಥಾನ ಮೇಲೇರಿದ್ದು 37ನೇ ಸ್ಥಾನಕ್ಕೇರಿದೆ. ಜಪಾನ್ 18ನೇ ಸ್ಥಾನದಲ್ಲಿದ್ದು, ಏಷ್ಯಾ ಖಂಡದ ರಾಷ್ಟ್ರಗಳ ಪೈಕಿ ಅಗ್ರ-ಸ್ಥಾನದಲ್ಲಿದೆ. ಏಷ್ಯಾ ಕಪ್ ರನ್ನರ್ ಅಪ್ ಸ್ಥಾನ ಪಡೆದ ಜೋರ್ಡಾನ್ 17 ಸ್ಥಾನ ಬಡ್ತಿ ಪಡೆದು 70ನೇ ಸ್ಥಾನಕ್ಕೇರಿದೆ.

ಡಬ್ಲ್ಯುಎಫ್‌ಐ ಮತ್ತೆ ಅಮಾನತು: ಒತ್ತಾಯ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಮೇಲೆ ಮತ್ತೆ ಅಮಾನತು ಹೇರಬೇಕೆಂದು ಒಲಿಂಪಿಕ್ ಪದಕ ವಿಜೇತ ಪೈಲ್ವಾನ್ ಬಜರಂಗ್ ಪೂನಿಯಾ ಗುರುವಾರ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್‌ಗೆ ಒತ್ತಾಯಿಸಿದ್ದಾರೆ. ಸಂಜಯ್ ಸಿಂಗ್ ನೇತೃತ್ವದ ಫೆಡರೇಷನ್, ಕುಸ್ತಿಪ-ಟುಗಳಲ್ಲಿ ‘ಭಯ ಮತ್ತು ಶೋಷಣೆಯ ಭಾವ ಮೂಡಿಸಿದೆ’ ಎಂದು ದೂರಿದ್ದಾರೆ.

ಫೆಡರೇಷನ್ ಮೇಲೆ ಕಳೆದ ಆಗಸ್ಟ್‌ನಲ್ಲಿ ಹೇರಿದ್ದ ನಿಷೇಧವನ್ನು, ಯುಡಬ್ಲ್ಯುಡಬ್ಲ್ಯು ಕಳೆದ ಮಂಗಳವಾರ ಹಿಂಪಡೆದಿತ್ತು. ಮಹಿಳಾ ಕುಸ್ತಿಪಟುಗಳಿ-ಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಹೊತ್ತಿದ್ದ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ವಿರುದ್ಧ ನಡೆದ ಪ್ರತಿಭಟನೆಯ ಮುಂಚೂಣಿಯಲ್ಲಿದ್ದ ಬಜರಂಗ್, ಸಾಕ್ಷಿ, ವಿನೇಶಾ ವಿರುದ್ಧ ಯಾವುದೇ ರೀತಿಯ ತಾರತಮ್ಯ ನಡೆಸಬಾರದು ಎಂದು ಲಿಖಿತ ಖಾತರಿ ನೀಡಬೇಕೆಂದೂ ನಿರ್ದೇಶನ ನೀಡಿತ್ತು.

ಟೆನಿಸ್: ಕ್ವಾರ್ಟರ್‌ಗೆ ನಗಾಲ್

ಪ್ರಜಾವಾಣಿ ವಾರ್ತೆ



ಭಾರತದ ಸುಮಿತ್ ನಗಾಲ್ ಅವರು ಹಾಂಗ್‌ಕಾಂಗ್‌ನ ಕೋಲ್ಮನ್ ವಾಂಗ್ ವಿರುದ್ಧ ಗೆದ್ದು ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ಕೃಷ್ಣ ಕುಮಾರ್ ಪಿ.ಎಸ್.

ಬೆಂಗಳೂರು: ಭಾರತದ ಅಗ್ರಗಣ್ಯ ಆಟಗಾರ ಸುಮಿತ್ ನಗಾಲ್ ಅವರು ಬೆಂಗಳೂರು ಓಪನ್ ಟೆನಿಸ್ ಟೂರ್ನಿಯಲ್ಲಿ ಅಜೇಯ ಓಟವನ್ನು ಮುಂದುವರಿಸಿದ್ದು, ಗುರುವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ನಗರದ ಕೆಎಸ್‌ಎಲ್‌ಟಿಎ ಕ್ರೀ-ಡಾಂಗಣದಲ್ಲಿ ನಡೆದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ನಗಾಲ್ 6-2, 7-5 ರಿಂದ ಹಾಂಗ್‌ಕಾಂಗ್‌ನ ಕೋಲ್ಮನ್ ವಾಂಗ್ ಅವರನ್ನು ಹಿಮ್ಮೆಟ್ಟಿಸಿದರು.

ವಿಶ್ವದ 98ನೇ ಕ್ರಮಾಂಕದ ಆಟಗಾರ ನಗಾಲ್ ಅವರು, ಎದುರಾಳಿ ಆಟಗಾರನ ವಿರುದ್ಧ ಆರಂಭದಿಂದಲೇ ಪಾರಮ್ಯ ಸಾಧಿಸಿದ್ದರು. ಮೊದಲ ಸೆಟ್ ಅನ್ನು ಸುಲಭವಾಗಿ ಕೈವಶ ಮಾಡಿಕೊಂಡಿದ್ದ ಭಾರತದ ಆಟಗಾರನಿಗೆ ಎರಡನೇ ಸೆಟ್‌ನಲ್ಲಿ ಪ್ರಬಲ ಸ್ಪರ್ಧೆ ಎದುರಾಯಿತು. ಹಿನ್ನಡೆಯಿಂದ ಚೇತರಿಸಿಕೊಂಡ 19 ವರ್ಷದ ಕೋಲ್ಮನ್ ಸಮಬಲದ ಹೋರಾಟ ನಡೆಸಿದರು. ಆದರೆ, ಅಂತಿಮವಾಗಿ 26 ವರ್ಷದ ನಗಾಲ್ ಗೆದ್ದು ಮುನ್ನಡೆದರು. ಮುಂದಿನ ಸುತ್ತಿನಲ್ಲಿ ನಗಾಲ್ ಐದನೇ ಶ್ರೇಯಾಂಕದ ಆ್ಯಡಂ ವಾಲ್ಟನ್ (ಆಸ್ಟ್ರೇಲಿಯಾ) ಅವರನ್ನು ಎದುರಿಸ-ಲಿದ್ದಾರೆ. ವಾಲ್ಟನ್ 6–2, 6–2ರಿಂದ ಬೆಲ್ಜಿಯಂನ ಗೌಥಿಯರ್ ಆನ್‌ಕ್ಲಿನ್ ಅವರನ್ನು ಮಣಿಸಿದರು.

ಮತ್ತೊಂದು ಪಂದ್ಯದಲ್ಲಿ 7ನೇ ಶ್ರೇಯಾಂಕದ ಸ್ಟೆಫಾನೊ ನಪೊಲಿಟಾನೊ (ಇಟಲಿ) 6-4, 4-6, 6-4ರಿಂದ ಕೆನಡಾದ ವಾಸೆಕ್ ಪೊಸ್ಪಿಸಿಲ್ ಅವರನ್ನು ಸೋಲಿಸಿ, ಎಂಟರ ಘಟ್ಟ ಪ್ರವೇಶಿಸಿದರು. ಅವರು ಮುಂದಿನ ಸುತ್ತಿನಲ್ಲಿ ಟುನೀಶಿಯಾದ ಮೊಯೆಜ್ ಎಚಾರ್ಗುಯಿ ಅವರನ್ನು ಎದುರಿಸುವರು. ಮೊಯೆಜ್ ಅವರು ಎರಡನೇ ಸುತ್ತಿನಲ್ಲಿ ಇಟಲಿಯ ಡಲ್ಲಾ ವೆಲ್ಲಾ ಅವರನ್ನು 6-2, 6-2ರಿಂದ ಸೋಲಿಸಿದರು.

ಪುರುಷರ ಡಬಲ್ಸ್‌ನಲ್ಲಿ ಭಾರತದ ರಾಮಕುಮಾರ್ ರಾಮನಾಥನ್ ಮತ್ತು ಸಾಕೇತ್ ಮೈನೇನಿ ಜೋಡಿಯು 6–4, 6–4 ರಿಂದ ಜರ್ಮನಿಯ ಜಾಕೋಬ್ ಸ್ಕ್ನೈಟರ್ ಮತ್ತು ಮಾರ್ಕ್ ವಾಲ್ನರ್ ವಿರುದ್ಧ ಜಯ ಸಾಧಿಸಿ ಸೆಮಿಫೈನಲ್ ಪ್ರವೇಶಿಸಿದರು.

ಭಾರತದ ಆತಂಕ ನಿವಾರಿಸಿದ ಜೊತೆಯಾಟ

ಮೂರನೇ ಟೆಸ್ಟ್: ತವರಿನಲ್ಲಿ ಜಡೇಜ ಶತಕ, ರೋಹಿತ್ ಮಿಂಚು • ಮಾರ್ಕ್‌ವುಡ್‌ಗೆ 3 ವಿಕೆಟ್

ಪ್ರಜಾವಾಣಿ ವಾರ್ತೆ

ರಾಜ್‌ಕೋಟ್: ಭಾರತ ತಂಡವು ಗುರುವಾರ ಇಲ್ಲಿ ಆರಂಭವಾದ ಟೆಸ್ಟ್ ಪಂದ್ಯದಲ್ಲಿ ಕಠಿಣ ಸವಾಲನ್ನು ಮೈಮೇಲೆಳೆದುಕೊಂಡಿತು. ನಂತರ ಅದರಿಂದ ಪಾರಾಯಿತು.

ನಿರಂಜನ್ ಶಾ ಕ್ರೀಡಾಂಗಣದ ಕಾಂಕ್ರಿಟ್ ಸ್ಲ್ಯಾಬ್‌ನಂತಹ ಪಿಚ್‌ನಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆರಂಭಿಸಿದ ಆತಿಥೇಯ ತಂಡವು 8.5 ಓವರ್‌ಗಳಲ್ಲಿ 33 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಿಸಿತು. ಆದರೆ ದಿನದಾಟದ ಮುಕ್ತಾಯಕ್ಕೆ ತಂಡವು 86 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 326 ರನ್ ಗಳಿಸಲು ಮೂವರು ಬ್ಯಾಟರ್‌ಗಳ ಆಟ ಕಾರಣವಾಯಿತು.

ಯುವ ಆಟಗಾರರಾದ ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್ ಮತ್ತು ರಜತ್ ಪಾಟೀದಾರ್ ಅವರ ನಿರ್ಗಮನವನ್ನು ಇನ್ನೊಂದು ಬದಿಯಲ್ಲಿ ನಿಂತು ನೋಡಿದ ನಾಯಕ ರೋಹಿತ್ ಶರ್ಮಾ ಅವರನ್ನು ಸೇರಿಕೊಂಡ ರವೀಂದ್ರ ಜಡೇಜ (ಬ್ಯಾಟಿಂಗ್ 110) ತಂಡವನ್ನು ಆತಂಕದಿಂದ ಪಾರು ಮಾಡಿದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 204 ರನ್ ಗಳಿಸಿದರು.

36 ವರ್ಷದ ರೋಹಿತ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಶತಕ ಹೊಡೆದ ಭಾರತದ ಅತ್ಯಂತ ಹಿರಿಯ ವಯಸ್ಸಿನ ನಾಯಕನಾದರು. 73 ವರ್ಷಗಳ ಹಿಂದಿನ ದಾಖಲೆ ಮುರಿದರು. 13ನೇ ಓವರ್‌ನಲ್ಲಿ ರೂಟ್ ಕೈಚೆಲ್ಲಿದ ಕ್ಯಾಚ್‌ನಿಂದ ಸಿಕ್ಕ ಅವಕಾಶವನ್ನು ರೋಹಿತ್ ಅಚ್ಚುಕಟ್ಟಾಗಿ ಬಳಸಿಕೊಂಡರು. ಇದು ಅವರ ವೃತ್ತಿಜೀವನದ 11ನೇ ಶತಕ.

ಜಡೇಜ ಅವರು ಸುಮಾರು ಎರಡು ವರ್ಷಗಳ ನಂತರ ಶತಕ ದಾಖಲಿಸಿದರು. ಜಡೇಜ ತಮ್ಮ ನೈಜ ಶೈಲಿಯನ್ನು ಬದಲಿಸಿ ತಾಳ್ಮೆಯಿಂದ ಬ್ಯಾಟಿಂಗ್ ಮಾಡಿದರು. ದೊಡ್ಡ ಹೊಡೆತಗಳಿಗಿಂತ ರಕ್ಷಣಾತ್ಮಕ ಆಟಕ್ಕೆ ಒತ್ತು ಕೊಟ್ಟರು. ಬಲಗೈ ಬ್ಯಾಟರ್ ರೋಹಿತ್ ಮತ್ತು ಎಡಗೈ ಆಟಗಾರ ಜಡೇಜ ಅವರ ಹೊಂದಾಣಿಕೆಯ ಆಟವು ಬೌಲರ್‌ಗಳಿಗೆ ಕಠಿಣ ಸವಾಲಾಯಿತು.

ಇವರಿಬ್ಬರಷ್ಟೇ ಅಲ್ಲ. ತಮ್ಮ ವೃತ್ತಿಜೀವನದ ಚೊಚ್ಚಲ ಟೆಸ್ಟ್ ಪಂದ್ಯವಾಡಿದ ಸರ್ಫರಾಜ್ ಖಾನ್ ಭರ್ಜರಿ ಬ್ಯಾಟಿಂಗ್ ಮಾಡಿದರು. ದಿಗ್ಗಜ ಅನಿಲ್ ಕುಂಬ್ಳೆ ಅವರಿಂದ ಕ್ಯಾಪ್ ಪಡೆದ ಸಂತಸದಲ್ಲಿ ಚೆಂದದ ಬ್ಯಾಟಿಂಗ್ ಮಾಡಿದರು. ರೋಹಿತ್ ಔಟಾದ ನಂತರ ಕ್ರೀಸ್‌ಗೆ ಬಂದ ಸರ್ಫರಾಜ್ 66 ಎಸೆತಗಳಲ್ಲಿ 62 ರನ್ ಗಳಿಸಿದರು.

99 ರನ್ ಗಳಿಸಿದ್ದ ಜಡೇಜ, ಮಾರ್ಕ್ ವುಡ್ ಎಸೆತವನ್ನು ಮಿಡ್ ಆನ್‌ನತ್ತ ತಳ್ಳಿದರು. ಒಂದು ರನ್‌ಗಾಗಿ ಎರಡು ಹೆಜ್ಜೆ ಮುಂದೆ ಬಂದು ಮತ್ತೆ ಕ್ರೀಸ್‌ಗೆ ಮರಳಿದರು. ಆದರೆ ಚೆಂಡನ್ನು ಮಾರ್ಕ್ ಫೀಲ್ಡಿಂಗ್ ಮಾಡಿದ್ದನ್ನು ಗಮನಿಸದ ಸರ್ಫರಾಜ್ ನಾನ್‌ಸ್ಟ್ರೈಕರ್ ತುದಿಯಿಂದ ದೂರ ಬಂದಿದ್ದರು. ಅವರು ಮರಳುವಷ್ಟರಲ್ಲಿ ವುಡ್ ನೇರ ಥ್ರೋ ಮಾಡಿ ಸ್ಟಂಪ್ ಎಗರಿಸಿದರು. ದೇಶಿ ಕ್ರಿಕೆಟ್‌ನ 'ರನ್ ಯಂತ್ರ' ಸರ್ಫರಾಜ್ ಅವರ ಮೊದಲ ಟೆಸ್ಟ್ ಇನಿಂಗ್ಸ್‌ಗೆ ತೆರೆಬಿತ್ತು. ಇನ್ನೊಂದು ತುದಿಯಲ್ಲಿ ಜಡೇಜ ತಲೆ-ತಗ್ಗಿಸಿದರು. ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಜನರೂ ಮೌನವಾದರು. ಡ್ರೆಸ್ಸಿಂಗ್ ರೂಮ್‌ನಲ್ಲಿದ್ದವರು ಚಪ್ಪಾಳೆ ತಟ್ಟಿ, ಸರ್ಫರಾಜ್ ಬೆನ್ನುತಟ್ಟಿ ಸಂತೈಸಿದರು.



ಭಾರತ ತಂಡದ ರವೀಂದ್ರ ಜಡೇಜ ಮತ್ತು ರೋಹಿತ್ ಶರ್ಮಾ –ಪಿಟಿಐ ಚಿತ್ರ

ಸರ್ಫರಾಜ್ 62, ಜಡೇಜ 15!

ರೋಹಿತ್ ಶರ್ಮಾ ಔಟಾದ ಮೇಲೆ ಸರ್ಫರಾಜ್ ಖಾನ್ ಕ್ರೀಸ್‌ಗೆ ಬಂದರು. ಆಗ ಇನ್ನೊಂದು ಬದಿಯಲ್ಲಿ ಇದ್ದ ರವೀಂದ್ರ ಜಡೇಜ 84 ರನ್ ಗಳಿಸಿದ್ದರು. ಇವರಿಬ್ಬರ ಜೊತೆಯಾಟದಲ್ಲಿ 77 ರನ್ ಸೇರಿಸಿದರು. ಈ ಜೊತೆಯಾಟದಲ್ಲಿ ಜಡೇಜ ಗಳಿಸಿದ್ದು 15 ರನ್ ಮಾತ್ರ.

ಚೊಚ್ಚಲ ಅರ್ಧಶತಕ ಗಳಿಸಿದ ಸರ್ಫರಾಜ್ 62 ರನ್ ಗಳಿಸಿ ಔಟಾದಾಗ ಜಡೇಜ 99 ರನ್ ಗಳಿಸಿದ್ದರು. ಪದಾರ್ಪಣೆಯ ಇನಿಂಗ್ಸ್ ಆಡಿದ ಸರ್ಫರಾಜ್ ಅವರು ಉತ್ತಮ ಹೊಡೆತಗಳನ್ನು ಪ್ರಯೋಗಿಸುವುದನ್ನು ನೋಡಿದ ಅನುಭವಿ ಜಡೇಜ ತಾವು ಹೆಚ್ಚು ಎಸೆತಗಳನ್ನು ಎದುರಿಸದೇ ಮುಂಬೈ ಆಟಗಾರನಿಗೆ ಬಿಟ್ಟುಕೊಟ್ಟರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 5 ವಿಕೆಟ್‌ಗೆ 326 (86 ಓವರ್‌ಗಳಲ್ಲಿ)
ಯಶಸ್ವಿ ಸಿ ರೂಟ್ ಬಿ ವುಡ್ 10 (10ಎ, 4x2)
ರೋಹಿತ್ ಸಿ ಸ್ಟೋಕ್ಸ್ ಬಿ ವುಡ್ 131 (196ಎ, 4x14, 6x3)
ಶುಭಮನ್ ಸಿ ಫೋಕ್ಸ್ ಬಿ ವುಡ್ 0 (9ಎ)
ರಜತ್ ಸಿ ಡಕೆಟ್ ಬಿ ಹಾರ್ಟ್ಲಿ 5 (15ಎ, 4x1)
ರವೀಂದ್ರ ಔಟಾಗದೆ 110 (212ಎ, 4x9, 6x2)
ಸರ್ಫರಾಜ್ ರನ್‌ಔಟ್ (ವುಡ್) 62 (66ಎ, 4x9, 6x1)
ಕುಲದೀಪ್ ಔಟಾಗದೆ 1 (10ಎ)
ಇತರೆ: 7 (ಬೈ 1, ಲೆಗ್‌ಬೈ 3, ನೋಬಾಲ್ 2, ವೈಡ್ 1)
ವಿಕೆಟ್ ಪತನ: 1-22 (ಯಶಸ್ವಿ ಜೈಸ್ವಾಲ್; 3.5), 2-24 (ಶುಭಮನ್ ಗಿಲ್; 5.4), 3-33 (ರಜತ್ ಪಾಟೀದಾರ್; 8.5), 4-237 (ರೋಹಿತ್ ಶರ್ಮಾ; 63.3), 5-314 (ಸರ್ಫರಾಜ್ ಖಾನ್; 81.5)
ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 19–5–51–0, ಮಾರ್ಕ್ ವುಡ್ 17–2–69–3, ಟಾಮ್ ಹಾರ್ಟ್ಲಿ 23–3–81–1, ಜೋ ರೂಟ್ 13–1–68–0, ರೆಹಾನ್ ಅಹಮದ್ 14–0–53–0

ಸರ್ಫರಾಜ್ ಖಾನ್ ರನ್‌ಔಟ್ ಆಗಲು ನನ್ನ ತಪ್ಪು ಕರೆಯೇ ಕಾರಣವಾಗಿದ್ದಕ್ಕೆ ವಿಷಾದಿಸುತ್ತೇನೆ. ತುಂಬಾ ಚೆನ್ನಾಗಿ ಆಡಿದ್ದಾರೆ.
ರವೀಂದ್ರ ಜಡೇಜ, ಭಾರತದ ಬ್ಯಾಟರ್

ಇದು ನನ್ನ ಅಪ್ಪನ ಕನಸು: ಸರ್ಫರಾಜ್

ಪ್ರಜಾವಾಣಿ ವಾರ್ತೆ

ರಾಜ್‌ಕೋಟ್: ಭಾರತ ತಂಡದಲ್ಲಿ ಆಡುವ ಸರ್ಫರಾಜ್ ಖಾನ್ ಅವರ ಬಹುದಿನಗಳ ಕನಸು ಗುರುವಾರ ನನಸಾಯಿತು. ಇದು ಸರ್ಫರಾಜ್ ಅವರ ಕನಸಷ್ಟೇ ಆಗಿರಲಿಲ್ಲ.

ಸರ್ಫರಾಜ್ ತಂದೆ ನೌಷಾದ್ ಖಾನ್ ಅವರು ಬಹಳ ವರ್ಷಗಳಿಂದ ಮಾಡಿದ ತಪಸ್ಸಿನ ಫಲವಿದು. ಸರ್ಫರಾಜ್ ಭಾರತ ತಂಡಕ್ಕೆ ಪ್ರವೇಶಿಸಿದ ಹಾದಿಯು ಸುಲಭದ ಹಾದಿಯಾಗಿರಲಿಲ್ಲ.

ದೇಶಿ ಕ್ರಿಕೆಟ್‌ನಲ್ಲಿ ರನ್‌ಗಳ ಹೊಳೆ ಹರಿಸಿದರೂ ಅವಕಾಶ ಸಿಗದೆ ಹತಾಶೆಗೊಂಡ ಮಗ ಕ್ರಿಕೆಟ್‌ನಿಂದ ವಿಮುಖವಾಗದಂತೆ ತಡೆದವರು ನೌಷಾದ್.

ಅಷ್ಟೇ ಅಲ್ಲ ಸರ್ಫರಾಜ್ ಮತ್ತು ಅವರ ತಮ್ಮ ಮುಷೀರ್ ಖಾನ್ ಅವರನ್ನು ತಮ್ಮ ಕಣ್ರೆಪ್ಪೆಗಳಂತೆ ಜೋಪಾನ ಮಾಡಿ ಬೆಳೆಸಿದವರು.

ತಾವು ಕ್ರಿಕೆಟ್‌ನಲ್ಲಿ ಸಾಧನೆ ಮಾಡ-ಲಾಗದ್ದನ್ನು ಮಕ್ಕಳಿಂದ ಮಾಡಿಸಿದವರು ನೌಷಾದ್.

ಗುರುವಾರ ಬೆಳಿಗ್ಗೆ ಅನಿಲ್ ಕುಂಬ್ಳೆ ಅವರು ಸರ್ಫರಾಜ್‌ಗೆ ಕ್ಯಾಪ್ (ಸಂಖ್ಯೆ 311) ಕೊಟ್ಟಾಗ ನೌಷಾದ್ ಮತ್ತು ಸರ್ಫರಾಜ್ ಪತ್ನಿ ರುಮಾನಾ ಜಹೂರ್ ಇದ್ದರು. ಇಬ್ಬರ ಕಂಗಳಲ್ಲಿಯೂ ಆನಂದಭಾಷ್ಪ ಸುರಿಯಿತು. ಕ್ಯಾಪ್ ಪಡೆದ ನಂತರ ಸರ್ಫರಾಜ್ ಅವರಿಬ್ಬರನ್ನೂ ಅಪ್ಪಿಕೊಂಡು ಕಣ್ಣೀರಾದರು.

'ನನ್ನ ತಂದೆ ಭಾರತ ತಂಡಕ್ಕೆ ಆಡುವ ಕನಸು ಕಂಡವರು. ಆದರೆ ಅದು ಸಾಕಾರವಾಗಿರಲಿಲ್ಲ. ನಾನು ಇವತ್ತು ಆಡುತ್ತಿರುವುದು ಅವರಿಂದಾಗಿಯೇ' ಎಂದು ಸುದ್ದಿಗಾರರ ಮುಂದೆ ಹೇಳಿದ ಸರ್ಫರಾಜ್ ಭಾವುಕರಾದರು.

'ನನ್ನ ಕಠಿಣ ತರಬೇತಿ ಮತ್ತು ಧೋರಣೆಯು ಸರ್ಫರಾಜ್ ಮತ್ತು ಮುಷೀರ್ ಖಾನ್ ಇಬ್ಬರಿಗೂ ಬಹಳಷ್ಟು ಬಾರಿ ಕಷ್ಟವಾಗಿರಬಹುದು. ಆದರೆ ಶಿಸ್ತುಬದ್ಧ ಪಾಲನೆಯಿಂದ ಮತ್ತು ತರಬೇತಿಯಿಂದ ಇವತ್ತು ಕನಸು ಸಾಕಾರವಾಗಿದೆ' ಎಂದು ನೌಷಾದ್ ಹೇಳಿದರು.



ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ ಸರ್ಫರಾಜ್ ಖಾನ್ ಅವರನ್ನು ಅವರ ತಂದೆ ನೌಷಾದ್ ಖಾನ್ ಅಭಿನಂದಿಸಿದರು. ಪಿಟಿಐ ಚಿತ್ರ

ಆಸ್ಟ್ರೇಲಿಯಾಕ್ಕೆ ಮಣಿದ ಭಾರತ

ಭುವನೇಶ್ವರ: ಭಾರತ ಹಾಕಿ ತಂಡ, ಎಫ್‌ಐಎಚ್ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಗುರುವಾರ ಆಸ್ಟ್ರೇಲಿಯಾ ವಿರುದ್ಧ ಹೆಚ್ಚಿನ ಅವಧಿಯಲ್ಲಿ ಮೇಲುಗೈ ಸಾಧಿಸಿದರೂ ಅಂತಿಮವಾಗಿ 4–6 ಗೋಲುಗಳಿಂದ ಸೋಲನುಭವಿಸಿತು.

ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ಆರಂಭದಲ್ಲಿ 2–0 ಮುನ್ನಡೆ ಸಾಧಿಸಿತ್ತು. ಆದರೆ, ಮಧ್ಯಂತರ ವೇಳೆ ಭಾರತ 2 ಗೋಲುಗಳ ಮುನ್ನಡೆ ಪಡೆದು, ನಂತರ ಮುಗ್ಗರಿಸಿತು.

ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ (11 ಮತ್ತು 20ನೇ ನಿಮಿಷ) ಎರಡು ಗೋಲು ಗಳಿಸಿದರು. ಉಳಿದಂತೆ ಸುಖ್‌ಜೀತ್ ಸಿಂಗ್ (18ನೇ) ಮತ್ತು ಮನ್‌ದೀಪ್ ಸಿಂಗ್ (29ನೇ) ತಲಾ ಒಂದು ಗೋಲು ತಂದಿತ್ತರು.

ಭಾರತ ತಂಡವು, ಶುಕ್ರವಾರ ಐರ್ಲೆಂಡ್ ತಂಡವನ್ನು ಎದುರಿಸಲಿದೆ.

ರಣಜಿ: ಕರ್ನಾಟಕ–ಚಂಡೀಗಢ ಹಣಾಹಣಿ ಇಂದಿನಿಂದ

ಎಂಟರ ಘಟ್ಟದತ್ತ ಕರ್ನಾಟಕ ಚಿತ್ತ

• ಸತೀಶ ಬಿ.

ಹುಬ್ಬಳ್ಳಿ: ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎಂಟರ ಘಟ್ಟ ಪ್ರವೇಶಿಸುವ ವಿಶ್ವಾಸದೊಂದಿಗೆ ಕರ್ನಾಟಕ ತಂಡ, ಶುಕ್ರವಾರ ಆರಂಭವಾಗುವ 'ಸಿ' ಗುಂಪಿನ ಕೊನೆಯ ಲೀಗ್ ಪಂದ್ಯದಲ್ಲಿ ಚಂಡೀಗಢ ತಂಡವನ್ನು ಎದುರಿಸಲಿದೆ.

ರಾಜನಗರದ ಕೆಎಸ್‌ಸಿಎ ಕ್ರೀಡಾಂ-ಗಣದಲ್ಲಿ ನಡೆಯುವ ಈ ಪಂದ್ಯದಲ್ಲಿ ಗೆಲುವು ಸಾಧಿಸಿದರೆ ಸುಲಭವಾಗಿ ಎಂಟರ ಘಟ್ಟಕ್ಕೆ ಲಗ್ಗೆ ಇಡುವ ಅವಕಾಶ ಆತಿಥೇಯರಿಗಿ ಇದೆ.

ಇನಿಂಗ್ಸ್ ಮುನ್ನಡೆಯೊಂದಿಗೆ ಡ್ರಾ ಸಾಧಿಸಿದರೂ ಎಂಟರ ಘಟ್ಟ ಪ್ರವೇಶ ಖಚಿತ. ಸದ್ಯ ಮಯಂಕ್ ಅಗರವಾಲ್ ನೇತೃತ್ವದ ತಂಡ 24 ಅಂಕಗಳೊಂದಿಗೆ ಅಗ್ರ ಸ್ಥಾನದಲ್ಲಿದೆ. ಒಂದೊಮ್ಮೆ ಸೋಲ-ನುಭವಿಸಿದಲ್ಲಿ ಮಾತ್ರ, ಅಂಕಪಟ್ಟಿಯಲ್ಲಿ ನಂತರ ಸ್ಥಾನದಲ್ಲಿರುವ ತಮಿಳುನಾಡು, ಗುಜರಾತ್, ರೈಲ್ವೇಸ್ ತಂಡಗಳ ಫಲಿತಾಂಶಕ್ಕೆ ಕಾಯಬೇಕಾಗುತ್ತದೆ.

ಕರ್ನಾಟಕ ತಂಡವು ಆರು ಪಂದ್ಯಗಳಲ್ಲಿ ಮೂರರಲ್ಲಿ ಗೆಲುವು ಸಾಧಿಸಿದ್ದು, ಒಂದರಲ್ಲಿ ಸೋಲು ಕಂಡಿದೆ. ಎರಡು ಪಂದ್ಯಗಳು ಡ್ರಾ ಆಗಿವೆ. ಒಂದೂ ಜಯ ಕಾಣದ ಚಂಡೀಗಢದ ಖಾತೆಯಲ್ಲಿ ಕೇವಲ 5 ಅಂಕಗಳಿವೆ.

ಇದೇ ಮೈದಾನದಲ್ಲಿ ಕಳೆದ ತಿಂಗಳು ಹಾಲಿ ಋತುವಿನ ಮೊದಲ ಪಂದ್ಯದಲ್ಲಿ ಕರ್ನಾಟಕ ತಂಡ ಪಂಜಾಬ್ ಎದುರು ಸುಲಭ ಜಯದೊಡನೆ ಅಭಿಯಾನ ಆರಂಭಿಸಿತ್ತು. ಆ ಪಂದ್ಯದಲ್ಲಿ 193 ರನ್ ಗಳಿಸಿದ್ದ ದೇವದತ್ತ ಪಡಿಕ್ಕಲ್ ನಂತರ ಮತ್ತೆ ಎರಡು ಶತಕ ಗಳಿಸಿ ಒಳ್ಳೆಯ ಲಯದಲ್ಲಿದ್ದಾರೆ. ಆದರೆ ಅವರು ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಗೆ ಆಯ್ಕೆಯಾಗಿದ್ದರಿಂದ, ಆ ಸ್ಥಾನಕ್ಕೆ ಯುವ ಪ್ರತಿಭೆ ಆಲ್‌ರೌಂಡರ್ ಧೀರಜ್ ಗೌಡ ಆಯ್ಕೆಯಾಗಿದ್ದಾರೆ. ಎಡಗೈ ಸ್ಪಿನ್ ಬೌಲಿಂಗ್ ಮಾಡುವ ಧೀರಜ್, ಕೂಚ್ ಬಿಹಾರ್ ಟ್ರೋಫಿಯಲ್ಲಿ ಐತಿಹಾಸಿಕ ಗೆಲುವು ಸಾಧಿಸಿದ ಕರ್ನಾಟಕ ತಂಡಕ್ಕೆ ನಾಯಕರಾಗಿದ್ದರು.

ಬ್ಯಾಟಿಂಗ್‌ನಲ್ಲಿ ಮಯಂಕ್ ಅಗರವಾಲ್, ಮನೀಷ್ ಪಾಂಡೆ ಉತ್ತಮ ಲಯದಲ್ಲಿದ್ದಾರೆ. ತಮಿಳುನಾಡು ವಿರುದ್ಧದ ಪಂದ್ಯದಲ್ಲಿ ಅರ್ಧ ಶತಕ ಗಳಿಸಿದ್ದ ಆರ್.ಸಮರ್ಥ್, ಹಾರ್ದಿಕ್ ರಾಜ್‌ಗೆ ಇನ್ನೊಂದು ಅವಕಾಶ ಸಿಗುವ ನಿರೀಕ್ಷೆ ಇದೆ. ಉಪನಾಯಕ ನಿಕಿನ್ ಜೋಸ್ ಸಾಮರ್ಥ್ಯಕ್ಕೆ ತಕ್ಕ ಪ್ರದರ್ಶನ ನೀಡಬೇಕಿದೆ. ವೈಶಾಖ ವಿಜಯಕುಮಾರ್, ವಾಸುಕಿ ಕೌಶಿಕ್, ವಿದ್ವತ್ ಕಾವೇರಪ್ಪ ಅವರನ್ನೊಳಗೊಂಡ ವೇಗದ ಬೌಲಿಂಗ್ ಪಡೆ ಪ್ರಬಲವಾಗಿದೆ. ಆಫ್ ಸ್ಪಿನ್ನರ್ ಕೆ.ಶಶಿಕುಮಾರ್ ಸ್ಪಿನ್ ವಿಭಾಗದ ಹೊಣೆ ನಿರ್ವಹಿಸಲಿದ್ದಾರೆ.

ಚಂಡೀಗಢ ತಂಡ ಲೀಗ್ ಹಂತದ ಕೊನೆ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದೆ.

ಅಂಕಿತ್ ಕೌಶಿಕ್, ಶಿವಂ ಭಾಂಬ್ರಿ, ಆಲ್‌ರೌಂಡರ್ ಗುರಿಂದರ್ ಸಿಂಗ್ ಉತ್ತಮ ಲಯದಲ್ಲಿದ್ದಾರೆ.



ಹುಬ್ಬಳ್ಳಿಯ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಕರ್ನಾಟಕ ತಂಡದ ಆಟಗಾರರು ಗುರುವಾರ ಫುಟ್‌ಬಾಲ್ ಆಡಿದರು. ಪ್ರಜಾವಾಣಿ ಚಿತ್ರ/ಗೋವಿಂದರಾಜ ಜವಳಿ

ಏಷ್ಯಾ ಬ್ಯಾಡ್ಮಿಂಟನ್ ಟೀಮ್ ಸ್ಪರ್ಧೆ

ಚೀನಾಕ್ಕೆ 2–3 ರಿಂದ ಸೋತ ಭಾರತ

ಶಾ ಆಲಂ (ಮಲೇಷ್ಯಾ): ಭಾರತ ಪುರುಷರ ತಂಡ, ಬ್ಯಾಡ್ಮಿಂಟನ್ ಏಷ್ಯಾ ತಂಡ ಚಾಂಪಿಯನ್‌ಷಿಪ್ ನಲ್ಲಿ ಗುರುವಾರ ಚೀನಾ ತಂಡಕ್ಕೆ 2–3 ಅಂತರದಿಂದ ಸೋತಿತು.

ಡಬಲ್ಸ್‌ನಲ್ಲಿ ಸ್ಟಾರ್ ಆಟಗಾರರಾದ ಸಾ ತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಗ್ ಶೆಟ್ಟಿ ಅವರ ಗೈರು ತಂಡಕ್ಕೆ ಗಾಢವಾಗಿ ತಟ್ಟಿತು.

ಭಾರತದ ಅಗ್ರ ಆಟಗಾರರಾದ ಎಚ್.ಎಸ್.ಪ್ರಣಯ್ ಮತ್ತು ಲಕ್ಷ್ಯ ಸೇನ್ ಅವರು ತಮ್ಮ ತಮ್ಮ ಸಿಂಗಲ್ಸ್ ಪಂದ್ಯಗಳಲ್ಲಿ ಚೀನಾದ ಎದುರಾಳಿಗಳನ್ನು ಸೋಲಿಸಿದರು.

ಆದರೆ ಡಬಲ್ಸ್‌ನಲ್ಲಿ ಚೀನಾದ ಆಟಗಾರರು ಮುಂದಿನ ಎರಡೂ ಪಂದ್ಯಗಳನ್ನು ಗೆದ್ದುಕೊಂಡ ಪರಿಣಾಮ ಸ್ಕೋರ್ 2–2 ರಲ್ಲಿ ಸಮನಾಯಿತು. ನಿರ್ಣಾಯಕ ಸಿಂಗಲ್ಸ್ ಪಂದ್ಯದಲ್ಲಿ ಚೀನಾದ ವಾಂಗ್ ಝೆಂಗ್ ಷಿಂಗ್ 21–15, 21–16 ರಿಂದ ಭಾರತದ ಚಿರಾಗ್ ಸೇನ್ ಅವರನ್ನು ಮಣಿಸಿ 3–2 ರಿಂದ ಹಣಾಹಣಿ ಗೆದ್ದುಕೊಂಡಿತು.

ಚೀನಾ ಗುಂಪಿನಲ್ಲಿ 'ಎ' ಗುಂಪಿನಲ್ಲಿ ಅಗ್ರಸ್ಥಾನ ಪಡೆಯಿತು. ಗುಂಪಿನಲ್ಲಿ ಎರಡೇ ತಂಡಗಳಿದ್ದು, ಭಾರತ ಕೂಡ ಎಂಟರ ಘಟ್ಟಕ್ಕೆ ಪ್ರವೇಶಿಸುವುದು ಖಚಿತವಾಗಿದ್ದ ಕಾರಣ, ಸಾತ್ವಿಕ್–ಚಿರಾಗ್ ಅವರಿಗೆ ವಿಶ್ರಾಂತಿ ನಿಡಲು ತಂಡದ ಚಿಂತಕರ ಚಾವಡಿ ನಿರ್ಧರಿತು ಎನ್ನಲಾಗಿದೆ.

ಭಾರತದ ಮಹಿಳಾ ತಂಡ ಮಂಗಳವಾರ ನಡೆದ ಲೀಗ್ ಪಂದ್ಯದಲ್ಲಿ 3–2 ರಿಂದ ಬಲಿಷ್ಠ ಚೀನಾ ತಂಡವನ್ನು ಮಣಿಸಿತ್ತು.

ಟಿ20 ವಿಶ್ವಕಪ್‌ಗೂ ದ್ರಾವಿಡ್ ಕೋಚ್

ರಾಜಕೋಟ್ (ಪಿಟಿಐ): ಜೂನ್‌ನಲ್ಲಿ ನಡೆಯಲಿರುವ ಟಿ20 ವಿಶ್ವಕಪ್‌ವರೆಗೆ ರಾಹುಲ್ ದ್ರಾವಿಡ್ ಅವರು ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ಮುಂದುವರಿಯಲಿ-ದ್ದಾರೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ಜಯ್ ಶಾ ಖಚಿತ ಪಡಿಸಿದ್ದಾರೆ. ದ್ರಾವಿಡ್ ಗುತ್ತಿಗೆ ಅವಧಿ ಕಳೆದ ವರ್ಷದ ಏಕದಿನ ವಿಶ್ವಕಪ್ ನಂತರ ಕೊನೆಗೊಂಡಿತ್ತು. ಆದರೆ ಡಿಸೆಂಬರ್–ಜನವರಿಯಲ್ಲಿ ನಡೆದ ಭಾರತ ತಂಡದ ದಕ್ಷಿಣ ಆಫ್ರಿಕಾ ಪ್ರವಾಸದವರೆಗೆ ಮಂದುವರಿಯುವಂತೆ ತಿಳಿಸಲಾಗಿತ್ತು.

'ಟಿ20 ವಿಶ್ವಕಪ್ ವೆಸ್ಟ್ ಇಂಡೀಸ್ ಮತ್ತು ಅಮೆರಿಕದಲ್ಲಿ ನಡೆಯಲಿದೆ. ದ್ರಾವಿಡ್ ಅವರನ್ನು ಟಿ20 ವಿಶ್ವಕಪ್‌ವರೆಗೆ ಮುಂದುವರಿಸುವ ನಿರ್ಧಾರಕ್ಕೆ ಬರುವ ಮೊದಲು ಅವರ ಜೊತೆ ಆರಂಭಿಕ ಹಂತದ ಮಾತುಕತೆ ನಡೆಸಲಾಗಿದೆ. ಆದರೆ ಟಿ20 ವಿಶ್ವಕಪ್‌ಗೆ ಮೊದಲು ಇನ್ನೂ ಕೆಲವು ಸುತ್ತುಗಳ ಮಾತುಕತೆ ಹಮ್ಮಿಕೊಳ್ಳಲಾಗುವುದು' ಎಂದು ಶಾ ಅವರು ಹೇಳಿದರು.

ತಾತ್ಕಾಲಿಕ ಸಮಿತಿ: ಸಲಹೆ ತಿರಸ್ಕೃತ

ನವದೆಹಲಿ (ಪಿಟಿಐ): ನಿಗದಿತ ಸಮಯಕ್ಕೆ ಚುನಾವಣೆ ನಡೆಸದ ಕಾರಣಕ್ಕೆ ಅಮಾನತು ಗೊಂಡಿರುವ ಭಾರತ ಪ್ಯಾರಾಲಿಂಪಿಕ್ಸ್ ಸಮಿತಿ (ಪಿಸಿಐ)ಗೆ ಅಡ್‌ಹಾಕ್ ಕಮಿಟಿ ರ ರಚಿಸಬೇಕೆಂಬ ಕೇಂದ್ರ ಕ್ರೀಡಾ ಸಚಿವಾಲಯದ ಸಲಹೆಯನ್ನು ವಿಶ್ವ ಪ್ಯಾರಾ ಸ್ಪೋರ್ಟ್ಸ್ (ಐಪಿಸಿ) ತಿರಸ್ಕರಿಸಿದೆ.

ಫೆಬ್ರುವರಿ 2ರಂದು ಪಿಸಿಐ ಅನ್ನು ಅಮಾನತು ಮಾಡಲಾಗಿತ್ತು. ನ್ಯಾಯಸಮ್ಮತ ಚುನಾವಣೆ ನಡೆಸಲು ತಾತ್ಕಾಲಿಕ ಸಮಿತಿ ರಚಿಸಲು ಅಂತರ ರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿ (ಐಪಿಸಿ) ಯೊಂದಿಗೆ ಸಮನ್ವಯ ಸಾಧಿಸುವಂತೆ ಕ್ರೀಡಾ ಸಚಿವಾಲಯವು ಸಾಯ್‌ಗೆ ನಿರ್ದೇಶನ ನೀಡಿತ್ತು.

24ಕ್ಕೆ ಚೆಸ್ ಟೂರ್ನಿ

ಬೆಂಗಳೂರು: ರೋಟರಿ ಬೆಂಗಳೂರು ದಿಶಾ ಮತ್ತು ರೋಟರಿ ಬೆಂಗಳೂರು ಇಂದಿರಾನಗರ ಜಂಟಿ ಆಶ್ರಯದಲ್ಲಿ ಫೆಬ್ರುವರಿ 24ರಂದು ಬೋಧಿರೆಡ್ಡಿ ಕರ್ನಾಟಕ ರಾಜ್ಯ ಓಪನ್ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್ ಇಂದಿರಾನಗರ ಎರಡನೇ ಹಂತದ 14ನೇ ಮುಖ್ಯರಸ್ತೆಯ ಎಚ್‌ಎಐಎ ಭವನದಲ್ಲಿ ನಡೆಯಲಿದೆ.

ಬೆಂಗಳೂರು ನಗರ ಜಿಲ್ಲಾ ಚೆಸ್ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಸಹಯೋಗ ವಹಿಸಿವೆ. ಮೊದಲ 25 ಸ್ಥಾನ ಗಳಿಸಿದವರಿಗೆ ನಗದು ಬಹುಮಾನಗಳಿವೆ. ವಯೋವರ್ಗ ವಿಭಾಗದಲ್ಲೂ ಟ್ರೋಫಿ ನೀಡಲಾಗುವುದು. ಪ್ರವೇಶ ಶುಲ್ಕ ಮತ್ತು ಇತರ ವಿವರಗಳಿಗೆ ಮುನಿರಾಜು (9113026037) ಸಂಪರ್ಕಿಸಬಹುದು.

ಅಥ್ಲೀಟ್ ಹೆನ್ರಿ ನಿಧನ

ನೈರೋಬಿ (ಎಎಫ್‌ಪಿ): ಕೆನ್ಯಾದ ದೂರದ ಓಟಗಾರ, 81 ದಿನಗಳಲ್ಲಿ ನಾಲ್ಕು ವಿಶ್ವ ದಾಖಲೆಗಳನ್ನು ನಿರ್ಮಿಸಿದ್ದ ಹೆನ್ರಿ ರೋನೊ (72) ಅವರು ನಿಧನರಾದರು ಎಂದು ಅಥ್ಲೆಟಿಕ್ಸ್ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಅಮೆರಿಕದ ವಾಷಿಂಗ್ಟನ್ ಸ್ಟೇಟ್ ಯೂನಿವರ್ಸಿಟಿಯಲ್ಲಿ ವಿದ್ಯಾರ್ಥಿಯಾಗಿದ್ದ ರೋನೊ 1978ರಲ್ಲಿ 3,000 ಮೀಟರ್, 5,000 ಮೀಟರ್ ಮತ್ತು 3,000 ಮೀಟರ್ ಸ್ಟೀಪಲ್‌ಚೇಸ್ ವಿಭಾಗಗಳಲ್ಲಿ 4 ವಿಶ್ವ ದಾಖಲೆ ಮಾಡಿದ್ದರು.